ಪ್ರಕಟನೆಯ ೩೪ ನೆಯ ವರ್ಷ : ೧೯೯೯

೩೧೮
೩೧೯

ಸಂಕ್ರಮಣ

ವಿ. ಚಂದ್ರಶೇಖರ ನಂಗಲಿ
ಅಣುಸಂಸ್ಕೃತಿಯ ಅಪಾಯಗಳು

ಅಶೋಕ ಶೆಟ್ಟರ್
ಬಂಡಾಯ : ಅಬ್ಬಿಗೇರಿ ತೆರೆದ ಹಾದಿ

ಬಸವರಾಜ ಮಲಶೆಟ್ಟಿ
ಸ್ವರವಚನ ಸಾಹಿತ್ಯ-ಒಂದು ಮರು ವಿಚಾರ

ನಾರಾಯಣ ಮೂರ್ತಿ ಕೆ.
ಲಂಕೇಶರ 'ಗುಣಮುಖ'

ಎನ್. ಎಸ್. ರಘುನಾಥ
ಕಲಿಸುವ ಭಾಷೆಯೊಡನೆ ಚೆಲ್ಲಾಟ

ಶಿವಾನಂದ ಹೆಚ್. ಬಂಟನೂರ
ಕರ್ನಾಟಕದ ಆಧುನಿಕ ಕಲಾ ಚಳುವಳಿ

ಕೃಪೆ: ಜನವಾಹಿನಿ ಮಂಗಳೂರು
ಇಂಗ್ಲಿಷ್ ವಿರುದ್ಧ ದೇಶಿ

ಚಂಪಾ
ಕಾರ್ನಾಡವೂ ಕನ್ನಡವೂ

ಕೆ ವಿ. ತಿರುಮಲೇಶ್
ಕೆ. ನ. ಶಿವತೀರ್ಥನ್ ಅವರ "ಗೆಂಡಗಯ್ಯ"

ಗಂಗಾಧರ ಮೊದಲಿಯಾರ
ಗಂಡ

ಆರ್ಕೆ. ಮಣಿಪಾಲ
ಫಣಿರಾಜರ 'ಬ್ಯಾಡ್‌ಫೇತ್' ಬಗ್ಗೆ

ಜಯರಾಮ ಹೆಗಡೆ, ರಾಜು ಈ. ಬೆಳಕೂಡ, ಗಂಗಾರಾಂ ಚಂಡಾಳ, ಶಾಂತರಸ, ಶ್ರೀಧರ ಹೆಗ್ಗೋಡು, ಓ.ಎಲ್. ನಾಗಭೂಷಣಸ್ವಾಮಿ, ಕಾವಿಕೊ ಇವರ ಕವನಗಳು

ಚಂಪಾಕಾಲಂ
ಕನಕಪುರ : ಭೈರಪ್ಪನವರ ಗೀತಾ ಪ್ರವಚನ

ಸಂಪುಟ: ೩೪ ಫೆಬ್ರವರಿ/ಮಾರ್ಚ
ಸಂಚಿಕೆ: ೨,೩ ೧೯೯೯

ಸಂಕ್ರಮಣ

ಸಾಹಿತ್ಯಿಕ ಮಾಸಿಕ

ಸಂಪಾದಕಿ
ನೀಲಾ ಪಾಟೀಲ

ಸಲಹಾ ಸಂಪಾದಕ
ಚಂದ್ರಶೇಖರ ಪಾಟೀಲ

ಈ ಸಂಚಿಕೆಯಲ್ಲಿ

ಕನಕಪುರ; ಭೈರಪ್ಪನವರ ಗೀತಾ ಪ್ರವಚನ	ಚಂದ್ರಶೇಖರ ಪಾಟೀಲ	೧
ಅಣು ಸಂಸ್ಕೃತಿಯ ಅಪಾಯಗಳು	ವಿ. ಚಂದ್ರಶೇಖರ ನಂಗಲಿ	೯
ಬಂಡಾಯ : ಅಬ್ಬೀಗೇರಿ ತೆರದ ಹಾದಿ	ಅಶೋಕ ಶೆಟ್ಟರ್ ಧಾರವಾಡ	೧೭
ಸ್ವರವಚನ ಸಾಹಿತ್ಯ–ಒಂದು ಮರುವಿಚಾರ	ಬಸವರಾಜ ಮಲಶೆಟ್ಟಿ	೧೯
ಲಂಕೇಶರ 'ಗುಣಮುಖ'	ನಾರಾಯಣ ಮೂರ್ತಿ ಕೆ.	೨೯
ಕಲಿಸುವ ಭಾಷೆಯೊಡನೆ ಚೆಲ್ಲಾಟ	ಎನ್. ಎಸ್. ರಘುನಾಥ	೪೩
ಕರ್ನಾಟಕದ ಆಧುನಿಕ ಕಲಾ ಚಳುವಳಿ	ಶಿವಾನಂದ ಹೆಚ್. ಬಂಟನೂರ	೫೩
ಇಂಗ್ಲಿಷ್ ವಿರುದ್ಧ ದೇಶಿ	ಕೃಪೆ: ಜನವಾಹಿನಿ ಮಂಗಳೂರು	೬೭
ಕಾರ್ನಾಡರೂ ಕನ್ನಡವೂ	ಚಂಪಾ	೭೫
ಕೆ. ನ. ಶಿವತೀರ್ಥನ್ ಅವರ 'ಗೆಂತಗಯ್ಯ'	ಕೆ. ವಿ. ತಿರುಮಲೇಶ್	೮೧
ಗಂಡ	ಗಂಗಾಧರ ಮೊದಲಿಯಾರ	೯೩
ಫಣಿರಾಜರ 'ಬ್ಯಾಡ್‌ಫೇತ್' ಬಗ್ಗೆ	ಆರ್ಕೆ, ಮಣಿಪಾಲ	೯೯

ಕಾವ್ಯ

ಯಾರಿಗಾಗಿ ಹಾಡುತಿ	ಜಯರಾಮ ಹೆಗಡೆ	೪೨
ಮೂರು ಹನಿಗಳು	ರಾಚು ಈ. ಬೆಳಕೂಡ	೫೮
ಮುಡಿಪು	ಗಂಗಾರಾಂ ಚಂಡಾಳ	೬೮
ಮೂರು ಕವನಗಳು	ಸಚ್ಚಿದಾನಂದನ್	೭೦
ಒಂದು ಅಪೂರ್ಣ ಗಜಲ್	ಶಾಂತರಸ	೭೯
ನೆರಳುಗಳ ಸೆರೆಯಲ್ಲಿ	ಶ್ರೀಧರ ಹೆಗ್ಗೋಡು	೯೨
ಕನ್ನಡಕ್ಕೆ ಬಂದ ಕವಿತೆ	ಓ. ಎಲ್. ನಾಗಭೂಷಣ ಸ್ವಾಮಿ	೧೦೩
ಎರಡು ಬಂಗಾಲ ಕವಿತೆಗಳು	ಕಾವಿಕೊ	೧೧೦

ಸಂಕ್ರಮಣ ಪ್ರಕಾಶನ

ನಂ. ೧೮೯೪/೧, ೩೧ ನೇ ಕ್ರಾಸ್, ೨ ನೇ ಸ್ಟೇಜ್, ಬನಶಂಕರಿ
ಬೆಂಗಳೂರು ೫೬೦ ೦೭೦ ಫೋನು : ೦೮೦–೬೭೧೦೫೨೩
ಸಂಕ್ರಮಣ ದ ವಾರ್ಷಿಕ ಚಂದಾ : **ಒಂದು ನೂರು ರೂ.**

ಕನಕಪುರ : ಭೈರಪ್ಪನವರ ಗೀತಾ ಪ್ರವಚನ

ಚಂದ್ರಶೇಖರ ಪಾಟೀಲ

ಪ್ರತಿ ವರ್ಷವೂ ಕನ್ನಡ ಸಾಹಿತ್ಯ ಪರಿಷತ್ತು ಸಾಕಷ್ಟು ಸದ್ದು ಗದ್ದಲದಿಂದಲೇ ಹಮ್ಮಿ ಕೊಳ್ಳುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದ ಆಯ್ಕೆಯ ಮುನ್ನ ಪತ್ರಿಕೆಗಳಲ್ಲಿ ಅನೇಕ ಹೆಸರುಗಳನ್ನು ತೇಲಿಬಿಡಲಾಗುತ್ತದೆ. (ಕೆಲವು ಹೆಸರು ಗಳಂತೂ ಪ್ರತಿ ವರ್ಷದ ಯಾದಿಯಲ್ಲಿ ಇರುತ್ತವೆ) ಆದರೆ ಕಸಾಪದ ರಾಜ್ಯ ಮಟ್ಟದ ಮತ್ತು ಜಿಲ್ಲಾ ಘಟಕಗಳ ಅಧ್ಯಕ್ಷರೇ ಇಲ್ಲಿ ನ್ಯಾಯಮೂರ್ತಿಗಳು. ರಾಜಧಾನಿಗೆ ಸಮೀಪವೇ ಇರುವ ಕನಕಪುರದಲ್ಲಿ ನಡೆಯಲಿದ್ದ ೬೭ ನೆಯ ಸಮ್ಮೇಳನಕ್ಕೆ ಕಾದಂಬ ರಿಕಾರ ಡಾ. ಎಸ್. ಎಲ್. ಭೈರಪ್ಪನವರು 'ಅವಿರೋಧ'ವಾಗಿ ಆಯ್ಕೆಗೊಳ್ಳಲು ಕಾರಣ, ಪದಾಧಿಕಾರಿಗಳು ಅತ್ಯಂತ ಯಶಸ್ವಿಯಾಗಿ ಮಾಡಿ ಮುಗಿಸಿದ ತೆರಮರೆಯ ರಾಜಕಾರಣವೇ.

ಭೈರಪ್ಪ : ಬೃಹತ್-ಜನಪ್ರಿಯತೆ

ಕರ್ನಾಟಕದ ಮಧ್ಯಮ ವರ್ಗಗಳಲ್ಲಿ ಮತ್ತು ಮುಖ್ಯವಾಗಿ ಪರದೇಶಗಳಲ್ಲಿ ನೆಲೆಸಿದ ಅನಿವಾಸಿ ಭಾರತೀಯ (ಕನ್ನಡಿಗ)ರಲ್ಲಿ ತಮ್ಮ ಬೃಹತ್-ಕಾದಂಬರಿಗಳಿಂದಾಗಿ ಜನ ಪ್ರಿಯರಾಗಿರುವವರು ಭೈರಪ್ಪ. ಕಳೆದ ಅರ್ಧ ಶತಮಾನದ ಯಾವುದೇ ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಿಕ ವಿದ್ಯಮಾನಗಳೊಂದಿಗೆ ತಮ್ಮನ್ನು ಗುರುತಿಸಿಕೊಳ್ಳದೆ, ಎಲ್ಲ ಘಟ್ಟಗಳ ವಿಮರ್ಶಾ ವಲಯಗಳ ಬಗ್ಗೆ ಕೋಪ ತಾಳುತ್ತ ಬಂದಿರುವ ಭೈರಪ್ಪ, ನಮ್ಮ ವೈಚಾರಿಕ ವಲಯದಲ್ಲಿ ಪ್ರತಿಗಾಮಿ (ರಿಯಾಕ್ಶನರಿ) ಲೇಖಕರೆಂದೇ ಪ್ರತೀತಿ ಹೊಂದಿದವರು. ಸನಾತನ ಬ್ರಾಹ್ಮಣ ಸಂಪ್ರದಾಯದ ಮೌಲ್ಯಗಳನ್ನು ವಸ್ತು, ಪಾತ್ರ, ಸನ್ನಿವೇಶ, ಸಂಘರ್ಷ, ಪರಿಹಾರಗಳ ಮೂಲಕ ಪ್ರತಿಪಾದಿಸಲು ಅವರು ಬಳಸಿದ್ದು, ಅಪಾರ ಅಧ್ಯಯನದ ಮೂಲಕ ಮತ್ತು ಕಾದಂಬರಿ ಶಿಲ್ಪದ ಬಗ್ಗೆ ಪ್ರಜ್ಞಾಪೂರ್ವಕವಾಗಿ ಸಾಧಿಸಿಕೊಂಡ ಎಚ್ಚರದ ಮೂಲಕ ಕೈವಶ ಮಾಡಿಕೊಂಡಿರುವ ಕಥಾನಕದ ತಂತ್ರವನ್ನು, ಈ ನೆಲೆಯಲ್ಲಿ ಅವರು ವಿಶಾಲ ಕ್ಯಾನವಾಸಿನಲ್ಲಿ ಕತೆ ಕಟ್ಟುವ 'ಯಶಸ್ವೀ' ಕಾದಂಬರಿಕಾರರು. ಭೈರಪ್ಪನವರ ಧ್ಯೇಯ-ಧೋರಣೆಗಳ

ಬಗ್ಗೆ ನಮ್ಮ ಸಾಹಿತ್ಯ ವಲಯದಲ್ಲಿ ಸಾಕಷ್ಟು ಚರ್ಚೆಯಾಗಿವೆ. ಆದರೆ ಅವರು ಸಮ್ಮೇಳನದ ಅಧ್ಯಕ್ಷರಾದಾಗ ಪತ್ರಿಕೆಗಳಲ್ಲಿ ಅವರ ಬಗ್ಗೆ ಬರೆದವರು ಗಂಭೀರ ವಿಮರ್ಶಕರಲ್ಲ. ಹೀಗಾಗಿ ಹಾಮಾನಾ ಬರೆದರು: "ಭೈರಪ್ಪನವರ ಮಹಿಮೆಯನ್ನು ಅರಿಯಬೇಕಾದರೆ ಅವರ ಬಗ್ಗೆ ಬೇರೆ ಭಾಷೆಯ ವಿಮರ್ಶಕರು ಬರೆದುದನ್ನು ಓದಬೇಕು." ಆದರೆ ಬೇರೆ ಭಾಷೆಯವರು 'ಏನು' ಬರೆದಿದ್ದಾರೆ ಎಂದು ತಿಳಿಸುವ ಗೊಡವೆಗೆ ಮಾತ್ರ ಹಾಮಾನಾ ಹೋಗಲಿಲ್ಲ!

ಸಮ್ಮೇಳನಗಳ ಅಧ್ಯಕ್ಷ ಸ್ಥಾನ ಅಲಂಕರಿಸುವವರು ಸಾಮಾನ್ಯವಾಗಿ ಅರವತ್ತು ಮೀರಿದ ವಯೋವೃದ್ಧರು ಮತ್ತು ಜ್ಞಾನವೃದ್ಧರು (ಕೆಲವರು ೧೦-೧೫ ವರ್ಷ ಮುಂಗಡವಾಗಿಯೇ ಚಾನ್ಸ್ ಹೊಡಕೊಂಡವರೂ ಇದ್ದಾರೆ.) ಅಧ್ಯಕ್ಷೀಯ ಭಾಷಣಗಳಲ್ಲಿ ಕನ್ನಡ ಸಾಹಿತ್ಯದ ಪರಂಪರೆಯನ್ನು ಸ್ಮರಿಸುತ್ತ, ಸಮಕಾಲೀನ ಬರವಣಿಗೆಯ ಸರ್ವೆ ಮಾಡಿ ಒಳ್ಳೆಯದೆನಿಸಿದ್ದನ್ನು ಎತ್ತಿ ಹಿಡಿದು, ಯುವ ಸಾಹಿತಿಗಳಿಗೆ ಉಚಿತ ಉಪದೇಶ ನೀಡಿ, ನಾಡು ಇಡಿಯಾಗಿ ಎದುರಿಸುತ್ತಿರುವ ಸಮಸ್ಯೆಗಳ ಪಟ್ಟಿ ಮಾಡಿ, ರಾಜ್ಯ ಸರಕಾರದ ಮತ್ತು ಕೇಂದ್ರ ಸರಕಾರದ ಗಮನ ಸೆಳೆದು, ಕೊನೆಗೆ ಕನ್ನಡ ರಾಜರಾಜೇಶ್ವರಿಯ ಪಾದಪದ್ಮಂಗಳಲ್ಲಿ ಪೊಡಮಟ್ಟು ಶುಭಮಂಗಳ ಹಾಡುವುದು—ಇದು ಬಹುತೇಕರು ಅನುಸರಿಸಿಕೊಂಡು ಬಂದ ಸಂಪ್ರದಾಯ.

ಭೈರಪ್ಪನವರು ಕೂಡ ೧೯೯೯ರನೇ ಇಸ್ವಿಯಲ್ಲಿ ನಮ್ಮನ್ನಗಲಿದ ದಿಗ್ಗಜರ ಸ್ಮರಣೆಯೊಂದಿಗೆ ಪ್ರಾರಂಭಿಸಿ ಮೊದಲ ನಾಲ್ಕು ಪುಟಗಳಲ್ಲಿ, ಇಂಗ್ಲಿಷ್ ಭಾಷೆಯ ವ್ಯಾಮೋಹದ ದಾಳಿಯ ಎದುರಿನಲ್ಲಿ ಕನ್ನಡಕ್ಕೆ ಒದಗಿದ ಕಷ್ಟವನ್ನು ಗುರುತಿಸಿ, "ಭಾವ ಬುದ್ಧಿ ಮನಸ್ಸುಗಳು ಕೊನೆಯ ಪಕ್ಷ ಬಾಲ್ಯ ಕಳೆಯುವ ತನಕವಾದರೂ ಎಂದರೆ ಎಸ್. ಎಸ್. ಎಲ್. ಸಿ. ಕಳೆಯುವವರೆಗೂ ಪರಿಸರದ ಭಾಷೆಯ ಮೂಲಕ ಬೆಳೆಯ"ಬೇಕಾದ ಅಗತ್ಯವನ್ನು ಮನಂಬುಗುವಂತೆ ಪ್ರತಿಪಾದಿಸಿದರು. ಆಯಾ ರಾಜ್ಯಭಾಷೆಗಳು ಶಿಕ್ಷಣ ಮಾಧ್ಯಮಗಳಾಗಲು ಇರಬಹುದಾದ ಅಡ್ಡಿ–ಆತಂಕಗಳನ್ನು ನಿವಾರಿಸಲು ಸಂವಿಧಾನಕ್ಕೆ ತಿದ್ದುಪಡಿ ಮಾಡಲು ಹಿಂದೇಟು ಹಾಕಬಾರದೆಂದು ಅವರು ಕರೆ ಇತ್ತದ್ದು ಸಕಾಲಿಕವಾಗಿತ್ತು.

ಆದರೆ ಮುಂದಿನ ಇಪ್ಪತ್ತು ಪುಟಗಳ ಮೂಲಕ ಕನಕಪುರದ ಆ ಭವ್ಯವಾದ ವಿಶಾಲ ಪೆಂಡಾಲಿನಲ್ಲಿ ಕುಳಿತ ಸಾವಿರಾರು ಕನ್ನಡಿಗರು ಕಂಡದ್ದು-ಭೈರಪ್ಪನವರು ಕೆಲವು ದಶಕಗಳಿಂದಲೂ ತಮ್ಮ ಹೊಟ್ಟೆಯಲ್ಲಿ ಬಚ್ಚಿಟ್ಟುಕೊಂಡಿದ್ದ ಕಿಚ್ಚಿನ ಮಹಾಸ್ಫೋಟವನ್ನು. ಪ್ರಾಚೀನ 'ಭಾರತೀಯ' ಸಂಸ್ಕೃತಿಯ ಬಗ್ಗೆ, ನವೋದಯದ ನಂತರ ಕನ್ನಡ ಸಾಹಿತ್ಯದ ಘಟ್ಟಗಳ ಬಗ್ಗೆ, ವಿಮರ್ಶಾ ಸಿದ್ಧಾಂತಗಳ ಬಗ್ಗೆ, ಚಳುವಳಿಗಳ ಬಗ್ಗೆ, ಸೃಜನಶೀಲತೆಯ ಬಗ್ಗೆ ಅವರು ಮಾಡಿದ ಪ್ರಚಂಡ ಭಾಷಣದ ಪರಿಣಾಮವೆಂದರೆ:

ಮರುದಿನದ ಗೋಷ್ಠಿಗಳಲ್ಲಿ ಧಿಕ್ಕಾರದ ಘೋಷಣೆಗಳು ಮೊಳಗಿದ್ದು, ನೂರಾರು ಸಾಹಿತಿಗಳು ಅವರ ಭಾಷಣದ ಪ್ರತಿಯನ್ನು ಸುಟ್ಟು ಹಾಕಿದ್ದು, ವಿಷಯ ಮಂಡಕರು ಸಮ್ಮೇಳನಾಧ್ಯಕ್ಷರ ಒಂದೊಂದು ಮಾತನ್ನೂ ಖಂಡತುಂಡವಾಗಿ ಕತ್ತರಿಸಿ ಹಾಕಿದ್ದು.

ರಸ–ಧ್ವನಿ–ಔಚಿತ್ಯ

ತಮ್ಮ ಭಾಷಣದುದ್ದಕ್ಕೂ 'ಶುದ್ಧ'ಕಲೆಯನ್ನು ಪ್ರತಿಪಾದಿಸಿದ ಭೈರಪ್ಪನವರು ಪದೇ ಪದೇ ಬಳಸಿದ ಪದಪುಂಜ: ರಸ-ಧ್ವನಿ-ಔಚಿತ್ಯ. ಸಾಕಷ್ಟು ಧ್ವನಿ ಪೂರ್ಣವಾಗಿದ್ದ ಅವರ ಭಾಷಣದ ಧ್ವನಿಯು ಜಾಡು ಹಿಡಿದು ಹೇಳಬೇಕೆಂದರೆ, ಅವರ ಪ್ರಕಾರ–

೧. ಸಾಹಿತ್ಯದ ವಸ್ತು ಯಾವುದೇ ಇದ್ದರೂ ಅದನ್ನು ರಸ–ಧ್ವನಿ-ಔಚಿತ್ಯಗಳ ಮಾನ ದಂಡದಿಂದಲೇ ಅಳೆಯಬೇಕು. ಇದು ನಮ್ಮ ಸಂಪ್ರದಾಯ. ಪಾಶ್ಚಾತ್ಯ ಪ್ರಭಾವದಿಂದಾಗಿ ಇವು ಅಸಂಪೂರ್ಣ ಎಂಬ ಭಾವನೆ ಬೆಳೆಯಿತು.

೨. ಪ್ರಗತಿಶೀಲರು, ನವ್ಯರು, ದಲಿತ–ಬಂಡಾಯ-ಸ್ತ್ರೀವಾದಿಗಳು ನೈತಿಕ ಪ್ರೇರಣೆ ಯಿಂದ ಹೊರಟರು. ವ್ಯಕ್ತಿಗಳ ಪ್ರಜ್ಞೆಯೊಂದಿಗೆ ಸಾಮಾಜಿಕ ಬದಲಾವಣೆ ಮಾಡುವುದೂ ಮುಖ್ಯವಾಗಿ, ಸಾಹಿತ್ಯವು ಸಕ್ರಿಯ ಚಳುವಳಿಯ, ಹೋರಾ ಟದ ಅಭಿವ್ಯಕ್ತಿಯಾಯಿತು. ಐಡಿಯಾಲಜಿಯನ್ನು ಸಾಹಿತ್ಯಾಧ್ಯಯನದ ಆದ್ಯ ಅಗತ್ಯ ಮತ್ತು ವಿಮರ್ಶೆಯ ಮಾನದಂಡವನ್ನಾಗಿ ಮಾಡಿದವರು ನವ್ಯರು.

೩. ಬಂಡಾಯದವರು ಪ್ರತಿಪಾದಿಸುವಂತೆ ವೈದಿಕ ಸಂಸ್ಕೃತಿಯು ಶೋಷಕ ಸಂಸ್ಕೃತಿ ಯಲ್ಲ. ಬ್ರಾಹ್ಮಣೇತರ ಮಠಗಳೂ ವೈದಿಕ ಪರಂಪರೆ ಅನುಸರಿಸುತ್ತಿರು ವುದು ಒಂದು ಸಾಂಸ್ಕೃತಿಕ ಪರಿವರ್ತನೆ. ವಿಚಾರವಾದಿಗಳಿಗೆ ಇದು ಗೊತ್ತಿಲ್ಲ. ಆರ್ಯ ಸಮಾಜ ಚಳುವಳಿ ವ್ಯಾಪಕವಾಗಿದೆ. ಹಿಂದೂ ಧರ್ಮವು ಎಲ್ಲವನ್ನೂ ಒಳಗೊಳ್ಳುವ ವಿಶಾಲ ಧರ್ಮ.

೪. ಪ್ರಾಚೀನ ಭಾರತೀಯ ಸಂಸ್ಕೃತಿಯನ್ನು ಅಲ್ಲಗಳೆಯುವವರು ಯುವಕರನ್ನೂ ಸಾಮಾನ್ಯ ಜನರನ್ನೂ ದಾರಿ ತಪ್ಪಿಸುತ್ತ ಸಂಸ್ಕೃತಿಯ ವಿಧ್ವಂಸನ ಕಾರ್ಯದಲ್ಲಿ ನಿರತರಾಗಿದ್ದಾರೆ.

೫. ದಲಿತ ಮತ್ತು ಸ್ತ್ರೀವಾದಿ ಚಳುವಳಿಗಳು ದಲಿತ ಮತ್ತು ಮಹಿಳಾ ಸಾಹಿತಿಗಳ ಸೃಜನಶೀಲತೆಯನ್ನು ಕೊಂದು ಹಾಕುತ್ತವೆ.

೬. ಲೋಹಿಯಾ ಮುಂತಾದವರು ವಾದಗಳನ್ನು ಪ್ರಭಾವಪೂರ್ಣವಾಗಿ ಪ್ರತಿಪಾದಿ ಸುವ ನಾಯಕ ವಕೀಲರೇ ಹೊರತು ಸಮಾಜಶಾಸ್ತ್ರಜ್ಞರಲ್ಲ.

ಇವು ಮುಖ್ಯ ಅಂಶಗಳು ಮಾತ್ರ. ಭೈರಪ್ಪನವರ ಮೂಲ ವ್ಯಾಧಿಯನ್ನು ಸಮಗ್ರ ವಾಗಿ ತಿಳಿಯಬೇಕಾದರೆ ಅವರ ಮೂಲ ಪ್ರತಿಯನ್ನೇ ಓದುವುದು ಒಳ್ಳೆಯದು,

*

ಪ್ರತಿಭಟನೆಯ ಕಿಡಿ

ನವ್ಯದ ನಂತರದ ಕಳೆದ ಎರಡೂವರೆ ದಶಕಗಳಲ್ಲಿ ಕನ್ನಡ ಸಾಹಿತ್ಯಕ್ಕೆ ಜೀವದ್ರವ್ಯವನ್ನು ಒದಗಿಸಿದ್ದೇ ಬಂಡಾಯ, ದಲಿತ, ಸ್ತ್ರೀವಾದಿ ಮತ್ತು ಮುಸ್ಲಿಂ ಸಾಹಿತ್ಯಿಕ ಚಳುವಳಿಗಳು. ಇವೆಲ್ಲವನ್ನೂ ಸಮ್ಮೇಳನಾಧ್ಯಕ್ಷ ಪೀಠದಿಂದ ಒಮ್ಮೆಲೇ ಒರೆಸಿ ಹಾಕಿಬಿಟ್ಟರಲ್ಲ ಭೈರಪ್ಪನವರು-ಎಂಬ ಆತಂಕ ಗುಸುಗುಸು ಮಾತುಗಳ ಮೂಲಕ ಸರುವಾಗಿ ಮರುದಿನ ಗುರುಗುಟ್ಟುವ ಹಂತ ತಲುಪಿದ್ದು ಸಹಜವೇ ಆಗಿತ್ತು. ಪತ್ರಿಕಾ ವರದಿಗಳ ಮೂಲಕ ಸುದ್ದಿ ತಿಳಿದ ಗಂಗಾಧರ ಮೂರ್ತಿ, ಭಗವಾನ್ ಮುಂತಾದ ಬಂಡಾಯ ಗೆಳೆಯರು ಭೈರಪ್ಪನವರ ವೇದವಾಣಿಯಲ್ಲಿ ಸಂಘ ಪರಿವಾರದ ಮುರಲೀ ಮನೋಹರ ಜೋಶಿ ಶಂಖನಾದವನ್ನೇ ಗುರುತಿಸಿದ್ದರು.

ಮೊದಲ ಕಿಡಿ ಹಾರಿದ್ದು 'ಅಭಿವ್ಯಕ್ತಿ-ಸವಾಲುಗಳು' ಕುರಿತ ಎರಡನೇ ಗೋಷ್ಠಿಯಲ್ಲಿ (ಫೆಬ್ರು ೨೭). 'ಸ್ತ್ರೀವಾದಿ ಲೇಖಕಿಯರಲ್ಲಿ ಸೃಜನಶೀಲತೆ ಇರುವುದಿಲ್ಲ' ಎಂಬ ಭೈರಪ್ಪ-ಅಭಿಪ್ರಾಯವನ್ನು ಬಲವಾಗಿ ಅಲ್ಲಗಳೆದ ಡಾ. ವೀಣಾ ಶಾಂತೇಶ್ವರ ಅವರು, ನಿಜವಾದ ಸೃಜನಶೀಲತೆ ಚಳುವಳಿಗಳಲ್ಲಿ ಕರಗಿ ಹೋಗದೆ ಅವುಗಳ ಪ್ರಭಾವವನ್ನು ಅರಗಿಸಿಕೊಂಡು ನಿತ್ಯನೂತನವಾಗಿರುತ್ತದೆ ಎಂದು ಹೇಳಿದರು. ಗೋಷ್ಠಿಯ ಅಧ್ಯಕ್ಷ ಡಾ. ವಿ. ಮುನಿವೆಂಕಟಪ್ಪನವರಂತೂ 'ಜಾತಿ ಭೇದಕ್ಕೆ ವೇದಗಳು ಕಾರಣವಲ್ಲ' ಎಂಬ ಭೈರಪ್ಪನವರ ಮಾತಿನ ಎಳೆ ಹಿಡಿದು, ಜಾತಿ ಶೋಷಣೆಗೆ ವೈದಿಕ ಧರ್ಮದ ಮೌಲ್ಯಗಳೇ ಕಾರಣವೆಂದು ಹೇಳಿ, ಭೈರಪ್ಪ-ಭಾಷಣದಿಂದ ಸಾಲುಗಳನ್ನು ಹೆಕ್ಕತೊಡಗಿದಾಗ ಕೆಲವರು ವೇದಿಕೆಯೇರಿ ಅವರ ಮಾತಿಗೆ ಅಡ್ಡಿಯುಂಟು ಮಾಡಿದರು. ಒಬ್ಬ ಪ್ರೇಕ್ಷಕನಂತೂ, "ಸಮ್ಮೇಳನಾಧ್ಯಕ್ಷರ ಭಾಷಣವನ್ನು ಟೀಕಿಸುವ ಹಕ್ಕು ಯಾರಿಗೂ ಇಲ್ಲ." ಎಂದು ಚೀರಾಡತೊಡಗಿದ್ದ. ಮುನಿವೆಂಕಟಪ್ಪ ಅನಿವಾರ್ಯವಾಗಿ ಭಾಷಣ ಮೊಟಕುಗೊಳಿಸುವ ಮುನ್ನ, "ನನ್ನ ವಿಚಾರಗಳಿಗೆ ನಾನು ಬದ್ಧ," ಎಂದು ಸಾರಿದರು. 'ಪುರೋಹಿತಶಾಹಿಗೆ ಧಿಕ್ಕಾರ,' 'ಅಂಬೇಡ್ಕರ್ ಜಿಂದಾಬಾದ್' ಘೋಷಣೆಗಳು ಸಭಾಂಗಣ ವಾತಾವರಣ ತುಂಬಿದ್ದವು.

'ಸಾಹಿತ್ಯ-ವಿಶಿಷ್ಟ ಸಂವೇದನೆಗಳು'-ಕುರಿತ ಮೂರನೇ ವಿಚಾರಗೋಷ್ಠಿ ನಡೆದ ಅವಧಿಯಲ್ಲೇ ನಾವೆಲ್ಲ ಬಂಡಾಯ ಗೆಳೆಯರು ಬೇರೊಂದು ಕಡೆ ಸಭೆ ಮಾಡಿ ಮುಂದಿನ ಕ್ರಮದ ಬಗ್ಗೆ ಯೋಜನೆ ಹಾಕಿದೆವು. 'ಸಮೂಹ ಮಾಧ್ಯಮಗಳು'-ಕುರಿತ ನಾಲ್ಕನೆಯ (ಮತ್ತು ದಿನದ ಕೊನೆಯ) ವಿಚಾರಗೋಷ್ಠಿಯ ಅಧ್ಯಕ್ಷತೆ ನನ್ನದೇ ಆಗಿತ್ತು. ಮುನ್ನಾದಿನದ ಭೈರಪ್ಪ ಭಾಷಣಕ್ಕೆ ನಾನು ಪ್ರತ್ಯಕ್ಷ ಸಾಕ್ಷಿಯಾಗಿದ್ದೆ. ಈ ಗೋಷ್ಠಿಯ ಮೊದಲ ಭಾಷಣಕಾರ ಪ್ರಸನ್ನ ಅವರು ರಂಗಭೂಮಿಯ ಕ್ರಿಯಾಶೀಲತೆಯ ಸಾಧ್ಯತೆಗಳ ಬಗ್ಗೆ ಚರ್ಚೆ ಪ್ರಾರಂಭಿಸಿ ಭೈರಪ್ಪನವರ 'ಶುದ್ಧ ಸಾಹಿತ್ಯ'ದ

ಪರಿಕಲ್ಪನೆ ಪ್ರತಿಕ್ರಿಯಿಸುತ್ತಿದ್ದಾಗ ವೇದಿಕೆಯ ಎಡಭಾಗದಲ್ಲಿ ಸೇರಿದ ನೂರಾರು ಪ್ರಗತಿಪರರು 'ಸ್ತ್ರೀ ವಿರೋಧಿ, ದಲಿತ ವಿರೋಧಿ ಹಾಗೂ ಪುರೋಹಿತಶಾಹಿ ಭೈರಪ್ಪನವರಿಗೆ ಧಿಕ್ಕಾರ' ಎಂದು ಕೂಗುತ್ತ ಸಣ್ಣ ಮೆರವಣಿಗೆಯನ್ನೇ ಪ್ರಾರಂಭಿಸಿ ವೇದಿಕೆಯ ಮುಂಭಾಗದಲ್ಲಿ ಜಮಾಯಿಸಿದರು. ಕೆಲವರು ಮಾತಾಡಿದ ನಂತರ ಡಾ. ಮಲ್ಲಿಕಾ ಘಂಟಿಯವರು ಸಾಂಕೇತಿಕವಾಗಿ ಭೈರಪ್ಪನವರ ಭಾಷಣದ ಮುದ್ರಿತ ಪ್ರತಿಗೆ ಬೆಂಕಿ ಹಚ್ಚಿದರು. ಈ ಪ್ರತಿಭಟನೆಯಲ್ಲಿ ಪಾಲುಗೊಂಡವರು; ಬಿ. ಗಂಗಾಧರ ಮೂರ್ತಿ, ಹರಿಹರಪ್ರಿಯ, ಅಲ್ಲಮಪ್ರಭು ಬೆಟ್ಟದೂರು, ಚೆನ್ನಬಸವಣ್ಣ, ಗಂಗಾಧರ ಕುಷ್ಟಗಿ, ಕೆ. ಎಸ್. ಭಗವಾನ್, ಬಸವರಾಜ ಸಬರದ, ಚೆನ್ನಣ್ಣ ವಾಲೀಕಾರ, ಭಕ್ತರ ಹಳ್ಳಿ ಕಾಮರಾಜ ಮತ್ತು ನೂರಾರು ಇತರ ಪ್ರಗತಿಪರರು. ನಾನು ವೇದಿಕೆಯ ಮೇಲೆಯೇ ಇದ್ದೆ.

ಗೋಷ್ಠಿಯ ಇತರ ಪಾಲುಗಾರರಾದ ಅಬ್ದುಲ್ ರೆಹಮಾನ್, ಪಾಶಾ, ಟಿ. ಎನ್. ಸೀತಾರಾಮ್, ಎಚ್. ಗಿರಿಜಮ್ಮ, ಎಸ್. ಎಸ್. ಶಂಕರ, ಸುಧಾ ಮೂರ್ತಿ, ಗಂಗಾಧರ ಮೊದಲಿಯಾರ ಅವರು ರಂಗಭೂಮಿ, ಚಲನಚಿತ್ರ, ಪತ್ರಿಕೆ, ಕಂಪ್ಯೂಟರ್, ದೂರದರ್ಶನ, ವಾಚನಾಭಿರುಚಿ, ಮುಂತಾದ ವಿಷಯಗಳ ಬಗ್ಗೆ ಮಾತಾಡಿದ ನಂತರ ಗೋಷ್ಠಿಯ ಅಧ್ಯಕ್ಷ ಭಾಷಣ ಮಾಡುವ ಪಾಳಿ ನನ್ನದಾಗಿತ್ತು. ಅವರೆಲ್ಲ ಪ್ರಸ್ತಾಪಿಸಿದ ವಿಷಯಗಳ ಜಾಡು ಹಿಡಿದೇ ಹೊರಟ ನಾನು ಭೈರಪ್ಪನವರು ತಮ್ಮ ಭಾಷಣದ ಮೊದಲ ನಾಲ್ಕು ಪುಟಗಳಲ್ಲಿ ಒತ್ತಿ ಹೇಳಿದ ಶಿಕ್ಷಣ ಮಾಧ್ಯಮದ ಸಮಸ್ಯೆಯ ಬಗ್ಗೆ ಅವರಿಗೆ ಪಂಚಕೋಟಿ ಕನ್ನಡಿಗರ ಪರವಾಗಿ ಕೃತಜ್ಞತೆ ಹೇಳಿ ಹಾರ್ದಿಕ ಅಭಿನಂದನ ಸಲ್ಲಿಸಿದೆ.

*

ಭೈರಪ್ಪ–ಬಾಳ ಠಾಕ್ರೆ

"ಇನ್ನು ಮುಂದೆ ನಾನು ಆಡುವುದು ಅಭಿನಂದನೆಯ ಮಾತುಗಳಲ್ಲ."–ಎಂದು ಮುಂಗಡವಾಗಿ ಸ್ಪಷ್ಟ ಹೇಳಿಯೇ ನಾನು ಭೈರಪ್ಪನವರ 'ಪ್ರತಿಗಾಮಿ' ವಿಚಾರಗಳಿಗೆ ಕೈ ಹಚ್ಚಿದ್ದು. ಮಧ್ಯಾಹ್ನದ ಬಂಡಾಯ ಗೆಳೆಯರ ಸಮಾಲೋಚನೆ ಸಭೆಯಲ್ಲಿ ಪ್ರಕಟವಾದ ವಿವಿಧ ಅಭಿಪ್ರಾಯಗಳ ಕ್ರೋಢೀಕೃತ ಆವೃತ್ತಿಯಾಗಿತ್ತು ನನ್ನ ಅಧ್ಯಕ್ಷ ಭಾಷಣ.

ನಾನು ಹೇಳಿದ್ದು ಇಷ್ಟು :

೧. ಮಧ್ಯಾಹ್ನದ ಗಲಾಟೆಯಲ್ಲಿ, ಸಮ್ಮೇಳನಾಧ್ಯಕ್ಷರ ಭಾಷಣವನ್ನು ಟೀಕಿಸುವ ಹಕ್ಕು ಯಾರಿಗೂ ಇಲ್ಲ ಎಂದು ಒಬ್ಬರು ಹೇಳಿದರು. ಈ ಸಮ್ಮೇಳನಾಧ್ಯಕ್ಷರನ್ನು ಬಿಡಿರಿ. ಇಡೀ ರಾಷ್ಟ್ರದ ಅಧ್ಯಕ್ಷರಾಗಿರುವ (ರಾಷ್ಟ್ರಪತಿ) ನಾರಾಯಣನ್

ಅವರ ಅಭಿಪ್ರಾಯಗಳನ್ನೂ ಕೂಡ ವಿಮರ್ಶಿಸುವ ಹಕ್ಕು ಇಂಡಿಯಾದ ಪ್ರತಿಯೊಬ್ಬ ಪ್ರಜೆಗೂ ಇದೆ.

೨. ರಸ-ಧ್ವನಿ-ಔಚಿತ್ಯಗಳ ಭೈರಪ್ಪನವರ 'ಶುದ್ಧ ಕಲೆ'ಯ ವಾದ ಕೊನೆಗೂ ಮುಟ್ಟುವುದು 'ಕಲೆಗಾಗಿ ಕಲೆ' ಎಂದ ಸಿದ್ಧಾಂತವನ್ನು ಇದು ಈಗಾಗಲೇ ತಿರಸ್ಕರಿಸಲ್ಪಟ್ಟ, ಹಳೆಯ, ಹಳಸಿಹೋದ ಸಿದ್ಧಾಂತವಾಗಿದೆ.

೩. ಸೃಜನಶೀಲತೆ ಎಂದುಬು ಯಾರೋ ಎಂದೋ ತಮ್ಮ ಕಾಲದ ಮತ್ತು ಅರಿವಿನ ಪರಿಮಿತಿಯಲ್ಲಿ ವ್ಯಾಖ್ಯಾನ ಮಾಡಿದ ಸಿದ್ಧಾಂತವಲ್ಲ. ಬದುಕಿನ ವಾಸ್ತವದ ಸವಾಲುಗಳನ್ನು ಎದುರಿಸುತ್ತ, ಅವುಗಳನ್ನು ಅರಗಿಸಿಕೊಂಡು, ಅಭಿವ್ಯಕ್ತಿಯ ನಿರಂತರ ಸಾಧ್ಯತೆಗಳನ್ನು ಶೋಧಿಸುವುದೇ ನಿಜವಾದ ಸೃಜನಶೀಲತೆ. ಅದು ಕೈಲಾಸ ಪರ್ವತದ ಮಡುಗಟ್ಟಿದ, ಪಾಚಿಗಟ್ಟಿದ ಮಾನಸ ಸರೋವರವಲ್ಲ; ನಮ್ಮೊಳಗೆ ನಿತ್ಯ ನಿರಂತರವಾಗಿ ಹರಿಯುತ್ತಿರುವ ನವನವೋನ್ಮೇಷ ಶಾಲಿನೀ ಕ್ರಿಯಾಶೀಲವಾಹಿನಿ.

೪. ಭೈರಪ್ಪನವರು ತಮ್ಮ ಕೃತಿಗಳ ಮೂಲಕ ತಾವು ಒಬ್ಬ ಸಂಪ್ರದಾಯವಾದಿ, ಪ್ರತಿಗಾಮಿ ಲೇಖಕರೆಂಬ ಪ್ರತೀತಿ ಗಳಿಸಿದವರು. ಅವರ ಅಧ್ಯಕ್ಷ ಭಾಷಣವು ಈ ಪ್ರತೀತಿಯನ್ನು ಸುಳ್ಳಾಗಿಸುವ ಬದಲು, ಅವರ ಬಗೆಗಿನ ಗುಮಾನಿಗಳನ್ನು ಗಟ್ಟಿಗೊಳಿಸಿದೆ;

೫. ಬದುಕಿನ ವಾಸ್ತವಗಳನ್ನು ಸಂಘರ್ಷ, ಚಳುವಳಿಗಳ ಮೂಲಕ ಅರಿತು ನಾವು ಪ್ರೇರಣೆ ಪಡೆಯುತ್ತೇವೆ. ಭೈರಪ್ಪ ಅಂಥವರ ಬರವಣಿಗೆಯಿಂದ ಪ್ರೇರಣೆ ಪಡೆಯುವ ಅಗತ್ಯ ಸೃಜನಶೀಲರಿಗಿಲ್ಲ.

೬. ಇಂಡಿಯಾ ದೇಶದ್ದು ಬಹುಮುಖೀ ಸಂಸ್ಕೃತಿಯಾಗಿದೆ, ಭೈರಪ್ಪ ತಮ್ಮ 'ಹಿಂದೂ' ಸಂಸ್ಕೃತಿಯನ್ನೇ 'ಭಾರತೀಯ' ಸಂಸ್ಕೃತಿ ಎಂದು ಬಿಂಬಿಸುತ್ತ, ದಲಿತ-ಪ್ರಗತಿಪರ-ಬಂಡಾಯ-ಸ್ತ್ರೀವಾದಿ ಸಾಹಿತಿಗಳು ಅಭಿವ್ಯಕ್ತಿಸುತ್ತಿರುವ ಬಹುಮುಖೀ ಸಂಸ್ಕೃತಿಯ ಸೃಜನಶೀಲತೆಯನ್ನು ಧ್ವಂಸ ಮಾಡುತ್ತಿದ್ದಾರೆ. ಸಮ್ಮೇಳನಾಧ್ಯಕ್ಷರ 'ಸಾಂಸ್ಕೃತಿಕ' ಜವಾಬ್ದಾರಿಯನ್ನು ಮರೆತು, ತಮ್ಮ ಪೂರ್ವಾಗ್ರಹಪೀಡಿತ ಏಕಮುಖೀ ಚಿಂತನೆಯನ್ನು ನಮ್ಮ ಮೇಲೆ ಹೇರುತ್ತಿದ್ದಾರೆ.

೭. ಹೇಳೋದು ನನ್ನ ಧರ್ಮ, ಕೇಳೋದು ನಿಮ್ಮ ಕರ್ಮ—ಎಂಬ ಫ್ಯಾಸಿಸ್ಟ್ ನೆಲೆಯಲ್ಲಿ ಬಾಳ ಠಾಕ್ರೆ ರೀತಿಯಲ್ಲಿ ಮಾತಾಡಿದ ಭೈರಪ್ಪ ಸಂಘ-ಪರಿವಾರದ ಮುಖವಾಣಿಯಾಗಿದ್ದಾರೆ. ಬಾಳ ಠಾಕ್ರೆ ರಾಜಕಾರಣಿ. ಆದರೆ ಭೈರಪ್ಪ ಸಾಹಿತಿ. ಸಾಹಿತಿಯಾದವನು ರಾಜಕಾರಣಿಯ ವಿಚಾರಗಳನ್ನೂ ಅರಗಿಸಿ

ಕೊಂಡು ಮುಕ್ತಸ್ಸದ್ದಿಯಾಗಿ ಮಾತಾಡಬೇಕು. ಭೈರಪ್ಪನವರು ಹಾಗೆ ಮಾಡ ಲಿಲ್ಲ.

೮. ಸಮ್ಮೇಳನದ ಸಮಾರೋಪ ಕಾರ್ಯಕ್ರಮದಲ್ಲಿ ಅಧ್ಯಕ್ಷರು ಈ ಬಗ್ಗೆ ತಮ್ಮ ಪ್ರತಿಕ್ರಿಯೆ ವ್ಯಕ್ತಪಡಿಸುವರೆಂದು ನಂಬಿರುವೆ. ಯಾರ ಮಾತೂ ಅಂತಿಮ ಸತ್ಯವಾಗಬೇಕಾಗಿಲ್ಲ.

*

ಗೀತಾ ಪ್ರವಚನ

ಸಮಾರೋಪ ಸಮಾರಂಭದಲ್ಲಿ ಉಪಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯ ಮತ್ತು ಕನಕಪುರ ಸಮ್ಮೇಳನದ ಯಶಸ್ಸಿನ ಮುಖ್ಯ ರೂವಾರಿ ಶ್ರೀ ಪಿ.ಜಿ ಆರ್. ಸಿಂಧ್ಯ ಅವರು ಜನತೆಯ ಆಶೋತ್ತರಗಳಿಗೆ ಸ್ಪಂದಿಸುವ ಜೀವಪರ ಸಾಹಿತ್ಯ ಸೃಷ್ಟಿಯಾಗ ಬೇಕು, ಸಮ್ಮೇಳನಗಳು ವೈಚಾರಿಕ ಚಿಂತನ-ಮಂಥನದ ವೇದಿಕೆಗಳಾಗಬೇಕು ಎಂದು ಕರೆ ಇತ್ತರು. ಸಮಾರೋಪ ಭಾಷಣಕ್ಕಾಗಿ ವಿಶೇಷವಾಗಿ ಆಹ್ವಾನಿತರಾದವರು ಪ್ರಖ್ಯಾತ ಇಂಗ್ಲಿಷ್ ಪ್ರೊಫೆಸರರಾದ ಮೈಸೂರಿನ ಧ್ವನ್ಯಾಲೋಕದ ಪ್ರೊ. ಸಿ. ಡಿ. ನರಸಿಂಹಯ್ಯನವರು, ಕನ್ನಡ ಸಾಹಿತ್ಯದ ಗಂಧವೇ ಗೊತ್ತಿರದ 'ಸಿಡಿಎನ್' ಭಾಷಣ ಸಭಿಕರಿಗೆ ರುಚಿಸಲೇ ಇಲ್ಲ.

ಮುನ್ನಾದಿನದ ಟೀಕೆಗಳಿಗೆ ಉತ್ತರ ಸಿಕ್ಕೀತು-ಎಂದು ಭೈರಪ್ಪನವರ ಭಾಷಣಕ್ಕೆ ಕಾದು ಕುಳಿತ ಸಭಿಕರೆಗೆ ಕೊನೆಗೂ ದಕ್ಕಿದ್ದು ಒಂದು ಗಂಟೆಯ ಜಗದ್ಗುರು-ಶೈಲಿಯ ಗೀತಾ ಪ್ರವಚನ ಮಾತ್ರ. ತಮ್ಮ ವಾದ ಸರಣಿಯ ಮೂಲಪಟ್ಟನ್ನು ಎಲ್ಲಿಯೂ ಬಿಟ್ಟುಕೊಡದೆ ಅವರು ಹೇಳಿದ್ದು ಅದನ್ನೇ ಅದನ್ನೇ: ಸಿದ್ಧಾಂತ ಹಾಗೂ ಚಳುವಳಿ ಗಳು ನಮ್ಮನ್ನು 'ಪರಮ' ಸತ್ಯದ ಕಡೆಗೆ ಒಯ್ಯಲಾರವು; ಹಿಂದೂ ಧರ್ಮ ಉಳಿದೆಲ್ಲ ಧರ್ಮಗಳಿಗಿಂತ ಶ್ರೇಷ್ಠ; ಜಾತಿ ಪದ್ಧತಿ ನಮ್ಮ ರಕ್ತದಲ್ಲಿಯೇ ಇರುವುದರಿಂದ ಅದನ್ನು ಹೋಗಲಾಡಿಸುವುದು ಸಾಧ್ಯವಿಲ್ಲ; ವಿಚಾರವಾದವು ಕೊನೆಗೂ ನಮ್ಮನ್ನು ಒಯ್ಯುವುದು ಶೂನ್ಯಕ್ಕೆ: ಶೂನ್ಯದ ನೆಲೆಯಿಂದ ಸಮಗ್ರ ಸತ್ಯ ಕಾಣಲಾರದು... ಇತ್ಯಾದಿ ಇತ್ಯಾದಿ ಇತ್ಯಾದಿ.

ನಾನು ಯಾವ ಚಳುವಳಿಗೂ ವಿರೋಧಿಯಲ್ಲ; ಚರ್ಚೆ-ಸಂವಾದಗಳ ಮೂಲಕ ನಾವು ಬೆಳೆಯುವುದು ಸಾಧ್ಯ-ಎಂದು ಸಾಮ್ಯವಾಗಿಯೇ ಭೈರಪ್ಪನವರು ತಮ್ಮ ಮಾತಿಗೆ ಮುಕ್ತಾಯ ಹಾಡಿದಾಗ, ನಮ್ಮ ಸಾಲಿನಲ್ಲಿಯೇ ಕುಳಿತಿದ್ದ ಮಲ್ಲಿಕಾ ಘಂಟಿ ಅವರಿಗೆ ಹೇಳಿದೆ: "ಭೈರಪ್ಪ ಮೊನ್ನೆ ಬಾಳ ಠಾಕ್ರೆ ಆಗಿದ್ದರು; ಈಗ ವಾಜಪೇಯಿ ಆಗಿದ್ದಾರೆ!" ಮುಖ ಯಾವುದು, ಮುಖವಾಡ ಯಾವುದು-ಎಲ್ಲರಿಗೂ ಗೊತ್ತು.

*

ಮತ್ತೊಬ್ಬ ಜಗದ್ಗುರು

ಭೈರಪ್ಪನವರ ವಿರುದ್ಧದ ಮೆರವಣಿಗೆಯ ನೇತೃತ್ವ ವಹಿಸಿದವರಲ್ಲಿ (ಪ್ರಜಾವಾಣಿ ವರದಿಯ ಪ್ರಕಾರ) ಲಂಕೇಶ ಪತ್ರಿಕೆಯ ವರದಿಗಾರ ಗಂಗಾಧರ ಕುಷ್ಟಗಿ ಅವರೂ ಒಬ್ಬರು. ಭಾಷಣದ ಪ್ರತಿ ಸುಟ್ಟಿದ್ದಕ್ಕೂ ಸಾಕ್ಷಿಯಾಗಿದ್ದವರು. ನನ್ನ ಭಾಷಣ ವನ್ನೂ ಅವರು ಪೂರ್ತಿ ಕೇಳಿಸಿಕೊಂಡಿರಬೇಕು. ಆದರೆ ಸಮ್ಮೇಳನದ ಅವರ 'ವರದಿ'ಯಲ್ಲಿ (ಲಂ.ಪ. ೧೦ ಮಾರ್ಚ ೧೯೯೯) ಮಾತ್ರ ನಾನು ಕನ್ನಡ ಮಾಧ್ಯ ಮದ ಬಗ್ಗೆ ಮಾತಾಡಿದ್ದನ್ನು-(ಅವರ ಪ್ರಕಾರ 'ಕಿರುಚಿಕೊಂಡಿದ್ದನ್ನು')-ಮಾತ್ರ ಪ್ರಸ್ತಾಪಿಸಿದ್ದಾರೆ. ನನ್ನ ಭಾಷಣದ ನಡುವೆ ಅವರಿಗೇನಾದರೂ ತನ್ನ 'ಅಜ್ಜಾವ್ರು' ಲಕ್ಷ್ಮಣ ಪೂಜಾರಿ ಅವರ ನೆನಪಾಗಿ ಧ್ಯಾನದಲ್ಲಿ ಲೀನರಾದರೇನೋ ಎಂದು ನನ್ನ ಸಂಶಯ. ಅಥವಾ ಪ್ರತಿಭಟನಾ ಸಭೆಯಲ್ಲಿ ತಮಗೆ ಮಾತನಾಡಲು 'ಅವಕಾಶ' ಸಿಗದ್ದಕ್ಕಾಗಿ ಸಿಟ್ಟೂ ಬಂದಿರಬೇಕು.

ಯಥಾಪ್ರಕಾರ ನಮ್ಮ ಲಂಕೇಶಣ್ಣ 'ಈ ಚಂಪಾ ವಿಚಾರವಂತನೂ ಅಲ್ಲ, ಮಾನ ವೀಯನೂ ಅಲ್ಲ.' ಅಂತ ಗೊತ್ತುವಳಿ ಪಾಸುಮಾಡಿ, ನಿಜವಾದ ಹೋರಾಟಗಾರ ಹೇಗಿರಬೇಕು ಎಂದು ಗೀತೋಪದೇಶ ಮಾಡಿದ್ದಾನೆ. ನಾನು ಅವರಿಗೆ ಬರೆದೆ:

ಪ್ರಿಯ ಸಂಪಾದಕರೇ,

ಕನಕಪುರ ಸಮ್ಮೇಳನದಲ್ಲಿ ನಾನು ನನ್ನ ಭಾಷಣದಲ್ಲಿ, ನೀವು ಪತ್ರಿಕೆಗಳಲ್ಲಿ ವ್ಯಕ್ತಪಡಿಸಿದ ಮತ್ತು ನಿಮಗಿಂತಲೂ ಚೆನ್ನಾಗಿ, ಸುಸಂಬದ್ಧವಾಗಿ ನಟರಾಜ ಹುಳಿಯಾರರು ಬರೆದ ವಿಚಾರಗಳನ್ನೇ ಭೈರಪ್ಪನವರ ಬಗ್ಗೆ ಪ್ರಸ್ತಾಪಿಸಿದ್ದು. ನೀವು ಹೇಳಿದಾಗ ಮಾತ್ರ ಸರಿ; ಅದೇ ಮಾತು **ಚಂಪಾ** ಹೇಳಿದರೆ ಅದು 'ಭೈರಪ್ಪ, ಭಟ್ಟಗಳ ವೈದಿಕ ಸಮರ್ಥನೆಯಂತೆಯೇ ಇರುತ್ತದೆ.' ಇದು ಹೇಗೆ ? ನೀವು ವೈಚಾರಿಕರಿಂದ 'ಕ್ರಿಯೆ'ಯೆನ್ನೂ ಬಯಸುತ್ತೀರಿ; ಆದೇ ಉಸಿರಿನಲ್ಲಿ, ವೈದಿಕರ ವಿತಂಡವಾದವನ್ನು ನಿರ್ಲಕ್ಷಿಸುವ 'ಧ್ಯಾನ'ವನ್ನು ಬಯಸುತ್ತೀರಿ. ತಮಗೆ ನಿಜವಾಗಿಯೂ **ಏನು** ಬೇಕಾಗಿದೆ ಎಂಬುದನ್ನು ಜಗದ್ಗುರುಗಳು ಅಪ್ಪಣೆಕೊಡಿಸಬೇಕು.

ನಿಮ್ಮ ಪಾಲಿನ ಕೂಗುಮಾರಿ
ಚಂಪಾ

*

ನಿಜವಾದ ಸಾಹಿತಿ

"ನಿಜವಾದ ಸಾಹಿತಿಯು ಗಂಡೂ ಅಲ್ಲ, ಹೆಣ್ಣೂ ಅಲ್ಲ."–ಎನ್ನುತ್ತಾರೆ ಭೈರಪ್ಪ ತಮ್ಮ ಭಾಷಣದಲ್ಲಿ. ಹಾಗಾದರೆ ಭೈರಪ್ಪನವರನ್ನು ನಾವು 'ನಿಜವಾದ ಸಾಹಿತಿ' ಅಂತ ಕರೆಯೋಣವೇ, ಬೇಡವೇ ?......ಹಾಗೆಯೇ ಲಂಕೇಶರನ್ನು ?

ಅಣುಸಂಸ್ಕೃತಿಯ ಅಪಾಯಗಳು

ವಿ. ಚಂದ್ರಶೇಖರ ನಂಗಲಿ

ನಮ್ಮ ದೇಶವ ಚುಕ್ಕಾಣಿ ಹಿಡಿದವರು ಪೋಖ್ರಾನ್ ಸ್ಫೋಟದಿಂದೀಚೆಗೆ ಅನಗತ್ಯ ಪ್ರಶ್ನೆಯೊಂದನ್ನು ಹುಟ್ಟಿಹಾಕಿದ್ದಾರೆ: ಭಾರತದ ಪ್ರಥಮ ಶತ್ರು ಯಾರು ? ಎಂಬುದೇ ಆ ಪ್ರಶ್ನೆ. ಇದಕ್ಕೆ ಎಲ್. ಕೆ. ಅಡ್ವಾಣಿ, ಮದನಲಾಲ್ ಖುರಾನ ಅಂಥವರು ಪ್ರಚೋದಕ ಹೇಳಿಕೆಗಳನ್ನಿತ್ತು 'ಪಾಕಿಸ್ತಾನ' ಎಂಬರ್ಥ ಬರುವಂತೆ ಮಾತಾಡಿದ್ದಾರೆ. ಜಾರ್ಜ್ ಫರ್ನಾಂಡಿಸ್ ಅವರು ಸ್ವಯಂ ಪ್ರೇರಣೆಯಿಂದ "ನಾನು ಅಮೆರಿಕಾದ ಏಜೆಂಟ್ ಅಲ್ಲ"ವೆಂದು ಹೇಳುತ್ತಲೆ ಚೀನಾವನ್ನು ಭಾರತದ ಪ್ರಥಮ ಶತ್ರು ಎಂದಿದ್ದಾರೆ. ಪ್ರಧಾನಿ ವಾಜಪೇಯಿ ಅವರು ತಮ್ಮ ಜನರ ತಿಪ್ಪೆಗುಂಡಿ ಸಾರಿಸುತ್ತಾ "ಚೀನಾ ಭಾರತವ ಪ್ರಥಮ ಶತ್ರು ಅಲ್ಲ ಎಂದು ಹೇಳಿಕೆ ನೀಡಿ ಪಾಕೀಸ್ತಾನದ ಬಗ್ಗೆ ಮೌನವಹಿಸಿದ್ದಾರೆ. ಕೇರಳ ಮುಖ್ಯಮಂತ್ರಿ ಇ.ಕೆ. ನಯನಾರ್ ಅವರು ವಾಜಪೇಯಿ ಮತ್ತು ಫರ್ನಾಂಡಿಸ್ ಇಬ್ಬರನ್ನು ವಿಮರ್ಶಿಸುತ್ತಾ "ಸಾಮ್ರಾಜ್ಯಶಾಹಿ ಅಮೆರಿಕಾ ಭಾರತದ ಮೊದಲ ವೈರಿ" ಎಂದು ಹೇಳಿದ್ದಾರೆ. ಇವೆಲ್ಲ ಪತ್ರಿಕೆಗಳಲ್ಲಿ ವರದಿಯಾಗಿ ಸಾರ್ವಜನಿಕರಲ್ಲಿ ಗೊಂದಲ ಹುಟ್ಟಿಸಿವೆ. ಆದರೆ ನಿಜವಾದ ಸಮಸ್ಯೆ ಇರುವುದು ಭಾರತದ ಶತ್ರು ಯಾರು ? ಎಂಬುದರಲ್ಲಿಲ್ಲ! ಪ್ರಪಂಚದ ಶತ್ರು ಯಾರು ಎಂಬುದೇ ಅಸಲಿ ಪ್ರಶ್ನೆಯಾಗಿದೆ. ಈ ಸರಳ ಸತ್ಯವನ್ನು ಎಲ್ಲರೂ ಅರ್ಥಮಾಡಿಕೊಳ್ಳಬೇಕು.

ರೇಸಿಸಂ, ಫ್ಯಾಸಿಸಂ, ಟೆರ್ರರಿಸಂ, ಕಲೊನಿಯಲಿಸಂ, ನ್ಯೂಕ್ಲಿಯರ್ ಸೈಲೊಸ್, ಇಂಪೀರಿಯಲಿಸಂ, ವರ್ಲ್ಡ್ ಕ್ಯಾಪಿಟಲಿಸಂ. ಮಲ್ಟಿನ್ಯಾಷನಲ್ ಕಾರ್ಪೊರೇಷನ್ಸ್, ಗ್ಯಾಟ್ ಒಪ್ಪಂದ, ಲಿಬರಲೈಸೇಷನ್–ಪ್ರೈವೇಟೈಸೇಷನ್-ಗ್ಲೋಬಲೈಸೇಷನ್– ಇವೆಲ್ಲ ಒಂದೇ ಮೂಲಕ್ಕೆ ಸೇರಿದ ಬಿಡಿಬಿಡಿಯಾದ ಸಂಗತಿಗಳು. ಇವೆಲ್ಲವನ್ನು ಒಟ್ಟಿಗೆ ಸೂಚಿಸುವ ಸಮರ್ಥವಾದ ಪದಕ್ಕೆ ನಾನು ಹುಡುಕಾಡುತ್ತಿದ್ದೆ. ಆಗ ನನಗೆ ನೆನಪಾದದ್ದು ಅಮೆರಿಕಾದ ಮೂಲನಿವಾಸಿ ಜನಪದರ ನುಡಿಗಟ್ಟು 'WASP' ಎಂದರೆ White Anglo Saxson Protestant ಎಂದರ್ಥ. ಇದಕ್ಕೆ ಕಣಜ ಎಂಬ ಪ್ರಸಿದ್ಧ ಅರ್ಥವೂ ಇದೆ. ಇದನ್ನು ಎ. ಎನ್. ಮೂರ್ತಿರಾಯರು

ತಮ್ಮ ಅನುಭವ ಕಥನದಲ್ಲಿ ಪ್ರಸ್ತಾಪಿಸಿದ್ದಾರೆ. ಕಣಜವು ಒಂದೇ ಕುಟುಕಿನಿಂದ ಕಂಬಳಿ ಹುಳುವನ್ನು ನಿಃಶ್ಚೇಷ್ಟಿತಗೊಳಿಸಿ ಕೋಶವಾಗೆ ತಳ್ಳಿ, ತನ್ನ ಮರಿಗಳಿಗೆ ಆಹಾರವನ್ನಾಗಿ ಮಾಡಿ, ಗೂಡಿನಲ್ಲಿಡುತ್ತದೆ. WASP ಜನಗಳಿಂದ ಹಲ್ಲೆಗೊಳಗಾಗಿ ತಮ್ಮ ಸ್ವರೂಪಜ್ಞಾನ ಮತ್ತು ಸಂಸ್ಕೃತಿಯ ಚಹರೆಗಳನ್ನು ಕಳೆದುಕೊಂಡು ಒಂದು ಬಗೆಯ ಕೋಶವಾದಲ್ಲಿರುವ ಅಮೇರಿಕಾದ ಮೂಲ ನಿವಾಸಿಗಳು ಆ ಹಲ್ಲೆಕೋರರನ್ನು WASP ಎಂದು ಗುರುತಿಸಿದ್ದು ಸರಿಯಾಗಿದೆ. **ಪ್ರಪಂಚವನ್ನು ತನ್ನ ಅಂಕೆಯಲ್ಲಿಟ್ಟುಕೊಳ್ಳಲು 'WASPISM' ತತ್ವಗಳನ್ನು ಮೆರೆಯುತ್ತಿರುವ ಅಮೆರಿಕಾದಂತಹ ಡಾಲರ್ ದೇಶಗಳು ಇಂದಿನ ಪ್ರಪಂಚದ ಶತ್ರು. ಇದನ್ನು ಡಾಲರೇತರ ದೇಶಗಳೆಲ್ಲ ಅರಿತುಕೊಳ್ಳಬೇಕು.**

ಮನುಕುಲದ ಇತಿಹಾಸದಲ್ಲಿ ಸಂಸ್ಕೃತಿಯ ನಿರ್ಮಾಣ, ಶಕ್ತಿಯ ಆವಿಷ್ಕಾರ ಮತ್ತು ಪರಿಸರ ಮಾಲಿನ್ಯಗಳು ಮುಪ್ಪುರಿಬಂಧವನ್ನು ಹೊಂದಿರುವ ಅಂತರ್ ಸಂಬಂಧಿಯಾದ ಪ್ರಕ್ರಿಯೆಗಳಾಗಿವೆ. ಇವನ್ನು ಬಿಡಿಬಿಡಿಯಾಗಿ ನೋಡುವವರಿಗೆ ಪೂರ್ಣ ಸತ್ಯವು ಗೋಚರವಾಗುವುದಿಲ್ಲ. ಪ್ರಸ್ತುತ, ಸಂಸ್ಕೃತಿಯ ನಿರ್ಮಾಣದಲ್ಲಿ ಶಕ್ತಿಯ ಆವಿಷ್ಕಾರ ಮತ್ತು ಪರಿಸರ ಮಾಲಿನ್ಯಗಳ ಅಂತರ್ ಸಂಬಂಧವನ್ನು ಗ್ರಹಿಸೋಣ: ಆದಿಮಾನವನಿಂದ ಹಿಡಿದು ನದಿ ದಂಡೆಗಳ ನಾಗರಿಕತೆವರೆಗೆ ಸಾಗಿಬಂದ ಸುದೀರ್ಘ ಸಂಸ್ಕೃತಿಯ ಯಾನಕ್ಕೆ **ಪ್ರಾಕೃತಿಕ ಶಕ್ತಿಗಳೇ** ಚಾಲಕರು. ನೀರು, ಗಾಳಿ, ಬಿಸಿಲು ಮುಂತಾದ ಪ್ರಾಕೃತ ದ್ರವ್ಯಗಳಲ್ಲಿ ಯಥಾವತ್ತಾಗಿರುವ ಶಕ್ತಿಯ ಆವಿಷ್ಕಾರ ಮತ್ತು ಬಳಕೆಯನ್ನೆ ನಾನಿಲ್ಲಿ 'ಪ್ರಾಕೃತ ಶಕ್ತಿಗಳು' ಎಂದು ಕರೆದಿದ್ದೇನೆ. ಗಾಳಿ ಬಂದಾಗ ತೂರಿಕೊ, ಮಳೆ ಬಿದ್ದಾಗ ಬೆಳೆ, ಬಿಸಿಲು ಇದ್ದಾಗ ಒಣಗಿಸು ಎಂಬುದನ್ನಿಲ್ಲಿ ಮನಗಾಣಬಹುದು. ಏತ, ಗೂಡೆ, ಕಪಿಲೆ, ಚಕ್ರಬಾವಿ ಇವು ಪ್ರಾಕೃತ ಶಕ್ತಿಗಳ ಬಳಕೆಯ ಬೇರೆ ಬೇರೆ ವಿಧಾನಗಳೆನ್ನಬಹುದು. ದ್ರವ್ಯ ಮತ್ತು ಶಕ್ತಿಗಳ ನಡುವೆ ಸಹಜ ಸಂಬಂಧವ ಉಳಿವು ಇಲ್ಲಿ ಎದ್ದು ಕಾಣುತ್ತದೆ. ಹೀಗಾಗಿ ಮಾಲಿನ್ಯ ಮುಕ್ತ ವಾತಾವರಣವೆಂಬುದು ಈ ಅವಧಿಯಲ್ಲಿ ಅಯಾಚಿತ ಸ್ಥಿತಿಯಾಗಿದೆ.

ಇದಾದನಂತರ, ಸಂಸ್ಕೃತಿ ನಿರ್ಮಾಣದಲ್ಲಿ ನಾವು ಕಾಣುವುದು **ಸಂಸ್ಕೃತ ಶಕ್ತಿಗಳನ್ನು.** ಪ್ರಾಕೃತ ದ್ರವ್ಯಗಳ ಸಂಸ್ಕರಣವನ್ನಿಲ್ಲಿ ಗಮನಿಸಬಹುದು: ನೀರನ್ನು ಕುದಿಸಿ ಆವಿ, ನೀರನ್ನು ಹಾಯಿಸಿ ವಿದ್ಯುತ್, ತರಂಗಶಕ್ತಿ, ಗಾಳಿಯಂತ್ರಗಳು, ಸೌರಶಕ್ತಿ, ತೈಲ ಬಾವಿಗಳು, ಕಲ್ಲಿದ್ದಲು ಗಣಿಗಳು–ಇವೆಲ್ಲ ಪ್ರಾಕೃತ ದ್ರವ್ಯಗಳ ಸಂಸ್ಕರಣದಿಂದ ಹೊರಹೊಮ್ಮುವ ವೈವಿಧ್ಯಮಯ ಶಕ್ತಿಗಳ ಆವಿಷ್ಕಾರ ಮತ್ತು ಬಳಕೆಯ ಬೇರೆ ಬೇರೆ ನಿದರ್ಶನಗಳಾಗಿವೆ. ಈ ಸಂಸ್ಕೃತ ಶಕ್ತಿಗಳ ನೆರವಿನಿಂದಲೇ ಸಮುದ್ರಯಾನಗಳು, ವಸಾಹತುಶಾಹಿ, ಕೈಗಾರಿಕೀಕರಣ ಮತ್ತು ನಗರ ನಾಗರಿಕತೆಗಳು ಕ್ರಮೇಣ

ರೂಪುಗೊಂಡವು. ಜೊತೆಗೆ ಭೂಗೋಳದಲ್ಲಿ ಮೊದಲ ಬಾರಿಗೆ ಬೃಹತ್ ಪ್ರಮಾಣದ ಅರಣ್ಯನಾಶ ಮತ್ತು ವಾತಾವರಣಕ್ಕೆ ಇಂಗಾಲಾದಿ ಸಂಯುಕ್ತಗಳ ವಿಸರ್ಜನೆಗಳು ಸೇರ್ಪಡೆಯಾದವು. ದ್ರವ್ಯ ಸಂಸ್ಕರಣ ಮತ್ತು ಶಕ್ತಿ ಸುಧಾರಣೆಗಳು ಮಾನವ ಜನಪದವನ್ನು ಪ್ರಗತಿ ಮೀಮಾಂಸೆಯತ್ತ ಕೊಂಡೊಯ್ಯುತ್ತಿದ್ದಂತೆಯೇ ತನ್ನ ಕರಿ ನೆರಳಾಗಿ 'ಗೋಚರ ಮಾಲಿನ್ಯ'ದ ಶಕೆಯನ್ನಾರಂಭಿಸಿತು. ನಾವಿಂದು ಎದುರಿಸುತ್ತಿರುವ ಗ್ಲೋಬಲ್ ಥರ್ಮಲೈಸೇಷನ್ ಅಥವಾ ಹಸಿರುಮನೆ ಪರಿಣಾಮಗಳು ಸಂಸ್ಕೃತ ಶಕ್ತಿಗಳ ಕೊಡುಗೆಗಳೆಂಬುದನ್ನು ನಿರಾಕರಿಸುವಂತಿಲ್ಲ.

ಇಂಥ ಸಂಸ್ಕೃತ ಶಕ್ತಿಗಳ ನಂತರ, ಸಾಂಸ್ಕೃತಿಯ ನಿರ್ಮಾಪಕರಾಗಿ ಮೆರೆಯುತ್ತಿರುವುದು ವಿಕೃತ ಶಕ್ತಿಗಳು. ಉದಾ: ಯುರೇನಿಯಂ ಮತ್ತು ಥೋರಿಯಂ ಗಣಿಗಾರಿಕೆ. ಪ್ರಾಕೃತ ದ್ರವ್ಯಗಳ ಅತ್ಯಲ್ಪ ಭಾಗದ ನಾಶದಿಂದ ಉತ್ಪನ್ನವಾಗುವ ಅಗಾಧ ಶಕ್ತಿಯ ಆವಿಷ್ಕಾರ ಅತ್ಯಲ್ಪ ಅವಧಿಯಲ್ಲಿ ಮಾನುಕುಲವನ್ನು ಎರಡು 'ಅತಿ'ಗಳಿಗೆ ಕರೆದೊಯ್ದಿತು: ೧೯೪೫ ರಲ್ಲಿ ಅಣುಶಕ್ತಿಯ ನೆರವಿನಿಂದ ಜಪಾನ್‌ದಲ್ಲಿ ನಡೆಸಿದ ನರಮೇಧ ಮತ್ತು ೧೯೬೯ರಲ್ಲಿ ಸಾಧ್ಯವಾದ ಚಂದ್ರನ ಮೇಲೆ ಮಾನವನ ಪಾದಾರ್ಪಣೆ. ಇವು ಶಕ್ತಿಸಾಧನಗಳ ದುರ್ಬಳಕೆ ಮತ್ತು ಸದ್ಬಳಕೆಯ ನಿದರ್ಶನಗಳಾಗಿವೆ. ಮಾನವಕೃತ ಅಣುವಿಕಿರಣದಿಂದಾಗಿ ಭೂಗೋಳಕ್ಕೆ ಹೊಸದಾಗಿ 'ಅಗೋಚರ ಮಾಲಿನ್ಯ' ಸೇರ್ಪಡೆಗೊಂಡಿತು. ವಿಕಲ ಸಂತಾನ-ಕ್ಯಾನ್ಸರ್ ಪೀಡೆ-ಲ್ಯುಕೇಮಿಯಾಗಳು ಹಿರೋಷಿಮಾ ನಾಗಸಾಕಿ-ಚೆರ್ನೊಬಿಲ್ ಪ್ರದೇಶಗಳಲ್ಲಿ ಇನ್ನು ಮುಂದೆ ಲಕ್ಷಾಂತರ ವರ್ಷಗಳವರೆಗೆ ಪ್ರಕಟಗೊಳ್ಳುವ ವಿದ್ಯಮಾನವಾಗಿದೆ. ರಸಗೊಬ್ಬರ, ಕ್ರಿಮಿ-ಕೀಟನಾಶಕಗಳ ವಿಪುಲ ಬಳಕೆಯಿಂದಾಗಿ 'ವಿಷಭೂಮಿ' ರೂಪುಗೊಳ್ಳುತ್ತಿದೆ. ಇದು ಸಾಲದೆಂಬಂತೆ ಸಮುದ್ರ ಗರ್ಭದಲ್ಲಿ, ಮರುಭೂಮಿ ಗರ್ಭದಲ್ಲಿ ಎಲ್ಲ ರಾಷ್ಟ್ರಗಳು ಅಣ್ವಸ್ತ್ರ ಪರೀಕ್ಷೆಯನ್ನು ನಡೆಸುತ್ತಲೇ ಇವೆ. ಪ್ರಾಕೃತ ದ್ರವ್ಯಗಳ ವಿದಳನದಿಂದ ಉತ್ಪನ್ನವಾಗುವ ವಿಕೃತ ಶಕ್ತಿಗಳೇ ಇಂದಿನ ನವ ನಾಗರಿಕತೆಗೆ ಬೆಳಕು ನೀಡುತ್ತಿವೆ. ಗರ್ಭ ಧರಿಸುವುದಕ್ಕೂ ಮುಂಚೆ, ವೀರ್ಯಾಣುಗಳ ಹಂತದಲ್ಲೇ ಮಾನವಕೃತ ಅಣುವಿಕಿರಣವು ಬೀರುವ ದುಷ್ಪರಿಣಾಮಗಳನ್ನು ಪ್ರಜ್ಞಾವಂತರು ಮನಗಂಡಿದ್ದಾರೆ.

ಹ್ರಸ್ವ ದೃಷ್ಟಿಗೆ ಬದ್ಧರಾದವರು ಮಾತ್ರ 'ಪೋಖ್ರಾನ್ ಸ್ಫೋಟ'ದಿಂದ ಉತ್ತೇಜಿತರಾಗಿ, ದೇಶ ರಕ್ಷಣೆಯ ನೆಪವೊಡ್ಡಿ ಹೆಮ್ಮೆಯಿಂದ ಬೀಗುತ್ತಿದ್ದಾರೆ. ಇದು ಸರಿಯಲ್ಲ! ಪ್ರಪಂಚ ಮಟ್ಟದಲ್ಲಿ ವ್ಯಾಪಕವಾಗುತ್ತಿರುವ 'ಅಣುಪ್ರಧಾನ ಸಂಸ್ಕೃತಿ'ಯಿಂದಾಗಿ ಗ್ಲೋಬಲ್ ಸಮಸ್ಯೆಗಳು ತಲೆದೋರುತ್ತಿವೆ. ನೈಸರ್ಗಿಕವಾದ ಅಣುವಿಕಿರಣಕ್ಕೂ 'ಅಗೋಚರ ಮಾಲಿನ್ಯ'ವೆನ್ನಬಹುದಾದ ಮಾನವ ಕೃತ ಅಣುವಿಕಿರಣಕ್ಕೂ ವ್ಯತ್ಯಾಸಗಳಿವೆ: ಬಾಳೆಯ ತೋಟದಲ್ಲಿ ಹಾರಾಡಿಕೊಂಡಿರುವ ಪಕ್ಷಿ ಬಳಗಕ್ಕೆ 'ನೈಸರ್ಗಿಕ ಅಣುವಿಕಿರಣ'ವನ್ನು ಹೋಲಿಸಲಾಗಿದೆ. ಆದರೆ ಮಾನವ ಕೃತ ಅಣುವಿಕಿರಣವು

ಬಾಳೆಯ ತೋಟವನ್ನು ನುಗ್ಗುನುರಿ ಮಾಡುವ ಕೋತಿ ಬಳಗಕ್ಕೆ ಅಥವಾ ವಿಧ್ವಂಸ ಗೊಳಿಸುವ ಆನೆ ಹಿಂಡುಗಳಿಗೆ ಹೋಲುತ್ತದೆ, ಮಾನವ ಸಂತಾನವನ್ನು ನಿರ್ಣಯಿ ಸುತ್ತಿರುವ ಡಿ. ಎನ್. ಎ. ಜೈವಿಕ ಜಾಲ ಬಾಳೆಯ ತೋಟವಿದ್ದಂತೆ! ನೈಸರ್ಗಿಕ ಅಣುವಿಕಿರಣದ ಪ್ರಮಾಣವನ್ನು ಮೀರಿ ವರ್ತಿಸುತ್ತಿರುವ ಮಾನವ ಕೃತ ಅಣುವಿಕಿರ ಣವು ಭವಿಷ್ಯದಲ್ಲಿ ಗಂಭೀರ ಸ್ವರೂಪದ ಜೈವಿಕ ಸಮಸ್ಯೆಗಳನ್ನು ಸೃಷ್ಟಿಸಿಬಿಡುತ್ತ ವೆಂದು ವಿಜ್ಞಾನಿಗಳು ಹೇಳುತ್ತಿರುವ ಎಚ್ಚರಿಕೆಯ ನುಡಿಗಳು ಮೂಕರೋಧನವಾ ಗುತ್ತಿರುವುದು ಮನುಕುಲದ ದೌರ್ಭಾಗ್ಯವಾಗಿದೆ.. ವಿಕೃತ ಶಕ್ತಿಗಳ ಮೇರೆಹೊಕ್ಕಾಗ ವಿಕೃತ ಪರಿಣಾಮಗಳಲ್ಲದೆ 'ಸುಕೃತ' ಹೇಗೆ ಸಾಧ್ಯ ? ಅಣುಶಕ್ತಿಗೆ ಪರ್ಯಾಯವಾಗಿ ಪ್ರಾಕೃತ ಶಕ್ತಿಗಳ ಸಂಸ್ಕರಣಕ್ಕೆ ಆದ್ಯತೆ ನೀಡಿರುವ **'ಸ್ವಿಜರ್‌ಲೆಂಡ್ ಮತ್ತು ನಾರ್ವೆ ಮಾದರಿ'** ಇಂದು ಮನುಕುಲದ ಆದರ್ಶವಾಗಬೇಕು.

ಆದರೆ, ದಿನೇ ದಿನೇ ಹೆಚ್ಚುತ್ತಿರುವ ಅಣುಶಕ್ತಿಯ ಅಗಸ್ತ್ಯದಾಹ 'ಇರುವುದೊಂದೆ ಭೂಮಿ'ಯ ಬಗ್ಗೆ, ಮಾನವನೂ ಸೇರಿದಂತೆ ಸಕಲ ಜೀವಿ ಸಂಕುಲಗಳ ಭವಿಷ್ಯದ ಬಗ್ಗೆ ಆತಂಕ ಹುಟ್ಟಿಸುತ್ತಿದೆ. ಇದನ್ನು ಸರಿಯಾಗಿ ಗ್ರಹಿಸಬೇಕಾದರೆ ಅಣುಶಕ್ತಿ ಸ್ಥಾವರಗಳ ಅಂಕಿ-ಅಂಶಗಳನ್ನು ತಿಳಿಯಬೇಕಾಗುತ್ತದೆ. ಜಗತ್ತಿನ ಪ್ರಥಮ ಅಣು ಶಕ್ತಿ ಸ್ಥಾವರವು* ೧೯೫೪ ರಲ್ಲಿ ಸೋವಿಯತ್ ಒಕ್ಕೂಟದಲ್ಲಿ ಕೇವಲ ೦೫ ಮೆಗಾ ವಾಟ್ ಸಾಮರ್ಥ್ಯದೊಂದಿಗೆ ಆರಂಭವಾಯಿತು. ೧೯೬೪ ರಲ್ಲಿ (=೧೦ ವರ್ಷ ಗಳ ಅವಧಿಯಲ್ಲಿ) ಎಲ್ಲ ಪ್ರಬಲ ರಾಷ್ಟ್ರಗಳಲ್ಲಿ ೫೦೦೦ ಮೆಗಾವಾಟ್ ಸಾಮರ್ಥ್ಯದ ರಿಯಾಕ್ಟರುಗಳು ತಲೆ ಎತ್ತಿದವು. ಇಂದು ಎಲ್ಲ ಪ್ರಬಲ ರಾಷ್ಟ್ರಗಳಲ್ಲಿ ಸೂರ್ಯ ಶಕ್ತಿಗೆ ಸಮನಾದ ರಿಯಾಕ್ಟರುಗಳು ನಿರ್ವಹಣೆಯ ದುಬಾರಿ ವೆಚ್ಚದಿಂದಾಗಿ ಮುಚ್ಚ ಲ್ಪಟ್ಟಿವೆ ಅಥವಾ ಚೆರ್ನೊಬಿಲ್ ಸೋದರಿಯಾಗಲು ಭೂಗರ್ಭದಲ್ಲಿ ತಪಸ್ಸು ಮಾಡು ತ್ತಿವೆ. ಪರಿಸ್ಥಿತಿ ಹೀಗಿದ್ದರೂ ಅಣುಶಕ್ತಿಯ ಶಾಂತಿಯುತ ಮತ್ತು ಸುರಕ್ಷಾ ಬಳಕೆಗೆ ಪ್ರಪಂಚ ಮಟ್ಟದಲ್ಲಿ ವ್ಯಾಪಕ ಪ್ರಚಾರ ಲಭಿಸುತ್ತಿದೆ.

'ರವಿ ಮುಳುಗದ ಸಾಮ್ರಾಜ್ಯ' ಸೃಷ್ಟಿಗೆ ಕಾರಣವಾದ **ನೇರವಸಾಹತುಗಳ** ಯುಗ ಇಂದು ಮುಗಿದ ಅಧ್ಯಾಯವಾಗಿದೆ. ಈಗ WASPISM ತತ್ವಗಳ ಮೂಲಕ **ದೂರವಸಾಹತುಗಳ** ಶಕೆ ಆರಂಭವಾಗಿದೆ. ವಿಕೃತ ಶಕ್ತಿಗಳ ನೆರವಿನಿಂದ ಭೂಗೋಳದ ಮೇಲೆ ಏಕಚಕ್ರಾಧಿಪತ್ಯವನ್ನು ಸಾಧಿಸಲು **ಹವಣಿಸುತ್ತಿರುವ**

---

* ೧೯೪೨ ರಲ್ಲಿ ಚಿಕಾಗೋ ವಿಶ್ವವಿದ್ಯಾಲಯದಲ್ಲಿ ಫರ್ಮಿ ಎಂಬ ವಿಜ್ಞಾನಿಯ ನೇತೃತ್ವ ದಲ್ಲಿ ೦೨ ಕಿಲೋವಾಟ್ ಸಾಮರ್ಥ್ಯದೊಂದಿಗೆ ಆರಂಭವಾಯಿತು. ಇದರ ಯಶಸ್ಸಿ ನಿಂದಾಗಿ ಜಗತ್ತಿನ ಎಲ್ಲೆಡೆ ವಿದ್ಯುತ್ತನ್ನುತ್ಪಾದಿಸಲು ಅಣುಶಕ್ತಿ ಸ್ಥಾವರಗಳು ತಲೆ ಎತ್ತಲಾರಂಭಿಸಿದವು.

ಅಮೆರಿಕಾ, ಭಾರತವನ್ನು ಸಿ.ಟಿ.ಬಿ.ಟಿ. ಗೆ ಸಹಿ ಹಾಕಲು ಒತ್ತಾಯಿಸಿದ್ದು ಬಿಗ್ ಬಾಸ್ ಧೋರಣೆಯಾಗಿದೆ. 'ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ' ಎಂಬಂತೆ ಎಲ್ಲ ದೇಶ ವಿದೇಶಗಳಿಗೆ ಬಾಂಬುಗಳೇ ಮಿಠಾಯಿಗಳಾಗುತ್ತಿವೆ. ಹೀಗಾಗಿ, ಅಣು ಅಮೇಧ್ಯವನ್ನು ಯಥೇಚ್ಛವಾಗಿ ತಿನ್ನುತ್ತಿರುವ ಐದು ಪ್ರಬಲ ರಾಷ್ಟ್ರಗಳು ಪಶುಗಳಿದ್ದಂತೆ! ಶತಮಾನಗಳ ಶಾಂತಿದೂತನೆಂದು ಹೆಸರಾದ ಭಾರತ ಪಶುಪತಿ ಇದ್ದಂತೆ! 'ಪಶುವಾನು ಪಶುಪತಿ ನೀನು'-ಎಂಬ ಬಸವಣ್ಣನ ವಚನವನ್ನು ನಾನು ಹೀಗೆಯೇ ವ್ಯಾಖ್ಯಾನಿಸುತ್ತೇನೆ. ಅಣು ಅಮೇಧ್ಯದ ಕೆಸರಿನಲ್ಲಿ ಹೊರಳುತ್ತಿರುವ ಪಶುರಾಷ್ಟ್ರಗಳ ಕೊಂಬನ್ನು ಎತ್ತಿ ಹಿಡಿದು ವಿಶ್ವಶಾಂತಿಯ ದಡ ಕಾಣಿಸಬೇಕಾದ ನೈತಿಕ ಅರ್ಹತೆ ಮತ್ತು ಆಧ್ಯಾತ್ಮಿಕ ಘನತೆಯನ್ನು ಹೊಂದಿದ್ದ ಪಶುಪತಿಯೇ ಭಾರತ. ಆದರೆ, ಪೋಖ್ರಾನ್ ಸ್ಫೋಟದ ಮೂಲಕ ಭಾರತವು ಕೂಡ ಅಣು ಅಮೇಧ್ಯ ತಿನ್ನುವ ಪಶುವಾಗಲು ಹೊರಟಿದ್ದು ಅವಮಾನದ ಸಂಗತಿಯಾಗಿದೆ.

ಮಾನವ ಸಮುದಾಯದ ಮೇಲೆ ಅಣ್ವಸ್ತ್ರಗಳನ್ನು ಮೊದಲು ಪ್ರಯೋಗಿಸಿದ 'ಪೈಶಾಚಿಕ ರಾಷ್ಟ್ರ'ವೆಂಬ ಬಿರುದು ಅಮೆರಿಕಾಗೆ ಸಿಕ್ಕಿದೆ. ಇದೀಗ ೧೯೭೪ರ ಮತ್ತು ೧೯೯೮ರ ಪೋಖ್ರಾನ್ ಸ್ಫೋಟಗಳಿಂದಾಗಿ ಏಷ್ಯಾಖಂಡದಲ್ಲಿ ಅಣ್ವಸ್ತ್ರ ಪೈಪೋಟಿಗೆ ನಾಂದಿ ಹಾಡಿದ 'ತುರಿಕಜ್ಜಿ ರಾಷ್ಟ್ರ'ವೆಂಬ ಬಿರುದು ಭಾರತಕ್ಕೆ ಲಭ್ಯವಾಗಿದೆ. ಆಟಂಬಾಂಬ್ ಅಪಾಯವೇನೆಂಬುದು ಆಟಂಬಾಂಬಿನ ಸೂತ್ರಕಾರನಿಗೆ ಗೊತ್ತು: ೧೯೪೫ ರಲ್ಲಿ ಜಪಾನ್ ಮೇಲೆ ಬಿದ್ದ ಆಟಂಬಾಂಬಿನ ಸುದ್ದಿ ಕೇಳಿದ ಐನ್‌ಸ್ಟೈನ್ "ದೇವರೆ! ಆ ನೀಲ ಬೆಳಕನ್ನು ಜಗತ್ತು ಮತ್ತೆ ಕಾಣದಿರಲಿ"-ಎಂದು ಉದ್ಗರಿಸಿದ್ದರು. 'ಅಣುವಿಕಿರಣ'ವನ್ನು ಕಂಡು ಹಿಡಿದು ಕ್ಯಾನ್ಸರ್ ರೋಗಕ್ಕೆ ಬಲಿಪಶುವಾದ ಮೇರಿಕ್ಯೂರಿ "ಅಣುಶಕ್ತಿಯ ಬಳಕೆಯಲ್ಲಿ ಶಾಂತಿ ಮತ್ತು ಸುರಕ್ಷೆಗಳೆಂಬುದು ಶುದ್ಧ ಸುಳ್ಳು" ಎಂದಿದ್ದಾರೆ. ಚೆರ್ನೊಬಿಲ್ ದುರಂತದ ಶುದ್ಧೀಕರಣ ಕಾರ್ಯದ ಮುಖ್ಯಸ್ಥ ಚೆರ್ನೊವ್‌ಸೆಂಕೊ ಪ್ರಸ್ತುತ ಕ್ಯಾನ್ಸರ್ ಪೀಡಿತನಾಗಿದ್ದು ಆ ದುರಂತದ ಗಹನತೆಯನ್ನು ವಿಶ್ವಕ್ಕೆ ಮನದಟ್ಟು ಮಾಡುತ್ತಾ "ನಾವು ಸದ್ದಿಲ್ಲದಂತೆ ಸಾಯುತ್ತೇವೆ"-ಎಂಬ ಸವಿವರ ಮಾಹಿತಿ ಒದಗಿಸಿದ್ದಾನೆ. Nuclear ಎಂಬುದನ್ನು New+Clear ಎಂದು ಬಿಡಿಸಿಕೊಂಡರೆ ನೂಕ್ಲಿಯರ್ ಶಕ್ತಿಯಲ್ಲಿ ಭೂಮಿಯನ್ನು ಈಗಲೇ (=Now) ಒರೆಸಿ ಹಾಕುವ (=Clear) ವಿನಾಶಕ ದೃಷ್ಟಿಯನ್ನು ಗ್ರಹಿಸಬೇಕಾಗಿದೆ.

ವಿಕೃತ ಶಕ್ತಿಗಳಿಂದ ಹುಟ್ಟುವ ಈ ಅಣ್ವಸ್ತ್ರಗಳಿಗೆ ಇಟ್ಟಿರುವ ಹೆಸರುಗಳೂ ವಿಕೃತವಾಗಿವೆ: ೧೯೪೫ ರಲ್ಲಿ ಜಪಾನ್ ಮೇಲೆ ಹಾಕಿದ ಬಾಂಬುಗಳು ಲಿಟಲ್ ಬಾಯ್ ಮತ್ತು ಫ್ಯಾಟ್‌ಮ್ಯಾನ್ ಎಂಬ ಹೆಸರಿನವು, ಇವು ಕುಬ್ಜತೆ ಮತ್ತು ಬೊಜ್ಜುತನಗಳ

ಪ್ರತೀಕ, ಅಣುಪ್ರಧಾನ ಸಂಸ್ಕೃತಿಯಲ್ಲಿ ಬದುಕುತ್ತಿರುವ ಜನತೆ ಶ್ರಮಜೀವನದ ಯೋಗವನ್ನು ನಿರಾಕರಿಸುತ್ತ, ವಿಶ್ರಮ ಜೀವನದ ಭೋಗವನ್ನು ಅಪ್ಪಿಕೊಳ್ಳುತ್ತಾ ಮಾನಸಿಕವಾಗಿ ಕುಬ್ಜರೂ ದೈಹಿಕವಾಗಿ ಬೊಜ್ಜುಳ್ಳವರೂ ಆಗುತ್ತಿದ್ದಾರೆ. ವರದಿಯೊಂದರ ಪ್ರಕಾರ ಅಮೇರಿಕಾದಲ್ಲಿಂದು ಬೊಜ್ಜುಮಕ್ಕಳು ಮತ್ತು ಬೊಜ್ಜು ವಯಸ್ಕರ ಸಂಖ್ಯೆ ಹೆಚ್ಚುತ್ತಿದೆ.

ಭಾರತ ಮತ್ತು ಪಾಕಿಸ್ತಾನಗಳು ಕ್ಷಿಪಣಿಗಳಿಗೆ ಇಟ್ಟಿರುವ ಹೆಸರುಗಳು: ಅಗ್ನಿ, ಪೃಥ್ವಿ, ಗಜ್ನಿ, ಗೋರಿ. ವಿಕೃತವಾದ ಸೇಡಿಗೆ ಸೇಡಿನ ಹೆಸರುಗಳಿವು. ವಿಕೃತಿ ಇರುವಲ್ಲಿ ಸೇಡಿನ ಹೃದಯದಲ್ಲಿ ಸೌಂದರ್ಯಪ್ರಜ್ಞೆ ಹೇಗೆ ಸಾಧ್ಯ. ವಿಶ್ವಶಾಂತಿಯು ಸ್ವಯಂಭೂ ಅಲ್ಲ; ತನಗೆ ತಾನೆ ಹುಟ್ಟುವುದಿಲ್ಲ. ಅದಕ್ಕಾಗಿ ಸಂಘಟನೆ ಮತ್ತು ಹೋರಾಟ ನಡೆಸಬೇಕು. ಯುದ್ಧ ಭೀತಿ, ಯುದ್ಧದ ಉತ್ಸಾಹ, ಯುದ್ಧದ ಉನ್ಮಾದಗಳು ಪ್ರಭುತ್ವವೊಂದರ ಚಾಣಕ್ಯ ತಂತ್ರಗಳು ಎಂಬುದನ್ನು ಅರಿಯಬೇಕು. ಈ ದಿಸೆಯಲ್ಲಿ ಸಮೂಹ ಮಾಧ್ಯಮಗಳು, ಸಾಹಿತ್ಯ ಮತ್ತು ಕಲಾಕ್ಷೇತ್ರಗಳೊಂದಾಗಿ ಸಹಭಿಪ್ರಾಯವನ್ನು ರೂಪಿಸಬೇಕು. ತನ್ಮೂಲಕ ವಿಶ್ವಶಾಂತಿಯ ಹೋರಾಟಕ್ಕೆ ತಮ್ಮ ಅಮೂಲ್ಯ ಕಾಣಿಕೆ ಸಲ್ಲಿಸಬೇಕು.

ಅಸ್ತ್ರ ಪರೀಕ್ಷೆ ಮಾಡುವವನಿಗೆ ೧) ಅಸ್ತ್ರ ಪ್ರಾವೀಣ್ಯ ಮತ್ತು ೨) ಅಸ್ತ್ರ ಉಪಸಂಹಾರ ಎರಡೂ ಗೊತ್ತಿರಬೇಕು. ಇದನ್ನ ಅಸ್ತ್ರಪರೀಕ್ಷೆಯ ಪರಿಪೂರ್ಣತೆ ಎನ್ನುತ್ತೇವೆ. ಆದರೆ ಅಣ್ವಸ್ತ್ರ ಪ್ರಯೋಗ ಮತ್ತು ಪರೀಕ್ಷೆಯಲ್ಲಿ ಉಪಸಂಹಾರದ ಪ್ರಶ್ನೆಯೇ ಇಲ್ಲ! ಮಾನವಕೃತ ಅಣುವಿಕಿರಣವು ಭೂಗೋಳದಲ್ಲಿ ಅಗೋಚರ ಮಾಲಿನ್ಯಕ್ಕೆ ಕಾರಣವಾಗುತ್ತದೆ. ಅಣ್ವಸ್ತ್ರವನ್ನು ಒಮ್ಮೆ ಪರೀಕ್ಷಾರ್ಥ ಮರುಭೂಮಿ ಗರ್ಭದಲ್ಲಿ ಅಥವಾ ಸಮುದ್ರ ಗರ್ಭದಲ್ಲಿ ಸ್ಫೋಟಿಸಿದರೂ ಸಾಕು! ಇದರಿಂದ ಆಗುವ ವಿಪತ್ ಪರಂಪರೆಗೆ ಯಾವ ತಡೆಯೂ ಇಲ್ಲ. ಹೊಸ ಹೊಸ ಭೂಕಂಪಗಳಿಗೂ ಅಣ್ವಸ್ತ್ರ ಸ್ಫೋಟಗಳಿಗೂ ಇರುವ ಸರಪಳಿ ಸಂಬಂಧವನ್ನು ವೈಜ್ಞಾನಿಕ ಅಧ್ಯಯನಗಳು ಸಾಬೀತುಗೊಳಿಸಿವೆ. ಅಣುರೋಗ ಪೀಡಿತ 'ಹಿಬಾಕುಶಾ' ಜನಾಂಗವನ್ನು ಹೇಗೆ ಉಪಸಂಹಾರ ಮಾಡುವುದು ?

ಈ ದೃಷ್ಟಿಯಿಂದ ವಿ.ಸೀ. ಅವರ 'ಆಗ್ರಹ' ಮತ್ತು ಕುವೆಂಪು ಅವರ 'ಬೆರಳ್ಗೆ ಕೊರಳ್' ಎಂಬ ನಾಟಕಗಳಲ್ಲಿರುವ ಅಸ್ತ್ರಪ್ರಯೋಗ ಮತ್ತು ಅಸ್ತ್ರಪರೀಕ್ಷಾ ಪ್ರಸಂಗಗಳನ್ನು ಪರಿಶೀಲಿಸಬಹುದು: ಅಶ್ವತ್ಥಾಮನಿಗೆ ಅಸ್ತ್ರ ಪ್ರಯೋಗ ಗೊತ್ತು! ಉಪಸಂಹಾರ ಗೊತ್ತಿಲ್ಲ. ಪಂಚಪಾಂಡವರನ್ನು ಕೊಲ್ಲಲು ಹೋಗಿ ಉಪಪಾಂಡವರನ್ನು ಸಂಹರಿಸಿದ ಅಶ್ವತ್ಥಾಮ ಬಂಜೆ ಕ್ರೋಧದಿಂದ ತಪ್ತನಾಗಿ ತನ್ನ ಬಳಿ ಇದ್ದ ದಿವ್ಯಾಸ್ತ್ರವನ್ನು ನಿರ್ವಂಶಗೊಳಿಸಲು ಗುರಿಮಾಡಿ 'ನಿಷ್ಪಾಂಡವಾಸ್ತು' ಎಂದು ಹೇಳಿ ಉತ್ತರೆಯ ಗರ್ಭದ ಮೇಲೆ ಪ್ರಯೋಗಿಸಿ

ಬಿಡುತ್ತಾನೆ. ನಂತರ ಕೃಷ್ಣ, ಭೀಮರಿಂದ ಭಂಗಿತನಾಗಿ ಶಿರೋರತ್ನ ಕಳೆದುಕೊಂಡು ಹುಚ್ಚನಾಗಿ, ತಲೆಯಿಂದ ರಕ್ತ ಸುರಿಸುತ್ತಾ, ಶಾಪಗ್ರಸ್ತನಾಗಿ ಅಲೆಯುತ್ತಾನೆ. ಇದಿಷ್ಟು 'ಅಶ್ವತ್ಥಾಮನ ಆಗ್ರಹ' ಎನ್ನಬಹುದು.

'ಬೆರಳ್ಗೆ ಕೊರಳ್' ನಾಟಕದಲ್ಲಿ ಏಕಲವ್ಯನ ಬಿಲ್‌ಬಲ್ಮೆಯನ್ನು ಪರೀಕ್ಷಿಸುವ ನೆಪದಲ್ಲಿ ದ್ರೋಣನು ಗಗನಪಕ್ಷಿಯನ್ನು ಹೊಡೆದುರುಳಿಸಲು ಆಜ್ಞಾಪಿಸುತ್ತಾನೆ. ಆಗ ಏಕಲವ್ಯನು "ಅಪರಾಧನಿಲ್ಲದಾ ಸಾಧುವಂ ಕೊಲಲ್ಕೆ ಅಲ್ತು ಆಚಾರ್ಯ! ಆ ವಿದ್ಯೆಯುಂ ನೀನ್ ಇತ್ತುದೆನಗೆ, ಮುನಿಗುಂ ಮಂತ್ರಾಧಿದೇವತೆ"-ಎಂದು ಗುರುವಾಜ್ಞೆಯನ್ನು ಧಿಕ್ಕರಿಸುತ್ತಾನೆ. ಏಕಲವ್ಯನನ್ನು ಕೇಡಿಗೆ ಸಿಲುಕಿಸುವ ಹುನ್ನಾರದಲ್ಲಿದ್ದ ದ್ರೋಣನು ಈ ಮಾತುಗಳನ್ನು ಕೇಳಿ, "ಪುಣ್ಯವಂತನ್ ನೀನ್ ಏಕಲವ್ಯ! ಬರ್ದುಕಿದಯ್. ನೀನ್ ಬರ್ದುಕಿ ನನ್ನನುಂ ಬರ್ದುಕಿಸಿದಯ್"-ಎಂದು ಅಪ್ಪಿಕೊಳ್ಳುತ್ತಾನೆ. ಈ ಪ್ರಸಂಗದಲ್ಲಿ ಕುವೆಂಪು ಅವರು ಪುರೋಹಿತಶಾಹಿಯ ನಯವಂಚನೆ ಮತ್ತು ಮನಃ ಪರಿವರ್ತನೆಗಳೊಂದಿಗೆ ಕೆಳವರ್ಗದ ಸತ್ಯನಿಷ್ಠೆ ಮತ್ತು ಎಂಥ ಕ್ಲಿಷ್ಟ ಪರಿಸ್ಥಿತಿಗಳಲ್ಲೂ ಬದಲಾಗದ ತಾತ್ವಿಕ ಮನೋಧರ್ಮಗಳನ್ನು ಒಟ್ಟಿಗೆ ನಿರೂಪಿಸಿದ್ದಾರೆ. ಇದಿಷ್ಟು 'ಏಕಲವ್ಯನ ವಿವೇಕ' ಎನ್ನಬಹುದು. ಇಂದು ಜಗತ್ತಿನ ಎಲ್ಲ ದೇಶಗಳ ಮುಂದೆ 'ಅಶ್ವತ್ಥಾಮನ ಆಗ್ರಹ' ಮತ್ತು 'ಏಕಲವ್ಯನ ವಿವೇಕ'ದ, ಎರಡು ದಾರಿಗಳಿದ್ದು ಯಾವುದಾದರೊಂದನ್ನು ಮಾತ್ರ ಆಯ್ಕೆ ಮಾಡಿಕೊಳ್ಳುವ ಸವಾಲಿದೆ, ಅಶ್ವತ್ಥಾಮನ ಆಗ್ರಹಕ್ಕೆ ಒಳಗಾದರೆ ಭೂಮಿಗೆ ಗತಿಯಿಲ್ಲ, ಏಕಲವ್ಯನ ವಿವೇಕ ಒಪ್ಪಿಕೊಳ್ಳಲು ಯಾರಿಗೂ ಮತಿಯಿಲ್ಲ-ಎಂಬ ಇಬ್ಬಂದಿತನದಲ್ಲಿ ನಾವಿದ್ದೇವೆ.

ಒಂದು ಕೈಯಲ್ಲಿ ಬಾಂಬು ಮತ್ತೊಂದು ಕೈಯಲ್ಲಿ ಬಿಳಿ ಬಾವುಟ ಹಿಡಿದು ವಿಶ್ವಶಾಂತಿ ಸಾಧಿಸಲು ಸಾಧ್ಯವಿಲ್ಲ. "ಅಣುಶಕ್ತ ಭಾರತ ಈಗ ಅಣ್ವಸ್ತ್ರಮುಕ್ತ ವಿಶ್ವವನ್ನು ಸಾಧಿಸುವುದರಲ್ಲಿ ಮಹತ್ವದ ಪಾತ್ರ ನಿರ್ವಹಿಸಬಹುದಾಗಿದೆ"-ಎಂಬ ಮಾತುಗಳು ಎರಡು ದೋಣಿಯಲ್ಲಿ ಕಾಲಿಟ್ಟು ದಡ ಸೇರುವ ಕನಸಾಗಿದೆ, ಅಷ್ಟೆ. ಅಣ್ವಸ್ತ್ರ ಸ್ಫೋಟಗಳಿಂದ ಸುಭದ್ರ ಸರ್ಕಾರ, ಬಲಿಷ್ಠ ಭಾರತ ಮತ್ತು ವಿಶ್ವಶಾಂತಿಯು ನಿರ್ಮಾಣವಾಗುವುದೆನ್ನುವುದು ಪೊಳ್ಳು ಭ್ರಮೆ. ಬುದ್ಧಿಗೇಡಿ ಬುದ್ಧಿಜೀವಿಗಳು, ಭ್ರಮಾಧೀನ ಮಾಧ್ಯಮಗಳು ಮತ್ತು ಚಂಚಲ ಬಹುಮತದ ಸರ್ಕಾರಗಳೊಂದಾಗಿ ಘೋಷಿಸುತ್ತಿರುವ ಬಲಿಷ್ಠ ಭಾರತ ಎಂಬುದು ಆತ್ಮವಂಚನೆಯಾಗಿದೆ. ಅನ್ನ-ಬಟ್ಟೆ-ವಸತಿಗಳ (=ಕನಿಷ್ಠ ಅಗತ್ಯಗಳ) ಪೂರೈಕೆಗೆ ಯಾವ ಯೋಜನೆಗಳನ್ನು ಹಾಕಿಕೊಳ್ಳದೆ 'ಪ್ರಭುತ್ವ' ಉಳಿಸಿಕೊಳ್ಳಲು ತಿಪ್ಪರಲಾಗ ಹಾಕುತ್ತಾ ರಾಮಮಂತ್ರ-ಮಂದಿರ ಮಂತ್ರ-ಬಾಂಬು ಮಂತ್ರಗಳನ್ನು ಜಪಿಸಿದಲ್ಲಿ 'ಬಲಿಷ್ಠ ಭಾರತ' ಆಗುತ್ತದೆಯೇ ? ಬಲಿಷ್ಠತನವನ್ನು ಗುರುತಿಸಬೇಕಾದ್ದು ಆಂತರ್ಯದ ಸತ್ವದಿಂದಲೇ ಹೊರತು

ಬಾಹ್ಯಸಾಧನಗಳ ಮೆರವಣಿಗೆ ಮತ್ತು ಸ್ಫೋಟಗಳಿಂದ ಅಲ್ಲ! ಬಲಿಷ್ಠವಾದ ಬ್ರಿಟಿಷ್ ಪ್ರಭುತ್ವವನ್ನು ಎದುರಿಸಿ ಹಿಮ್ಮೆಟ್ಟಿಸಿದ್ದು ಸತ್ಯಾಗ್ರಹದ ಆಂತರಿಕ ಸತ್ವವೆಂಬುದು ಇಣ್ಣಿದಿನ ಉದಾಹರಣೆಯಾಗಿದೆ. **'ಕುಂಬಳಕಾಯಿಗೆ ಕಬ್ಬಿಣದ ಕಟ್ಟು ಕಟ್ಟಿದರೆ ಬಲಿಷ್ಠವಾಗುವುದಿಲ್ಲ'** ಎಂಬರ್ಥದ ಬಸವಣ್ಣನ ವಚನವನ್ನಿಲ್ಲಿ ಸ್ಮರಿಸಬಹುದು. ಈ ದೃಷ್ಟಿಯಿಂದ ಚಾಮರಸನ 'ಪ್ರಭುಲಿಂಗಲೀಲೆ'ಯಲ್ಲಿರುವ ಗೋರಕ್ಷ ಮತ್ತು ಅಲ್ಲಮ ಪ್ರಭುಗಳ ಮುಖಾಮುಖಿ ಪ್ರಸಂಗ ಅರ್ಥ ಗರ್ಭಿತವಾಗಿದೆ: ಹಠಯೋಗಿಯಾದ ಗೋರಕ್ಷ ಮಹಾಸಾಧಕ, ತನ್ನ ಕಠಿಣಸಾಧನೆಯಿಂದ ದೇಹವನ್ನು 'ವಜ್ರಕಾಯ' ಮಾಡಿಕೊಂಡಿರುತ್ತಾನೆ. **ಅಲ್ಲಮನ ತತ್ವ-ಉಪದೇಶ ಅವನಿಗೆ ಸೇರುವುದಿಲ್ಲ.** ವೃಥಾ ವಾದವೇಕೆಂದು ಅಲ್ಲಮನ ಕೈಗೆ ಖಡ್ಗವನ್ನು ಕೊಟ್ಟು ತನ್ನ ದೇಹದ ಮೇಲೆ ಪ್ರಹಾರ ಮಾಡಲು ಹೇಳುತ್ತಾನೆ. ವಜ್ರಕಾಯದ ಮೇಲೆ ತಾಕಿದ ಖಡ್ಗ 'ಖಣಲ್' ಎಂಬ ಲೋಹದ ಪೆಟ್ಟಿನ ಸದ್ದು ನೀಡುತ್ತದೆ. ಗೋರಕ್ಷಕನಿಗೆ ಏನೂ ಆಗುವುದಿಲ್ಲ...ಇದಲ್ಲದೆ ಇನ್ನಾವುದು ಸಿದ್ಧಿ ?–ಎಂಬ ಪ್ರಶ್ನೆ ಗೋರಕ್ಷನದು, ಈಗ ಅಲ್ಲಮನ ಸರದಿ: ಅಲ್ಲಮನು ಅದೇ ಖಡ್ಗವನ್ನು ಗೋರಕ್ಷಕನಿಗೆ ಕೊಟ್ಟು ತನ್ನ ದೇಹದ ಮೇಲೆ ಪ್ರಹಾರ ಮಾಡಲು ಸೂಚಿಸುತ್ತಾನೆ. ಗೋರಕ್ಷಕ ಎಷ್ಟು ಸರ್ತಿ ಖಡ್ಗ ಪ್ರಹಾರ ಮಾಡಿದರೂ ಬಯಲನ್ನು ಹೊಡೆದಂತೆ ಆಗುತ್ತದೆ. ಖಡ್ಗ ಅಲ್ಲಮನ ಒಳಹೊಕ್ಕು ಹೊರ ಬರುತ್ತಿರುತ್ತದೆ· ಈ ಶೂನ್ಯ ಸಂಪಾದನೆಯ ಎದುರು ಗೋರಕ್ಷ ಕುಸಿದು ಬೀಳುತ್ತಾನೆ. ಅಲ್ಲಮ ಗೋರಕ್ಷ ಗೆ ಕವಿದಿದ್ದ ದೇಹಮೋಹದ ಭ್ರಮೆ ಕಳೆದು ಮುನ್ನಡೆಯುತ್ತಾನೆ. ಇಂದು ಪರಮಾಣು ಗೂಡಿನ ಕವಚ ತೊಟ್ಟಿರುವ ಎಲ್ಲ ದೇಶಗಳು ಗೋರಕ್ಷನಿದ್ದಂತೆ ಭ್ರಮೆಯಲ್ಲಿ ಮುಳುಗಿವೆ. ಅಣ್ವಸ್ತ್ರ ನಿಷೇಧವೆಂಬ ಸತ್ಯಾಗ್ರಹ ನಿಷ್ಠೆಯಿಂದ ಅಲ್ಲಮನಾಗಿ ಮೆರೆಯಬೇಕಾಗಿದ್ದ ಭಾರತ ಅಣ್ವಸ್ತ್ರ ಸ್ಫೋಟದಿಂದ ಗೋರಕ್ಷನಾಗಲು ತವಕಿಸುತ್ತಿರುವುದು ಮನುಕುಲದ ಅಥವಾ ಭೂಗೋಳದ ದುರಂತವಾಗಿದೆ. ಬಹು ಹಿಂದೆಯೇ ಲೋಹಿಯಾ ಹೇಳಿರುವ ಈ ಮಾತುಗಳನ್ನು ಗಮನಿಸಿ: "ಆಟಂಬಾಂಬಿನ **ಅಪರಾಧಕ್ಕಾಗಿ ಯಾವನೊಬ್ಬ ರಾಜಕಾರಣಿಯನ್ನೋ ಯಾವುದೊಂದು ವಿಶಿಷ್ಟ ರಾಜಕೀಯ ಪದ್ಧತಿಯನ್ನೋ ದೂಷಿಸಿದರೆ ಸಾಲದು! ನನಗೆ ಕಾಣುವಂತೆ ಈ ಆಟಂಬಾಂಬ್ ಪ್ರಸ್ತುತ ನಾಗರಿಕತೆಯ ತೀರ ಸಹಜವೂ ಅನಿವಾರ್ಯವೂ ಆದ ಮುಕ್ತಾಯವಾಗಿದೆ"** ●

ವಿ.ಸೂ: ದಿನಾಂಕ ೧೨.೬.೯೮ ರಂದು ಕೋಲಾರದ ಮಾನವತಾ ವೇದಿಕೆಯು ದಲಿತ ಸಂಘರ್ಷ ಸಮಿತಿಯ ಬೆಂಬಲದೊಂದಿಗೆ ಶ್ರೀ ಪಿ. ಲಂಕೇಶ್ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದ **'ವಿನಾಶಕಾರಿ ಅಣುವಿರೋಧಿ ಸಮಾರಂಭ'**ದಲ್ಲಿ ಮಾಡಿದ ಭಾಷಣವನ್ನು ಆಧರಿಸಿದ ಲೇಖನ.

ಬಂಡಾಯ : ಅಬ್ಬಿಗೇರಿ ತೆರೆದ ಹಾದಿ

ಮಾನ್ಯ ಚಂಪಾಜಿ

'ಬಂಡಾಯ: ಅಬ್ಬಿಗೇರಿ ತೆರೆದ ಹಾದಿ' (ಸಂಕ್ರಮಣ ೨೧೫-೨೧೬) ಎಂಬ ಚಂಪಾಕಾಲಂ ಅಬ್ಬಿಗೇರಿಯ ದಿಕ್ಕಿನಲ್ಲಿ ನಿಮ್ಮೊಂದಿಗಿನ ಪಯಣ, ಹರಟೆ, ಭಾರವಾದ ಆ ಮಧ್ಯಾಹ್ನದಲ್ಲಿ ಬಹಳ ದಿನಗಳ ನಂತರ ಅಲ್ಲಮಪ್ರಭು ಬೆಟದೂರು, ರವಿತೇಜ ಅಬ್ಬಿಗೇರಿ, ಸನತ್‌ಕುಮಾರ ಬೆಳಗಲಿ, ಶಿವಾನಂದ ಶೆಟ್ಟರ್, ಸಿದ್ಧನಗೌಡ ಪಾಟೀಲ. ಶಂಕರಗೌಡ ಸಾತ್ಮಾರ, ವಿಠ್ಠಪ್ಪ ಗೋರಂಟ್ಲಿ, ಸೂಳಿಬಾವಿ ಬಸೂ, ವಕ್ಕುಂದ ಮಡಿವಾಳಿ, ವಿನಯಾ ನಾಯಕ್, ಬಿ. ಬಾಬು ಮೊದಲಾದವರೆಲ್ಲ ಒಂದೆಡೆ ಸೇರಿ ನಡೆಸಿದ ಆ ಸಭೆ, ಅಲ್ಲಿ ವ್ಯಕ್ತವಾದ ಕಾಳಜಿಗಳು, ಗೊಂದಲಗಳು, ತಹತಹಿಕೆಗಳು, ಟೀಕೆಗಳ ನೆನಪುಗಳು ಮರುಕಳಿಸುವಂತೆ ಮಾಡಿತು. ಆದರೆ "ಸಮಾಜ ಹೀಗೆಯೇ ಆಗಬೇಕು ಹಾಗೆಯೇ ಆಗಬೇಕು ಎಂದು ನಾವು ಡಿಫೈನ್ ಮಾಡುವ ಅಗತ್ಯವಿಲ್ಲ ಅದು ತನ್ನಷ್ಟಕ್ಕೆ ತಾನೇ ಡಿಫೈನ್ ಆಗುತ್ತಿರುತ್ತದೆ" ಎಂದು ಅಶೋಕ ಶೆಟ್ಟರ್ ಹೇಳಿದರೆಂದು ಬರೆದು ವಾದ ಭೂಮಿಕೆಯೊಂದನ್ನು ನೀವು ನಿರ್ಮಿಸಿಕೊಂಡದ್ದನ್ನು ಕಂಡು 'ನಾನು ಹಾಗೆ ಹೇಳಲು ಸಾಧ್ಯವೆ ?' ಎಂದು ಪ್ರಶ್ನಿಸಿಕೊಳ್ಳುವಂತಾಯಿತು. ನಾವೆಲ್ಲ ಇಷ್ಟಪಡುವ, ನಂಬಿರುವ, ನಂಬಿಕೆಗಳನ್ನುಳಿಸಿಕೊಳ್ಳಲು ಹೆಣಗುತ್ತಿರುವ ಪ್ರಗತಿಪರ ಸಾಮಾಜಿಕ ಸಿದ್ಧಾಂತಗಳ ಅಗತ್ಯದ ಪ್ರಧಾನ ಪ್ರಶ್ನೆಯನ್ನೇ ಗೌಣವಾಗಿಸುವಂಥ ಆ ಮಾತುಗಳನ್ನು ನಾನು ಆಡಿರುವುದು ಸಾಧ್ಯವಿಲ್ಲವಾದ್ದರಿಂದ ಈ ಪ್ರತಿಕ್ರಿಯೆ.

ಕಳೆದ ಐದಾರು ವರ್ಷಗಳಷ್ಟು ಸಣ್ಣ ಅವಧಿಯಲ್ಲಿ ನಮ್ಮ ದೇಶದಲ್ಲಿ ನಡೆಯುತ್ತಿರುವ ಬದಲಾವಣೆಯ ಗತಿಯ ಕುರಿತು ಮಾತಾಡುತ್ತ ನಾನು ಹೇಳಿದ್ದು: ಇಪ್ಪತ್ತು ವರ್ಷಗಳ ಹಿಂದೆ ಸಮಾಜ ನಮ್ಮ ಚಿಂತನೆ, ವ್ಯಾಖ್ಯಾನ, ಗ್ರಹಿಕೆಗಳಿಗೆ ಕಾಯ್ದುಕೊಂಡು ಕುಳಿತಿದೆಯೇನೋ ಎಂದು ನಮ್ಮ ಭಾವನೆಯಾಗಿರುತ್ತಿತ್ತು. ಅದೊಂದು ದೊಡ್ಡ ಭ್ರಮೆಯೇನೋ ಎನ್ನಿಸುವಂತೆ ನಮ್ಮ ಗ್ರಹಿಕೆಗಳಿಗೆ ಪೂರ್ಣವಾಗಿ ದಕ್ಕುವ ಮೊದಲೇ ಒಂದರ ಹಿಂದೊಂದರಂತೆ ಕ್ಷಿಪ್ರಗತಿಯಲ್ಲಿ ಇಂದು ಬದಲಾವಣೆಗಳು ನಡೆದು ಹೋಗುತ್ತಿವೆ. ನಮ್ಮ ಯಾವ ಡೆಫೆನಿಶನ್‌ಗಳ ಹಂಗೂ ಇಲ್ಲದೆ ಸಮಾಜ ತನ್ನನ್ನು ತಾನೇ ಡಿಫೈನ್ ಮಾಡಿಕೊಳ್ಳುತ್ತ ಸಾಗಿದ್ದು ಹಾಗೆ ಬದಲಾಗುತ್ತಿರುವ ಸಮಾಜದಲ್ಲಿ ಎಲ್ಲೆಲ್ಲೋ ಫಿಕ್ಸ್ ಆಗಲು ನಾವು ಪರದಾಡುತ್ತಿದ್ದೇವೆ.

ಆದ್ದರಿಂದ ಅಬ್ಬಿಗೇರಿಯಲ್ಲಿ ನಡೆದ ಸಂವಾದದ ಸಾರವನ್ನು ಸಂಗ್ರಹಿಸುತ್ತ ಮುಂದಿನ ಪುಟವಲ್ಲಿ ನೀವು ಬರೆದ "ನಮ್ಮ ಎಣಿಕೆಯನ್ನಾಗಲಿ ಗ್ರಹಿಕೆಯ ಶಕ್ತಿಯನ್ನಾಗಲಿ ಗಣಿಸದೆ ಇಡೀ ಜಗತ್ತಿನಾದ್ಯಂತ ಕ್ಷಿಪ್ರಗತಿಯಲ್ಲಿ ಬದಲಾಗುತ್ತಿರುವ ವಿದ್ಯಮಾನಗ ಳಿಂದಾಗಿ ಭಾವನಾತ್ಮಕ, ವೈಚಾರಿಕ ಕೋಲಾಹಲ ಉಂಟಾಗಿರುವ ಈ ದಿನಮಾನ ಗಳಲ್ಲಿ ಬಂಡಾಯದಂಥ ಸಂಘಟನೆ ಮತ್ತೆ ಶಕ್ತಿ ಕ್ರೋಢೀಕರಣ ಮಾಡಿಕೊಂಡು ಹೊಸ ರೂಪು ಪಡೆಯಬೇಕಾಗಿದೆ" ಎಂಬ ಸಾಲುಗಳು ವಾಸ್ತವವಾಗಿ ಅಂದು ನಾನಾಡಿದ ಮಾತುಗಳ ಆಶಯವನ್ನು ವ್ಯಕ್ತಡಿಸುತ್ತವೆ.

ಇನ್ನುಳಿದಂತೆ ಬಂಡಾಯ ಸಂಘಟನೆ ಸಡಿಲಾಗಿ ಉಳಿದರೂ ಅದರ ಮೂಲ ಆಶಯ ಗಳು ಸಾರ್ವತ್ರಿಕವಾಗಿ ಹರಡುತ್ತಿರುವದಕ್ಕೆ ಉದಾಹರಣೆಯಾಗಿ ನೀವು ಕಾರಖಾ ನೆಯ Chimney ಮತ್ತು ಅದರೊಳಗಿಂದ ಮೊದಲು ಢಾಳಾಗಿ ಕಣ್ಣಿಗೆ ಹೊಡೆ ಯುವಂತೆ ಹೊರಬಂದು ನಂತರ ಹರಡಿ ಇಡೀ ವಾತಾವರಣವನ್ನೇ ಆವರಿಸಿ ಚಿಮಣಿ ಯನ್ನು ಮಸುಕಾಗಿಸುವ ಅದರ ಹೊಗೆಯ ರೂಪಕವನ್ನು ಕೊಟ್ಟಿದ್ದು ಪಸಂದಾಗ ಲಿಲ್ಲ. ಮಲಿನ ಪರಿಸರದ ಬೆಂಗಳೂರಿನಲ್ಲಿ ಕೇವಲ ಎರಡು ವರ್ಷಗಳ ವಾಸ್ತವ್ಯ ನಿಮ್ಮ ಈ ಸ್ಥಿಟಿಕ್ ಪ್ರಜ್ಞೆಯನ್ನು ಎಷ್ಟು ಮಂಕಾಗಿಸಿದೆ ನೋಡಿ!

ಅಶೋಕ ಶೆಟ್ಟರ್ ಧಾರವಾಡ

ನಿಮ್ಮ ಎಲ್ಲ ಬಗೆಯ ಮುದ್ರಣ ಕೆಲಸಗಳಿಗಾಗಿ

ಚಂದನ ಮುದ್ರಣ

ವಿಚಾರಿಸಿರಿ

ಮಹಾಂತೇಶ ನಗರ, ಧಾರವಾಡ–೫೮೦ ೦೦೮

ಫೋನು : ೭೪೪೪೮೬೩ & ೮೬೭೮೬೪

c/o ಸಂಕ್ರಮಣ ಪ್ರಕಾಶನ, ನಂ. ೧೮೯೪/೧. ೩೧ ನೇ ಕ್ರಾಸ್,

೨ನೇ ಸ್ಟೇಜ್, ಬನಶಂಕರಿ, ಬೆಂಗಳೂರು ೫೬೦ ೦೭೦

ಫೋನು : ೬೭೧೦೫೨೩

ಸ್ವರವಚನ ಸಾಹಿತ್ಯ–ಒಂದು ಮರುವಿಚಾರ

ಬಸವರಾಜ ಮಲಶೆಟ್ಟಿ

ಧಾರ್ಮಿಕ ಸ್ವಾಭಿಮಾನದ ಸ್ವರೂಪ ಪಡೆದುಕೊಂಡ ಮತೀಯ ದೃಷ್ಟಿಕೋನ ಮತ್ತು ಮೇಲ್ಪದರಿನ ಅಧ್ಯಯನಗಳು ಹೇಗೆ ದಿಕ್ಕುತಪ್ಪಿ ಸಾಗುತ್ತವೆಂಬುದಕ್ಕೆ 'ಸ್ವರವಚನ' ಸಾಹಿತ್ಯ ಉದಾಹರಣೆಯಾಗಿದೆ. ಹನ್ನೆರಡನೆಯ ಶತಮಾನದಿಂದ ಈ ಶತಮಾನದ ವರೆಗೆ ವೀರಶೈವರು ಹಾಡುಗಳನ್ನು ಬರೆದಿದ್ದಾರೆ. ಆ ಹಾಡುಗಳೇ ಸ್ವರವಚನಗಳು. ಎಂದು ಗಟ್ಟಿ ದನಿಯಲ್ಲಿ ವಿವರಿಸಲಾಗುತ್ತಿದೆ. ಇಂಥ ವಿವರಣೆಯ ಸಮರ್ಥನೆಗಾಗಿ ಸ್ವರ ವಚನಗಳ ಬಿಡಿ ಕೃತಿಗಳನ್ನು ಮತ್ತು ಸಂಕಲನ ಸಂಪುಟಗಳನ್ನು ಪ್ರಕಟಿಸಲಾಗುತ್ತಿದೆ, ಹಲವು ಭ್ರಮೆಗಳ ಪರಿಣಾಮದಿಂದಾಗಿ ಇಂಥದೆಲ್ಲ ನಡೆಯುತ್ತಿದೆಯೆಂಬುದನ್ನು ಸಾಹಿತ್ಯಾಸಕ್ತರು ಅರಿತುಕೊಳ್ಳಬೇಕಾಗಿದೆ.

೧೬ನೇ ಶತಮಾನದಲ್ಲಿ ವಚನಗಳನ್ನು ಹಲವು ವಿಭಿನ್ನ ನೆಲೆಗಳಲ್ಲಿ ಸಂಗ್ರಹಿಸುವ ವ್ಯಾಖ್ಯಾನಿಸುವ ಕಾರ್ಯ ಉತ್ಸಾಹದಿಂದ ನಡೆಯಿತು. ಆಗ ಮಹಲಿಂಗದೇವ ಎಂಬವನು ವೀರಶೈವ ತತ್ವಶಾಸ್ತ್ರದ ನೂರೊಂದು 'ಸ್ಥಲ'ಗಳನ್ನು ಆಧರಿಸಿ ಶರಣರ ವಚನಗಳನ್ನು ಸಂಪಾದಿಸಿದ. ಅವನ ಕೃತಿಯ ಹೆಸರು 'ಏಕೋತ್ತರ ಶತಸ್ಥಲ: ಇದರಲ್ಲಿ ಪ್ರತಿಯೊಂದು ಸ್ಥಲಕ್ಕೆ ಒಂದೊಂದು ಹಾಡುಗಳನ್ನು ಉದಾಹರಿಸಲಾಗಿದೆ. ಈ ಹಾಡುಗಳು ಬಸವಣ್ಣ ಅಲ್ಲಮಪ್ರಭು ಚೆನ್ನಬಸವಣ್ಣ ಮೊದಲಾದ ಶರಣರ ವಚನಾಂಕಿತಗಳನ್ನೊಳಗೊಂಡಿವೆ. ಅಂದ ಮೇಲೆ ಈ ಹಾಡುಗಳೆಲ್ಲ ಆ ಶರಣರ ರಚನೆಗಳೇ ಎಂಬ ತೀರ್ಮಾನಕ್ಕೆ ಬರಲಾಯಿತು. "ಹಾಡುಗಳ ರಚನೆಯಲ್ಲಿಯೂ ವೀರಶೈವ ಬರಹಗಾರರಿಗೇ ಅಗ್ರಸ್ಥಾನ ಸಲ್ಲುವದು. ಅಷ್ಟೇ ಅಲ್ಲ. ಈ ಕಾರ್ಯದಲ್ಲಿಯೂ ಬಸವಾದಿಗಳೇ ಪುರಸ್ಕರ್ತರು"[೧]–ಹೀಗೆ ಬಸವಾಭಿಮಾನದ ಧ್ವಜ ಹಾರಿಸಲಾಯಿತು. ಮುಂದಿನ ವಿದ್ವಾಂಸರಿಗೆ "ಶರಣರ ಹಾಡುಗಳನ್ನು 'ಸ್ವರ ವಚನ' ಎಂದು ಕರೆಯುವುದು ಹೆಚ್ಚು ಸೂಕ್ತ"[೨]–ಎನಿಸಿತು. ೧೭ನೇ ಶತಮಾನದಲ್ಲಿ ಕಾಣಿಸಿಕೊಂಡ 'ಸ್ವರವಚನ' ಎಂಬ ಹೆಸರನ್ನೂ ೧೨ನೇ ಶತಮಾನದ ಶರಣರ ಹಾಡುಗಳಿಗೆ

ಅಂಟಿಸುವುದು 'ಸೂಕ್ತ'ವೆನಿಸಿದ್ದು ಆಶ್ಚರ್ಯದ ಸಂಗತಿಯಾಗಿದೆ, ೧೫ನೇ ಶತಮಾನದ ಪ್ರಕ್ಷಿಪ್ತ ಹಾಡುಗಳನ್ನು ೧೨ ನೇ ಶತಮಾನದ ಶರಣರ ಕೃತಿಗಳೆಂದು ತಪ್ಪಾಗಿ ಭಾವಿಸಿ, ಅವುಗಳಿಗೆ 'ಸ್ವರವಚನ'ಗಳೆಂಬ ಹುಸಿ ತಲೆಪಟ್ಟಿ ಅಂಟಿಸಿ, ವೀರಶೈವ ಶಾಸ್ತ್ರಪರಂಪರೆಯ ಗಡಿಯಾಚೆಗಿರುವ ತತ್ವಪದಕಾರರ ಹಾಡುಗಳನ್ನು 'ಸ್ವರವಚನ' ಗುಂಪಿನಲ್ಲಿ ಸೇರಿಸಿ ಪ್ರಚಾರ ನಡೆಸುತ್ತಿರುವ ಇಂದಿನ ಸಂದರ್ಭದಲ್ಲಿ 'ಸ್ವರವಚನ'ದ ನಿಜ ಸ್ವರೂಪದ ಬಗ್ಗೆ ಆಲೋಚನೆ ಮಾಡಬೇಕಾಗಿದೆ.

ಡಾ. ಎಲ್. ಬಸವರಾಜು ಅವರ 'ಶಿವದಾಸ ಗೀತಾಂಜಲಿ' (೧೯೬೩) ವೀರಶೈವ ಧರ್ಮಾಭಿಮಾನಗಳಿಗೆ ಅಧ್ಯಯನಕಾರರಿಗೆ ಹೆಮ್ಮೆಯ ಕೃತಿಯೆನಿಸಿದೆ ಇದರಲ್ಲಿ 'ಏಕೋತ್ತರ ಶತಸ್ಥಲ, ಶೂನ್ಯ ಸಂಪಾದನೆ ಮುಂತಾದ ಆಕರಗಳಿಂದ ಸಂಗ್ರಹಿಸಿದ ೧೨ ಶತಮಾನದ ಶಿವಶರಣರ ಹಾಡುಗಳಿವೆ. ಈ ಕೃತಿಯ ಪ್ರಕಟಣೆಗೆ ಕಾರಣವಾದ ಒತ್ತಡಗಳೇನು ? "೧೫–೧೬ನೇ ಶತಮಾನಗಳಲ್ಲಿ ಹರಿದಾಸರು ಯಾವ ಕೀರ್ತನ ಸಾಹಿತ್ಯ ಪ್ರಕಾರದಿಂದ ಇಡೀ ದಕ್ಷಿಣ ಭಾರತದ ಸಂಗೀತ ಮತ್ತು ಸಾಹಿತ್ಯ ಪ್ರಪಂಚ ಗಳೆರಡರಲ್ಲೂ ಅದ್ವಿತೀಯ ಕೀರ್ತಿಯನ್ನು ಗಳಿಸಿದರೋ ಆ ಕೀರ್ತನ ಪ್ರಕಾರಕ್ಕೆ ೧೨ನೇ ಶತಮಾನದ ಬಸವಾದಿ ಶಿವದಾಸರ ಈ ಗೀತಾ (ಹಾಡುಗಳ) ಪ್ರಕಾರವು ಮೂಲವೂ ಮಾದರಿಯೂ ಆಗಿದ್ದವು"[೩] ಎಂಬುದನ್ನು ಸಮರ್ಥಿಸಿಕೊಳ್ಳುವುದಕ್ಕಾಗಿ 'ಶಿವದಾಸ ಗೀತಾಂಜಲಿ' ಪ್ರಕಟಗೊಂಡಿತು. "ವಚನಗಳು ಹೇಗೆ ಬಸವಾದಿ ಶರಣರಿಂದ ರಚಿತ ವಾದವೋ ಹಾಗೆಯೇ ಹಾಡುಗಳೂ ಆ ಬಸವಾದಿ ಪ್ರಮಥರಿಂದಲೇ ರಚಿತವಾ ದವು."[೪] ಎಂಬುದು ಡಾ. ಎಲ್. ಬಸವರಾಜು ಅವರ ಅಚಲ ನಂಬಿಕೆ. ಹರಿದಾಸರಿ ಗಿಂತ ಶಿವಶರಣರಿಗೆ ಹೆಚ್ಚಿನ ತೂಕ ತಂದುಕೊಡುವ ಅಭಿಮಾನದ ಅವಸರದಲ್ಲಿ ಘನ ವಿದ್ವಾಂಸರಾದ ಬಸವರಾಜು ಅವರು ಉಪಲಬ್ಧ ಹಾಡುಗಳು ಪ್ರಕ್ಷಿಪ್ತ ಇರಬಹುದೇ ಎಂದು ಆಲೋಚಿಸುವ ಗೊಡವೆಗೇ ಹೋಗಲಿಲ್ಲ. ಅವರು ತಮ್ಮ ಸಂಕಲನಕ್ಕಿಟ್ಟ 'ಶಿವದಾಸ ಗೀತಾಂಜಲಿ' ಹೆಸರು ತಪ್ಪುಗಳ ಸರಮಾಲೆಯಾಗಿದೆ. ಹರಿದಾಸರಿಗೆ ಶಿವಶರಣರನ್ನು ಪ್ರತಿಸ್ಪರ್ಧಿಗಳಂತೆ ಕಲ್ಪಿಸಿ 'ಶಿವದಾಸ'ರನ್ನಾಗಿಸಿದರು. 'ಶರಣ' 'ದಾಸ' ಎಂಬ ಪದಗಳ ನಿಘಂಟಿನ ಅರ್ಥಗಳಲ್ಲಿ ಸಾಮ್ಯತೆ ಇರಬಹುದು. ಆದರೆ ಅವುಗಳಿಗಿರುವ ಸಾಂಸ್ಕೃತಿಕ ಅರ್ಥವನ್ನು ಬಸವರಾಜು ಅವರು ಗ್ರಹಿಸದೇ ಹೋದರು. 'ದಾಸರು' ಅಂದರೆ ಹರಿದಾಸರು ಮಾತ್ರ 'ಶರಣ'ರು ಅಂದರೆ ಶಿವಶರಣರು ಮಾತ್ರ. 'ಶಿವಶರಣರನ್ನು ಶಿವ'ದಾಸ'ರನ್ನಾಗಿಸುವುದು 'ಹರಿ'ದಾಸರನ್ನು ಹರಿ 'ಶರಣ'ರನ್ನಾಗಿಸುವುದು ಸಂಸ್ಕೃತಿಯ ಮಿಡಿತವನ್ನರಿಯದ ಪಾಂಡಿತ್ಯದ ಕಸರತ್ತು ಅಷ್ಟೇ, ಈ ಸಂಕಲನಕ್ಕೆ 'ಗೀತಾಂಜಲಿ' ಎಂದುದೇಕೆ ? ನಮ್ಮಲ್ಲಿ 'ಹಾಡು,' 'ಪದ' ರೂಢಿಯಲ್ಲಿವೆ. 'ಗೀತ' ಎಂಬುದು ಒಂದು ಕಾಲಕ್ಕೆ ಶುದ್ಧ ಶಾಸ್ತ್ರೀಯವಾಗಿ

ಹಾಡಲ್ಪಡುತ್ತಿದ್ದ ಒಂದು ರಚನೆ. ಇದು ಶಿವಶರಣರಿಗೆ ಮೇಲ್ತರದ ಅಂತಸ್ತು ದೊರಕಿಸಿಕೊಡುವ ಉದ್ದೇಶದಿಂದ ನಡೆಸಿದ ಸಂಸ್ಕೃತೀಕರಣದ ಪ್ರಕ್ರಿಯೆಯೇ ?

೧೫ನೇ ಶತಮಾನದಲ್ಲಿ ರಚನೆಗೊಂಡ ಹಾಡುಗಳನ್ನು ೧೨ನೇ ಶತಮಾನದ ಶರಣರ ತಲೆಗೆ ಕಟ್ಟಿ (ಇದರ ವಿವೇಚನೆ ಮುಂದಿದೆ) ತೃಪ್ತರಾಗದ ಡಾ. ಎಲ್. ಬಸವರಾಜು ಅವರು ಶರಣರ ಸಾಹಿತ್ಯ ಕ್ಷೇತ್ರವನ್ನು ಇನ್ನಷ್ಟು ವಿಸ್ತರಿಸುವಲ್ಲಿ ಹೆಮ್ಮೆ ಪಟ್ಟುಕೊಂಡಿದ್ದಾರೆ. "ಶರಣರು ತಾವು ಬರೆದ ವಚನಗಳಿಂದ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಪ್ರಖ್ಯಾತರಾಗಿದ್ದರೂ, ಅವರು ಅಷ್ಟನ್ನೇ ಬರೆದವರಲ್ಲ. ಅಷ್ಟಕ, ಶತಕ, ತಾರಾವಳಿ, ಕಾಲಜ್ಞಾನ, ನಾಂದ್ಯ, ಉದ್ದರಣೆ, ವಾಚ್ಯ, ಬೊಲ್ಲಿ ಮುಂತಾದ ಲಘು ಕಾವ್ಯ ಪ್ರಕಾರಗಳಲ್ಲಿಯೂ ತಮ್ಮ ಭಾವ ಲಹರಿಯನ್ನು ಅವರು ಹರಿಯಬಿಟ್ಟಿದ್ದಾರೆ"[೫] ಎಂಬುದು ಅವರ ಅಭಿಪ್ರಾಯ. ಇಲ್ಲಿ ಉಲ್ಲೇಖಿಸಿರುವ ಪ್ರಕಾರಗಳೆಲ್ಲ (ಅಷ್ಟಕ ಶತಕ ಬಿಟ್ಟು) ಶರಣರ ಕಾಲದ ನಂತರ ೧೫ನೇ ಶತಮಾನದಿಂದೀಚೆಗೆ ರಚನೆಗೊಂಡಂಥವು. ಭಾಷಿಕ ಅಧ್ಯಯನದಿಂದ ಯಾರಿಗಾದರೂ ಇದು ಅರ್ಥವಾಗುತ್ತದೆ. ಶರಣರು ಕಾಲಜ್ಞಾನ ಬರೆದಿದ್ದಾರೆ ಎಂದು ಹೇಳುವುದು ತಪ್ಪು. ಅವರ ಜೀವನ-ತತ್ವಗಳನ್ನು ಅರಿತುಕೊಂಡವರಿಗೆ ಈ ತಪ್ಪು ತಿಳಿದೀತು.

ಕಾಲಕರ್ಮವ ದಹಿಪುದ ಬಸವಣ್ಣನು
ಪೇಳಿದ ಕಾಲಜ್ಞಾನವನು
ಶೂಲಧರನ ಭಕ್ತರಾಲಿಸಿ ಕೇಳಲು
ಮೇಲೆ ಮುಕ್ತಿ ದೊರಕುವುದು ೬

ಇದು ಬಸವಣ್ಣನ ಕಾಲಜ್ಞಾನ. ಇಲ್ಲಿ ಬಸವಣ್ಣ ಮಠದಲ್ಲಿ ಪುರಾಣ ಹೇಳುವವನ ಧಾಟಿಯಲ್ಲಿ ಮುಕ್ತಿಯ ಆಸೆ ತೋರಿಸುವುದು ಹಾಸ್ಯಾಸ್ಪದವಾಗಿದೆ. ಮರ್ತ್ಯ ಲೋಕವನ್ನು ಕರ್ತಾರನ ಕಮ್ಮಟವೆಂದು ಭಾವಿಸಿ ಇಲ್ಲಿ ಸಲ್ಲುವವರು ಮಾತ್ರ ಅಲ್ಲಿ ಸಲ್ಲುತ್ತಾರೆಂದು ಪ್ರತಿಪಾದಿಸಿದ ವಿಚಾರವಾದಿ ಬಸವಣ್ಣನ ಮಾತುಗಳೇ ಇವು ? ಚೆನ್ನಬಸವಣ್ಣನ ಕಾಲಜ್ಞಾನದಲ್ಲಿ "ಮಾತಂಗ ಪರ್ವತದಲ್ಲಿ ಮಸೂದೆಯ ಕಟ್ಟ್ಯಾರು" ಎಂಬ ಮಾತಿದೆ. ಕರ್ನಾಟಕಕ್ಕೆ ಮಹಮ್ಮದೀಯರ ಮೊದಲ ಆಕ್ರಮಣ ೧೨೯೪ರಲ್ಲಿ. ಅಲ್ಲಿಂದೀಚೆಗೆ ಇಸ್ಲಾಂ ಧರ್ಮ-ಸಂಸ್ಕೃತಿಗಳ ಪರಿಚಯ ನಮಗಾದುದು. ಹೀಗಿರುವಾಗ ೧೨ನೇ ಶತಮಾನದ ಚೆನ್ನಬಸವಣ್ಣನಿಗೆ 'ಮಸೂದೆ' ಹೇಗೆ ಗೊತ್ತಾಗಿತ್ತು ? ಶರಣರು ದಿವ್ಯ ಜ್ಞಾನಿಗಳಾಗಿದ್ದರು. ಅವರಿಗೆ ಮುಂದಿನದೆಲ್ಲ ತಿಳಿಯುತ್ತಿತ್ತು ಎಂದು ವಾದಿಸುವುದು ಹುಂಬತನ. ಏಕೆಂದರೆ ಅವರು ಮುಂದಿನದನ್ನು ತಿಳಿಸುವ ಜ್ಯೋತಿಷ್ ಶಾಸ್ತ್ರದ ಬಗ್ಗೆ ತಿರಸ್ಕಾರ ತಾಳಿದ್ದರು. ಅವರಿಗೆ ಅಂದಂದಿನ ಬದುಕು ನಡೆ ನುಡಿಗಳು ಮುಖ್ಯವಾಗಿದ್ದವು. ಚೆನ್ನಬಸವಣ್ಣನ "ತಿಥಿವಾರವೆಂದರಿಯೆ ಲಗ್ನ

ವಿಲಗ್ನವೆಂದರಿಯೆ ಶರಣರ ನುಡಿಯೇ ಜ್ಯೋತಿಷ್ಯ ನಡೆಯೇ ಪಂಚಾಂಗ" ಎಂಬ ಮಾತಿನಲ್ಲಿ ಇದನ್ನು ಕಂಡುಕೊಳ್ಳಬಹುದು. ವಿಷಯ ಹೀಗಿರುವಾಗ "ಬಸವ, ಘಟ್ಟಿವಾಳಯ್ಯ, ಚೆನ್ನಬಸವ ಮುಂತಾದ ಪ್ರಮಥರು ಕಾಲಜ್ಞಾನವನ್ನು ಬರೆದು ಜನರ ಯೋಗಕ್ಷೇಮದ ಗಡಿಯ ರಕ್ಷಕರಾಗಿ, ಅಪಾಯ ಬರುವ ಸಂದರ್ಭಗಳಲ್ಲಿ ಅವರನ್ನು ಎಚ್ಚರಿಸಿದ್ದರೆ"೭ ಎಂದು ಹೇಳುವುದು ಅಸಮಂಜಸವೆನಿಸುತ್ತದೆ. ನಾಳೆ ಬರುವುದು ನಮಗೆ ಇಂದೇ ಬರಲಿ ಎಂದು ಭವಿಷ್ಯವನ್ನು ಆಹ್ವಾನಿಸುವ ಶರಣರು ಭವಿಷ್ಯವನ್ನು ಆರಾಧಿಸುವುದು ಸಾಧ್ಯವೇ ? ಕಾಲಜ್ಞಾನ ಸಾಹಿತ್ಯ ಶರಣರ ನಂತರ ಹುಟ್ಟಿಕೊಂಡದ್ದು ಎಂಬುದರಲ್ಲಿ ಸಂಶಯವಿಲ್ಲ.

'ಸ್ವರವಚನ'ಗಳೆಂದು ವಿದ್ವಾಂಸರು ಗುರುತಿಸುವ ಹಾಡುಗಳು ಶರಣರ ರಚನೆಗಳಲ್ಲ. ಅವರ ಅಂಕಿತಗಳನ್ನು ಬಳಸಿಕೊಂಡು ನಂತರದವರು ಇವುಗಳನ್ನು ಕಟ್ಟಿದ್ದಾರೆ. ಈ ಹಾಡುಗಳ ಭಾಷೆ ಖಂಡಿತವಾಗಿಯೂ ವಚನಗಳ ಭಾಷೆಯಲ್ಲ. ಗ್ರಾಂಥಿಕ ಪರಿಧಿಗೆ ಜೋತುಬಿದ್ದ ಛಂದೋಬಂಧಗಳ ನಿಬಂಧನೆಗಳಲ್ಲಿ ಹೊರಳಾಡುವ ಕೃತಕ ಶೈಲಿಯ ಇಂಥ ಹಾಡುಗಳನ್ನು ಶರಣರು ರಚಿಸಿದ್ದಾರೆಂದು ನಂಬುವುದಾದರೆ ಅವರ ಸೃಜನಗುಣ, ಲವಲವಿಕೆಯ ಭಾಷಾ ಪ್ರಯೋಗಗಳನ್ನು ಅಲ್ಲಗಳೆದಂತಾಗುತ್ತದೆ. ತನ್ಮೂಲಕ ಅವರನ್ನು ಅಪಮಾನಿಸಿದಂತಾಗುತ್ತದೆ. "ಈ ಪದಗಳು ವಚನಕಾರರೇ ಹಾಡಿದುವೋ ಅಥವಾ ಮುಂದಿನವರು ಅವರ ಅಂಕಿತಗಳಲ್ಲಿ ಕಟ್ಟಿದ ಹಾಡುಗಳೋ– ಈ ವಿಷಯದಲ್ಲಿ ಸಂಶೋಧನೆ ನಡೆಯಬೇಕಿದೆ"೮ ಎಂದು ಡಾ. ಎಂ. ಚಿದಾನಂದ ಮೂರ್ತಿಯವರು ಸಂಶಯ ವ್ಯಕ್ತಪಡಿಸಿರುವುದು ಸೂಕ್ತವಾಗಿದೆ. ಶರಣ ಸಾಹಿತ್ಯದಲ್ಲಿ 'ವಚನ' ಪದವು ಬಹಳಷ್ಟು ಕಡೆ ಉಲ್ಲೇಖಗೊಂಡಿದೆ. ಆದರೆ ಹಾಡಿನ ಪ್ರಸ್ತಾಪ ಎಲ್ಲಿಯೂ ಇಲ್ಲ. ಶರಣರು ನಿಜವಾಗಿಯೂ ಹಾಡುಗಳನ್ನು ಬರೆದದ್ದೇ ಆಗಿದ್ದರೆ ಯಾವುದಾದರೊಂದು ಸಂದರ್ಭದಲ್ಲಿ ಅವರ ಉಲ್ಲೇಖ ಮಾಡದೇ ಬಿಡುತ್ತಿರಲಿಲ್ಲ. ಬಸವಣ್ಣನ ಸುಪ್ರಸಿದ್ಧ ವಚನ ಹೀಗಿದೆ-

ತಾಳಮಾನ ಸರಿಸವನರಿಯೆ
ಓಜೆ ಬಜಾವಣೆಯ ಲೆಕ್ಕವನರಿಯೆ
ಅಮೃತಗಣ ದೇವಗಣವನರಿಯೆ
ಕೂಡಲಸಂಗಮದೇವಾ ನಿನಗೆ ಕೇಡಿಲ್ಲವಾಗಿ
ಆನು ಒಲಿದಂತೆ ಹಾಡುವೆ೯

ಇಲ್ಲಿ ಬಸವಣ್ಣ ತಾನು ಏನೇನು ಅರಿಯೆನೆಂದು ಹೇಳುವನೋ ಅವೆಲ್ಲ ಹಾಡಿಗೆ ಬೇಕು. ಆನು ಒಲಿದಂತೆ ಹಾಡುವೆನೆಂಬುದು ಬಸವಣ್ಣನ ಧೋರಣೆಯಾಗಿರುವುದರಿಂದ ಅವನಿಗೆ ಹಾಡಿಗೆ ಬೇಕಾದ ಶಾಸ್ತ್ರೀಯ ಅಂಶಗಳ ಅವಶ್ಯಕತೆಯೆನಿಸಲಿಲ್ಲ. 'ಅರಿಯೆ'

ಎಂಬಲ್ಲಿ ವಿಷಯವಿದೆ. ಆ ವಿಷಯದ ಒಡಲಲ್ಲಿ ಖಚಿತ ಲೆಕ್ಕಾಚಾರದ ತಾಳ ಮತ್ತು ಛಂದಸ್ಸುಗಳ ಬಗ್ಗೆ ತಿರಸ್ಕಾರವಿದೆ. ಆದ್ದರಿಂದ ಬಸವಣ್ಣ ಮತ್ತು ಅವನ ಸಮಕಾಲೀನ ಶರಣರು ಕಷ್ಟಪಟ್ಟು ಹಾಡುಗಳನ್ನು ಕಟ್ಟಲು ಹೋಗಲಿಲ್ಲ. ತಮ್ಮ ಭಾವ ಸಂವಹನಕ್ಕೆ ಮುಕ್ತ ಸ್ವರೂಪದ ವಚನಗಳನ್ನು ಅವಲಂಬಿಸಿದರು.

ಈ ಮೊದಲು ಹೇಳಿರುವಂತೆ, ಮಹಲಿಂಗದೇವನು 'ಏಕೋತ್ತರ ಶತಸ್ಥಲ'ಗಳಿಗೆ ಶರಣರ ಹಾಡುಗಳನ್ನು ಉದಾಹರಿಸಿದ್ದಾನೆ. ಸ್ವರವಚನ ಪ್ರತಿಪಾದಕ ಪಂಡಿತರಿಗೆ ಇದೊಂದು ಮಹತ್ವದ ಆಕರ-ಆಧಾರ ಎನಿಸಿದೆ. ಆದರೆ ಮಹಲಿಂಗದೇವನ ಸಮಕಾಲೀನನಾದ ಮಗ್ಗೆಯ ಮಾಯಿದೇವನ 'ಏಕೋತ್ತರಶತಸ್ಥಲ'ದ ಸ್ವರೂಪ ಬೇರೆಯಾಗಿದೆ ಮಾಯಿದೇವನು ಒಂದೊಂದು ವಾರ್ಧಕ ಷಟ್ಪದಿ ರಚಿಸಿದ್ದಾನೆ, ಅವನೇಕೆ ಶರಣರ ಹಾಡುಗಳ ಕಡೆಗೆ ಗಮನ ಹರಿಸಲಿಲ್ಲ ? ಏಕೆಂದರೆ ಅವು ಇದ್ದಿರಲೇ ಇಲ್ಲ. ಮಾಯಿದೇವನು ಷಟ್ಪದಿಗಳನ್ನು ರಚಿಸಿದಂತೆ ಮಹಲಿಂಗನು ಹಾಡುಗಳನ್ನು ರಚಿಸಿದ. ತಾನು ರಚಿಸಿದ ಹಾಡುಗಳಿಗೆ ಅಧಿಕೃತತೆ ಒದಗಿಸಲು ಶರಣರ ಅಂಕಿತ ಬಳಸಿಕೊಂಡ ಅಷ್ಟೇ.

ಕಲ್ಯಾಣ ಕ್ರಾಂತಿಯ ನಂತರ ಚೆಲ್ಲಾಪಿಲ್ಲಿಯಾಗಿ ಹರಿದುಹೋದ ವಚನ ಸಾಹಿತ್ಯವನ್ನು ನಂತರದ ಶತಮಾನಗಳಲ್ಲಿ ವಿವಿಧ ಆವೃತ್ತಿಗಳಲ್ಲಿ ಸಂಕಲನಗೊಳಿಸುವ ಕಾರ್ಯ ನಡೆಯಿತು. ಈ ಕಾರ್ಯದ ಮೊದಲ ಘಟ್ಟದ ಸಂಕಲನಗಳೆಂದರೆ 'ಸಕಲ ಪುರಾತನರ ವಚನಗಳ ಕಟ್ಟು'ಗಳು. ಇಲ್ಲಿ ಆಯಾ ವಚನಕಾರರ ವಚನಗಳನ್ನು ಕ್ರಮಬದ್ಧವಾಗಿ ಸಂಕಲನಗೊಳಿಸಲಾಗಿದೆ. 'ಮೂರು ಸಾವಿರ ವಚನಗಳ ಕಟ್ಟು' ಮುಂತಾದ ಬೃಹತ್ ಸಂಕಲನ ಕೃತಿಗಳು ವಿಪುಲ ಪ್ರಮಾಣದಲ್ಲಿ ರೂಪಗೊಂಡವು. ಇವುಗಳಲ್ಲಿ ಯಾವುದರಲ್ಲಿಯೂ ಶರಣರ ಹಾಡುಗಳಿಲ್ಲ. ಹಾಡುಗಳು ನಿಜವಾಗಿಯೂ ಅಸ್ತಿತ್ವದಲ್ಲಿದ್ದಿದ್ದರೆ, ಸಂಕಲನಕಾರರು ಅವುಗಳನ್ನು ನಿರ್ಲಕ್ಷಿಸುವಂಥ ಬೇಜವಾಬ್ದಾರಿಗಳಾಗಿರಲಿಲ್ಲ. 'ಶಿವಯೋಗ ಪ್ರದೀಪಿಕೆ' ಎಂಬುದು ಶರಣರ ಇಂಥ ಹಾಡುಗಳ ಸಂಗ್ರಹವಾಗಿದೆ. ಮಹಲಿಂಗನ ನಂತರದ ಈ ಸಂಕಲನ ಶರಣರ ಪ್ರಕ್ಷಿಪ್ತ ಹಾಡುಗಳ ಸಂಗ್ರಹವಾಗಿದೆ. ಇದೇ ಮಾತು ಕಂಬಾಳ ಶಾಂತಮಲ್ಲೇಶನ 'ಗಣವಚನ ರತ್ನಾವಳಿ'ಗೂ ಅನ್ವಯಿಸುತ್ತದೆ.

'ಏಕೋತ್ತರಶತಸ್ಥಲ'ದಲ್ಲಿರುವ ಹಾಡುಗಳು ಶರಣರ ರಚನೆಗಳಲ್ಲವೆಂಬುದನ್ನು ಇನ್ನೊಂದು ಮಗ್ಗುಲದಿಂದ ಪರಿಶೀಲಿಸಬಹುದಾಗಿದೆ. ಷಟ್‌ಸ್ಥಲಗಳ ವ್ಯಾಖ್ಯಾನ ವಿವೇಚನೆಗಳು ಶರಣರ ಕಾಲಕ್ಕೆ ನಡೆದವು. ಒಂದೊಂದು ಸ್ಥಲದಲ್ಲಿ ಉಪಸ್ಥಲಗಳನ್ನು ಕಲ್ಪಿಸುವ ಪ್ರಕ್ರಿಯೆಯೂ ಆವಾಗಲೇ ನಡೆಯಿತು. ಶಾಸ್ತ್ರೀಯ ಜಿಜ್ಞಾಸೆ ಬೆಳೆದಂತೆ ಇಂಥ ಪ್ರಕ್ರಿಯೆ ನಡೆಯುವುದು ಸಹಜ. ಚೆನ್ನಬಸವಣ್ಣ ೧೦೧ ಸ್ಥಲಗಳ

ಬಗ್ಗೆ ಹೇಳಿದ್ದಾನೆ.[೧೦] ಮುಂದಿನ ಶತಮಾನಗಳಲ್ಲಿ ಸ್ಥಲಗಳ ಸಂಖ್ಯೆ ಬೆಳೆಯುತ್ತ ಬಂದಿತು. ಒಂದೊಂದು ಸ್ಥಲಕ್ಕೆ ಒಂದು, ಮೂರು, ಆರು, ಹೀಗೆ ಉಪಸ್ಥಲಗಳನ್ನು ಕಲ್ಪಿಸುತ್ತ ಸ್ಥಲ ಸಂಖ್ಯೆ ಹೆಚ್ಚಿಸುವಲ್ಲಿ ಹೆಮ್ಮೆಪಟ್ಟುಕೊಳ್ಳಲಾರಂಭಿಸಿದರು. ಇಂಥ ಸ್ಥಲ ವಿಭಜನಾ ಕ್ರಮದಲ್ಲಿ ಏಕಾಭಿಪ್ರಾಯವಿಲ್ಲ. ಅವರವರ ಪಾಂಡಿತ್ಯಕ್ಕೆ ತಕ್ಕಂತೆ ಸ್ಥಲಗಳ ಸಂಖ್ಯೆ-ಹೆಸರುಗಳು ಹುಟ್ಟಿಕೊಂಡವು. ಇದೆಲ್ಲ ಕೂದಲು ಸೀಳುವ ಕಾರ್ಯ. ಅನುಭಾವದ ನೆಲೆಯಲ್ಲಿ ರೂಢಿಗೆ ಬಂದ ಮೂಲದ ಷಟ್‌ಸ್ಥಲಗಳಿಗೂ ಪಾಂಡಿತ್ಯದ ಬಳುವಳಿಯಾದ ಈ ಅಸಂಖ್ಯಾತ ಸ್ಥಲಗಳಿಗೂ ಎಲ್ಲಿಂದೆಲ್ಲಿಯ ಸಂಬಂಧ? ಶುಷ್ಕ ಪಾಂಡಿತ್ಯದ ಸೃಷ್ಟಿಯಾಗಿರುವ ಈ ಸ್ಥಲಗಳಿಗೆ ಉದಾಹರಣೆಯಾಗಿ ಶರಣರ ವಚನಗಳನ್ನು ಎಳೆದುಕೊಂಡು ಬಂದು ಜೋಡಿಸಲಾಯಿತು. ಅವುಗಳನ್ನು ತಮ್ಮ ಮೂಗಿನ ನೇರಕ್ಕೆ ಅರ್ಥೈಸಲಾಯಿತು. ಆಗ ವಚನಗಳ ಸಹಜ ಸೃಜನಗುಣ ಸ್ಥಲಗಳ ಗೊಂಡಾರಣ್ಯದಲ್ಲಿ ಅನಾಥವಾಗಿ ಕರಗಿ ಹೋಯಿತು.

ಸ್ಥಲಗಳ ವಿಭಜನಾ ಕ್ರಮದಲ್ಲಿರುವ ವೈವಿಧ್ಯತೆಯನ್ನು ಈ ವಚನ ಸಂಕಲನಗಳಿಂದ ಅರಿತುಕೊಳ್ಳಬೇಕಾಗಿದೆ. (ಕಂಸಿನಲ್ಲಿರುವ ಅಂಕಿ ಸ್ಥಲಗಳ ಸಂಖ್ಯೆ ಸೂಚಿಸುತ್ತದೆ). 'ಲಿಂಗಲೀಲಾ ವಿಲಾಸ ಚಾರಿತ್ರ' (೧೯), 'ಕ್ಷೇತ್ರಜ್ಞ ಸಮನೋವಾದ' (೨೧), 'ಆಚರಣೆಯ ವಚನಗಳು' (೨೮). 'ಲಿಂಗ ಚಿದಮೃತ ಬೋಧೆ' (೩೦), 'ಅದ್ವೈತಾನಂದ ವಚನಗಳು' (೧೬), 'ಗಣಭಾಷಿತ ರತ್ನಮಾಲೆ' (೧೦೧). ಮಹಲಿಂಗದೇವನು ನೂರೊಂದು ಸ್ಥಲಗಳನ್ನು ಕಲ್ಪಿಸಿದ್ದು ಅವನ ಪಾಂಡಿತ್ಯಕ್ಕೆ ಸಾಕ್ಷಿಯಾಗಿದೆ. ೧೫ನೇ ಶತಮಾನದ ಸೃಷ್ಟಿಯಾಗಿರುವ ಈ ನೂರೊಂದು ಸ್ಥಲಗಳಿಗೆ ೧೨ನೇ ಶತಮಾನದ ಶರಣರು ಮುಂಚಿತವಾಗಿಯೇ ಹಾಡು ಬರೆದಿಟ್ಟಿದ್ದರೆಂಬುದನ್ನು ನಂಬಲಿಕ್ಕಾದೀತೇ? ಆದ್ದರಿಂದ ಇವು ಶರಣರ ರಚನೆಗಳಾಗಿರದೆ ಮಹಲ್ಲಿಂಗದೇವನ ರಚನೆಗಳೋ, ಅಥವಾ ಇತರರ ರಚನೆಗಳೋ ಆಗಿರಬೇಕು.

'ಏಕೋತ್ತರ ಶತಸ್ಥಲ'ದಲ್ಲಿರುವ ನೂರೊಂದು ಹಾಡುಗಳಿಗೆ ರಾಗ ನಿರ್ದೇಶನವಿದೆ. ಇಲ್ಲಿ ನೀಡಿರುವ ರಾಗಗಳ ಹೆಸರುಗಳನ್ನು ಪರಿಶೀಲಿಸಿದರೆ ಇನ್ನೊಂದು ಮಹತ್ವದ ಅಂಶ ಕಂಡುಬರುತ್ತದೆ. ಶರಣರ ಕಾಲಕ್ಕೆ ೩೨ ರಾಗಗಳು ಪ್ರಚಾರದಲ್ಲಿದ್ದವು. ಈ ೩೨ ರಾಗಗಳ ಗುಂಪಿಗೆ 'ಮತಂಗ ಮತ' ಎಂದು ಹೆಸರು.[೧೧] ಬತ್ತೀಸ (೩೨) ರಾಗಗಳ ಪ್ರಸ್ತಾಪ ಬಸವಣ್ಣನ ಮತ್ತು ಇತರರ ವಚನಗಳಲ್ಲಿದೆ. ಮಹಲಿಂಗದೇವನು ಹೆಸರಿಸುವ ರಾಗಗಳ ಪಟ್ಟಿಗೂ ಈ ೩೨ ರಾಗಗಳ ಪಟ್ಟಿಗೂ ಹೊಂದಾಣಿಕೆಯಾಗುವುದಿಲ್ಲ. ಮಧು ಮಾಧವಿ, ಮಾಳವಗೌಳ, ಬವುಳಿ, ನಾಟಿ, ಲಳಿತೆ, ಆಹಿರ ಇವು ೩೨ರ ಗುಂಪಿನಲ್ಲಿಲ್ಲದ ಆನಂತರದ ರಾಗಗಳು. ಏಕೋತ್ತರ ಶತಸ್ಥಲದಲ್ಲಿರುವ ಹಾಡುಗಳನ್ನು ನಿಜವಾಗಿಯೂ ಶರಣರೇ ರಚಿಸಿದ್ದರೆ ತಮ್ಮ ಕಾಲದ ೩೨ ರಾಗಗಳಲ್ಲಿಯ

ದ್ದುದು ಆಕಸ್ಮಿಕ. ಅವರ ರಚನೆಗಳಲ್ಲಿ ವೀರಶೈವ ತತ್ವಶಾಸ್ತ್ರದ ವಿವೇಚನೆಯಾಗಲಿ ಉಗ್ರಧರ್ಮಾಭಿಮಾನವಾಗಲೀ ಇಲ್ಲ. ಯೋಗ, ಅನುಭಾವಗಳ ಸಹಜ ನಿರೂಪಣೆ ಇದೆ. ಅಲ್ಲಿಯು ಶಿವನಿಷ್ಠೆ-ದೈವನಿಷ್ಠೆ, ಶರಣನಿಷ್ಠೆ-ಸಜ್ಜನ ನಿಷ್ಠೆ ಅಷ್ಟೇ. 'ಶಿವ' 'ಶರಣ' ಪದಗಳನ್ನು ಬಳಸಿದ ಮಾತ್ರಕ್ಕೆ ಅವರು ವೀರಶೈವರೆನಿಸರು. ಅಂಥವರ ರಚನೆಗಳನ್ನೆಲ್ಲ ಅವರ ಮತದ ಆಧಾರ ಮಾತ್ರದಿಂದ ವೀರಶೈವ ರಾಶಿಗೆ ಸೇರಿಸಿ ಬಿಡುವುದು ಸೂಕ್ತವಲ್ಲ.

ಏಕೆ ಚಿಂತಿಸುತಿರ್ಪೆ ಎಲೆಪಾಪಿ ಮನವೆ ಅ-
ನೇಕ ತೆರದೊಳು ಲಿಂಗವ ಭಜಿಸು ೧೩

ಇಲ್ಲಿ 'ಲಿಂಗವ ಭಜಿಸು' ಎಂಬುದನ್ನು ಗಮನಿಸಬೇಕು. ರಚನಾಕಾರ ಪಕ್ಕಾವೀರ ಶೈವನಾಗಿದ್ದರೆ 'ಲಿಂಗವ ಪೂಜಿಸು' ಎಂದು ಹೇಳುತ್ತಿದ್ದ. ಅವನಿಗೆ 'ಲಿಂಗ' ವೆಂದರೆ ಇಷ್ಟಲಿಂಗವಲ್ಲ ಅದೊಂದು ದೇವರು. ಶ್ರದ್ಧೆಯಿಂದ ದೇವರನ್ನು ಭಜಿಸು ಎಂಬುದು ಇಲ್ಲಿಯ ಉಪದೇಶಾತ್ಮಕ ಧೋರಣೆ. 'ಲಿಂಗ'ದ ಪ್ರಯೋಗ ಮಾತ್ರದಿಂದ ಇದಕ್ಕೆ ವೀರಶೈವತ್ವದ ಮುದ್ರೆಯೊತ್ತಬಹುದೇ ?

ಆರು ವರ್ಣದ ಪಕ್ಷಿಯಿರವ
ಆರೂಢ ಶರಣರು ತಾ ಬಲ್ಲನಲ್ಲರೆಯು ೧೪

ಎಂದು ಹೇಳುವಲ್ಲಿ ಶರಣರನ್ನು ಆರೂಢರನ್ನಾಗಿ ಪರಿಭಾವಿಸಲಾಗಿದೆ. ಆರೂಢರು ವಿಧಿ ನಿಬಂಧನೆಗಳನ್ನು ಮೀರಿದ ಉನ್ಮತ್ತ ಸಾಧಕರು, ವೇದಾಂತಿಗಳು. ಇಂಥ ತತ್ವ-ಸಿದ್ಧಾಂತಿಗಳನ್ನು ವೀರಶೈವರೆಂದು ಕರೆಯಲಾದೀತೆ ?

ಸ್ವರವಚನದ ಭರಾಟೆಯಲ್ಲಿ 'ಹಾಡುಗಬ್ಬ'ವು ಅಪಾರ್ಥಕ್ಕೆಡೆಯಾಗಿದೆ. "ಸ್ಥೂಲ ಅರ್ಥದಲ್ಲಿ ಇದನ್ನು (ಸ್ವರವಚನವನ್ನು) ಹಾಡುಗಬ್ಬ ಎಂದೂ ಕರೆಯಬಹುದು" ಎಂದು ಡಾ. ಎಂ. ಎಂ. ಕಲಬುರ್ಗಿಯವರು ಹೇಳಿದ್ದಾರೆ. ೧೫ ಹಾಡುಗಬ್ಬ ಎಂದರೆ ಹಾಡುವ ಕಾವ್ಯ ಎಂದರ್ಥ. (ಕಬ್ಬ=ಕಾವ್ಯ) ಹೀಗಿರುವಾಗ ಇದನ್ನು ಬಿಡಿ ಹಾಡುಗಳಿಗೆ ಅನ್ವಯಿಸಬಹುದೇ ? ಡಾ ಡಿ. ಎಸ್. ಕರ್ಕಿಯವರು "ಸಾಂಗತ್ಯವು ಹಾಡುಗಬ್ಬ........ಹಾಡುಗಬ್ಬ ಎಂಬ ವರ್ಣನೆಯು ಷಟ್ಪದೀ ಕಾವ್ಯಗಳಿಗಿಂತ ಸಾಂಗತ್ಯ ಕಾವ್ಯಗಳಿಗೆ ಹೆಚ್ಚಾಗಿ ಒಪ್ಪುತ್ತದೆ" ಎಂದು ವಿವರಿಸಿ "ನೇಮಿ ತೀರ್ಥಕರ ಕಥನವ ಪಾಡುಗಬ್ಬದೊಳನುಗೆಯ್ವೆ" (ಸಾಂಗತ್ಯದಲ್ಲಿ ಹೇಳುತ್ತೇನೆ) ಎಂಬ ಉದಾಹ ರಣೆಯೊಂದನ್ನು ನೀಡಿದ್ದಾರೆ.೧೬ ಅಂದಾಗ ಸ್ವರವಚನ ಹಾಡುವ ಕಾವ್ಯ ಹೇಗಾದೀತು ?

ಇತ್ತೀಚೆಗೆ, ತನ್ನಷ್ಟಕ್ಕೆ ತಾನು ಒಂದು ಪರಂಪರೆಯಾಗಿ ಬೆಳೆಯದೇ ಇರುವ ಸ್ವರ ವಚನ ಸಾಹಿತ್ಯದ ವ್ಯಾಖ್ಯೆಯನ್ನು ವಿಸ್ತರಿಸಿ ಏನೆಲ್ಲವನ್ನು ಅದರ ತೆಕ್ಕೆಯೊಳಗೆ ತಂದು

ತುರುಕುವ ಪ್ರಯತ್ನಗಳು ನಡೆದಿವೆ. ಇಂಥವಕ್ಕೆಲ್ಲ "ವೀರಶೈವ ತತ್ವ, ವಸ್ತುಗಳ ನ್ನೊಳಗೊಂಡ ಈ ಸ್ವರ ವಚನಗಳನ್ನು ರಚಿಸುವ ಮತ್ತು ಹಾಡುವ ಪರಂಪರೆಯನ್ನು ಹಳ್ಳಿಗಳಲ್ಲಿ ಈಗಲೂ ವೀರಶೈವರೂ ವೀರಶೈವೇತರರೂ ಮುಂದುವರೆಸಿಕೊಂಡು ಬಂದಿದ್ದಾರೆ"೧೭ ಎಂಬ ತಪ್ಪುತಿಳುವಳಿಕೆಯೇ ಕಾರಣ. ಹಳ್ಳಿಗರು ರಚಿಸಿರುವ ಮತ್ತು ಹಾಡುತ್ತಿರುವ ಹಾಡುಗಳು ಖಂಡಿತವಾಗಿಯೂ ಸ್ವರವಚನಗಳಲ್ಲ. ಅವು ತತ್ವಪದಗಳು. ಮೇಲೆ ಹೇಳಿರುವಂತೆ ತತ್ವಪದಕಾರರು ಧರ್ಮಾತೀತರು. ಸಾಂಸ್ಥಿಕ ಧರ್ಮದ ತತ್ವ-ಸಿದ್ಧಾಂತಗಳಿಗೆ ಹೊರತಾಗಿ ಸರಳ ವೇದಾಂತದ ಪ್ರತಿಪಾದನೆ ತತ್ವಪದಗಳಲ್ಲಿರುತ್ತದೆ. ಲೋಕನೀತಿ, ವಿಡಂಬನೆ, ಮಧುರ ಭಕ್ತಿ, ಗುರು ಮಹಿಮೆ, ಅನುಭಾವ, ಮುಂತಾದ ವಿಷಯಗಳನ್ನು ತತ್ವಪದಗಳು ಒಳಗೊಂಡಿರುತ್ತವೆ. ಈ ತತ್ವಪದದ ಸಾಹಿತ್ಯ ಪ್ರಕಾರ ಜಾತ್ಯಾತೀತವಾದುದು. ಸಾಂಸ್ಥಿಕ ಧರ್ಮಗಳಿಗೆ ಸಮಾನಾಂತರವಾಗಿ ತತ್ವಪದಕಾರರ, ಅವಧೂತ ಆರೂಢರ ಪರಂಪರೆ ಜನಸಮೂಹದಲ್ಲಿ ಜೀವಂತವಾಗಿ ಪ್ರವಹಿಸುತ್ತಿದೆ. ಸಾಂಸ್ಥಿಕ ಧರ್ಮಗಳಂತೆ ಆಡಂಬರ ಪ್ರಚಾರಗಳನ್ನು ಬಯಸದೆ. ಆದರೆ ಅವುಗಳಿಗಿಂತ ಹೆಚ್ಚು ಜನಪ್ರಿಯವಾಗಿರುವ ಇಂಥ ಮುಗ್ಧ ಪರಂಪರೆಗೆ ವೀರಶೈವತ್ವದ ಮುದ್ರೆಯೊತ್ತುವುದು ಅಪರಾಧವಲ್ಲವೇ ? ಜನರು ಹಾಡುವ ಈ ತತ್ವಪದಗಳನ್ನು 'ಸ್ವರವಚನ' ಎಂದು ಪಂಡಿತರು ಕರೆಯುತ್ತಿದ್ದಾರಷ್ಟೇ! ಹಳ್ಳಿಗರು 'ಸ್ವರವಚನ' ಎಂಬ ಪದ ಕೇಳಿ ಅರಿಯರು. ಜನಸಮೂಹದಲ್ಲಿ ಸಹಜ ರೀತಿಯಲ್ಲಿ ಬಳಕೆಯಲ್ಲಿರುವ 'ತತ್ವಪದ'ವನ್ನು ಪಂಡಿತರ ವಿಕೃತ ಸೃಷ್ಟಿಯಾಗಿರುವ 'ಸ್ವರವಚನ' ಆಕ್ರಮಿಸುತ್ತಿರುವುದು ಶೋಚನೀಯ ಸಂಗತಿ.

'ಸ್ವರವಚನ ವಿಚಾರ ಸಂಕಿರಣ ಸಂಪುಟ'೧೮ ದಲ್ಲಿ ಹೈದ್ರಾಬಾದ, ಮುಂಬಯಿ, ಮೈಸೂರು, ಮದ್ರಾಸ್ ಕರ್ನಾಟಕಗಳ ಮೌಖಿಕ ಸ್ವರವಚನಗಳನ್ನು ಕುರಿತು ಪ್ರಬಂಧಗಳಿವೆ. ಇಲ್ಲಿ ಬರಹಕ್ಕಿಳಿಯದೆ ಹಾಡುಗಾರರ ನಾಲಿಗೆಯ ಮೇಲಿರುವ ತತ್ವಪದಗಳೆಲ್ಲ ಮೌಖಿಕ ಸ್ವರವಚನಗಳೆನಿಸಿಕೊಂಡಿವೆ. ಭಜನೆ ಪದಗಳನ್ನೆಲ್ಲ ಶಿಸ್ತಿನಿಂದ ಸ್ವರವಚನಗಳೆಂದು ಕರೆಯುವ ವಿದ್ವಾಂಸರ ಪಾಂಡಿತ್ಯಕ್ಕೆ ಏನೆನ್ನಬೇಕು ? ಇಂಥ ವಿದ್ವಾಂಸರ ಕೈಯಲ್ಲಿ ಕಡಿಕೋಳ ಮಡಿವಾಳಪ್ಪನಂಥ ತತ್ವಪದಕಾರರೂ ಸ್ವರವಚನಕಾರರ ದೀಕ್ಷೆ ಪಡೆದಿದ್ದಾರೆ. ಕೂಡಲರು ಬಸವಲಿಂಗ ಶರಣರ ತತ್ವಪದಗಳನ್ನು ಸಂಪಾದಿಸಿರುವ ಶಾಂತರಸರು "ಅನುಭಾವ ಪದಗಳಿಗೆ ತತ್ವಪದಗಳೆಂದೂ ಕರೆಯುವ ರೂಢಿಯಿದೆ. ಈ ಪದಗಳ ಕೃತಿಗಳಿಗೆ ಕೈವಲ್ಯ ಕೃತಿಗಳೆಂದೂ ಈ ಸಾಹಿತ್ಯಕ್ಕೆ ಕೈವಲ್ಯ ಸಾಹಿತ್ಯವೆಂದೂ ಹೇಳುತ್ತಾರೆ.... ನಮಗೆ ದೊರಕಿದ ಮೂರು ಹಸ್ತಪ್ರತಿಗಳಲ್ಲಿ ಬಸವಲಿಂಗ ಶರಣರ ಪದ್ಯಗಳಿಗೆ "ಬ್ರಹ್ಮ ಚಿಂತಾರತ್ನ ಕೈವಲ್ಯ" ಎಂದು ಕರೆಯಲಾಗಿದೆ.... ಮೂಲತಃ ಇವು ಸ್ವರವಚನಗಳೇ ಆದುದರಿಂದ 'ಕೂಡಲೂರು ಬಸವ

ಲಿಂಗ ಶರಣರ ಸ್ವರವಚನಗಳು' ಎಂಬ ಹೆಸರಿನಿಂದ ಪ್ರಕಟವಾಗುತ್ತಿರುವುದು ಉಚಿತವೇ ಆಗಿದೆ"೧೯ ಎಂದು ಹೇಳಿದ್ದಾರೆ. ಪರಂಪರೆಯಿಂದ ಅನುಭಾವ ಪದ, ಕೈವಲ್ಯ ಸಾಹಿತ್ಯ, ತತ್ವಪದ ಎಂದು ಕರೆಯಲ್ಪಡುತ್ತಿರುವುದು ಗೊತ್ತಿದ್ದರೂ ಕೂ. ಬ. ಶರಣರ ಪದಗಳಿಗೆ 'ಸ್ವರವಚನ'ದ ಮುದ್ರೆ ಒತ್ತಿದ್ದು ಏಕೆ ? ಇದಕ್ಕಿರುವ ಹಿನ್ನೆಲೆ ? ಒತ್ತಡ ?

ಪರಂಪರೆಯಲ್ಲಿ ಎಲ್ಲಿಯೂ ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳದ 'ಸ್ವರವಚನ' ಪ್ರಕಾರಕ್ಕೆ ಪಂಡಿತರು ಉದ್ದೇಶ ಪೂರ್ವಕವಾಗಿ ಪ್ರಚಾರ ನೀಡುತ್ತಿದ್ದಾರೆ.

ಅಡಿಟಿಪ್ಪಣಿಗಳು

೧) ಶಿ ಶಿ ಬಸವನಾಳ-ಕೈವಲ್ಯ ಕಲ್ಪವಲ್ಲರಿ-ಪ್ರಸ್ತಾವನೆ. ಪು ೧೮.
೨) ಡಾ. ವೀರಣ್ಣ ರಾಜೂರ-ಸ್ವರವಚನ ವಿಚಾರ ಸಂಕಿರಣ ಸಂಪುಟ. ಪು. ೭
೩) ಶಿವದಾಸ ಗೀತಾಂಜಲಿ-ಪೀಠಿಕೆ-ಪು ೭೭
೪) ಅದೇ-ಪು. ೮೩
೫) ಅದೇ-ಪು-೬೩
೬) ಗೌರವ (ಭೂಸನೂರಮಠ ಅಭಿನಂದನ ಗ್ರಂಥ) ಪು-೧೭೨
೭) ಶಿವದಾಸ ಗೀತಾಂಜಲಿ-ಪೀಠಿಕೆ-ಪು-೬೮
೮) ಛಂದೋತರಂಗ-ಪು. ೧೬೭
೯) ಬಸವಣ್ಣನವರ ವಚನಗಳು-೪೯೩-ಸಂ. ಡಾ. ಆರ್. ಸಿ. ಹಿರೇಮಠ
೧೦) ಚೆನ್ನಬಸವಣ್ಣನವರ ವಚನಗಳು-೧೪೪೩-ಸಂ-ಡಾ. ಆರ್.ಸಿ, ಹಿರೇಮಠ
೧೧) ಸಂಗೀತರತ್ನ (ಮಲ್ಲಿಕಾರ್ಜುನ ಮನ್ಸೂರ ಅಭಿನಂದನಗ್ರಂಥ-ಪು. ೨೪೯
೧೨) ಗೌರವ-ಪು. ೨೦೬
೧೩) ಶಂಕರದೇವರ ಸ್ವರವಚನಗಳು-ಪು. ೮೦
೧೪) ಗುರುಬಸವಾರ್ಯನ ಸ್ವರವಚನಗಳು-ಪು. ೫೧
೧೫) ಗೌರವ-ಪು. ೨೦೬
೧೬) ಡಾ. ಡಿ.ಎಸ್.ಕರ್ಕಿ-ಛಂದೋವಿಕಾಸ-ಪು. ೨೦೭
೧೭) ಡಾ. ಎಂ.ಎಂ. ಕಲಬುರ್ಗಿ-ಗೌರವ.ಪು-೨೧೨
೧೮) ಪ್ರಕಾಶಕರು, ಜಿ. ಶಿವರಾತ್ರೀಶ್ವರ ಗ್ರಂಥಮಾಲೆ ಮೈಸೂರು-೧೯೯೭
೧೯) ಕೂಡಲೂರು ಬಸವಲಿಂಗ ಶರಣರ ಸ್ವರವಚನಗಳು-ಪ್ರಸ್ತಾವನೆ-೨೭-೨೮.

ಲಂಕೇಶರ 'ಗುಣಮುಖ'

ನಾರಾಯಣಮೂರ್ತಿ ಕೆ.

ಕವಿ, ಕತೆಗಾರ, ಕಾದಂಬರಿಕಾರ ಮತ್ತು ಓದುಗರ ನಡುವೆ ನೇರ ಸಂಪರ್ಕವಿರುವಂತೆ ನಾಟಕಕಾರ ಮತ್ತು ಪ್ರೇಕ್ಷಕನ ನಡುವೆ ಆ ಸಂಬಂಧ ಇಲ್ಲ. ನಾಟಕಕಾರ ಮತ್ತು ಪ್ರೇಕ್ಷಕರ ಸಂವಾದ ಸಾಧ್ಯವಾಗಲು ಅನೇಕ ಕಲೆಗಳು ಮತ್ತು ಕಲೆಗಾರರು ಶ್ರಮಿಸಬೇಕಾಗುತ್ತದೆ. ಅದು ರಸೋತ್ಪತ್ತಿ ಹಾಗೂ ಭಾವನಾಮಯವಾಗಿದ್ದು ರಂಗದಲ್ಲಿ ಪ್ರದರ್ಶನಗೊಂಡು ಪ್ರೇಕ್ಷಕನ ಮೇಲೆ ಪ್ರಭಾವ ಬೀರುವುದರಿಂದಲೇ ನಾಟಕವನ್ನು 'ಸಂಕೀರ್ಣ ಕಲೆ' ಎಂದ ನಮ್ಮ ಹಿರಿಯರು ಅದು ಉಳಿದ ಎಲ್ಲ ಸಾಹಿತ್ಯಕ್ಕಿಂತ ಶ್ರೇಷ್ಠವೆಂದು ಭಾವಿಸಿದರು.

ನಾಟಕ ಮತ್ತು ರಂಗ ಪ್ರಯೋಗ ಇವೆರಡೂ ಪರಸ್ಪರ ಅವಲಂಬಿಸಿವೆ. ನಾಟಕವು ರಂಗಭೂಮಿಯ ಮೇಲೆ ಪ್ರಯೋಗಗೊಂಡಾಗ ರೂಪು ತಾಳಿದ್ದು ರಂಗ ಕೃತಿ. ಇದು ಪ್ರದರ್ಶನದಿಂದ ಪ್ರದರ್ಶನಕ್ಕೆ ವ್ಯತ್ಯಾಸ ಪಡೆಯಬಹುದು. ಆದರೆ ನಾಟಕ ಎಂಬುದರ ರಚನೆಗೆ ನಾಟಕಕಾರನು ಮಾತ್ರ ನಿಮಿತ್ತನಾಗುತ್ತಾನೆ. ನಾಟಕವೆಂಬುದು ರಂಗಭೂಮಿಯ ಸಲುವಾಗಿಯೇ ರಚಿಸಲ್ಪಟ್ಟಿದ್ದರೂ ಅದು ಸಾಹಿತ್ಯದ ಒಂದು ಪ್ರಕಾರವಾಗಿದೆ. ಸಾಹಿತ್ಯದ ನೆಲೆಯಿಂದಲೇ ನಾಟಕವನ್ನು ವಿವೇಚಿಸುವ ಅಧ್ಯಯನಗಳಿಗೆ ಮಹತ್ವವಿದೆ.

ಜನಪದ ರಂಗಭೂಮಿ, ವೃತ್ತಿ ರಂಗಭೂಮಿ ಮತ್ತು ಹವ್ಯಾಸಿ ರಂಗಭೂಮಿ ಎಂಬ ಮೂರು ಪರಂಪರೆಗಳಲ್ಲಿ ಹವ್ಯಾಸಿ ರಂಗಭೂಮಿಯೇ ಕೊನೆಯದು. ಕನ್ನಡ ಹವ್ಯಾಸಿ ರಂಗಭೂಮಿಯು ಆಧುನಿಕ ಕನ್ನಡ ನಾಟಕಗಳ ಫಲವೇ ಹೊರತು ಮತ್ತೇನಲ್ಲ. ಆಧುನಿಕ ಕನ್ನಡ ನಾಟಕದಲ್ಲಿಯೂ ನವೋದಯ ಪ್ರಗತಿಶೀಲ ನವ್ಯಗಳನ್ನು ಗುರುತಿಸಬಹುದು.

ನಾಟಕದಲ್ಲಿ ಐತಿಹಾಸಿಕ ನಾಟಕ, ಸಾಮಾಜಿಕ ನಾಟಕ, ಪೌರಾಣಿಕ ನಾಟಕ ಎಂಬಿತ್ಯಾದಿ ವಿಧಗಳಿವೆ. ನಮ್ಮ ಸುತ್ತಣ ಜಗತ್ತಿನ ಬದುಕು ಮತ್ತು ಕ್ರಿಯೆಗಳನ್ನು ಅನುಕರಿಸು

ವುದೇ ನಾಟಕದ ಗುರಿ. ಆದರೆ ಈ ಅನುಕರಣ ಕಲಾತ್ಮಕವಾದುದು. ಬಹಿರಂಗದ ಅನುಕರಣಕ್ಕಿಂತ ಅಂತರಂಗದ ಅನುಕರಣಕ್ಕೆ ವಿಶೇಷ ಮಹತ್ವವಿದೆ.

ಐತಿಹಾಸಿಕ ನಾಟಕ ಸಂಪ್ರದಾಯಕ್ಕೆ ನವೋದಯರ ಪ್ರಮುಖ ನಾಟಕಕಾರರಾದ ಸಂಸರೇ ಮೊದಲಿಗರು. ಧಾರ್ಮಿಕ ಕ್ಷೇತ್ರದ ನಾಯಕರನ್ನು ಹೊಂದಿರುವ ನಾಟಕಗಳನ್ನು ಪೌರಾಣಿಕ ನಾಟಕಗಳೆಂದೇ ಗುರುತಿಸುತ್ತೇವೆ. ಯಾವುದೇ ಭಾಷೆಯಲ್ಲಿ ಐತಿಹಾಸಿಕ ನಾಟಕಗಳ ಸಂಖ್ಯೆ ಪೌರಾಣಿಕ ಮತ್ತು ಸಾಮಾಜಿಕ ನಾಟಕಗಳಿಗಿಂತ ಕಡಿಮೆಯಾಗಿರುತ್ತದೆ. ಪ್ರತಿಷ್ಠಿತ ವರ್ಗಕ್ಕೆ ಅಸಮಾಧಾನವುಂಟಾಗುವಂತಹ ಐತಿಹಾಸಿಕ ಸಂಗತಿಗಳನ್ನು ಕೆಣಕಿದ ಸಾಹಿತಿ ಆಕ್ಷೇಪಣೆಗೆ ಗುರಿಯಾಗಿ ಶಿಕ್ಷೆ ಅನುಭವಿಸಬೇಕಾಗಿ ಬಂದರೂ ಬರಬಹುದು. ನೀತಿಪರ ಧೋರಣೆಯ ನಾಟಕಕಾರನಿಗೆ ಇತಿಹಾಸವು ಸೊಗಸಾದ ವಸ್ತುಗಳನ್ನು ಒದಗಿಸುತ್ತದೆ. ಇತಿಹಾಸವು ಒದಗಿಸುವ ಸಂಗತಿ ಸತ್ಯಗಳನ್ನು ನಿರಾಕರಿಸುವಂತಿಲ್ಲ. ಇತಿಹಾಸದ ಪಾತ್ರ-ಸನ್ನಿವೇಶಗಳ ಪುನರ್ನಿರ್ಮಾಣದ ಮೂಲಕ ನಾಟಕಕಾರನು ಪ್ರಾಚೀನ ಮೌಲ್ಯಗಳ ಪ್ರಸಾರ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಬಹುದು. ಹಿಂದೆ ನಡೆದಂತಹ ತಪ್ಪುಗಳು ಮುಂದೆ ನಡೆಯದಂತೆ ಎಚ್ಚರವಹಿಸಬೇಕಾದರೆ ಚರಿತ್ರೆಯ ಸ್ಪಷ್ಟ ವಿಮರ್ಶೆಯಾಗಬೇಕು. ಈ ವಿಮರ್ಶೆಯನ್ನು ಐತಿಹಾಸಿಕ ನಾಟಕಕಾರ ಹೆಚ್ಚು ಆಕರ್ಷಕವಾಗಿ ಜೀವಂತವಾಗಿ ತನ್ನ ನಾಟಕಗಳ ಮೂಲಕ ಮಾಡಿಕೊಡುತ್ತಾನೆ. ಆಧುನಿಕ ಸಮಸ್ಯೆಗಳನ್ನು ಚರ್ಚಿಸಲೂ ಐತಿಹಾಸಿಕ ಸಾಮಗ್ರಿಗಳನ್ನು ಬಳಸಿಕೊಳ್ಳುವುದರಿಂದ ವಸ್ತುವಿಗೆ ಸಾರ್ವಕಾಲಿಕತೆಯು ದೊರೆತಂತಾಗಿ ಪ್ರೇಕ್ಷಕನು ಕಾಲ ದೇಶ ನಿಮಿತ್ತವಾದ ಪೂರ್ವಾಗ್ರಹಗಳಿಂದ ಮುಕ್ತನಾಗಿ ನಾಟಕದ ತಿರುಳನ್ನು ಗ್ರಹಿಸಲು ಸಾಧ್ಯವಾಗುತ್ತದೆ.

ಇತಿಹಾಸವು ನಾಟಕಕ್ಕೆ ಸ್ಥೂಲವಾದ ರೇಖಾವಿನ್ಯಾಸವನ್ನು ಮಾತ್ರ ಒದಗಿಸುತ್ತದೆ, ಅದರೊಳಗೆ ಬಣ್ಣ-ಭಾವವನ್ನು ತುಂಬಿ ಸುಂದರವಾದ ವರ್ಣಚಿತ್ರವನ್ನು ಸೃಷ್ಟಿಸುವುದು ಕಲಾವಿದನಾದ ನಾಟಕಕಾರನ ಕೆಲಸವಾಗಿದೆ. ಸಮಕಾಲೀನ ನೆಲೆಯಲ್ಲಿ ಇತಿಹಾಸದ ಸಂಗತಿಗಳನ್ನು ಶೋಧಿಸುವುದೆ ಉತ್ತಮ ಐತಿಹಾಸಿಕ ನಾಟಕದ ಗುರಿ.

ಪ್ರಸ್ತುತ ಲಂಕೇಶರು ರಚಿಸಿದ ಗುಣಮುಖ ಎಂಬ ನಾಟಕವು ಈ ನಿಟ್ಟಿನದಾಗಿದೆ. ಈ ಐತಿಹಾಸಿಕ ನಾಟಕವು ೧೯೯೩ ರಲ್ಲಿ ಕೃತಿರೂಪಕ್ಕೆ ಬಂತು.

ನಾಟಕದ ಹಿನ್ನೆಲೆ ಈ ರೀತಿ ಇದೆ.

"ನಾದಿರ್ ಶಾ ಬದುಕಿದ್ದು ಅಕ್ಟೋಬರ್ ೧೬೮೮ ರಿಂದ ಜೂನ್ ೧೭೪೭ ರ ವರೆಗೆ. ೧೭೩೯ ರಲ್ಲಿ ಹಿಂದುಸ್ತಾನಕ್ಕೆ ಹೊರಟು ೧೭೪೦ ರ ವಸಂತದಲ್ಲಿ ಮೊಗಲ್ ಸೈನ್ಯವನ್ನು ಕರ್ನಾಲ್‌ನಲ್ಲಿ ಧ್ವಂಸ ಮಾಡಿದ,

ಇಲ್ಲಿಗೆ ಬರುವ ಮುನ್ನವೇ ನಾದಿರ್ ದಾಳಿ, ದೊಂಬಿ ಆಕ್ರಮಣದ ಮೂಲಕ ಟರ್ಕಿ ರಷ್ಯ ದೇಶಗಳಲ್ಲಿ ಪ್ರಾಣಭಯ ಹುಟ್ಟಿಸಿ ಪರ್ಶಿಯಾ-ಇರಾನ್ ಸಾಮ್ರಾಜ್ಯ ಕಟ್ಟಿದ್ದ. ಅನಾಮಿಕ ಬುಡಕಟ್ಟೊಂದರಲ್ಲಿ ಜನಿಸಿದ ನಾದಿರ್ ಸೈನಿಕನಾಗಿ ಮುಂದೆ ಬಂದು ಸ್ವಲ್ಪ ಕಾಲ ದೊರೆಯೊಬ್ಬನ ರಕ್ಷಕನಾಗಿದ್ದು ಆಮೇಲೆ ತಾನೇ ಚಕ್ರವರ್ತಿಯಾದ.

ನಾದಿರ್ ೧೭೪೧ ರಲ್ಲಿ ಭಾರತದ ಮೇಲೆ ಅಪ್ಪಳಿಸಿದಾಗ ಮೊಗಲ್ ಮನೆತನ ಶ್ರೀಮಂತವಾಗಿತ್ತು; ಹತ್ತು ಲಕ್ಷಕ್ಕಿಂತ ದೊಡ್ಡದಾಗಿದ್ದ ಸೈನ್ಯವಿತ್ತು. ಆದರೆ ಸುಖ ಸಂಪತ್ತಿನಿಂದಾಗಿ ಬಾಬರ್, ಅಕ್ಬರ್‌ನಲ್ಲಿದ್ದ ಕೆಚ್ಚಿನ ಅಭಾವದಿಂದಾಗಿ ದೊರೆಯಾಗಿದ್ದ ನಜಿರುದ್ದೀನ್ ಶಾ ಮೇಣದ ಬೊಂಬೆಯಂತಾಗಿದ್ದ; ಮೊಗಲ್ ವೈಭವ ಪೊಳ್ಳಾಗಿತ್ತು. ದಿವಾನರುಗಳಲ್ಲಿ ಪಿತೂರಿ ಸಣ್ಣತನವಿತ್ತು. ಮರಾಠರು ಮೊಗಲ್ ಸಾಮ್ರಾಜ್ಯವನ್ನು ಸ್ವಲ್ಪಸ್ವಲ್ಪವಾಗಿ ಕಿತ್ತು ತಿನ್ನುತ್ತಿದ್ದರು.

ಮೂಡುತ್ತಿದ್ದ ನಾದಿರ್, ಮುಳುಗುತ್ತಿದ್ದ ಮೊಗಲ್ ದೊರೆ-ಇವರ ನಡುವೆ ಯಾವುದೇ ಸಮಾನ ಅಂಶಗಳಿರಲಿಲ್ಲ.

ಯುದ್ಧದ ತಂತ್ರ ಮತ್ತು ಕಾರ್ಯಾಚರಣೆಯಲ್ಲಿ ನಿಷ್ಣಾತವಾಗಿದ್ದ ನಾದಿರ್ ಯುದ್ಧ ತರುತ್ತಿದ್ದ ಸುಖ ಮತ್ತು ಸಂಪತ್ತಿಗಿಂತ ಹೆಚ್ಚಾಗಿ ಯುದ್ಧದ ಕ್ರೌರ್ಯದಿಂದ ರೋಮಾಂಚನಗೊಳ್ಳುತ್ತಿದ್ದ; ಆಡಳಿತ ಮತ್ತು ಪ್ರಜೆಗಳ ನೆಮ್ಮದಿಯ ಬಗ್ಗೆ ಎಂದೂ ಗಮನ ಕೊಡದಷ್ಟು ತಾಳ್ಮೆಗೆಟ್ಟ ನಾದಿರ್ ಮನುಷ್ಯನ ಸೋಗಲಾಡಿತನ, ಸುಳ್ಳು ಮತ್ತು ಮೋಸ ಕಂಡು ಬೆಂಕಿಯಾಗುತ್ತಿದ್ದ; ಮೊಗಲ್ ಆಸ್ಥಾನ ಅವನ ಅನುಮಾನ, ರೊಚ್ಚು ಕೆರಳಿಸುತ್ತಿತ್ತು. ಎಂದೂ ಒಂದು ಕಡೆ ನಿಲ್ಲದಿದ್ದ ನಾದಿರ್ ಹಿಂದೂಸ್ತಾನದ ಸಂಪತ್ತು ಮತ್ತು ಅರಾಜಕತೆ ಕಂಡು ಕ್ಷಣ ಇಲ್ಲಿ ಇದ್ದುಬಿಡಲು ಯೋಚಿಸಿದ. ಪರ್ಶಿಯಾಕ್ಕೆ ಹಿಂದಿರುಗುವ ಆಶೆ ಮತ್ತು ಇಲ್ಲಿ ತಂಗುವ ಚಪಲ, ತನ್ನ ವೀರ್ಯವತ್ತಾದ ಪಡೆ ಮತ್ತು ಇಲ್ಲಿಯ ನಿರ್ವೀರ್ಯ ಕುತಂತ್ರ ಕಂಡು ತನ್ನ ಖಡ್ಗದ ಮೂಲಕ ಅಸ್ತಿತ್ವ ಕಂಡುಕೊಳ್ಳುತ್ತ ದೈಹಿಕವಾಗಿ, ಮಾನಸಿಕವಾಗಿ ಅಸ್ವಸ್ಥನಾದ.

ಈ ನಾಟಕದಲ್ಲಿ ಬರುವ ಹಕೀಮ ನಾದಿರ್‌ನನ್ನು ಆಕಸ್ಮಿಕವಾಗಿ ಆತನ ಆಳವ ನರಕದಿಂದ ಹೊರತಂದ. ಆದರೆ ನಾದಿರ್ ಆರಿಸಿಕೊಂಡಿದ್ದು ಕಷ್ಟದ ಒಬ್ಬಂಟಿ ದಾರಿ. ಹಿಂದೂಸ್ತಾನದಿಂದ ಹಿಂತಿರುಗಿದ ಮೇಲೆ ನಾದಿರ್ ತನ್ನ ಸಾಮ್ರಾಜ್ಯವನ್ನು ಇನ್ನಷ್ಟು ವಿಸ್ತರಿಸಿದ. ಹಾಗೆಯೇ ಇನ್ನಷ್ಟು ರೋಗಗ್ರಸ್ತನಾದ.

೧೭೪೭ರ ಹೊತ್ತಿಗೆ ನಾದಿರ್ ವಿರುದ್ಧ ನೈಸರ್ಗಿಕ, ಮನುಷ್ಯ ಶಕ್ತಿಗಳು ಒಗ್ಗಟ್ಟಾಗಿ ನಿಂತಿದ್ದವು. ನಾದಿರ್‌ನ ಸೈನಿಕರೇ ಅವನನ್ನು ಕೊಂದುಹಾಕಿದರು."

ನಾದಿರ್‌ನ ಈ ವಿಚಿತ್ರ ದ್ವಿಜಯುವ ಸೋಲಿನ ಜೀವನದಲ್ಲಿ ಲೇಖಕರ ಮನಸ್ಸು ಸೆಳೆದದ್ದು ಆತನ ಅನುಮಾನ, ನಿಷ್ಠುರತೆ ಮತ್ತು ಕಾಯಿಲೆ; ಘಟನಾವಳಿಗಳು ಮತ್ತು ಮನುಷ್ಯರ ದ್ವಂದ್ವಗಳು ನಾದಿರ್‌ನನ್ನು ರಸಾತಳಕ್ಕೆ ತಳ್ಳಿದರೂ ಆತ ಎದ್ದು ಬರುವ ರೀತಿ; ಮತ್ತು ಸತ್ಯ ಮತ್ತು ಸುಳ್ಳು ಒಬ್ಬ ಸ್ವಪ್ರತಿಷ್ಠನನ್ನು ಸ್ಪರ್ಶಿಸುವ ಬಗೆ.

ಈ ನಾಟಕವನ್ನು ರಚಿಸಿದ ಲಂಕೇಶರು ನಾಟಕಕ್ಕೆ 'ಗುಣಮುಖ' ಎಂಬ ಶಿರೋನಾಮೆಯನ್ನಿತ್ತಿದ್ದಾರೆ. ಈ ನಾಟಕವು ಐತಿಹಾಸಿಕವಾಗಿದ್ದು ನಾದಿರ್‌ಶಾನ ಜೀವನದ ಒಂದು ಘಟನೆಯನ್ನು ಮಾತ್ರ ವಿವರಿಸುತ್ತದೆ. ದೈಹಿಕವಾಗಿ ಮತ್ತು ಮಾನಸಿಕವಾಗಿ ಅಸ್ವಸ್ಥನಾದ ನಾದಿರ್‌ನು ತನ್ನ ರೋಗವನ್ನು ಗುಣಪಡಿಸಲು ಹವಣಿಸುವನು. ನಾಟಕದ ಪ್ರಾರಂಭದಲ್ಲಿಯೇ ರೋಗಗ್ರಸ್ತನಾದ ನಾದಿರ್‌ನು ಕೃತಿಯ ಅಂತ್ಯದವರೆಗೂ ರೋಗವನ್ನು ಗುಣಪಡಿಸಲು ಪ್ರಯತ್ನಿಸಿ ಅಲಿಖಾನ್‌ನ ಮುಖಾಂತರ ರೋಗದಿಂದ ಮುಕ್ತಿ ಹೊಂದುವನು. ನಾಟಕದುದ್ದಕ್ಕೂ ನಾದಿರ್‌ನು ರೋಗದಿಂದ ಗುಣಮುಖನಾಗಲು ಕಾರ್ಯ ನಿರ್ವಹಿಸುವುದರಿಂದ ಈ ನಾಟಕ ಕೃತಿಗೆ ಲೇಖಕರಿತ್ತ ಶಿರೋನಾಮೆಯು ಸಮರ್ಪಕವಾಗಿಯೇ ತೋರುವುದು.

ಸುಲೇಮಾನ್ ತನ್ವೀರ್ ಒಬ್ಬ ಪುಕ್ಕಲು ಮನುಷ್ಯನಾಗಿದ್ದವನು ಒಮ್ಮೆ ಕೆಲವು ಹಿಂದುಸ್ತಾನೀ ಹುಡುಗರೊಂದಿಗೆ ಶಿಕಾರಿಗೆ ಹೋದವನು ಒಂದೇ ದಿನದಲ್ಲಿ ವೀರಾಧಿವೀರನಾದನು. ತನ್ನ ಹೇಡಿತನವನ್ನು ಅರಿತ ಈತನ ಪುಕ್ಕಲು ಮನೋಭಾವನೆ ಗುಣಮುಖವಾದಂತೆ ಭಾಸವಾಗುವುದರಿಂದ ಇಂತಹ ಕಡೆ ಕೂಡ ಈ ಕೃತಿಗೆ ಗುಣಮುಖ ಎಂಬ ಶೀರ್ಷಿಕೆ ಸಾರ್ಥಕ.

ನಜಿರುದ್ದೀನ್‌ನು ನಾದಿರ್‌ನಲ್ಲಿ "ನಮ್ಮ ಗೌರವ ಅರ್ಪಿಸಲು ಬಂದೆ" "ನನ್ನ ನಿಷ್ಠೆಯಲ್ಲಿ ತಾವು ನಂಬಿಕೆ ಇಡಬೇಕು" ಎನ್ನುತ್ತಾ ನಾದಿರ್‌ನಿಗೆ ಸೇರಬೇಕಾದ ನಾಲ್ಕು ಕೋಟಿಯನ್ನು ಕೊಟ್ಟು ಪ್ರಾಮಾಣಿಕನಾಗಿ ವರ್ತಿಸಿ ಸರಿಯಾದ ಹಕೀಮನನ್ನೇ ಗೊತ್ತು ಮಾಡುವನು. ತನ್ನ ತಪ್ಪನ್ನು ತಿದ್ದಿ ತಾನು ನಿಷ್ಠೆಯಿಂದ ಕಾರ್ಯ ನಿರ್ವಹಿಸುವನು. ಅವನು ಮುಲ್ಕ್‌ನಲ್ಲಿ ಹೇಳುವ "ನಿಮ್ಮ ಈ ತಂತ್ರ ನನಗೆ ಇಷ್ಟವಾಗುತ್ತಿಲ್ಲ" "ನಾದಿರ್ ಅವರನ್ನು ಉಳಿಸಬೇಕಾದ್ದು ನಮ್ಮ ಕರ್ತವ್ಯ" "ದೇಶದ ದಿವಾನ ಕಳ್ಳತನಕ್ಕಿಳಿಯಬಾರದು" ಎಂಬಿತ್ಯಾದಿ ಮಾತುಗಳು ನಜಿರುದ್ದೀನನು ನಿಷ್ಠೆಯಿಂದ ಕಾರ್ಯ ನಿರ್ವಹಿಸುವನು ಎಂಬುದನ್ನು ಸೂಚಿಸುವುದು. ಆತ್ಮವಂಚನೆ ಮಾಡದೆ ನೀತಿಯುತವಾಗಿ ಕರ್ತವ್ಯವನ್ನರಿತು ತನ್ನ ತಪ್ಪನ್ನು ತಿದ್ದಿ ಕಾರ್ಯ ನಿರ್ವಹಿಸುವುದರಿಂದ ಇಂತಹ ಕಡೆ ಕೂಡ ನಾಟಕಕ್ಕೆ ಲೇಖಕರಿತ್ತ ಹೆಸರು ಸಾರ್ಥಕ ಎಂಬುದು ಮನದಟ್ಟಾಗುತ್ತದೆ.

ಯುದ್ಧ ತಂತ್ರ ಮತ್ತು ಕಾರ್ಯಾಚರಣೆಯಲ್ಲಿ ನಿಷ್ಣಾತನಾಗಿದ್ದ ನಾದಿರ್‌ನು ಯುದ್ಧ ತರುತ್ತಿದ್ದ ಸುಖ ಮತ್ತು ಸಂಪತ್ತಿಗಿಂತ ಹೆಚ್ಚಾಗಿ ಯುದ್ಧ ಶೌರ್ಯದಿಂದ ರೋಮಾಂಚನಗೊಳ್ಳುತ್ತಿದ್ದನು. ಆಡಳಿತ ಮತ್ತು ಪ್ರಜೆಗಳ ನೆಮ್ಮದಿಯ ಬಗ್ಗೆ ಎಂದೂ ಗಮನ ಕೊಡದ ನಾದಿರ್‌ನು ಸಾದತ್‌ಖಾನ್ ಮತ್ತು ನಿಜಾಮ್-ಉಲ್-ಮುಲ್ಕ್‌ರನ್ನು ಕೊಲ್ಲುವನು. ಪ್ರತಿಯೊಬ್ಬರನ್ನೂ ಅನುಮಾನಿಸುವನು. ಒಟ್ಟು ಗೊಂದಲ ಪರಿಸ್ಥಿತಿ ಉಂಟಾದಾಗ ಆತನ ರೋಗ ಉಲ್ಬಣವಾಗುವುದು. ಆದರೂ ಕೋಹಿನೂರು ವಜ್ರ ಮತ್ತು ಮಯೂರ ಸಿಂಹಾಸನವನ್ನು ಬಯಸುವನು. ಕಡೆಗೂ ತನ್ನ ವೀರ್ಯ ವತ್ತಾದ ಪಡೆ ಮತ್ತು ಇಲ್ಲಿಯ ನಿರ್ವೀರ್ಯ ಕುತಂತ್ರ ಕಂಡು ತನ್ನ ಖಡ್ಗದ ಮೂಲಕ ಅಸ್ತಿತ್ವ ಕಂಡುಕೊಳ್ಳುತ್ತ ದೈಹಿಕವಾಗಿ ಮಾನಸಿಕವಾಗಿ ಅಸ್ವಸ್ಥನಾದ. ನಾಟಕದಲ್ಲಿ ಬರುವ ಹಕೀಮ ಅಲಾವಿಖಾನನು ನಾದಿರ್‌ನನ್ನು ಆಕಸ್ಮಿಕವಾಗಿ ಆತನ ಆಳದ ನರಕದಿಂದ ಹೊರತಂದನು. ಇದು ನಾಟಕದ ತಿರುಳು.

*

ಐತಿಹಾಸಿಕ ನಾಟಕಗಳನ್ನು ಬರೆದವರೆಂದರೆ ಸಂಸ, ಎಂ. ಆರ್. ಶ್ರೀ, ಡಿ.ವಿ.ಜಿ, ಕುವೆಂಪು, ಮಾಸ್ತಿ, ಶ್ರೀರಂಗ, ಗಿರೀಶ್ ಕರ್ನಾಡ ಮುಂತಾದವರು. ಸಂಖ್ಯೆಯ ದೃಷ್ಟಿಯಿಂದ ಐತಿಹಾಸಿಕ ನಾಟಕಗಳು ಪೌರಾಣಿಕ ಇಲ್ಲವೆ ಸಾಮಾಜಿಕ ನಾಟಕಗಳಿಗಿಂತ ಕಡಿಮೆಯಿರಬಹುದಾದರೂ ಗುಣದ ದೃಷ್ಟಿಯಿಂದಲ್ಲ. ಆಧುನಿಕ ಕನ್ನಡ ನಾಟಕ ಸಾಹಿತ್ಯದಲ್ಲಿ ಶ್ರೇಷ್ಠ ಕೃತಿಗಳೆಂದು ಹೆಸರಿಸಬೇಕಾದ ಕೆಲವೇ ನಾಟಕಗಳಲ್ಲಿ 'ವಿಗಡವಿಕ್ರಮರಾಯ,' 'ಕಾಕನಕೋಟೆ,' 'ತುಘಲಕ್,' 'ಸಂಕ್ರಾಂತಿ' ಮತ್ತು 'ಗುಣಮುಖ'ದಂತಹ ಕೃತಿಗಳನ್ನು ಅಗ್ರ ಪಂಕ್ತಿಯಲ್ಲಿ ಸೇರಿಸಬೇಕಾಗಬಹುದು.

ಐತಿಹಾಸಿಕ ಸಾಮಗ್ರಿಯ ಮೂಲಕ ಮನುಷ್ಯನ ಸಾರ್ವಕಾಲಿಕ ಅನುಭವಕ್ಕೆ ರೂಪು ಕೊಡಲು ಹವಣಿಸಿದ ಈ ನಾಟಕ ಆಧುನಿಕ ಕನ್ನಡ ರಂಗಭೂಮಿಯ ಪ್ರಗತಿಯಲ್ಲಿ ಒಂದು ಮಹತ್ವದ ಸಾಧನೆಯಾಗಿ ಪರಿಣಮಿಸಿದೆ. ನಾದಿರ್‌ಶಾನ ಕಥೆಯ ಐತಿಹಾಸಿಕ ಸಂದರ್ಭವನ್ನು ಆಧುನಿಕ ನೆಲೆಯಲ್ಲಿ ಪರಿಶೋಧಿಸುವ ಈ ಕೃತಿ ಮಾನವ ಸ್ವಭಾವದ ಸಂಕೀರ್ಣತೆಯನ್ನು ನಾಟಕೀಕರಿಸುವ ವಿಧಾನ ಅಸಾಧಾರಣವಾಗಿದೆ.

ಐತಿಹಾಸಿಕವಾಗಿ ನಾದಿರ ಚಕ್ರವರ್ತಿಯಾಗಿದ್ದನು. ಲಂಕೇಶರ ನಾದಿರ್ ಸಂವೇದನಾಶೀಲ ವ್ಯಕ್ತಿ ಒಮ್ಮೊಮ್ಮೆ ಮನೋವಿಕಾರವೆನ್ನಿಸುವಂತಹ ಇವನ ನಡವಳಿಕೆ ಸಾಮಾನ್ಯ ಜನತೆಗೆ ಹುಚ್ಚನಂತೆಯೂ ಕಂಡುಬಂದಿದೆ. ಇದೊಂದು ರೀತಿಯ ದೈವಿಕ ಹುಚ್ಚು ತನ್ನ ಸತ್ತ್ವಣ ಪರಿಸರದಿಂದ ಪ್ರತ್ಯೇಕಗೊಂಡು ಒಂಟಿಯಾಗುವ ನಾದಿರ್‌ನ ದುರಂತ ಎಲ್ಲ ಮಹಾನ್ ಆದರ್ಶವಾದಿಗಳಿಗೂ ಒದಗುವಂತಹುದು.

ನಾಯಕನ ಆದರ್ಶ ವಾಸ್ತವ ರೂಪು ಹೊಂದಲು ಸುತ್ತಣ ಪರಿಸರ ಹದವಾಗಿರ
ಬೇಕು. ಪರಿಸರದ ಜಡತೆಯಿಂದಾಗಿ ಎಂಥ ನಾಯಕನೂ ಕೊನೆಗೆ ನಾದಿರ್‌ನಂತೆ
ಕ್ರೂರಿಯಾಗಿ ಸ್ವಮಗ್ನನಾಗಿ ಸದಾ ತನ್ನ ಅಧಿಕಾರವನ್ನು ಹಾಗೂ ಆರೋಗ್ಯವನ್ನು
ಕಾಪಾಡಿಕೊಳ್ಳುವುದರಲ್ಲಿ ಮುಕ್ತಾಯ ಹೊಂದುತ್ತಾನೆ. ರಾಜಕೀಯವಾಗಿ ಸಂಭವಿ
ಸುವ ಈ ಬಗೆಯ ಘೋರ ದುರಂತವೊಂದನ್ನು ನಾದಿರ್‌ನ ಮೂಲಕ ನಾಟಕ ನಮ್ಮ
ಮುಂದಿಡುತ್ತದೆ. ನಾಟಕದ ಆರಂಭದಿಂದಲೂ ನಾದಿರ್‌ನ ಆದರ್ಶ ಸುಧಾರಣೆಗ
ಳನ್ನೆಲ್ಲ ತಮ್ಮ ಕುಟಿಲವಾದ ಒಳಮಾರ್ಗಗಳಿಂದ ನಿರರ್ಥಕಗೊಳಿಸಿ ವಿಜೃಂಭಿಸಲು
ಪ್ರಯತ್ನಿಸುವ ಸಾದತ್‌ಖಾನ್, ಮುಲ್ಕ್ ಮುಂತಾದವರು ಕೇವಲ ದಿವಾನರಾಗಿದ್ದು
ಪರಿಸರದ ಕಠೋರ ವಾಸ್ತವವನ್ನು ಪ್ರತಿನಿಧಿಸುತ್ತಿದ್ದಾರೆ.

ಸಾದತ್‌ಖಾನ್ ನಾದಿರ್‌ನಿಗೆ ಕಾಗದ ಬರೆಯುವನು. ಇದು ಪರೋಕ್ಷವಾಗಿ ನಿಮ್ಮ
ದೊರೆಯನ್ನು ಕೆಳಗಿಳಿಸಲು ಬನ್ನಿ ಎಂದು ಆಹ್ವಾನಿಸಿದ ಪತ್ರ. ಈ ಓಲೆಯನ್ನು
ಬರೆದ ಉದ್ದೇಶವೇನು ? ಎಂದು ನಾದಿರ್ ಕೇಳಿದಾಗ ಸಾದತ್‌ನು ನಕ್ಕು "ಎಂಥ
ಮಹಾನ್ ಜ್ಞಾಪಕಶಕ್ತಿ ತಮ್ಮದು. ನನಗೇ ನೆನಪಾಗುತ್ತಿಲ್ಲ. ಬರೆದದ್ದು ನಿಜವೇ
ಎಂದು ಇಟ್ಟುಕೊಂಡರೂ ಅದಾದ ಮೇಲೆ ಯಮುನಾ ನದಿಯಲ್ಲಿ ಅಪಾರ ನೀರು
ಹರಿದಿದೆ." ಎಂದ ಮಾತು ಮತ್ತು "ರಾಜತಂತ್ರ ಇಲ್ಲಿ ಜಟಿಲವಾಗಿ ಬೆಳೆದಿದೆ ಪ್ರಭು.
ಇಲ್ಲಿಯ ಜನ ಹೇಳುತ್ತಾರೆ ಒಂದು ಮದುವೆ ಮಾಡಲು ಸಾವಿರ ಸುಳ್ಳು ಹೇಳ
ಬಹುದು ಒಬ್ಬ ದೊರೆಯನ್ನು ಕಾಪಾಡಲು ನೂರಾರು ತಂತ್ರ ಹೂಡಬಹುದು."
ಎಂಬ ಮಾತಂಗಳು ಸಾದತ್‌ಖಾನ್ ಎಂತಹ ಮಹಾನ್ ಕಪಟಿ ರಾಜಕಾರಣಿ ಎಂಬು
ದನ್ನು ಎತ್ತಿ ತೋರಿಸುತ್ತದೆ. ಹಾಗೂ ನಜಿರುದ್ದೀನ್‌ನು ಬಾಲಿಮಾನ್ ಪಟ್ಟಣದ
ಅಲಾವಿಖಾನ್‌ನನ್ನು ಹಕೀಮನನ್ನಾಗಿ ಗೊತ್ತುಮಾಡಿದುದು ಮುಲ್ಕ್‌ನಿಗೆ ತಿಳಿದಾಗ
ಅವನು "ನಮ್ಮ ಕೊನೇ ಪ್ರಯತ್ನಕ್ಕೂ ಕಲ್ಲು ಹಾಕಬೇಡಿ. ನಮ್ಮ ಕಷ್ಟವನ್ನರಿತ
ವೈದ್ಯ ಮಾತ್ರ ನಾದಿರ್‌ಶಾನ ಉಪಟಳದಿಂದ ನಮ್ಮನ್ನು ಉಳಿಸಬಲ್ಲ. ನಾದಿರ್‌ಶಾ
ಈಗ ಕೇವಲ ರೋಗಿಯಲ್ಲ, ಸನ್ನಿಪಾತ ಹಿಡಿದ ಹುಚ್ಚ, ಆತನನ್ನು ಮುಗಿಸಬೇಕು."
ಎಂದು ನೇರವಾಗಿ ಹೇಳಿ ತನ್ನ ಇಚ್ಛೆಯನ್ನು ತಿಳಿಸುವನು. ನೇರವಾಗಿ ಹೇಳಿದ ಈ
ಮಾತುಗಳಿಂದಾಗಿ ಮುಲ್ಕ್‌ನ ಮನೋಭಾವನೆ ಎಂತಹುದು ಎಂಬುದು ನಮಗೆ ಮನ
ದಟ್ಟಾಗುವುದು. ಇವು ಸಮಕಾಲೀನವಾಗಿಯೂ ಈಗಿನ ರಾಜಕಾರಣಿಗಳೂ ಇದೇ
ರೀತಿಯವರೆಂಬಂತೆ ಭಾಸವಾಗುವುದು. ಇಂತಹ ಕಡೆ ಲೇಖಕರು ಆಧುನಿಕ ರಾಜ
ಕಾರಣಿಗಳ ನೈಜ ಚಿತ್ರಣವನ್ನು ನಾಟಕದ ಮೂಲಕ ನಮ್ಮ ಮುಂದಿಡಲು ಪ್ರಯತ್ನಿ
ಸಿದುದು ಸ್ಪಷ್ಟವಾಗಿ ಗೋಚರಿಸಲ್ಪಡುತ್ತವೆ.

ಈ ನಾಟಕದ ಜಗತ್ತು ನಾಯಕನ ಜಗತ್ತು. Hero ಜಗತ್ತು. ಈ ನಾಯಕನಿಗೆ ಲೌಕಿಕದಲ್ಲಿ ಸೋಲು ಕಟ್ಟಿಟ್ಟದ್ದು. ಆದರೆ ಈತನ ಸೋಲಿನಲ್ಲಿ ಒಂದು ರೀತಿಯಲ್ಲಿ ಅಲೌಕಿಕ ಸೌಂದರ್ಯವಿದೆ ಎಂದು ತೋರಿಸುವ ಪ್ರಯತ್ನ ನಾಟಕಕಾರರದು. ಈ ಸೋಲಿಗೆ ಕಾರಣ ನಾಯಕನಿಗೂ ಆತನ ಪರಿಸರಕ್ಕೂ ನಡುವೆ ಏರ್ಪಟ್ಟ ಸಂವಾದ ರಹಿತ ಪರಿಸ್ಥಿತಿ. ಆಳದಲ್ಲಿ ಒಂಟಿಯಾಗಿಯೂ ಉಳಿದಿದ್ದ ಚಕ್ರವರ್ತಿ ನಾದಿರ್‌ನು ತನ್ನ ಮನಸ್ಸು ತೆರೆದು ಮಾತನಾಡುವುದು ಸ್ವಗತಗಳಲ್ಲಿ ಎಂದು ಭಾಸವಾಗುವಂತಿದೆ.

ನಾದಿರ್‌ನ ಸ್ವಗತಗಳು ಈ ನಾಟಕದ ಶ್ರೇಷ್ಠ ಸಂಭಾಷಣಾ ತುಣುಕುಗಳು. ಉದಾಹರಣೆಗೆ ಅಲಾವಿಖಾನ್‌ನು "ಕಾಡು ಹರಟೆ ನನಗೆ ಬೇಕಿಲ್ಲ. ವ್ಯರ್ಥವಾಗಿ ಇಲ್ಲಿದ್ದು ವೇಳೆ ಕಳೆಯ ಬಾರದೆ ದಯವಿಟ್ಟು ಸಹಕರಿಸಿ ನಿಮ್ಮ ಕಾಯಿಲೆ ನನಗೆ ಸವಾಲು." ಎಂದಾಗ ನಾದಿರ್‌ನು "ಹೇಗೆ ಸಹಕರಿಸಲಿ" ? ಎಂದು ಕೇಳಿ ಕ್ರಮೇಣ ಮಗುವಿನಂತೆ ಸಹಕರಿಸತೊಡಗುವನು. ಇಲ್ಲಿಂದ ಮುಂದೆ ಕೃತಿಯು ಕೊನೆಯುವರೆಗೂ ಇವರೀರ್ವರ ಸಂಭಾಷಣೆಗಳಲ್ಲಿ ನಾದಿರ್‌ನ ಮಾತುಗಳೆಲ್ಲವೂ ಸ್ವಗತದಂತೆ ಗೋಚರಿಸಲ್ಪಡುತ್ತದೆ. ಅಲ್ಲಿಯ ಮಾತುಗಳು, ಸಂಕೇತಗಳು, ಅಸ್ಪಷ್ಟ ನುಡಿಗಳು ನಾಟಕದ ಉಜ್ವಲತೆಯನ್ನು ಹೆಚ್ಚಿಸಿವೆ. ಅಪ್ರತಿಮ ಭಾಷಣಕಾರನಾಗಿ ಪ್ರಾಮಾಣಿಕ ಆತ್ಮನಿಷ್ಠ ವ್ಯಕ್ತಿಯಾಗಿ ನಾದಿರ್‌ನನ್ನು ಈ ಸ್ವಗತಗಳು ಪ್ರತಿಬಿಂಬಿಸುತ್ತಿವೆ. ಈ ಸ್ವಗತಗಳ ಮೂಲಕ ಮನುಷ್ಯನ ಕ್ರಿಯೆಗೂ ಮತ್ತು ವಿಧಿಯ ನಿಯತಿಗೂ ನಡುವೆ ಇರುವ ದ್ವಂದ್ವವನ್ನು ನಾಟಕಕಾರರು ಮುಂದಿಡುತ್ತಾರೆ.

ವಿಧಿಯ ಆಟದ ಗೊಂಬೆಯಾದ ವ್ಯಕ್ತಿಗೆ ಸ್ವತಂತ್ರ ಅಸ್ತಿತ್ವವಿಲ್ಲ. ನಾದಿರ್‌ನಿಗೆ ತನ್ನ ಆರೋಗ್ಯ ಕೆಟ್ಟಮೇಲೆ ತನ್ನ ಅಸ್ತಿತ್ವವನ್ನು ಹಿಂಸೆಯ ಮೂಲಕ ಸ್ಥಾಪಿಸಿಕೊಳ್ಳುವ ಅನಿವಾರ್ಯತೆಯೊದಗುತ್ತದೆ. ಗ್ರೀಕ್ ರುದ್ರನಾಟಕಗಳ ನಾಯಕರಂತೆ ಪ್ರತಿಕೂಲ ಪರಿಸ್ಥಿತಿಯೊಡನೆ ಹೋರಾಡುವ ನಾದಿರ್‌ಶಾನ ಹೋರಾಟದಲ್ಲಿ ಅಪ್ರತಿಹತವಾದ ಕ್ರೌರ್ಯವಿದೆ. ಸರ್ವಾಧಿಕಾರಿಯ ಪ್ರಜಾಪೀಡಕ ಹಿಂಸೆಯಿದೆ. ಸಾದತ್‌ಖಾನ್ ಮತ್ತು ನಿಜಾಮ್-ಉಲ್-ಮುಲ್ಕ್‌ರನ್ನು ಆತನು ಕೊಲ್ಲುವ ಹಿಂಸಾ ಪ್ರವೃತ್ತಿ ಮತ್ತು ಕಾಯಿಲೆಗೆ ಪ್ರೇಮವೇ ಮದ್ದೆಂದು ಮೂವರು ಸ್ತ್ರೀಯರಿಗೆ ತನ್ನ ಪುರುಷತ್ವವನ್ನು ತೋರಿಸಿದ ನಾದಿರ್‌ನಿಗೆ ಇಂತಹ ಸಂದರ್ಭದಲ್ಲಿ ಆತ್ಮ ಹಿಂಸೆಯ ಘಾತುಕತನವಿದೆ. ಇಂತಹ ಸಂದರ್ಭಗಳಲ್ಲಿ ವ್ಯಕ್ತವಾಗುವ ಆತನ ಮನಸ್ಸು ಮನೋವಿಕಾರಕ್ಕೆ ಸಮೀಪವಾದುದು. ಆದರೆ ಈ ಸನ್ನಿವೇಶಗಳ ಕಲ್ಪನೆ ಉಜ್ವಲವಾಗಿದ್ದು ಪಾತ್ರದ ಅಂತರಂಗವನ್ನು ಬಿಚ್ಚಿ ತೋರಿಸುತ್ತದೆ. ನರಗಳನ್ನು ಉದ್ರೇಕಿಸುವ ಆತನ ಕ್ರೌರ್ಯ ಮತ್ತು ಕರುಳಿರಿಯುವ ಅಸಹಾಯಕ ತೊಳಲಾಟಗಳು ದಾರುಣ ರಮ್ಯವಾಗಿವೆ.

ಷೇಕ್ಸ್‌ಪಿಯರ್ ಮತ್ತು ಕಾಮೂರ ಪ್ರಭಾವ ನಾದಿರ್‌ನ ಪಾತ್ರರಚನೆಯ ಮೇಲಿದ್ದು ಅವನ್ನು ಮರೆಸಿಬಿಡುವ ಸ್ವಂತಿಕೆ ಈ ನಾಟಕಕ್ಕಿದೆ.

ಶಾಂತಿ ಪ್ರಿಯನಾಗಿಯೂ ಹಿಂಸಾ ಮಾರ್ಗವನ್ನು ಬಿಡಲಾರದ ನಾದಿರ್‌ನು ವಿಧಿಯ ಕ್ರೂರ ವ್ಯಂಗ್ಯಕ್ಕೆ ಸಾಕ್ಷಿಯಾಗಿದ್ದಾನೆ. ತಾನು ಯಾರನ್ನ ಸಂಶಯಿಸುತ್ತಿದ್ದನೋ ಅವರನ್ನೆಲ್ಲಾ ತಾನೆ ಕೈಯಾರೆ ಕೊಲೆಮಾಡಿಸುವ ದುರಂತ ಅವನದು. ತಾನು ಒಂದೊಂದು ಕೊಲೆ ಮಾಡಿದಾಗಲೂ ವಿಹ್ವಲನಾಗಿ ಒದ್ದಾಡುತ್ತಾನೆ. ಹಿಂಸೆ ಅವನನ್ನು ಬೆಂಬಿಡದ ಭೂತದಂತೆ ಕಾಡಿಸುತ್ತ ಮತ್ತೊಂದು ಹಿಂಸೆಗೆ ಪ್ರಚೋದಿಸುತ್ತದೆ. ರಾಜಕಾರಣಕ್ಕಾಗಿ ಕೊಲೆಮಾಡಿ ಖಾಸಗಿಯಾಗಿ ಅದಕ್ಕಾಗಿ ಪರಿತಪಿಸುವ ನಾದಿರ್‌ನ ದುರಂತವೇ ವಿಚಿತ್ರವಾದುದು.

ನಾದಿರ್‌ನ ರೋಗ ಅಪಾರವಾದುದು. ಮಯೂರ ಸಿಂಹಾಸನ, ಕೊಹಿನೂರ್ ವಜ್ರ ಮತ್ತು ಸಂಪತ್ತಿನ ಬಯಕೆಯು ಅವನನ್ನು ಭೌತಿಕವಾಗಿ ತನ್ನ ಪ್ರಜೆಗಳಿಂದ ಪ್ರತ್ಯೇಕಿಸಿದರೆ ಆತನ ಹತ್ತಿರದ ವ್ಯಕ್ತಿಗಳು ಮಾನಸಿಕವಾಗಿ ಅವನನ್ನು ಪ್ರತ್ಯೇಕಿಸಿದರು. ನಾದಿರ್‌ನ ಮೂಲಕ ತಮ್ಮ ವ್ಯಕ್ತಿತ್ವಗಳಿಗೆ ಅರ್ಥ ತಂದುಕೊಳ್ಳುವುದಕ್ಕೆ ಪ್ರಯತ್ನಿಸುವ ಆತನ ಹತ್ತಿರದವರಾದ ಸುಲೇಮಾನ್ ತನ್ವೀರ್, ರಜ್ವಿ, ಮುಲ್ಕ್, ನಜಿರುದ್ದೀನ್ ಮುಂತಾದವರು ಕೇಂದ್ರ ಪಾತ್ರದ ಪ್ರತಿರೂಪಗಳಂತೆಯೂ ವರ್ತಿಸುತ್ತಾರೆ. ಇವರನ್ನೆಲ್ಲಾ ಕಳೆದುಕೊಳ್ಳುತ್ತಾ ಹೋದಂತೆ ನಾದಿರ್ ಸ್ವತಂತ್ರನಾಗಿ ಪ್ರಜೆಗಳಿಗೆ ಹತ್ತಿರದವನಾಗುವುದಿಲ್ಲ ಬದಲಾಗಿ ಆತನ ರೋಗವು ಹೆಚ್ಚುತ್ತಾ ಹೋಗುವುದು, ಪ್ರತಿಯಾಗಿ ದುರ್ಬಲನಾಗುವನು. ಅಲಾವಿಖಾನ್‌ನಂತಹ ಸಾಮಾನ್ಯ ಹಕೀಮನೊಬ್ಬನ ಕುತರ್ಕವನ್ನು ಎದುರಿಸಲಾರದೆ ಅವನೊಂದಿಗೆ ರಾಜಿ ಮಾಡಿಕೊಳ್ಳುತ್ತಾನೆ. ಇವರ ಫಲವಾಗಿ ಜೀವನವಲ್ಲಿ ಕಟ್ಟಕಡೆಗೆ ಪ್ರೇಮವೇ ಮುಖ್ಯವೆಂದು ಆತನು ತಿಳಿದುಕೊಳ್ಳುವನು ಹಾಗೂ ರೋಗದಿಂದ ಗುಣಮುಖನಾಗ ವನು.

ರಾಜಕೀಯವನ್ನು ಚದುರಂಗದಾಟದಂತೆ ಆಡಿದ ಚಕ್ರವರ್ತಿ ನಾದಿರ್‌ಶಾನು ಸಾಮಾನ್ಯ ಹಕೀಮನಾದ ವೃದ್ಧ ಅಲಾವಿಖಾನ್‌ನಿಂದ ಸೋಲನ್ನೊಪ್ಪಿಕೊಳ್ಳಬೇಕಾಗಿ ಬಂದುದು ಸಾಂಕೇತಿಕವಾಗಿದೆ. ಸೂಕ್ಷ್ಮವಾಗಿ ಪರಿಶೀಲಿಸಿದರೆ ನಾಟಕ ಎರಡು ವಿರುದ್ಧ ಗತಿಯ ಪ್ರಜೆಗಳಲ್ಲಿ ಬೆಳೆಯುತ್ತ ಕೊನೆಯ ದೃಶ್ಯದಲ್ಲಿ ಎರಡೂ ಗತಿಗಳು ಒಂದನ್ನೊಂದು ಸಂಧಿಸುವ ವಿದ್ಯುತ್ ಕೇಂದ್ರದಲ್ಲಿ ನಾಟಕದ ಅರ್ಥ ಪ್ರಕಟವಾಗುತ್ತದೆ. ಚಕ್ರವರ್ತಿಯಾದ ನಾದಿರ್ ಚದುರಂಗದಾಟದಲ್ಲಿಯ ಅರಸನಂತೆ ಮೇಲಿನ ದರ್ಜೆಯನ್ನು ಬಿಟ್ಟು ಆಡಳಿತದತ್ತ–ರಾಜಕೀಯವನ್ನು ಬಿಟ್ಟು ಆರೋಗ್ಯದತ್ತ ಸರಿಯುತ್ತ ಬರುತ್ತಾನೆ. ತನ್ನ ಭೌತಿಕ ಮತ್ತು ಅಜ್ಞಾತ ಶಕ್ತಿಗಳನ್ನೆಲ್ಲ ಪಣಕ್ಕೆ ಹಚ್ಚಿ ಅವನು ಈ ಕ್ರಿಯೆಯಲ್ಲಿ ಮುಂದುವರಿಯುತ್ತಾನೆ. ಇದಕ್ಕೆ ವಿರುದ್ಧವಾಗಿ ಅಲಾವಿಖಾನ್

ಚದುರಂಗದಾಟದಲ್ಲಿಯ ಕಾಲಾಳಿನಂತೆ (ಪದಾತಿಯಂತೆ) ಮೇಲುಮೇಲಕ್ಕೆ ಸರಿದು ಬಂದು ಅವನನ್ನು ಕಟ್ಟಿಹಾಕುತ್ತಾನೆ.

ಮಾಸ್ತಿಯವರ 'ತಾಳಿಕೋಟೆ' ಐತಿಹಾಸಿಕ ಸಂದರ್ಭವೊಂದನ್ನು ಖಾಸಗಿ ಬದುಕಿನ ದುರಂತದ ಹಿನ್ನೆಲೆಯಲ್ಲಿ ಚರ್ಚಿಸುತ್ತದೆ. ಆದರೆ ಐತಿಹಾಸಿಕ ವ್ಯಕ್ತಿ ಸಂಗತಿಗಳನ್ನು ಮಾನವೀಯ ನೆಲೆಯಲ್ಲಿ ಚಿತ್ರಿಸಲೆಳಸುವ ಗುಣಮುಖ ನಾಟಕ-ಭಾವನಾಮಯವಾಗಿದ್ದು ಇತಿಹಾಸಕ್ಕಿಂತ ಕಲ್ಪನೆಗೆ ಹೆಚ್ಚು ಮಹತ್ವ ಕೊಟ್ಟಿರುವಂತಿದೆ. ಏಕೆಂದರೆ ಇಲ್ಲಿ ನಾದಿರ್‌ನ ಐತಿಹಾಸಿಕ ಘಟನೆಗಳಿಗಿಂತ ಆತನ ಆರೋಗ್ಯದ ಒಂದೇ ಒಂದು ಘಟನೆಯು ಚಿತ್ರಿಸಲ್ಪಟ್ಟು ಆತನ ಮನೋಭಾವಗಳ ಕಲ್ಪನೆ ಇದರಲ್ಲಿದೆ.

ಗಿರೀಶ್ ಕಾರ್ನಾಡರ ಯಯಾತಿ ನಾಟಕವು ಪುರಾಣದ ಒಬ್ಬ ದೊರೆಯ ಅಂತರಂಗವನ್ನು ಹಿಡಿಯುತ್ತದೆ. ಯಯಾತಿನಾಟಕದಲ್ಲಿ "ಇದೆಲ್ಲದರ ಅರ್ಥವೇನು ದೇವರೆ ? ಇದೆಲ್ಲದರ ಅರ್ಥವೇನು ?" ಎಂಬ ಪುರುವಿನ ಆರ್ತನಾದ ಮೌಲ್ಯ ಪಲ್ಲಟ ಸಂಕ್ರಮಣ ಸ್ಥಿತಿಯಲ್ಲಿ ಸಿಕ್ಕಿರುವ ಹೊಸ ಜನಾಂಗದ ಏಕಾಕಿತನ, ದಿಗ್‌ಭ್ರಮೆಗಳ ಕೂಗೂ ಆಗುತ್ತದೆ, ಇದೇ ರೀತಿಯಲ್ಲಿ ಲಂಕೇಶರ ಗುಣಮುಖ ನಾಟಕದಲ್ಲಿಯೂ ನಾದಿರ್‌ಶಾಹನು ತನ್ನ ಪ್ರತಿಷ್ಠೆಯನ್ನು ಕಾಯ್ದಿರಿಸಲು ಪ್ರಯತ್ನಿಸಿ ಕಡೆಗೆ ಸೋತು ಅಲಾಫಿಖಾನ್‌ನಲ್ಲಿ "ದಯವಿಟ್ಟು ದಾರಿ ತೋರಿಸಿ, ನಾನು ಹಿಂದೂಸ್ಥಾನದಲ್ಲೇ ಇರಲೆ, ಪರ್ಶಿಯಾಗೆ ಹಿಂತಿರುಗಲೆ ?" ಎಂಬಲ್ಲಿ ಹೊಸ ಜನ ದಾರಿ ಕಾಣದೆ ಕೂಗುವ ಏಕಾಕಿತನದ ಕೂಗೂ ಆಗುತ್ತದೆ.

ಇತಿಹಾಸ ಸಾಮಗ್ರಿಗಳನ್ನು ಬಳಸಿಕೊಂಡು ಬಂದ ಕೃತಿಗಳ ವಿಮರ್ಶೆಯಲ್ಲಿ ಲೇಖಕನ ದೃಷ್ಟಿ ಧೋರಣೆಗಳೂ ಮುಖ್ಯವಾಗುತ್ತವೆ. ಲಂಕೇಶರ ಈ ಕೃತಿಯಲ್ಲಿ ದೃಶ್ಯ ಸಂಯೋಜನೆ, ರಂಗತಂತ್ರ, ನಾಟಕದ ಸಂವಿಧಾನ ಕೌಶಲ ಕಂಡಾಗ ಈ ನಾಟಕವನ್ನು ಬರೆಯುವ ಕಾಲಕ್ಕೆ ವೃತ್ತಿ ರಂಗಭೂಮಿ ಅವರ ಕಣ್ಮುಂದೆ ಇದ್ದಂತೆ ತೋರುತ್ತದೆ. ಈ ನಾಟಕದಲ್ಲಿ ನಾಟಕೀಯ ಸನ್ನಿವೇಶ, ಗಾಢ ಅನುಭವ, ತೀವ್ರತೆ, ಆಕರ್ಷಣ ಕೇಂದ್ರ, ಸಂವಿಧಾನ ಕೌಶಲ ಕಾಣಿಸುತ್ತದೆ. ನಾಟಕದುದ್ದಕ್ಕೂ ವಿಧಿ ದೈವಗಳ ಕೈವಾಡದ ಬಗ್ಗೆ ? ದುರಂತದಲ್ಲಿ ವಿಧಿಯ ಪಾತ್ರ ? ಮಾನವನ ಪಾತ್ರ ಎಷ್ಟು ? ಮಾನವನ ಬೇಜವಾಬ್ದಾರಿತನ, ಹೀನತನ ದುರಂತಕ್ಕೆ ಎಷ್ಟು ಕಾರಣ ? ಅನುಮಾನಗಳು, ನಾಟಕದ ಜೀವನ ದೃಷ್ಟಿ ಮತ್ತು ಅವರು ಗೌರವಿಸುವ ಜೀವನ ಮೌಲ್ಯಗಳ ಮೇಲೂ ಬೆಳಕು ಚೆಲ್ಲುತ್ತದೆ.

ನಜಿರುದ್ದೀನ್ ಮುಹಮ್ಮದ್‌ಶಾನು ನಾಲ್ಕು ಕೋಟಿಯನ್ನು ನಾದಿರ್‌ನಿಗೆ ಗೌರವ ಅರ್ಪಿಸಿದಾಗ ರಜ್ವಿಯು ಹಕೀಮನ ಬಗ್ಗೆ ವಿಚಾರಿಸುತ್ತಾನೆ. "ಹಕೀಮನೊಬ್ಬನನ್ನು

ಕಳಿಸಿ ಎಂದು ಹೇಳಿ ಮೂರು ದಿನವಾಯಿತು" ಎಂದು ರಜ್ವಿ ಹೇಳಿದಾಗ ನಜಿರುದ್ದೀನನು "ನಮಗೆ ಇವತ್ತು ಹೇಳಿದರು" ಎನ್ನುವನು. "ನಮ್ಮ ಹೇಳಿಕೆಯನ್ನು-ದೊರೆ ನಾದಿರ್‌ಶಾ ಅವರು ಅಸ್ವಸ್ಥರಾಗಿದ್ದಾರೆ- ಒಬ್ಬ ಹಕೀಮ ಬೇಕು. ಅನ್ನೋ ಹೇಳಿಕೆಯನ್ನು ಒಬ್ಬ ಬರೆದುಕೊಂಡ. ಅವನು ಬರೆದುಕೊಳ್ಳುತ್ತಿದ್ದ ಅವಸರ ನೋಡಿ ಇನ್ನೇನು ಹಕೀಮ ಬಂದೇ ಬಿಡುತ್ತಾನೆ ಅಂತ ತಿಳಿದೆವು. ಒಂದು ದಿನವಾಯಿತು, ಎರಡು ದಿನವಾಯಿತು, ಇದು ಮೂರನೇ ದಿನ. ಈ ಬಗ್ಗೆ ವಿಚಾರಿಸಿದೆವು, ನಮ್ಮ ಕೋರಿಕೆಯನ್ನು ಬರೆದುಕೊಂಡ ಮನುಷ್ಯ ಮೇಲಿನ ಗುಮಾಸ್ತನಿಗೆ ಬರೆದು ತಿಳಿಸಬೇಕಂತೆ, ಆತ ಅವನ ಮೇಲಿನವನಿಗೆ ಬರೆಯಬೇಕಂತೆ, ದಿಲ್ಲಿಯ ಆಡಳಿತಾಧಿಕಾರಿಗೆ ಅದು ತಲುಪಿ ಆಮೇಲೆ ಕೆಳಗಿನ ಅಧಿಕಾರಿಗೆ ಅದು ತಲುಪಿ ಆಮೇಲೆ ಕೆಳಗಿನ ಅಧಿಕಾರಿಗೆ ಹೋಗಿ ವೈದ್ಯಕೀಯ ಇಲಾಖೆ ತಲುಪಬೇಕಂತೆ ಆಮೇಲೆ ದೊರೆಗೆ ಒಟ್ಟಿನಲ್ಲಿ ಏನೂ ಆಗಲಿಲ್ಲ" ಎನ್ನುವ ರಜ್ವಿಯ ಮಾತು ಸರಕಾರಿ ಕೆಲಸದ ಅಥವಾ ಸಾರ್ವಜನಿಕ ಇಲಾಖೆಯ ನಿಧಾನಗತಿಯನ್ನು ಸೂಚಿಸುತ್ತದೆ. ಬೇಜವಾಬ್ದಾರಿತನದ ಆಮೆ ನಡಿಗೆಯ ಕೆಲಸ ಇಂತಹ ಕಛೇರಿಗಳಲ್ಲಿ ನಡೆಯುತ್ತಿದೆ ಎಂಬುದನ್ನು ಈ ಮಾತು ಸೂಚಿಸುತ್ತಿದೆ ಇದು ಇಂದಿನ ಕಾಲಕ್ಕೂ ಜ್ವಲಂತ ಸಾಕ್ಷಿಯಾಗಿ ಕಾಣಿಸುತ್ತಿದೆ.

ಮುಲ್ಕ್, ಪಾಷಾ, ಅಫಜಲ್ ಮುಂತಾದವರು ಸಮಾಲೋಚನೆಗೈಯುತ್ತಿದ್ದಾಗ ನಾದಿರ್‌ನ ದೂತನೊಬ್ಬನು ಬಂದು ಮುಲ್ಕ್‌ನು ಕೂಡಲೇ ನಾದಿರ್‌ನನ್ನು ಕಾಣಬೇಕೆಂದು ಆಜ್ಞೆಯಾಗಿದೆ ಎಂದು ಹೇಳುವನು. ಆಗ ಮುಲ್ಕ್‌ನು ಜೈನ ಹುಡುಗನಾದ ದೂತನನ್ನು ಕಾಡಿಬೇಡಿ ನಿಲ್ಲಿಸಿ ಮಾತನಾಡಿಸುವನು. ನಂತರ ಬಹುವಚನದಲ್ಲಿ ಮಾತನಾಡಿ ದೂತನ ಮನವೊಲಿಸಲು ಪ್ರಯತ್ನಿಸುವನು. ಹಣದ ಚೀಲವನ್ನು ದೂತನಿಗೆ ಕೊಟ್ಟು "ನಾನು ಮನೆಯಲ್ಲಿ ಇರಲಿಲ್ಲ ಅಂತ ನಾದಿರ್ ಅವರಿಗೆ ಹೇಳಬೇಕು." ಎಂದು ಮುಲ್ಕ್ ಹೇಳುವನು. ಆದರೆ ದೂತನು ಅದಕ್ಕೆ ಒಪ್ಪುವುದಿಲ್ಲ. "ಕೇಳಿ, ನಾನು ಜೈನರ ಹುಡುಗ. ನಿಮ್ಮ ರಾಜಕಾರಣವೆಲ್ಲ ನನಗೆ ಅರ್ಥವಾಗೋಲ್ಲ. ನೂರಾರು ಜನ ಹುಡುಗರ ಸಂದರ್ಶನ ನಡೆಸಿ ನನ್ನನ್ನು ನಾದಿರ್ ದೊರೆ ಆಯ್ಕೆ ಮಾಡಿದ್ದಾರೆ. ನನಗಿರುವ ಅರ್ಹತೆ ಒಂದೇ-ಪ್ರಾಮಾಣಿಕತೆ, ಅವರ ಮಾತನ್ನು ಮೀರುವುದಿಲ್ಲ. ನೀವು ಊರಲ್ಲಿಲ್ಲ ಎಂಬ ಸುಳ್ಳು ಹೇಳಿದರೆ ಅವರು ನನ್ನ ತಲೆ ಹಾರಿಸ್ತಾರೆ." ಎಂದ ಹುಡುಗ ದೂತನು ಕಡೆಗೆ ಒಂದು ತಾಸಿನಲ್ಲಿ ಮುಲ್ಕ್‌ನು ಬರುತ್ತಾನೆಂದು ಹೇಳಲು ಒಪ್ಪಿ ಹಣದ ಚೀಲವನ್ನು ಕಿತ್ತುಕೊಂಡು ಓಡುವನು. ಇಂತಹ ಕಡೆ ಪ್ರಾಣಿಕತೆಯನ್ನು ವ್ಯಕ್ತಪಡಿಸಿದ ಲಂಕೇಶರು ಅದ್ಯಾಕೋ ಕಡೆಗೆ ದಾರಿ ತಪ್ಪಿದಂತೆ ಗೋಚರಿಸುತ್ತದೆ. ಒಳ್ಳೆಯ ವ್ಯಕ್ತಿಗಳಲ್ಲಿಯೂ ಪ್ರಾಮಾಣಿಕತೆಯ ಅಂಶಗಳು, ಕೆಟ್ಟವರ ಕಪಟಿಗಳ, ದುಷ್ಕರ್ಮಿಗಳ, ದುರಾಚಾರಿಗಳ ಸಹವಾಸದಿಂದ ನಶಿಸಿ ಹೋಗುವುದು ಎಂಬುದನ್ನು ಸೂಚಿಸಲು ಲಂಕೇಶರು ಈ ರೀತಿ ಚಿತ್ರಿಸಿದಂತೆ ಭಾಸ

ವಾಗುತ್ತದೆ. ಈ ಪಾತ್ರವು ಕೊನೇ ಗಳಿಗೆಯಲ್ಲಿ ಮಾನವನು ದಾರಿತಪ್ಪಿ ನಡೆಯುತ್ತಾನೆ ಎಂಬುದನ್ನು ಸೂಚಿಸುವಂತಿದೆ. ಇಲ್ಲಿ ಚಿತ್ರಿಸಲ್ಪಟ್ಟ ಮಲ್ಕನ ಪಾತ್ರ ಚಿತ್ರಣವು ಇಂದಿನ ರಾಜಕಾರಣಿಗಳು ಅರೆಗಳಿಗೆಯಾದರೂ ತಮ್ಮ ತಪ್ಪುಗಳನ್ನು ಮರೆಮಾಚಲು ಪ್ರಯತ್ನಿಸುವಂತೆ ಚಿತ್ರಿಸಲ್ಪಟ್ಟಿದೆ. ಈ ಮೂಲಕ ಇದು ಸಮಕಾಲೀನವಾಗಿ ಇಂದಿನ ರಾಜಕಾರಣಿಗಳ ಸ್ವಭಾವವನ್ನು ಪ್ರೇಕ್ಷಕನಿಗೆ ಮನವರಿಕೆಯಾಗುವಂತೆ ಚಿತ್ರಿಸಲ್ಪಟ್ಟಿದೆ.

"ಅತಿಯಾದ ವೀರಾವೇಶ, ಖಗ್ಗಡವಾದ ಶೃಂಗಾರ ಗ್ರಾಮ್ಯವಾದ ಹಾಸ್ಯ, ಕೇವಲ ಊಹೆಯ ಭಕ್ತಿ ಇತ್ಯಾದಿ ಕುರಿತ ನಾಟಕಗಳೇ ಜನಸಾಮಾನ್ಯಕ್ಕೆ ಈಗ ರುಚಿಸುತ್ತಿರುವುದು. ಆದರೆ ಸಾಹಿತ್ಯದಲ್ಲಿ ತಕ್ಕಷ್ಟು ಪ್ರಯತ್ನ ನಡೆದು ಪದ್ಧತಿಗಳು ಸ್ಥಿರವಾಗಿ ಹೊಸ ಕೃತಿಗೆ ಒಂದು ನಿರ್ದಿಷ್ಟವಾದ ರೂಪು ಬಂದಾಗ್ಗೆ ರಂಗಕ್ಕೆ ಹೊಸ ನಾಟಕ ಬರುವುವರಲ್ಲಿ ಸಂದೇಹವಿಲ್ಲ" ಎಂದು ಹೇಳಿರುವ ಮಾಸ್ತಿಯವರು ರಂಗಮಂದಿರಕ್ಕೆ ಯೋಗ್ಯವಾದ ಹೊಸ ಹೊಸ ಪ್ರಯೋಗಗಳು ನಾಟಕ ಕ್ಷೇತ್ರದಲ್ಲಿ ಆಗಬೇಕೆಂದು ನಿರ್ದೇಶಿಸಿದ್ದಾರೆ. ಈ ದೃಷ್ಟಿಯಲ್ಲಿ ಲಂಕೇಶರ ಈ ನಾಟಕವು ರಚಿತವಾಗಿದೆ ಎಂದು ಭಾಸವಾಗುವುದು. ಯಾಕೆಂದರೆ ಅತಿಯಾದ ವೀರಾವೇಶ, ಖಗ್ಗಡವಾದ ಶೃಂಗಾರ, ಕೇವಲ ಊಹೆಯ ಭಕ್ತಿ ಇತ್ಯಾದಿ ಅಂಶಗಳು ಈ ಕೃತಿಯಲ್ಲಿಯೂ ಕಾಣಸಿಗುತ್ತವೆ. ಆದರೂ ಸಾಹಿತ್ಯದಲ್ಲಿ ತಕ್ಕಷ್ಟು ಪ್ರಯತ್ನ ನಡೆದು ಪದ್ಧತಿಗಳು ಸ್ಥಿರವಾಗಿ ಹೊಸ ಕೃತಿ ರೂಪವಾಗಿ ಈ ನಾಟಕ ರಚಿತವಾಗಿ ರಂಗಮಂದಿರಕ್ಕೆ ಹೊಂದಿಕೆ ಆಗುವಂತಿದೆ.

"ವಾಸ್ತವಿಕಾ ವಾದಿಗಳಂತೆ ಸಮಕಾಲೀನ ವಸ್ತುಗಳನ್ನು ವಾಸ್ತವಿಕ ರೀತಿಯಲ್ಲಿಯೇ ಬಳಸಿಕೊಳ್ಳಬಾರದು. ನಾಟಕದ ವಸ್ತುವನ್ನು ಸಾಧ್ಯವಾದಷ್ಟು ಮಟ್ಟಿಗೆ ಬೇರೆ ಕಾಲ, ದೇಶಗಳಿಂದ ಆಯ್ದು ಅದರ ಪ್ರಾಚೀನತ್ವದ ಮೇಲೆ ಹೆಚ್ಚಿನ ಒತ್ತನ್ನು ಹಾಕಬೇಕು. ಆ ನಾಟಕದ ಕ್ರಿಯೆ ನಡೆದ ಕಾಲ ಮತ್ತು ಸ್ಥಳದಲ್ಲಿ ತಾನಿದ್ದಿದ್ದರೆ ಒಂದು ನಿರ್ದಿಷ್ಟ ಪ್ರತಿಕ್ರಿಯೆ ತೋರಿಸುವ ಮೂಲಕ ಕಾರ್ಯಪ್ರವೃತ್ತನಾಗುತ್ತಿದ್ದೆ ಎಂಬ ಭಾವನೆ ಪ್ರೇಕ್ಷಕನಿಗೆ ಮೂಡುವಂತೆ ನಾಟಕಕಾರ ಪ್ರಯತ್ನಿಸಬೇಕು. ಆಗ ಮಾತ್ರ ಸಾಮಾಜಿಕ ಬದಲಾವಣೆಯನ್ನು ತರಲು ಸಾಧ್ಯ ಮತ್ತು ಅವಶ್ಯಕ ಎಂಬ ಭಾವನೆ ಪ್ರೇಕ್ಷಕನಲ್ಲಿ ಮೂಡುತ್ತದೆ" ಎನ್ನುತ್ತಾನೆ ಬ್ರೆಕ್ಟ್.

ಈ ದೃಷ್ಟಿಯಿಂದ ಲಂಕೇಶರ ಗುಣಮುಖ ನಾಟಕವನ್ನು ಪರೀಕ್ಷಿಸಿದಾಗ ಇದರ ವಸ್ತು, ಸಮಕಾಲೀನದ್ದಾಗಿರದೆ, ವಾಸ್ತವಿಕ ರೀತಿಯಲ್ಲಿಯೇ ಇರದೆ, ಪ್ರಾಚೀನ ಕಾಲದ್ದಾಗಿದ್ದು ಪ್ರಾಚೀನತ್ವದ ಮೇಲೆ ಹೆಚ್ಚು ಮಹತ್ವ ನೀಡಿದೆ. ನಾಟಕದ ಕ್ರಿಯೆ ನಡೆದ ಕಾಲ ಮತ್ತು ಸ್ಥಳದಲ್ಲಿ ತಾನಿದ್ದಿದ್ದರೆ ನಾಟಕದ ಗತಿಯೇ ಬದಲಾಗುತ್ತಿತ್ತು ಎಂದು ಪ್ರೇಕ್ಷಕನಿಗೆ ಭಾಸವಾಗುವಂತೆ ನಾಟಕ ರಚಿಸಲು ಲಂಕೇಶರು ಪ್ರಯತ್ನಿಸಿದ್ದಾರೆ.

ಲಂಕೇಶರ ಸಂಕ್ರಾಂತಿ ನಾಟಕದ ಕೇಂದ್ರ ಪಾತ್ರವೆಂದು ಯಾರನ್ನೂ ಗುರುತಿಸುವಂತಿಲ್ಲ. ಆದರೆ ಗುಣಮುಖಿಯಲ್ಲಿ ನಾದಿರ್‌ಶಾನನ್ನು ಕಥಾನಾಯಕನೆಂದೋ ಪ್ರಮುಖ ಪಾತ್ರವೆಂದೋ ಗುರುತಿಸಬಹುದು. ಯಾಕೆಂದರೆ ನಾಟಕದ ಕೊನೆಗೆ ಅಲಾವಿಖಾನ್‌ನ ಮಾತಿನ ಮೂಲಕ ಲೇಖಕರು ನಾದಿರ್‌ಶಾನನ್ನು ನಾಟಕದ ನಾಯಕನೆಂದು ಸೂಚಿಸುತ್ತಾರೆ.

ಈ ಕೃತಿಯಲ್ಲಿ ನಾದಿರ್‌ಶಾನು ತನ್ನ ಪ್ರತಿಷ್ಠೆಯನ್ನು ಕಾಯ್ದುಕೊಳ್ಳಲು ಪ್ರಯತ್ನಿಸುತ್ತಾ ತನ್ನ ರೋಗವನ್ನು ಗುಣಪಡಿಸಲು ಹೆಣಗುವುದು ಕೇಂದ್ರವಾಗಿದ್ದು ಅದಕ್ಕೆ ವೃದ್ಧ ಅಲಾವಿಖಾನ್‌ನ ಶೂಶ್ರೂಷೆ ಒಂದು ದೃಷ್ಟಾಂತವಾಗಿದೆ. ಅಲ್ಲದೆ ಇಲ್ಲಿ ನಾದಿರ್‌ಶಾನು ತನ್ನ ಅಂತಸ್ತನ್ನು ಕಾಯ್ದುಕೊಳ್ಳಲು ಹೆಣಗುತ್ತಾನೆ. ದೈಹಿಕ ಹಾಗೂ ಮಾನಸಿಕವಾಗಿ ಅಸ್ವಸ್ಥನಾಗಿದ್ದಾಗ ನಾದಿರ್‌ಶಾನು ಹಕೀಮ ಅಲಾವಿಖಾನ್‌ನ ಮುಖಾಂತರ ರೋಗದಿಂದ ಗುಣಮುಖನಾಗುತ್ತಾನೆ. ನಂತರ ನಾದಿರ್‌ನು ಅಲಾವಿಖಾನ್‌ನಲ್ಲಿ ಅರಿವಿಲ್ಲದೆ ಕೇಳಿದ ಮಾತಿನಿಂದಾಗಿ ತನ್ನ ಘನಸ್ಥಿಕೆಯನ್ನು ಕಾಯ್ದುಕೊಳ್ಳುವಲ್ಲಿ ವಿಫಲನಾಗುತ್ತಾನೆ.

ಈ ನಾಟಕದಲ್ಲಿ ಲಂಕೇಶರು ಆದರ್ಶ ಸಮಾಜ ಕಲ್ಪನೆಯನ್ನು ವೃದ್ಧ ಹಕೀಮ ಅಲಾವಿಖಾನ್‌ನ ಮುಖಾತರ ವ್ಯಕ್ತಪಡಿಸುತ್ತಾರೆ. ನಾಟಕದ ಒಂದೆರಡು ಕಡೆ ಅಲ್ಪಸ್ವಲ್ಪ ಆದರ್ಶದ ಕಲ್ಪನೆ ವ್ಯಕ್ತವಾಗಿದೆ. ವ್ಯವಸ್ಥೆಯ ಉದ್ದೇಶಗಳನ್ನು ರಾಜಕಾರಣಿಗಳ ನಿಜವಾದ ಬಣ್ಣವನ್ನು ಸಾದತ್‌ಖಾನ್, ಮುಲ್ಕ್, ಮುಂತಾದ ಪಾತ್ರಗಳ ಮೂಲಕ ಅತ್ಯಂತ ಪ್ರಭಾವಶಾಲಿಯಾಗಿ, ಸಮರ್ಪಕವಾಗಿ ಬಯಲಿಗೆಳೆದಿದ್ದಾರೆ. ಮತ್ತು ಆಧುನಿಕ ರಾಜಕಾರಣಿಗಳ ದುರಂತವನ್ನು ಸೂಚಿಸುವಂತೆ ಈ ನಾಟಕದಲ್ಲಿ ನಾದಿರ್‌ನ ವ್ಯಕ್ತಿತ್ವ ರೂಪುಗೊಂಡಿದೆ.

ಈ ನಾಟಕ ಕೃತಿಯಲ್ಲಿ ಅಲಾವಿಖಾನ್‌ನು ನೇರವಾಗಿ ನಾದಿರ್‌ನನ್ನು ಶೂಶ್ರೂಷೆಗೊಳಪಡಿಸದೆ ನಯದ ಮಾತಿನಿಂದ ಸ್ನೇಹದ ಸೋಗಿನಿಂದ ಗೆದ್ದು ನಂತರ ನಾದಿರ್‌ನ ರೋಗವನ್ನು ಗುಣಪಡಿಸುತ್ತಾನೆ.

ಈ ನಾಟಕ ರಚನೆಯಲ್ಲಿ ನಾದಿರ್‌ಶಾನು ತನ್ನ ಅಂತಸ್ತನ್ನು ಉಳಿಸಲು ಹವಣಿಸುತ್ತಾನೆ. ಆದರೆ ಅಲಾವಿಖಾನ್‌ನ ಹೊರತು ಯಾರೂ ಪರಿಸ್ಥಿತಿಯ ಮೇಲೆ ಹತೋಟಿ ತೆಗೆದುಕೊಳ್ಳಲು ಸಾಧ್ಯವಾಗದಂತೆ ಏರ್ಪಡುವ ಸನ್ನಿವೇಶ ಕಲ್ಪನೆ ನಾಟಕದ ಮುಕ್ತಾಯವನ್ನು ಅರ್ಥಪೂರ್ಣವಾಗಿಯೂ ತರ್ಕಬದ್ಧವಾಗಿಯೂ ಇರುವಂತೆ ಮಾಡಿದೆ. ಕ್ರಮಕ್ರಮವಾಗಿ ಅಲಾವಿಖಾನ್‌ನು ಪರಿಸ್ಥಿತಿಯನ್ನು ಹತೋಟಿಗೆ ತೆಗೆದುಕೊಳ್ಳುವುದು, ನಾದಿರ್ ದುರ್ಬಲನಾಗುತ್ತಾ ಹೋಗುವುದು ಕಣ್ಣಿಗೆ ಕಟ್ಟಿದಂತೆ ರಚಿತವಾಗಿದೆ.

ಈ ನಾಟಕದಲ್ಲಿ ನಾದಿರ್‌ನು ತನ್ನ ಪ್ರತಿಷ್ಠೆ, ಅಂತಸ್ತನ್ನು ಕಾಯ್ದುಕೊಳ್ಳಲು ಚಡಪಡಿಸುತ್ತಾ ರೋಗಗ್ರಸ್ತನಾಗಿ ಕಡೆಗೆ ವೃದ್ಧ ಅಲಾವಿಯಾನ್‌ನ ಮುಖಾಂತರ ತನ್ನ ನರಕ ಕೂಪದಿಂದ ಮೇಲೆತ್ತಲ್ಪಟ್ಟನು. ಹೀಗೆ ನಾಟಕದ ನಾಯಕನಾದ ನಾದಿರ್‌ನು ಕಡೆಗೆ ದುರಂತಕ್ಕೆ ಒಳಗಾದಂತೆ ಭಾಸವಾಗಿ ಅಲಾವಿಯಾನನು ಜಯಶಾಲಿಯಾದಂತೆ ಕಾಣುತ್ತದೆ. ಆದ್ದರಿಂದಲೇ ಈ ಕೃತಿಯು ಐತಿಹಾಸಿಕ ದುರಂತ ನಾಟಕದಂತೆ ಗೋಚರಿಸುತ್ತದೆ.

ಇತಿಹಾಸ ಪ್ರಸಿದ್ಧರಾದ ವ್ಯಕ್ತಿಗಳ ವ್ಯಕ್ತಿತ್ವದ ಶೋಧ; ಈ ವ್ಯಕ್ತಿತ್ವಗಳಲ್ಲಿನ ಗುಣಾವಗುಣಗಳನ್ನೂ ದುರಂತವನ್ನೂ ಗುರುತಿಸುವುದು; ವಸ್ತುವಿನ ಮಹತ್ವ ಮತ್ತು ಅದು ಪ್ರಶ್ನಿಸುವ ಮೌಲ್ಯಗಳ ಪಶ್ನಿಸುವಿಕೆ; ಸತ್ಯದ ಹೊಸ ಪದರುಗಳ ಅನ್ವೇಷಣೆ; ಹೊಸ ಆಯಾಮಗಳ ಸೃಷ್ಟಿಯ ಪ್ರಯತ್ನಗಳನ್ನು ಇತಿಹಾಸ, ಪುರಾಣಗಳ ವಸ್ತುಗಳ ಪುನರ್ ಸೃಷ್ಟಿ ಕೃತಿಗಳಲ್ಲಿ ಕಾಣಬಹುದು.

ಈ ನಾಟಕದುದ್ದಕ್ಕೂ ನಾವು ಮನೋಹರ ಶಬ್ದಗಳ ಜೋಡಣೆಯಿಂದ ರಚಿಸಲ್ಪಟ್ಟ ಸಾಲುಗಳನ್ನು ಕಾಣುವಂತಿಲ್ಲ. ಪ್ರತಿಯೊಂದು ಸಾಲಿನ ಶಕ್ತಿ ಸೌಂದರ್ಯಗಳು ಸಮಯೋಚಿತವಾಗಿರುವುದರಿಂದಲೇ ಕಂಡುಬರುತ್ತದೆ. ನಾಟಕದ ಭಾವ-ಕ್ರಿಯಾ ಪರಿಸರಗಳು ಹಾಗೂ ಸಂವಾದಗಳು ಬೆರೆತುಕೊಂಡ ಪರಿಯನ್ನು ಗಮನಿಸಿದಾಗ ಗಿರೀಶ್ ಕಾರ್ನಾಡರ ಹೇಳಿಕೆ ನೆನಪಾಗುತ್ತದೆ. "ಪ್ರತಿಯೊಂದು ಸಾಲಿನ ಶಕ್ತಿ–ಸೌಂದರ್ಯ, ಸಂದರ್ಭದಿಂದಲೇ ಬರುತ್ತದೆ ಹೊರತು ಮನೋಹರ ಶಬ್ದಗಳ ಜೋಡಣೆಯಿಂದಲ್ಲ: ಇದು ನಾಟಕದ ಭಾವ-ಕ್ರಿಯಾ ಪರಿಸರಗಳು ಮತ್ತು ಸಂವಾದ ಹೇಗೆ ಬೆರೆತುಕೊಂಡಿವೆ ಎಂಬುದಕ್ಕೆ ಸಾಕ್ಷಿಯಾಗಿದೆ" ಎಂಬುದು ಕಾರ್ನಾಡರ ಮಾತಾಗಿದೆ.

ಈ ನಾಟಕವು ಐತಿಹಾಸಿಕ ಸಂಗತಿ ಸತ್ಯಗಳನ್ನು ಬಿಂಬಿಸಿದರೂ ಇದು ಸಾಂಕೇತಿಕವಾಗಿ ಬಳಸಲ್ಪಟ್ಟಿದೆ. ಪಾತ್ರ ರಚನೆಗಿಂತ ಸನ್ನಿವೇಶ ಕಲ್ಪನೆಗಳ ಮೂಲಕ ತನ್ನ ಗುರಿಯನ್ನು ಮುಟ್ಟುತ್ತದೆ. ಇಂತಹ ನಾಟಕಗಳಿಗೆ ನಾವು ಆದ್ಯತೆ ಕೊಡಬೇಕಾಗುವುದು ಅಲ್ಲಿರುವ ಒಳನೋಟಕ್ಕಾಗಿ.

ಆಕರ ಗ್ರಂಥಗಳು

೧ 'ಗುಣಮುಖ ನಾಟಕ' ಪಿ. ಲಂಕೇಶ್.
೨ 'ಆಧುನಿಕ ಕನ್ನಡ ನಾಟಕ' ಕೆ. ಮರುಳಸಿದ್ದಪ್ಪ.
೩. 'ವಿಮರ್ಶೆಯ ಪರಿಭಾಷೆ' ಓ. ಎಲ್. ನಾಗಭೂಷಣಸ್ವಾಮಿ
೪. 'ಮಾಸ್ತಿಯವರ ನಾಟಕಗಳು' ಜಿ. ಎಸ್. ರಂಗನಾಥ್
೫. 'ಕನ್ನಡ ನಾಟಕದ ವಿಮರ್ಶೆ' ಕೆ. ಮರುಳಸಿದ್ದಪ್ಪ
೬. 'ತುಘಲಕ್ ನಾಟಕ' ಗಿರೀಶ್ ಕಾರ್ನಾಡ್
೭. 'ಶ್ರೀನಿವಾಸ ಸಾಹಿತ್ಯ' ಮಾಸ್ತಿ ಸಾಹಿತ್ಯ ಸಂ. ಹಾ. ಮಾ. ನಾಯಕ

ಜಯರಾಮ ಹೆಗಡೆ

ಯಾರಿಗಾಗಿ ಹಾಡುತೀ

ಯಾರಿಗಾಗಿ ಹಾಡುತಿಯೋ
ಯಾತಕಾಗಿ ಬರೆಯುತೀ
ಎಲ್ಲಿವರೆಗೆ ಕಾಡುತೀ
ಎಷ್ಟು ಗ್ರಂಥ ಓದುತೀ.

ನಾನು ನೆಲವ ನಡೆಯುವಾಗ
ನೀನು ಮೇಲೆ ನೋಡುತಿ
ನಾನು ಮುಂದೆ ಓಡುವಾಗ
ನೀನು ಹಿಂದೆ ಆಡುತಿ.

ಅವಳು ನಿನ್ನ ಕರೆಯುವಾಗ
ನೀನು ತತ್ವ ಹೇಳಿದೆ.
ಅವಳು ಹೋದಮೇಲೆ ಎಲ್ಲಿ
ಹೋದಳೆಂದು ತೀಡಿದೆ.

ಅವನು ಚಂದ್ರ ಬಿಂಬವನ್ನು
ತಲೆಯಲಿಟ್ಟು ಕುಣಿಯುವವನು
ನೀನು ಸೂರ್ಯನೆದುರು ನಿಂತು
ಮಂತ್ರವನ್ನು ಪಠಿಸುವವನು.
ಹಸಿರು ಉಸಿರು ಎಂದು ನೀನು
ಮನವ ಮಾರಿ ಬದುಕಿದೆ
ಹುಳವ ಹುಡುಕ ಹೋಗಿ ನಾನು
ನಿನ್ನ ಕಂಡು ಬೆದರಿದೆ.

ನೀನು, ನಾನು, ಅವಳು, ಅವನು
ಕೂಡಿ ಕೂತು ಉಂಡಮೇಲೆ
ಅನ್ನ ಎಂಜಲಾಯಿತೆಂದು
ಪರಿಸಿದೆವು ತುಳಸಿ ಮಾಲೆ.

ಯಾರಿಗಾಗಿ ಹಾಡುತೀಯೋ
ಯಾರಿಗಾಗಿ ಬರೆಯುತೀ
ಎಲ್ಲಿವರೆಗೆ ಬದುಕುತೀ
ಎಲ್ಲಿ ಲೀನವಾಗುತೀ.

ಕಲಿಸುವ ಭಾಷೆಯೊಡನೆ ಚೆಲ್ಲಾಟ

ಎನ್. ಎಸ್. ರಘುನಾಥ

ಶಿಕ್ಷಣ ಕ್ಷೇತ್ರದಲ್ಲಿ ಕಲಿಸುವ ಭಾಷೆಯ (ಶಿಕ್ಷಣ ಮಾಧ್ಯಮದ) ವಿಷಯದಲ್ಲಿ ಬೇರೆ ಯಾವ ದೇಶದಲ್ಲೂ ಇಲ್ಲದಂಥ ವಿಚಿತ್ರ ಸನ್ನಿವೇಶ ಭಾರತದಲ್ಲಿದೆ. ಬಹುಭಾಷಾ ದೇಶಗಳಲ್ಲಿ ಇರಬಹುದಾದ ಸಮಸ್ಯೆಯೇ ಇದಾದರೂ ಪರಭಾಷೆಯೊಂದರ ಮೇಲೆ ನಮಗಿರುವ ಅಂಧ, ಭಾವುಕ ಅಭಿಮಾನ ಹೆದರಿಕೆ ಹುಟ್ಟಿಸುವಂಥದು. ಒಂದು ಭಾಷೆ ಪರಸಂಸ್ಕೃತಿಯಲ್ಲಿ ಬಹಳ ಕಾಲ ಬೇರೂರಿದಾಗ ತನ್ನದೇ ಆದ ರಾಜಕೀಯ ಶಕ್ತಿಯನ್ನು ಪಡೆದುಕೊಳ್ಳುತ್ತದೆ ಎನ್ನುವುದು ಗಮನಿಸಬೇಕಾದ ವಿಷಯ. ಆದರೆ ಆ ಭಾಷೆಯನ್ನು ಯಾವ ರೀತಿಯಲ್ಲೂ ಪ್ರಶ್ನೆ ಮಾಡದೆ ಎಲ್ಲ ಮಟ್ಟಗಳಲ್ಲಿಯೂ ಒಪ್ಪಿಕೊಂಡಿರುವ ಜನ ಅದಕ್ಕೆ ರಾಜಕೀಯ ಶಕ್ತಿಯ ಜೊತೆಗೆ ಪರ್ಯಾಯ ಸಾಂಸ್ಕೃತಿಕ ಸ್ಥಾನವನ್ನೂ ಗಳಿಸಿಕೊಡಲು ಪ್ರಯತ್ನಿಸುತ್ತಿದ್ದಾರೆ ಎನ್ನುವುದು ಗಾಬರಿ ಹುಟ್ಟಿಸುವ ವಿಷಯ. ಇಂಗ್ಲಿಷ್ ಭಾರತದಲ್ಲಿ ಬೇರೂರಿದೆ. ಆದರೆ ಅದನ್ನು ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ತಡೆಹಿಡಿಯಬಲ್ಲ ಶಕ್ತಿ ನಮ್ಮ ಪ್ರಾದೇಶಿಕ ಭಾಷೆಗಳಿಗಿದೆ. ಈ ಭಾಷೆಗಳನ್ನು ನಾವು ಸೃಜನಾತ್ಮಕವಾಗಿ ಬಳಸಿಕೊಳ್ಳುವುದರಲ್ಲಿ ನಮ್ಮ ಸಾಂಸ್ಕೃತಿಕ ಉಳಿವು ಮತ್ತು ಅಳಿವುಗಳಿವೆ.

ಭಾರತದಲ್ಲಿ ಸುಮಾರು ೧೬೦೦ರಷ್ಟು ಭಾಷೆಗಳಿವೆ. ಅವುಗಳಲ್ಲಿ ೨೩-೨೪ ಭಾಷೆಗಳು ಅತ್ಯಂತ ಪ್ರಬುದ್ಧವಾಗಿ ಬೆಳೆದ ಭಾಷೆಗಳು. ಈ ಭಾಷೆಗಳಲ್ಲಿ ಪ್ರಪಂಚ ಸಾಹಿತ್ಯಕ್ಕೆ ಸರಿದೂಗುವಂಥ ಸಾಹಿತ್ಯವೂ ಇದೆ. ದೇಶದ ವಿವಿಧ ರಾಜ್ಯಗಳ ಮನೆಮನೆಗಳಲ್ಲಿ ದಿನನಿತ್ಯದ ವ್ಯವಹಾರಕ್ಕೆ ಈ ಭಾಷೆಗಳನ್ನು ಬಳಸುತ್ತೇವೆ. ಇದು ನಮಗೆ ಹುಟ್ಟಿನಿಂದಲೇ ದೊರೆತಿರುವಂಥದು. ಆದರೆ ನಾವು ಬೆಳೆಯುತ್ತ ವಿದ್ಯಾಭ್ಯಾಸಕ್ಕಾಗಿ ನಮ್ಮ ಸಂಸ್ಕೃತಿಗೆ ಅಷ್ಟು ಹತ್ತಿರವಲ್ಲದ, ದಿನನಿತ್ಯದ ಬಳಕೆಗೆ ನಮಗೆ ದಕ್ಕದ ಇಂಗ್ಲಿಷನ್ನು ಶಿಕ್ಷಣ ಮಾಧ್ಯಮವನ್ನಾಗಿ ಆಯ್ಕೆಮಾಡಿಕೊಳ್ಳುವಂಥ ಅಸಹಜ ಸ್ಥಿತಿಯನ್ನು ನಾವು ಸೃಷ್ಟಿಸಿಕೊಂಡಿದ್ದೇವೆ. ಇದರಿಂದ ನಮಗಾಗುತ್ತಿರುವ ಲಾಭಕ್ಕಿಂತ ಹಾನಿಯೇ ಹೆಚ್ಚು.

ಇಂಗ್ಲಿಷ್ ಒಂದು ಅಂತರ ರಾಷ್ಟ್ರೀಯ ಭಾಷೆ ಎನ್ನುವುದಕ್ಕಿಂತ 'ಇಂಗ್ಲಿಷ್ ಅಭಿ
ಮಾನಿ'ಗಳು ಅದನ್ನು ಒಂದು ಸಾಂಸ್ಕೃತಿಕ ಮೌಲ್ಯವನ್ನಾಗಿ ಪರಿವರ್ತಿಸಿದ್ದಾರೆ.
ಅದರ ಬಗ್ಗೆ ಕೆಲವು ಪೌರಾಣಿಕ ಭ್ರಮೆ (Myth) ಗಳನ್ನು ಸೃಷ್ಟಿಸಲಾಗಿದೆ.
ಉದಾಹರಣೆಗೆ: 'ಇಂಗ್ಲಿಷ್ ಮಾಧ್ಯಮದಲ್ಲಿ ಓದುವುದು ಬುದ್ಧಿವಂತರ ಲಕ್ಷಣ:
ಇದರಿಂದ ಉತ್ತಮ ಸಂಸ್ಕೃತಿಯನ್ನು ಪಡೆಯಲು ಸಾಧ್ಯ; ಇಂಗ್ಲಿಷ್ ಮಾಧ್ಯಮದಲ್ಲಿ
ಓದದಿದ್ದರೆ ಇಂಗ್ಲಿಷ್ ಕಲಿಯಲು ಸಾಧ್ಯವಿಲ್ಲ; ಉನ್ನತ ವಿದ್ಯಾಭ್ಯಾಸಕ್ಕೆ ಹೋಗಲು
ಸಾಧ್ಯವಿಲ್ಲ' ಇತ್ಯಾದಿ. ಇವೆಲ್ಲವು ಕೇವಲ ಕಾಲ್ಪನಿಕ ಭಾವನೆಗಳು. ಈ ಭಾವನೆ
ಗಳಿಗೆ ಯಾವ ಸೈದ್ಧಾಂತಿಕ ತಳಹದಿಯೂ ಇಲ್ಲ. ಕಲಿಯುವ ವಯಸ್ಸಿನಲ್ಲಿ ಮಕ್ಕಳ
ಭಾವನಾತ್ಮಕ, ಬೌದ್ಧಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆ ಮತ್ತು ಪ್ರಭಾವಗಳ ಬಗ್ಗೆ
ವಿವೇಚನೆ ಮಾಡದೆ ಸೃಷ್ಟಿಸಿರುವ ಪೌರಾಣಿಕ ಭ್ರಮೆಗಳಿವು. ಇವೆಲ್ಲಕ್ಕಿಂತ ಮಿಗಿ
ಲಾಗಿ ಕರ್ನಾಟಕದಲ್ಲಿರುವ ಈ 'ಇಂಗ್ಲಿಷ್ ಅಭಿಮಾನಿ'ಗಳಲ್ಲಿ ಬಹಳಷ್ಟು ಮಂದಿಯ
ಮಾತೃಭಾಷೆ ಕನ್ನಡವಲ್ಲ. ಅವರು ತಮ್ಮ ಮೂಲ ಭಾಷೆಯಿಂದ ಸ್ಥಳಾಂತರ
ಗೊಂಡು ಇಲ್ಲಿ ನೆಲೆಸಿರುವವರು. ಮತ್ತೆ ಕೆಲವರು ವಿದ್ಯಾಭ್ಯಾಸವನ್ನು ಒಂದು ಉದ್ಯ
ಮವನ್ನಾಗಿ ಮಾಡಿಕೊಂಡು 'ಇಂಗ್ಲಿಷ್ ಅಭಿಮಾನಿಗಳು' ಸೃಷ್ಟಿಸಿರುವ ಪೌರಾಣಿಕ
ಭ್ರಮೆಗಳಿಂದ ಆರ್ಥಿಕ ಲಾಭ ಪಡೆಯುವವರು. ಮೂಲತಃ ಕನ್ನಡ ಮಾತೃಭಾಷೆಯ
ಲ್ಲದಿದ್ದರೂ ಕರ್ನಾಟಕದಲ್ಲಿ ಸಾಂಸ್ಕೃತಿಕ ಮಹತ್ವ ಪಡೆದುಕೊಂಡ ಜ್ಞಾನಪೀಠ
ಪ್ರಶಸ್ತಿ ವಿಜೇತರಾದ ದ ರಾ ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಅಥವಾ
ಕನ್ನಡ ಪ್ರಮುಖ ವಿದ್ವಾಂಸರು, ಬರಹಗಾರರು ಆದ ಜೆ ಪಿ ರಾಜರತ್ನಂ, ಡಿ ಎಲ್
ನರಸಿಂಹಾಚಾರ್, ಪು ತಿ ನರಸಿಂಹಾಚಾರ್, ಎ ಕೆ ರಾಮಾನುಜನ್ ಮುಂತಾದವರು
ಎಂದೂ ಕನ್ನಡ ಮಾಧ್ಯಮ ಬೇಡ ಇಂಗ್ಲಿಷ್ ಮಾಧ್ಯಮವೇ ಆಗಬೇಕು ಎಂದು ಹೇಳಿ
ದ್ದರಲ್ಲ. ಇದನ್ನು ನಾವು ಮಹತ್ವದ್ದಾಗಿ ಗಮನಿಸಬೇಕು.

ಕನ್ನಡವನ್ನು ಶಿಕ್ಷಣ ಮಾಧ್ಯಮವನ್ನಾಗಿ ಮಾಡಲು ಕನ್ನಡ ಅಭಿವೃದ್ಧಿ ಪ್ರಾಧಿಕಾರ
ಮತ್ತು ಕರ್ನಾಟಕ ಸರಕಾರ ಶ್ರಮಿಸುತ್ತಿವೆ. ಇತ್ತೀಚೆಗೆ ೫ನೆಯ ತರಗತಿಯ ಅನಂತರ
ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ತೆರೆಯಲು ಕೊಟ್ಟಿದ್ದ ಅನುಮತಿಯನ್ನು
ಕರ್ನಾಟಕ ಸರ್ಕಾರ ಹಿಂದಕ್ಕೆ ತೆಗೆದುಕೊಂಡಿರುವುದರ ವಿರುದ್ಧ ಕೆಲವು ಪ್ರತಿಕ್ರಿಯೆ
ಗಳು ಇಂಗ್ಲಿಷ್ ಪತ್ರಿಕೆಗಳಲ್ಲಿ ವ್ಯಕ್ತವಾಗಿವೆ:

Sorry KDA, but English is OK (ಇಂಡಿಯನ್ ಎಕ್ಸ್‌ಪ್ರೆಸ್, ಬೆಂಗಳೂರು ಸಪ್ಟಂಬರ್ ೫ ೧೯೯೮) The Language Muddle (ಡೆಕ್ಕನ್ ಹೆರಾಲ್ಡ್ ಬೆಂಗಳೂರು ಸಪ್ಟೆಂಬರ್ ೧೩ ೧೯೯೮)

France needs 'Champa' to keep English at bay (ಸ್ಟಾರ್ ಆಫ್ ಮೈಸೂರ್, ಮೈಸೂರು, ಸಪ್ಟಂಬರ್ ೧೪ ೧೯೯೮)

ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಗಸ್ಟ್ ೧೧ ರಂದು ಕರೆದಿದ್ದ ಸಮಾಲೋಚನ ಸಭೆಯಲ್ಲಿ ಕರ್ನಾಟಕದ ಪ್ರಮುಖ ಬರಹಗಾರರು, ಇಂಗ್ಲಿಷ್ ಮತ್ತು ಕನ್ನಡ ಪ್ರಾಧ್ಯಾಪಕರು, ಭಾಷಾವಿಜ್ಞಾನಿಗಳು, ಇಂಗ್ಲಿಷ್ ಭಾಷಾ ಬೋಧನೆಯ (ELT) ಪರಿಣತರು, ಪಠ್ಯಪುಸ್ತಕ ರಚಿಸುವವರು, ವಿಶ್ವವಿದ್ಯಾಲಯದ ಕುಲಪತಿಗಳು ಮತ್ತು ಉನ್ನತ ವಿಚಾರವಾದಿ (ಹುಸೇನರು ಹೇಳುವ 'language chuvanists')ಗಳ ಜೊತೆ ದಿನವಿಡೀ ಚರ್ಚಿಸಿ ತೆಗೆದುಕೊಂಡ ತೀರ್ಮಾನವಿದು. ನಾನೂ ಸಹ ಈ ಸಭೆಯಲ್ಲಿ ಹಾಜರಾಗಿದ್ದೆ. ಹಿಂದಾವ ಸಭೆಯೂ ಮಾಡದಷ್ಟು ತೀವ್ರವಾಗಿ ಏಕಕಂಠದಿಂದ ಮಾಡಿದ ಈ ಶಿಫಾರಸ್ಸಿಗೂ ಶಾಲೆಗಳಲ್ಲಿ ಇಂಗ್ಲಿಷನ್ನು ಒಂದು ಭಾಷೆಯಾಗಿ ಕಲಿಸುವುದಕ್ಕೂ ಯಾವ ಸಂಬಂಧವೂ ಇಲ್ಲ. ಸ್ಪಷ್ಟವಾಗಿ ಹೇಳುವುದಾದರೆ ಎಲ್ಲ ಶಾಲೆಗಳಲ್ಲೂ ಇಂಗ್ಲಿಷ್ ಭಾಷೆಯನ್ನು ಶಾಲಾ ವಿದ್ಯಾಭ್ಯಾಸದ ಅವಿಚ್ಛಿನ್ನ ಭಾಗವಾಗಿ ಕಲಿಸಬೇಕೆಂಬುದು ಎಲ್ಲ ಸದಸ್ಯರ ಬಯಕೆಯಾಗಿತ್ತು. ಅಷ್ಟೇ ಅಲ್ಲ ಪ್ರತಿ ಶಾಲೆಯಲ್ಲೂ ಸರಿಯಾಗಿ ತರಬೇತಿಗೊಂಡ ಅಧ್ಯಾಪಕರನ್ನು ನೇಮಿಸಬೇಕೆಂಬುದು ಆ ಸಭೆಯ ಸದಸ್ಯರು ಉಪಸ್ಥಿತರಿದ್ದ ಮಂತ್ರಿಗಳನ್ನು ಒತ್ತಾಯಿಸಿದರು. ಇದರ ಬಗ್ಗೆ ಯಾರ ವಿರೋಧವೂ ಇರಲಿಲ್ಲ.

ಮಾಧ್ಯಮದ ವಿಷಯದಲ್ಲಿ ಇಂಗ್ಲಿಷ್ ಮತ್ತು ಪ್ರಾದೇಶಿಕ ಭಾಷೆಗಳ ನಡುವಿನ ಹೋರಾಟ ಸುಮಾರು ೧೫೦ ವರ್ಷಗಳ ಹಳೆಯದು. ೧೮೫೪ರಲ್ಲೇ ವುಡ್ಸ್ ಎನ್ನುವವರು ಭಾರತದಲ್ಲಿ ವಿದ್ಯಾಭ್ಯಾಸ ಪ್ರಾಂತೀಯ ಭಾಷೆಯಲ್ಲಾಗಬೇಕು ಎಂದು ಶಿಫಾರಸ್ಸು ಮಾಡಿದ್ದರು. ೧೮೮೨ರಲ್ಲಿ ಮತ್ತೆ ಹಂಟರ್ ಆಯೋಗ ಶಿಕ್ಷಣ ಮಾಧ್ಯಮ ಪ್ರಾಂತೀಯ ಭಾಷೆಗಳಲ್ಲಾಗಬೇಕು ಎಂದು ಶಿಫಾರಸ್ಸು ಮಾಡಿದ್ದರು. ಈ ವಿಚಾರದಲ್ಲಿ ವೈಚಾರಿಕತೆ ಇರುವ, ವಿವೇಚನೆ ಮಾಡಲು ಬಲ್ಲ ಯಾವ ಭಾರತೀಯನೂ ಶಿಕ್ಷಣ ಮಾಧ್ಯಮ ಇಂಗ್ಲಿಷ್ ಆಗಬೇಕು ಎಂದು ಹೇಳಲಿಲ್ಲ. ಮಹಾತ್ಮ ಗಾಂಧಿಯವರ ಅಭಿಪ್ರಾಯ ಇಲ್ಲಿ ಉಲ್ಲೇಖನಾರ್ಹ: "ತಮ್ಮ ಸ್ವಂತ ಭಾಷೆಯಲ್ಲದೆ ಬೇರೆ ಭಾಷೆಯಲ್ಲಿ ವಿದ್ಯಾಭ್ಯಾಸ ಮಾಡುವ ಮಕ್ಕಳು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಎಂದು ನನಗೆ ಚೆನ್ನಾಗಿ ಮನವರಿಕೆಯಾಗಿದೆ" ಎಂದು ಹೇಳಿದ್ದಾರೆ.

೧೦ನೇ ತರಗತಿ ಪಾಸುಮಾಡಿದ ಒಬ್ಬ ವಿದ್ಯಾರ್ಥಿ ಟಿ ವಿ ಮತ್ತು ರೇಡಿಯೋಗಳಲ್ಲಿ ಬಿತ್ತರಿಸುವ ಸುದ್ದಿಯನ್ನು ಅರ್ಥಮಾಡಿಕೊಳ್ಳುವಂತಿರಬೇಕು; ಇಂಗ್ಲಿಷ್ ವೃತ್ತಪತ್ರಿಕೆಗಳನ್ನು ಮತ್ತು ನಿಯತಕಾಲಿಕಗಳನ್ನು ಸ್ವತಂತ್ರವಾಗಿ ಓದಿ ತಮಗೆ ಬೇಕಾದ ಲೇಖನಗಳ ಬಗ್ಗೆ ಟಿಪ್ಪಣಿ ಬರೆದುಕೊಳ್ಳುವಂತಿರಬೇಕು. ಇಂಗ್ಲಿಷ್ ಮಾತನಾಡಲು ಬಾರದಿದ್ದರೂ ಚಿಂತೆ ಇಲ್ಲ. ಕಾರಣ ಇಂಗ್ಲಿಷನ್ನು ಆಡುಭಾಷೆಯಾಗಿ ಮಕ್ಕಳಿಗೆ ಕಲಿಸಲು ನಮ್ಮ ಶಾಲೆಗಳಲ್ಲಿ ವ್ಯವಸ್ಥೆ ಇಲ್ಲ. ಅಂದರೆ ಈ ವಿಷಯದಲ್ಲಿ ತರಬೇತಿ ಪಡೆ

ದಿರುವ ಶಿಕ್ಷಕರು ಶಾಲೆಗಳಲ್ಲಿ ಇಲ್ಲ. ಹೆಚ್ಚಿನ ಶಾಲೆಗಳಲ್ಲಿ ಇಂಗ್ಲಿಷ್ ಶಿಕ್ಷಕರೇ ಇಲ್ಲ. ವಿಜ್ಞಾನ ಶಿಕ್ಷಕರು, ಇನ್ನೂ ಅನ್ಯಾಯವೆಂದರೆ ದೈಹಿಕ ಶಿಕ್ಷಣದ ಉಪಾಧ್ಯಾಯರು ಇಂಗ್ಲಿಷ್ ಹೇಳಿಕೊಡುತ್ತಿದ್ದಾರೆ. ಹೀಗಿರುವಾಗ ಮಕ್ಕಳು ಇಂಗ್ಲಿಷನ್ನು ಚೆನ್ನಾಗಿ ಕಲಿಯಬೇಕೆಂದರೆ ಹೇಗೆ ಸಾಧ್ಯ ? ನಮ್ಮ ದೇಶದಲ್ಲಿ ಇಂಗ್ಲಿಷ್ ಶಿಕ್ಷಕರನ್ನು ಇಂಗ್ಲಿಷ್ ಭಾಷಾ ಬೋಧನೆ (ELT) ಬಲ್ಲ ಪರಿಣತರಿಂದ ತಯಾರು ಮಾಡುವ ಕಾರ್ಯಕ್ರಮ ಕಾಲೇಜುಗಳಲ್ಲಿಯೂ ಇಲ್ಲ. ಆದರೂ ಒಂದೆರಡು ಸಂಸ್ಥೆಗಳು ಈ ಕೆಲಸವನ್ನು ಮಾಡುತ್ತಿವೆ. ಇವರಲ್ಲಿ ಮೈಸೂರಿನಲ್ಲಿರುವ ಪ್ರಾದೇಶಿಕ ವಿದ್ಯಾ ಸಂಸ್ಥೆ ಒಂದು. ಇಲ್ಲಿ ನಡೆಯುತ್ತಿದ್ದ ಎಂಟು ಸೆಮಿಸ್ಟರುಗಳ ಸಂಯೋಜಿತ ಬಿಎಡ್ ಪದವಿ ಕಾರ್ಯಕ್ರಮ ಇಡೀ ಭಾರತದಲ್ಲೇ ಅತ್ಯುತ್ತಮ ಮಟ್ಟದ್ದಾಗಿತ್ತು. ಇದಕ್ಕೆ ಅಪಾರ ಬೇಡಿಕೆಯೂ ಇತ್ತು. ಆದರೆ ಈ ಶಿಕ್ಷಣವನ್ನ ಈಗ NCERT ಕಿತ್ತುಹಾಕಿದೆ. ಇಂಗ್ಲಿಷ್ 'ಭಾಷಾ ಅಭಿಮಾನಿಗಳು' ಈ ಬಗ್ಗೆ ಯಾವ ವಿರೋಧವನ್ನೂ ವ್ಯಕ್ತಪಡಿಸಲಿಲ್ಲ. ಅಷ್ಟೇ ಅಲ್ಲ ನಮ್ಮ ಸಮಾಜದಲ್ಲಿ ಯಾರೂ ಉತ್ತಮ ಇಂಗ್ಲಿಷ್ ತರಬೇತಿ ಕಾರ್ಯಕ್ರಮಗಳು ಬೇಕು ಎಂದು ಗಂಭೀರವಾಗಿ ಪರಿಗಣಿಸಿಲ್ಲ. ಇಂಗ್ಲಿಷನ್ನು ಒಂದು ಭಾಷೆಯನ್ನಾಗಿ ಸರಿಯಾಗಿ ಕಲಿಸದೆ (ಕಲಿಸುವ ಪ್ರಯತ್ನವನ್ನೂ ಮಾಡದೆ) ಅದನ್ನು ಶಿಕ್ಷಣ ಮಾಧ್ಯಮವನ್ನಾಗಿ ಅಳವಡಿಸಿಕೊಳ್ಳಬೇಕು ಎಂದು ಆಗ್ರಹಪಡಿಸುವುದು ಅಸಂಗತ ಅಪ್ರಬುದ್ಧ ವಾದ. ಸರಿಯಾದ ಭಾಷೆಯ ಸಿದ್ಧತೆ ಇಲ್ಲದೆ ಮಕ್ಕಳು ಅದರಲ್ಲಿ ವಿದ್ಯಾಭ್ಯಾಸ ಮಾಡಲು ಶಕ್ತರಾಗುತ್ತಾರೆ ಎಂದು ಭಾವಿಸುವುದಾಗಲೀ ಸಮರ್ಥಿಸುವುದಾಗಲೀ ಅವೈಜ್ಞಾನಿಕವಾದುದು. ಸರಿಯಾದ ಶಿಕ್ಷಕರಿಲ್ಲದೆ ಅವರು ಇಂಗ್ಲಿಷ್ ಕಲಿಯುತ್ತಾರೆ ಎಂದರೆ ಅದು ಪವಾಡವೇ ಸರಿ.

ಇಂಗ್ಲಿಷನ್ನು ಒಂದು ಭಾಷೆಯಾಗಿ ಕಲಿಯುವುದಕ್ಕೂ ಅದನ್ನೇ ಎಲ್ಲ ವಿಷಯಗಳನ್ನು ಕಲಿಯುವ ಶಿಕ್ಷಣ ಮಾಧ್ಯಮವನ್ನಾಗಿ ಅಳವಡಿಸಿಕೊಳ್ಳುವುದಕ್ಕೂ ವ್ಯತ್ಯಾಸವಿದೆ. ಈ ಎರಡರ ನಡುವೆ ನಮ್ಮ 'ಇಂಗ್ಲಿಷ್ ಭಾಷಾಭಿಮಾನಿಗಳಲ್ಲಿ' ವಿಪರೀತ ಗೊಂದಲವಿದೆ. ಅಲ್ಲದೆ ಇಂಗ್ಲಿಷ್ ಕಲಿಯುವಿಕೆಗೂ ಮತ್ತು ಮಾಧ್ಯಮಕ್ಕೂ ಸಂಬಂಧ ಕಲ್ಪಿಸಿ ಇಂಗ್ಲಿಷ್ ಮಾಧ್ಯಮವಿಲ್ಲದೆ ಇಂಗ್ಲಿಷ್ ಕಲಿಯಲು ಸಾಧ್ಯವಿಲ್ಲ ಎನ್ನುವ ಒಂದು 'ಪೌರಾಣಿಕ ನಂಬಿಕೆ' (ಮಿಥ್) ಸೃಷ್ಟಿಯಾಗಿದೆ. ಇದು ಇಂಗ್ಲಿಷ್ ಭಾಷಾ ಬೋಧನೆ (ELT) ಯಲ್ಲಿ ಅವೈಜ್ಞಾನಿಕವಾದುದು. ಹಾಗಿದ್ದಲ್ಲಿ ಹಿಂದಿ ಪ್ರಚಾರ ಸಭಾದವರು ಭಾರತದಾದ್ಯಂತ ಹಿಂದಿ ಕಲಿಸಲು ಹಿಂದಿ ಮಾಧ್ಯಮವನ್ನೇ ಒತ್ತಾಯಮಾಡಬೇಕಿತ್ತು. ಭಾಷಾವಿಜ್ಞಾನದಲ್ಲಿ ಕಾಮಿನಿ ದೇವಯ್ಯ, ಬಷೀರ್ ಹುಸೇನ್ ಮತ್ತು ಕೃಷ್ಣಪಟ್ಟಂ ಅವರ ವಾದವನ್ನು ಸಮರ್ಥಿಸುವ ಯಾವುದೇ ಸಿದ್ಧಾಂತವಿದ್ದಲ್ಲಿ ಅದನ್ನು ಸೂಚಿಸಿದರೆ ಅದರ ಲಾಭವನ್ನು ನಾನೂ ಪಡೆದುಕೊಳ್ಳು

ತ್ತೇನೆ. ಯಾವ ಚಿಂತನೆ ಅಥವಾ ಸಿದ್ಧಾಂತದ ಹಿನ್ನೆಲೆಯೂ ಇಲ್ಲದೆ ಸರಳವಾಗಿ ಮಂಡಿಸುವ ಇವರ ವಾದಗಳಲ್ಲಿ ಕುರುಡು ಭಾವುಕತೆಯಲ್ಲದೆ ಬೇರೇನೂ ಇಲ್ಲ. ಕೊನೆಯ ಪಕ್ಷ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮಾಡಿದ ಶಿಫಾರಸುಗಳ ಸ್ಪಷ್ಟ ಚಿತ್ರಣವೂ ಇವರಿಗೆ ಇದ್ದಂತಿಲ್ಲ. ಉದಾಹರಣೆಗೆ ಕಾಮಿನಿ ದೇವಯ್ಯ ಬರೆಯುತ್ತಾರೆ: "ಪ್ರಪಂಚದಾದ್ಯಂತ ವ್ಯಾಪಾರ ಉದ್ಯಮಗಳಲ್ಲಿ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ವಿನಿಮಯಗಳಲ್ಲಿ ಇಂಗ್ಲಿಷನ್ನು ವಿಶ್ವಭಾಷೆಯನ್ನಾಗಿ ಒಪ್ಪಿಕೊಂಡಿರುವಾಗ ಈಗಿನ ತಲೆಮಾರಿನವರಿಗೆ ಇಂಗ್ಲಿಷನ್ನು ಕಲಿಸದಿರುವುದು ಮೂರ್ಖತನಕ್ಕಿಂತ ಕಡಿಮೆ ಏನಲ್ಲ" ('Sorry KDA but English is OK' ಇಂಡಿಯನ್ ಎಕ್ಸ್‌ಪ್ರೆಸ್ ಸಪ್ಟೆಂಬರ್ ೫ ೧೯೯೮). "ಮೂರ್ಖತನ"! ಎಂತಹ ಬೆಚ್ಚಿಬೀಳಿಸುವ ಧೈರ್ಯ! ವಾಸ್ತವ ಸಂಗತಿಗಳನ್ನು ಸರಿಯಾಗಿ ಗ್ರಹಿಸದೆ, ಬಹು ಭಾಷಾ ಸಮಾಜದಲ್ಲಿ ಮೊದಲನೆಯ, ಎರಡನೆಯ ಮತ್ತು ಮೂರನೆಯ ಭಾಷೆಗಳ ಸ್ಥಾನಮಾನಗಳನ್ನು ಅರಿಯದೆ ಅವುಗಳ ಬಗ್ಗೆ ಅವೈಜ್ಞಾನಿಕ ಕಲ್ಪನೆಗಳನ್ನು ಕಟ್ಟಿಕೊಂಡು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಹಿಂದಿರುವ ಬುದ್ಧಿಜೀವಿಗಳ ಶಿಫಾರಸ್ಸನ್ನು "ಮೂರ್ಖತನ" ಎನ್ನುವ ಅವೈಚಾರಿಕ ಆತ್ಮವಿಶ್ವಾಸವಿದೆ ಇವರಿಗೆ. ವಿಶ್ವದ ಉನ್ನತ ಭಾಷಾವಿಜ್ಞಾನಿಗಳು ಮನಃಶಾಸ್ತ್ರಜ್ಞರುಗಳಾದ ಸುನೀತ್ ಕುಮಾರ ಚಟರ್ಜಿ, ಜಾನ್ ಪಿಯಾಜೆ, ನೋಮ್ ಚೊಮ್‌ಸ್ಕಿ, ಲೀ ವೈಗಟ್ಸ್ಕಿ ಅಂತಹ ಬುದ್ಧಿದೈತ್ಯರೂ ಈ ರೀತಿಯ ಅವಹೇಳನದ ಪದ ಬಳಸಲು ಹಿಂಜರಿಯುತ್ತಿದ್ದರು ಎನಿಸುತ್ತದೆ.

ಬಹುಶಃ ನಾವು ಎಲ್ಲಿ ಇಂಗ್ಲಿಷ್ ಭಾಷೆಯನ್ನು ಮಕ್ಕಳಿಗೆ ಕಲಿಸಲು ವಿಫಲರಾಗಿದ್ದೇವೋ ಅಲ್ಲಿ ಆ ಭಾಷೆಯನ್ನೆ ಕಲಿಕೆಯ ಮಾಧ್ಯಮವಾಗಿ ಅಳವಡಿಸಿಕೊಳ್ಳುತ್ತಿದ್ದೇವೆ. ವಿದ್ಯಾರ್ಥಿಗಳಿಗೆ ಇದಕ್ಕಿಂತ ಅಪಾಯಕಾರಿಯಾದುದು ಮತ್ತೊಂದಿಲ್ಲ ಸಮಾಜಕ್ಕೂ ಸಹ ಇದರಿಂದ ಅಪಾರ ಹಾನಿಯಾಗುತ್ತದೆ ಈಗ ಹಿಂದುಳಿದ ಜನಾಂಗದವರು ವಿದ್ಯಾಭ್ಯಾಸಕ್ಕಾಗಿ ಮುಂದೆ ಬರುತ್ತಿದ್ದಾರೆ ಈ ಜನಾಂಗದ ಬಹಳ ಮಕ್ಕಳು ಮೊದಲನೆಯ ತಲೆಮಾರಿನಲ್ಲಿ ವಿದ್ಯೆ ಕಲಿಯುತ್ತಿದ್ದಾರೆ. ಇಂಗ್ಲಿಷ್ ಭಾಷೆಯ ಭಾವುಕ ಉತ್ಸಾಹಿಗಳು ಅದು ವಿಶ್ವಭಾಷೆ ಎನ್ನುವ ಒಂದೇ ಕಾರಣಕ್ಕೆ ಸೈದ್ಧಾಂತಿಕ ಅಥವಾ ಸಾಂಸ್ಕೃತಿಕ ತಳಹದಿ ಇಲ್ಲದೆ ಸಮೂಹ ಮಾಧ್ಯಮಗಳಲ್ಲಿ ಸೃಷ್ಟಿಸಿರುವ ಅಭಿಪ್ರಾಯಗಳು ಈ ಜನಾಂಗದಲ್ಲಿ ಭಯ ಹುಟ್ಟಿಸುತ್ತಿರುವುದಲ್ಲದೆ, ಶಿಕ್ಷಣ ಮಾಧ್ಯಮದ ಬಗ್ಗೆ ಎಲ್ಲ ಹಿಂದುಳಿದಿರುವಿಕೆಗೂ ಇಂಗ್ಲಿಷ್ ಮಾಧ್ಯಮವನ್ನೇ ಸಂಜೀವಿನಿ ಎನ್ನುವಂತೆ ಪರಿಹಾರ ಸೂಚಿಸಲಾಗುತ್ತಿದೆ. ಈ ಅಭಿಪ್ರಾಯ ನಮ್ಮ ಜನಗಳಲ್ಲಿ ಭರವಸೆಯನ್ನು ಹುಟ್ಟಿಸಿ ತಮ್ಮ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮಕ್ಕೆ ತಳ್ಳುವಂತೆ ಮಾಡುತ್ತಿದೆ. ಈ ಮಕ್ಕಳು ಇಂಗ್ಲಿಷ್ ಭಾಷೆಯನ್ನು ಕಲಿತಿರುವುದಿಲ್ಲ. ಶಿಕ್ಷಕರು ಇಂಗ್ಲಿಷ್‌ನಲ್ಲಿ ಹೇಳುವುದನ್ನು ಅವರು ಅರ್ಥಮಾಡಿಕೊಳ್ಳಲಾಗದೆ ಕಂಗಾಲಾಗಿ ಶಾಲೆ

ಯನ್ನು ಬಿಡುತ್ತಾರೆ. ಇವರ ಜೊತೆಗೆ 'ಉಪಯೋಗವಿಲ್ಲದವರು' 'ಕಲಿಯಲಾಗದವರು' ಎನ್ನುವ ಪಟ್ಟಿ ಕಟ್ಟಿಕೊಂಡು (branded) ಬೀದಿ ಪಾಲಾಗುತ್ತಾರೆ; ವಿದ್ಯೆಯಿಂದ ವಂಚಿತರಾಗುತ್ತಾರೆ. ಇಲ್ಲಿ ಒಂದು ಉದಾಹರಣೆಯನ್ನು ಕೊಡಬಹುದು. ನಮ್ಮ ಸಹೋದ್ಯೋಗಿಗಳಾದ ಒಬ್ಬ ಪ್ರೊಫೆಸರ್ ಮತ್ತು ಒಬ್ಬ ಸಫಾಯಿವಾಲ ಇಬ್ಬರೂ ಕೇಂದ್ರ ಸರಕಾರ ನಡೆಸುತ್ತಿರುವ ಶಾಲೆಯಲ್ಲಿ ತಮ್ಮ ಮಕ್ಕಳಿಗೆ ಒಂದನೆಯ ತರಗತಿಗೆ ಪ್ರವೇಶ ಕೋರಿದರು. ಪ್ರಾದೇಶಿಕ ವಿದ್ಯಾಸಂಸ್ಥೆಯ ಇಂಗ್ಲಿಷ್ ವಿಭಾಗದ ನಾನು ಮತ್ತು ನನ್ನ ಸಹೋದ್ಯೋಗಿಗಳು ಸಫಾಯಿವಾಲನಿಗೆ ತನ್ನ ಮಗುವನ್ನು ಇಂಗ್ಲಿಷ್ ಮಾಧ್ಯಮದಲ್ಲಿ ಸೇರಿಸಬೇಡ ಎಂದು ಹೇಳಿದೆವು. (ಪ್ರೊಫೆಸರ್ ಅವರದು ಭಾರತದಾದ್ಯಂತ ವರ್ಗವಾಗಬಹುದಾದ ಕೇಂದ್ರ ಸರಕಾರದ ಕೆಲಸವಾದ್ದರಿಂದ ನಾವು ಅವರಿಗೆ ಏನೂ ಹೇಳಲಿಲ್ಲ.) ಆದರೆ ಸಫಾಯಿವಾಲ ನಮ್ಮ ಮಾತು ಕೇಳಲಿಲ್ಲ. 'ಕೇಂದ್ರ ಸರಕಾರದ ನೌಕರನಾದ ನನಗೆ ಶಾಲೆಯಲ್ಲಿ ನಮ್ಮ ಮಕ್ಕಳಿಗೆ ಮೀಸಲಾತಿ ಇದೆ.' ಸಫಾಯಿವಾಲ ಮಗುವನ್ನು ಸೇರಿಸಿದ. ಇದು ೧೫-೨೦ ವರ್ಷಗಳ ಹಿಂದಿನ ಮಾತು. ಈಗ ಪ್ರೊಫೆಸರರ ಮಗು ಅಮೆರಿಕದಲ್ಲಿದ್ದಾನೆ. ಸಫಾಯಿವಾಲನ ಮಗ ೫ನೆಯ ತರಗತಿಯಲ್ಲೇ ವಿದ್ಯಾಭ್ಯಾಸ ನಿಲ್ಲಿಸಿ ಅದೇ ಶಾಲೆಯಲ್ಲೇ ಅಪ್ಪನ ಪಾರಂಪರಿಕ ಕೆಲಸ ಮಾಡುತ್ತಿನೆ. (ವ್ಯಕ್ತಿಗಳಿಗೆ ಆಗಬಹುದಾದ ಮುಜುಗರ ತಪ್ಪಿಸಲು ಇಲ್ಲಿ ಹೆಸರುಗಳನ್ನು ಕೊಟ್ಟಿಲ್ಲ). ಇಂಗ್ಲಿಷ್ ಮಾಧ್ಯಮದ ಬಗ್ಗೆ ಈ 'ಅಭಿಮಾನಿಗಳು' ಪತ್ರಿಕೆಗಳಲ್ಲಿ ಕೊಡುವ ಪ್ರಚಾರ, ಸೃಷ್ಟಿಸುವ ಅಭಿಪ್ರಾಯ ಇಂತಹ ಸಾವಿರಾರು ಮಕ್ಕಳನ್ನು ಬಲಿತೆಗೆದುಕೊಂಡಿವೆ. ಈ ರೀತಿ ಮಕ್ಕಳು ವಿದ್ಯಾಭ್ಯಾಸವನ್ನು ಬಿಡುವುದರಿಂದ ರಾಷ್ಟ್ರದ ಆರ್ಥಿಕ ಮತ್ತು ಸಾಂಸ್ಕೃತಿಕ ಹಿಂದುಳಿಯುವಿಕೆಗೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಇದನ್ನೇ ನೊಬೆಲ್ ಪ್ರಶಸ್ತಿ ವಿಜೇತ ಅಮರ್ತ್ಯಸೇನ್ ಅವರು ರಾಷ್ಟ್ರದ ಆರ್ಥಿಕ ಪ್ರಗತಿಗೆ ಇರುವ ಮುಖ್ಯ ಅಡಚಣೆ ಎಂದು ಹೇಳಿರುವುದು. ರಾಷ್ಟ್ರದಾದ್ಯಂತ ಇಂಗ್ಲಿಷ್ ಮಾಧ್ಯಮದಲ್ಲಿ ಹೇಗೋ ಮುಂದುವರಿಯುವ ಇಂತಹ ಸಾವಿರಾರು ಮಕ್ಕಳು ಇಂಗ್ಲಿಷನ್ನೂ ಕಲಿಯದೆ, ಕನ್ನಡವನ್ನೂ ಕಲಿಯದೆ ಭಾಷಾ ದರಿದ್ರರಾಗಿ ಬೆಳೆಯುತ್ತಾರೆ. ಯಾವ ಭಾಷೆಯನ್ನೂ ಸಮರ್ಥವಾಗಿ ಕಲಿಯಲಾಗದೆ ಸೃಜನಶೀಲತೆಯನ್ನೂ ಕಳೆದುಕೊಂಡು ಕೀಳರಿಮೆಯನ್ನು ಬೆಳೆಸಿಕೊಳ್ಳುತ್ತಾರೆ; ಸಾಂಸ್ಕೃತಿಕ ಬೇರನ್ನೇ ಕಳೆದುಕೊಳ್ಳುತ್ತಾರೆ.

ಕತ್ತರಿಸಿದಿಲಿಬಾಲ ಮಿಡುಕುತ್ತದೆ (ಅಡಿಗ)

ಇದು ನಾವು ತಪ್ಪಿಸಬಹುದಾದ ದುರಂತ. ಈ ಮಕ್ಕಳ ಪ್ರಗತಿ ಎನ್ನುವುದು ಇಂಗ್ಲಿಷ್ ಭಾಷೆಯ ಜೊತೆ ಸೇರಿದ್ದರೆ ಅದು ಇಂಗ್ಲಿಷನ್ನು ಒಂದು ಭಾಷೆಯಾಗಿ ಸಮರ್ಥವಾಗಿ ಕಲಿಯುವುದರಲ್ಲವೆ ಕಲಿಕೆಯ ಮಾಧ್ಯಮವಾಗಿ ಅಳವಡಿಸಿಕೊಳ್ಳುವುದರಲ್ಲಿ ಅಲ್ಲ.

ನ್ಯಾಯಾಲಯಗಳು ಸಹ ಈ ವಿಚಾರದಲ್ಲಿ ಕೇವಲ ಸಂವಿಧಾನಾತ್ಮಕವಾಗಿ ತೀರ್ಮಾನ ಮಾಡುವುದು ಸೂಕ್ತವಲ್ಲ. ಭಾಷೆ ಕಲಿಯುವ ಬಗ್ಗೆ, ಕಲಿಸುವ ಬಗ್ಗೆ, ಸಂಸ್ಕೃತಿಗೂ, ಪರಂಪರೆಗೂ ಮತ್ತು ಭಾಷೆಗೂ ಇರುವ ಸಂಬಂಧಗಳ ಬಗ್ಗೆ ಅಪಾರ ಜ್ಞಾನ ಬೆಳೆದಿದೆ. ನ್ಯಾಯಾಧೀಶರುಗಳಿಗೆ ಈ ಎಲ್ಲ ವಿಷಯಗಳು ತಿಳಿದಿರುವುದಿಲ್ಲ. ತಿಳಿದಿರಲು ಸಾಧ್ಯವಿಲ್ಲ. ಈ ಬಗ್ಗೆ ನ್ಯಾಯಾಧೀಶರುಗಳು ಭಾರತದ ಉತ್ತಮ ಬರಹಗಾರರು ಮತ್ತು ಭಾಷಾ ವಿಜ್ಞಾನಿಗಳ ಜೊತೆ ವಿವರವಾಗಿ ವಿಚಾರವಿನಿಮಯ ಮಾಡಿಕೊಂಡು ತೀರ್ಮಾನಕ್ಕೆ ಬರುವುದು ಮಕ್ಕಳ ಸೃಜನಶೀಲತೆಗೆ, ರಾಷ್ಟ್ರದ ಭವಿಷ್ಯಕ್ಕೆ ಒಳ್ಳೆಯದು.

ಮಗು ಭಾಷೆಯನ್ನು ಹೇಗೆ ಕಲಿಯುತ್ತದೆ? ತನ್ನ ಬೆಳವಣಿಗೆಯ ಯಾವ ಹಂತದಲ್ಲಿ ಕಲಿಯುತ್ತದೆ? ಸಿದ್ಧಾಂತಗಳು ಬೇಕಾದಷ್ಟಿವೆ. ನಿಖರವಾದ ಉತ್ತರ ಇನ್ನೂ ದೂರವೇ ಉಳಿದಿದೆ. ಮಗು ಕೇವಲ ಅನುಕರಣೆಯಿಂದ ಮಾತ್ರ ಭಾಷೆ ಕಲಿಯುತ್ತದೆಯೆ? ಅಥವಾ ಹುಟ್ಟಿನಿಂದಲೇ ತಲೆಯಲ್ಲಿರುವ ವ್ಯಾಕರಣ ಭಾಷೆಯನ್ನು ಕಲಿಯುವುದಕ್ಕೆ ಅನುಕೂಲಮಾಡಿಕೊಡುತ್ತದೆಯೆ? ಇನ್ನೂ ನಿಗೂಢವೆಂದರೆ ಮಗು ಗರ್ಭದಲ್ಲಿರುವಾಗಲೆ ಭಾಷೆ ಕಲಿಯುವ ಪ್ರಕ್ರಿಯೆ ಆರಂಭವಾಗಿರುತ್ತದೆಯೆ? ಅಭಿಮನ್ಯು ತಾಯಿಯ ಗರ್ಭದಲ್ಲಿರುವಾಗಲೇ ಚಕ್ರವ್ಯೂಹವನ್ನು ಪ್ರವೇಶಿಸುವ ವಿದ್ಯೆಯನ್ನು ಕೃಷ್ಣನಿಂದ ಪಡೆಯುತ್ತಾನೆ ಎಂದು ಮಹಾಭಾರತದಲ್ಲಿ ಓದಿದ್ದೇವೆ. ನಾನು ಎಳೆಯವನಾಗಿದ್ದಾಗ ಇದರ ಬಗ್ಗೆ ಕುಹಕವಾಡಿ ಲೇವಡಿ ಮಾಡಿದ್ದುಂಟು. ಆದರೆ ಈಗ ಪಶ್ಚಿಮದ ಭಾಷಾವಿಜ್ಞಾನಿಗಳು ಮಗು ೩೧ ದಿನಗಳ ಭ್ರೂಣವಾಗಿರುವಾಗಲೇ ಭಾಷೆಯನ್ನು ಗ್ರಹಿಸುತ್ತ ಹೋಗುತ್ತದೆ ಎಂದು ಸಂಶೋಧನೆಯಿಂದ ಸ್ಥಾಪಿಸುತ್ತಿದ್ದಾರೆ. ಆ ಭಾಷೆ ಮನೆಯಲ್ಲಿ ಆಡುವ ಭಾಷೆ ಆಗಿರುತ್ತದೆ. ಮಗುವಿನ ವ್ಯಕ್ತಿತ್ವದ ಬೌದ್ಧಿಕ ಮತ್ತು ಭಾವನಾತ್ಮಕ ಬೆಳವಣಿಗೆ ಆಗುವುದು ಈ ಭಾಷೆಯಲ್ಲೇ. ಈ ಭಾಷೆ ಸಾಧಾರಣವಾಗಿ ಪ್ರಾಂತೀಯ ಭಾಷೆ ಆಗಿರುತ್ತದೆ. ಮಕ್ಕಳ ಗ್ರಹಣ ಸಾಮರ್ಥ್ಯ (cognitive abilities) ಅಂದರೆ ಅವರ ತರ್ಕಶಕ್ತಿ, ವಿಚಾರ ಶಕ್ತಿ, ವಿಮರ್ಶಾತ್ಮಕ ವಿವೇಚನೆ, ಕಾಲ್ಪನಿಕ ಶಕ್ತಿ ಇತ್ಯಾದಿಗಳು ಸ್ವಾಭಾವಿಕವಾಗಿಯೇ ಆ ಭಾಷೆಯಲ್ಲೇ ಬೆಳೆಯುತ್ತವೆ. ಆದ್ದರಿಂದ ಅವರ ಬುದ್ಧಿಶಕ್ತಿ ವಿಕಾಸಗೊಳ್ಳುವ ಆರಂಭಿಕ ವರ್ಷಗಳಲ್ಲಿ ಬಳಕೆಯಾಗುವ ಭಾಷೆ ಮುಂದೆ ವಿದ್ಯೆ ಕಲಿಯುವ ಭಾಷೆಯೂ ಆಗಬೇಕು ಎನ್ನುವುದು ಸಮರ್ಪಕವಾಗಿದೆ. ಈ ಭಾಷೆಯಲ್ಲಿ ಯಾವುದೇ ಬದಲಾವಣೆ ಮಾಡಿದರೂ ಮಕ್ಕಳ ಗ್ರಹಣ ಸಾಮರ್ಥ್ಯದ ಬೆಳವಣಿಗೆಯಲ್ಲಿ ಅಪಾಯವಾಗಬಹುದು. ಆದರೆ ಕಾಮಿನಿ ದೇವಯ್ಯನವರು "ಎಷ್ಟು ಜಾಗ್ರತೆ ಮಕ್ಕಳ ವಿದ್ಯಾಭ್ಯಾಸದಲ್ಲಿ ಇಂಗ್ಲಿಷ್ ಬಳಸಲು ಆರಂಭವಾದರೆ ಮಕ್ಕಳಿಗೆ ಅಷ್ಟೂ ಒಳ್ಳೆಯದು" ಎಂದು ಉಪದೇಶ ಮಾಡುತ್ತಾರೆ. ಯಾವ ಭಾಷಾ ಶಾಸ್ತ್ರಜ್ಞ ಇದನ್ನು ಹೇಳುತ್ತಾನೆ? ಅದರಲ್ಲೂ ಇಂಗ್ಲಿಷನ್ನು ಎರಡನೆಯ ಭಾಷೆಯಾಗಿ ಕಲಿಯುತ್ತಿರುವ ಯಾವ ದೇಶದಲ್ಲಿ ಇದು ಸತ್ಯ? ಆರಂಭದಿಂದ ಪ್ರಾದೇಶಿಕ ಭಾಷೆಯಲ್ಲಿ ಕಲಿಸಿ ಅನಂತರ ಮಾಧ್ಯಮಿಕ

ಅಥವಾ ಪ್ರೌಢಶಾಲ ಹಂತ ಮುಗಿಸಿದ ಮೇಲೆ ಇವರು ತುಂಬಾ ಭಾವುಕತೆಯಿಂದ ಕಾಣುವ ಇಂಗ್ಲಿಷ್ ಮಾಧ್ಯಮಕ್ಕೆ ಬದಲಾಯಿಸಿಕೊಳ್ಳಬಹುದು. ಆದರೂ ಬಡಲಾ ವಣೆ ಮಕ್ಕಳಿಗೆ ಅಷ್ಟು ಸುಲಭವಾಗುವುದಿಲ್ಲ. ಅಲ್ಲದೆ ಮಕ್ಕಳಿಗೆ ಅಲ್ಲಿಯವರೆಗೂ ಎಷ್ಟು ಇಂಗ್ಲಿಷ್ ಕಲಿಸಿದ್ದಾರೆ ಎನ್ನುವುದರ ಮೇಲೂ ಇದು ತೀರ್ಮಾನವಾಗುತ್ತದೆ. ಇದು ಬಹುಭಾಷಾ ದೇಶದಲ್ಲಿ ಮಕ್ಕಳ ಮೇಲೆ ಆಗುವ ಹೊರೆ. ಇದರ ಬಗ್ಗೆ ವಿಷಾದ ವಾಗುತ್ತದೆ. ಆದರೆ ನಮಗೆ ಬೇರೆ ಮಾರ್ಗವಿಲ್ಲ.

ಇಂಗ್ಲಿಷ್ ಭಾಷೆ ಅಧ್ಯಾಪಕನಾಗಿ ನನ್ನ ಅನುಭವದಿಂದ ಒಂದು ಉದಾಹರಣೆಯನ್ನು ಇಲ್ಲಿ ಕೊಡಬಯಸುತ್ತೇನೆ. ನಮ್ಮಲ್ಲಿ ಬಿಎಡ್ ಓದಲು ಪ್ರಾದೇಶಿಕ ಭಾಷೆಯಲ್ಲಿ ಪದವಿ ಪೂರ್ವದವರೆಗೆ ವಿದ್ಯಾಭ್ಯಾಸ ಮಾಡಿರುವವರು ಬರುತ್ತಾರೆ. ಇವರು ಮೊದಲ ಸೆಮಿಸ್ಟರಿನಲ್ಲಿ ಹೇಗೂ ಉತ್ತೀರ್ಣರಾಗುತ್ತಾರೆ; ಕೆಲವರು ಅನುತ್ತೀರ್ಣ ರಾಗುತ್ತಾರೆ. ಇಂಗ್ಲಿಷ್ ಎಂಬ ಪಿಶಾಚಿಗೆ ಹೆದರಿ ಇವರು ಓದನ್ನೇ ಬಿಟ್ಟು ಹೋಗಲು ಏರ್ಪಾಟು ಮಾಡಿಕೊಳ್ಳುತ್ತಾರೆ. ಆದರೆ ಅವರು ಉತ್ತಮ ವಿದ್ಯಾರ್ಥಿಗಳು ಎಂದು ನಮಗೆ ಮನವರಿಕೆಯಾದಲ್ಲಿ ಅವರನ್ನು ಹೋಗಗೊಡುವುದಿಲ್ಲ. ಬಹುಶಃ ಅವರಿಗೆ ಒಂದೆರಡು ಗಂಟೆ ಹೆಚ್ಚು ಗಮನಕೊಟ್ಟು ಇಂಗ್ಲಿಷ್ ಭಾಷೆಯಲ್ಲಿನ ಅವರ ಕೊರತೆ ಗಳನ್ನು ಸರಿಮಾಡಿಕೊಳ್ಳಲು ಸಹಾಯ ಮಾಡುತ್ತೇವೆ. ಮುಂದಿನ ಪ್ರಗತಿ ಅದ್ಭುತ. ಕೊನೆಯ ಎಂಟನೆಯ ಸೆಮಿಸ್ಟರಿಗೆ ಬರುವ ವೇಳೆಗೆ ಆರಂಭದಿಂದಲೂ ಇಂಗ್ಲಿಷ್ ಮಾಧ್ಯಮದಲ್ಲಿ ಬಂದ ವಿದ್ಯಾರ್ಥಿಗಳನ್ನೆಲ್ಲ ಹಿಂದೆ ಬಿಟ್ಟು ಇವರು ಪ್ರಥಮ ದರ್ಜೆ ಯಲ್ಲಿ ಉತ್ತೀರ್ಣರಾಗಿ ಹೋಗುತ್ತಾರೆ! ಅವರ ಪ್ರಗತಿಯನ್ನು ನಾವು ಅಷ್ಟು ಸುಲಭ ವಾಗಿ ತಳ್ಳಿಹಾಕಲು ಸಾಧ್ಯವಿಲ್ಲ. ಕಾರಣ ೩೦ ವರ್ಷಗಳಿಗೂ ಮಿಕ್ಕಿ ಈ ಪದವೀಧ ರರು ಭಾರತದ ಹಲವಾರು ರಾಜ್ಯಗಳಲ್ಲಿ ಹಲವಾರು ಕ್ಷೇತ್ರಗಳಲ್ಲಿ ತಮ್ಮ ಸೇವೆಯನ್ನು ಸಲ್ಲಿಸಿ ಪ್ರಮುಖವಾದ ಸ್ಥಾನಗಳನ್ನು ತಲುಪಿದ್ದಾರೆ. ಅವರ ಪ್ರಗತಿ ಪ್ರಾದೇಶಿಕ ಭಾಷಾ ಮಾಧ್ಯಮದ ಉಪಯುಕ್ತತೆಯನ್ನು ತೋರುವುದಲ್ಲದೆ ಮೊದಲಿನಿಂದಲೂ ಇಂಗ್ಲಿಷ್ ಮಾಧ್ಯಮವಿಲ್ಲದಿದ್ದರೆ ಉನ್ನತ ಶಿಕ್ಷಣದಲ್ಲಿ ಪ್ರಗತಿ ಸಾಧಿಸಲು ಸಾಧ್ಯವಿಲ್ಲ ಎನ್ನುವ ಪೌರಾಣಿಕ ಭ್ರಮೆಯನ್ನು ಅಳಿಸಿಹಾಕಿದೆ.

೮೦ ರ ದಶಕದಲ್ಲಿ ನಾನು ದೆಹಲಿಯಲ್ಲಿ NCERT ಶಾಲಾ ಮಕ್ಕಳಿಗೆ ಪಠ್ಯಪುಸ್ತಕ ಬರೆಯುವ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದೆ. ಒಮ್ಮೆ ಇಂಗ್ಲಿಷ್ ಭಾಷೆ ಹೇಳಿ ಕೊಡುವ ಬ್ರಿಟಿಷ್ ಪರಿಣತರೊಡನೆ ಒಂದು ತಿಂಗಳ ಕಾಲ ಕೆಲಸಮಾಡುವ ಅವಕಾಶ ಸಿಕ್ಕಿತು. ಬಿಡುವಿನ ವೇಳೆಯಲ್ಲಿ ತೃತೀಯ ರಾಷ್ಟ್ರಗಳಲ್ಲಿ ಇಂಗ್ಲಿಷ್ ಭಾಷೆಯ ಸ್ಥಾನದ ಬಗ್ಗೆ ಚರ್ಚೆ ಮಾಡುತ್ತಿದ್ದೆವು. ಯಾರೋ ಹೇಳಿದರು (ನಾನೇ ಇದ್ದರೂ ಇರಬಹುದು) "ನಾವು ದಕ್ಷಿಣ ಭಾರತದವರು ಮತ್ತು ಇಂಗ್ಲಿಷ್ ಅಧ್ಯಾಪಕರುಗಳು ಇಂಗ್ಲಿಷನ್ನು ಭಾರತದಲ್ಲಿ ಜೀವಂತವಾಗಿ ಇಟ್ಟಿದ್ದೇವೆ" ಎಂದು. "ನಿಮಗೆ ಆತ್ಮ ಗೌರವವಿಲ್ಲವೆ ?" ಎಂದು ಇಂಗ್ಲಿಷರು ಬಳಸುವ ಹರಿತವಾದ ವ್ಯಂಗ್ಯ ತುಂಬಿದ

ಧ್ವನಿಯಲ್ಲಿ ನುಡಿದರು. "ನಿಮಗೆ ಸಾವಿರಾರು ವರ್ಷಗಳ ಪರಂಪರೆ ಇದೆ. ಚೆನ್ನಾಗಿ ಬೆಳೆದ ಭಾಷೆ ಮತ್ತು ಸಾಹಿತ್ಯಗಳು ಇವೆ. ಈ ಭಾಷೆ ಸಾಹಿತ್ಯಗಳನ್ನು ಬಳಸಿಕೊಂಡು ನಿಮ್ಮ ಮಕ್ಕಳಿಗೆ ವಿದ್ಯೆ ಕಲಿಸುವ ಕಾಲ ಬಂದಿದೆ." ಎಂದು ನುಡಿದರು. ನಮ್ಮ ಸಂಸ್ಕೃತಿ ನಮಗೆ ಮುಖ್ಯ ಎನ್ನುವುದಾದರೆ ನಮ್ಮ ಭಾರತೀಯ ಭಾಷೆಗಳು ನಮ್ಮ ಕಲಿಕೆಯ ಭಾಷೆಗಳಾಗಬೇಕು. ಭಾಷೆ ಬರಿ ಭಾಷೆಯಲ್ಲ, ಆ ಸಮಾಜದ ಇಡೀ ಸಂಸ್ಕೃತಿಯೇ ಆ ಭಾಷೆಯಲ್ಲಿ ಅಡಕವಾಗಿರುತ್ತದೆ. ೧೦ನೆಯ ಶತಮಾನದ ಇಂಗ್ಲೆಂಡಿನಲ್ಲಿ ಲ್ಯಾಟಿನ್ ಭಾಷೆಯ ಆಧಿಪತ್ಯದಿಂದ ಇಂಗ್ಲಿಷ್ ಭಾಷೆ ತುಳಿತಕ್ಕೆ ಒಳಗಾಯಿತು. ಇಂಗ್ಲಿಷ್ ಬರಹಗಾರರು ಇಂಗ್ಲಿಷನ್ನು ಸಾಹಿತ್ಯದಲ್ಲಿ ಹಾಗೂ ಬದುಕಿನ ಎಲ್ಲ ರಂಗಗಳಲ್ಲಿ ಬಳಸಿ ಅದನ್ನು ಉಳಿಸಿದರು. ಮತ್ತೆ ೧೩ನೆಯ ಶತಮಾನದಲ್ಲಿ ನಾರ್ಮನ್ನರು ದಾಳಿಮಾಡಿ ಇಂಗ್ಲೆಂಡನ್ನು ಗೆದ್ದಾಗ ಇಂಗ್ಲಿಷ್ ಫ್ರೆಂಚರ ತುಳಿತಕ್ಕೆ ಒಳಗಾಯಿತು. ಬರಹಗಾರರೇ ಅದನ್ನು ಮತ್ತೆ ಉಳಿಸಬೇಕಾಯಿತು. ನಮ್ಮ ಸಂಸ್ಕೃತಿಯಲ್ಲಿ ನಮಗೆ ನಂಬಿಕೆ ಇರಬೇಕು. ಬುದ್ಧಿ ವಿಕಾಸಗೊಳ್ಳುತ್ತಿರುವ ಆರಂಭಿಕ ವರ್ಷಗಳಲ್ಲಿ ನಮ್ಮ ಪ್ರಾದೇಶಿಕ ಭಾಷೆಗಳಲ್ಲಿ ವಿದ್ಯಾಭ್ಯಾಸ ನೀಡಬೇಕು. ಆದರೆ ಇಂಗ್ಲಿಷನ್ನು ಒಂದು ಭಾಷೆಯಾಗಿ ಸಮರ್ಥವಾಗಿ ಕಲಿಸಬೇಕು.

ಇಂಗ್ಲಿಷ್ ಭಾಷೆಯನ್ನು ಕಾಪಾಡಲು ಇಂಗ್ಲೆಂಡಿಗೆ ವಟ್ಟಂ ಅವರು ಬೇಕಾಗಬಹುದಾದರೆ ಇಂಗ್ಲಿಷನ್ನು ದೂರವಿಡಲು ಫ್ರಾನ್ಸ್‌ಗೆ 'ಚಂಪಾ' ಬೇಕಾಗಬಹುದು! ಡೆಕ್ಕನ್ ಹೆರಾಲ್ಡ್ ನಿವೃತ್ತ ವರದಿಗಾರರಾದ ವಟ್ಟಂ ಅವರು ದಿ ಏಶಿಯನ್ ಏಜ್ ಪತ್ರಿಕೆಯನ್ನೂ ಓದುವುದಾದರೆ ನವೆಂಬರ್ ೧೬ರ ಪತ್ರಿಕೆಯಲ್ಲಿ 'Paris to give new ruling classes French lessons' ಎನ್ನುವ ಸುದ್ದಿಯನ್ನೂ ತಿಳಿಯಬಹುದು. ಫ್ರೆಂಚ್ ಅತ್ಯಂತ ಸಮೃದ್ಧವಾಗಿ ಬೆಳೆದ ಭಾಷೆ. ವಾಲ್ಟೇರ್‌ನಿಂದ ದೆರಿದಾವರೆಗೂ ಹಾಗೂ ಬಾಲ್ಜಾಕ್‌ನಿಂದ ಸಾರ್ತ್ರ್‌ನವರೆಗೂ ಮಹಾ ಬುದ್ಧಿಜೀವಿಗಳು ಬಳಸಿದ ಭಾಷೆ ಅದು. 'ಇಂಗ್ಲಿಷ್ ಮಾಧ್ಯಮ'ದ ಬಗ್ಗೆ ಫ್ರಾನ್ಸಿನವರು ವಟ್ಟಂ ಅವರಂತೆ ಬಾಲಿಶ ಜುಗುಪ್ಸಾರ್ಹ ಭಾವುಕತನ ಇಟ್ಟುಕೊಳ್ಳುವ ಆತ್ಮಗೌರವವಿಲ್ಲದ ಜನಾಂಗವಲ್ಲ. ತಮ್ಮ ದೇಶಕ್ಕೆ ವಲಸೆ ಬಂದ ಹೊರದೇಶದ ಕೆಲವರಿಗೆ ವಿದ್ಯೆ ಕಲಿಸಲು ಇಂಗ್ಲಿಷನ್ನು ಬಳಸುತ್ತಿರಬಹುದು. ಆದರೆ ಅದನ್ನೇ ತಮ್ಮ ಮಕ್ಕಳಿಗೆ ಶಿಕ್ಷಣ ಮಾಧ್ಯಮ ಮಾಡಿಕೊಳ್ಳುವ ಅಸಂಗತ ವೈಪರಿತ್ಯಕ್ಕೆ ಹೋಗಿಲ್ಲ. ಇಂತಹ ವಿಷಯಗಳನ್ನು ನೋಡಿಕೊಳ್ಳಲು ಅವರಲ್ಲಿ ಫ್ರೆಂಚ್ ಭಾಷೆಯ ಅಕಾಡೆಮಿ ಒಂದು ಇದೆ. ಬೇರೆ ದೇಶದವರು ಕಲಿಯುವಂತೆ ಫ್ರೆಂಚ್ ಜನಾಂಗದವರೂ ಇಂಗ್ಲಿಷ್ ಭಾಷೆಯನ್ನು ಹೊರಜಗತ್ತಿನೊಡನೆ ವ್ಯಾಪಾರ ಉದ್ಯಮಗಳ ವ್ಯವಹಾರಮಾಡಲು ಬೇಕಾಗುವಷ್ಟು ಕಲಿಯುತ್ತಾರೆ ಅದನ್ನೆ ಆ ದಿನದ ಸಭೆ ಹೇಳಿದ್ದು. ಕನ್ನಡವನ್ನು ಕಲಿಕೆಯ ಭಾಷೆಯಾಗಿ ಬಳಸಿ ಆದರೆ ಇಂಗ್ಲಿಷನ್ನು ಭಾಷೆಯನ್ನಾಗಿ ಇಂಗ್ಲಿಷರಿಗಿಂತ ಉತ್ತಮವಾಗಿ ಕಲಿಯಿರಿ. ಇಂಗ್ಲಿಷ್ ಭಾಷೆಯ ಮೇಲೆ ಮುಲಾಯಂ ಸಿಂಗರಂಥ ಒಬ್ಬ ಬೇಜವಾ

ಬ್ದಾರಿ ರಾಜಕಾರಣಿ ಮಾಡುವ ಪ್ರಹಾರವನ್ನು ವಿವಿಧ ಭಾಷೆಗಳ ಸ್ಥಾನಮಾನಗಳನ್ನು ಸೈದ್ಧಾಂತಿಕವಾಗಿ ನಿಷ್ಕರ್ಷಿಸಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮಾಡಿರುವ ಶಿಫಾರಸ್ಸಿಗೆ ಹೋಲಿಸುವುದು ಮಟ್ಟಂ ಅವರ ಅವೈಜ್ಞಾನಿಕ ಕುತರ್ಕ ಮತ್ತು ಭಾಷಾವಿಜ್ಞಾನದ ಸಿದ್ಧಾಂತಗಳ ಬಗ್ಗೆ ಇರುವ ಅಜ್ಞಾನವನ್ನು ಬಹಿರಂಗಗೊಳಿಸುತ್ತದೆ. ಭಾಷೆಯಲ್ಲಿ ಸ್ಥಿತ್ಯಂತರಗೊಂಡಿರುವ ಜನ ಕನ್ನಡ ಸಾಹಿತ್ಯ ಮತ್ತು ಭಾಷೆಯ ಪರಂಪರೆಯ ಬಗ್ಗೆ ಯಾವ ಜ್ಞಾನವೂ ಇಲ್ಲದೆ ಇಂಗ್ಲಿಷ್ ಮಾಧ್ಯಮ ಬೇಕು ಎಂದಾಗ ಅದಕ್ಕೆ ಸಾಂಸ್ಕೃತಿಕ ವಿಶ್ವಾಸಾರ್ಹತೆ ಇರುವುದಿಲ್ಲ. ಯಾವ ಭಾಷಾ ವಿಜ್ಞಾನಿಯೂ ಸಹ ಈ ರೀತಿಯ ಅಸಂಗತ ಶಿಫಾರಸ್ಸನ್ನು ಮಾಡಿಲ್ಲ. ಅವರ ಬದಲು ಜವಾಬ್ದಾರಿಯುತ ಚಿಂತಕ ಮತ್ತು ನವ್ಯ ಕವಿಗಳಲ್ಲಿ ಪ್ರಮುಖರಾದ ನಿಸ್ಸಾರ್ ಅಹಮದ್: "ಪ್ರಾಥಮಿಕ ತರಗತಿಯಿಂದ ಹಿಡಿದು ಪ್ರೌಢಶಾಲೆಯವರೆಗೂ ಕನ್ನಡವನ್ನು ಕಡ್ಡಾಯ ಮಾಧ್ಯಮವಾಗಿ ತರಲು ಸರಕಾರ ನಿರ್ಣಯಾತ್ಮಕ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು" ಎಂದು ಹೇಳುತ್ತಾರೆ. ಅಲ್ಲದೆ, "ಸ್ಥಳೀಯ ಭಾಷೆಗಳು ಆಡಳಿತ, ಶಿಕ್ಷಣ ಮತ್ತು ನ್ಯಾಯಾಲಯಗಳಲ್ಲಿ ಉಪಯೋಗಿಸುವ ಭಾಷೆಯಾಗುವವರೆಗೂ ನಮ್ಮ ವಿದ್ಯಾಭ್ಯಾಸ ಸಂಪೂರ್ಣವಲ್ಲ" ಎಂದೂ ಹೇಳುತ್ತಾರೆ (ದಿ ಹಿಂದೂ ನವೆಂಬರ್ ೬, ೧೯೯೮ ಪು ೩). ನಮಗೆ ಗಟ್ಟಿಯಾದ, ಪ್ರಬುದ್ಧವಾದ ಭಾಷೆಯ ತಳಹದಿ ಇದೆ. ಮತ್ತು ಅದು ಇನ್ನೂ ಕ್ರಿಯಾಶೀಲವಾಗಿಯೂ ಫಲವತ್ತಾಗಿಯೂ ಇದೆ. ಅದು ಅಕ್ಷಯ ಪಾತ್ರೆಯಂತಿರುವ ಸಾಂಸ್ಕೃತಿಕ ಆಸ್ತಿ. ಸಾಂಸ್ಕೃತಿಕವಾಗಿ ಅತ್ಯಂತ ಸಮೃದ್ಧವಾಗಿರುವ ಸಾವಿರ ವರ್ಷಗಳ ಪರಂಪರೆಯನ್ನು ಜವಾಬ್ದಾರಿಯುತವಾಗಿ ಬಳಸಬೇಕು. ಕುವೆಂಪು, ಬೇಂದ್ರೆ ಮತ್ತು ಕಾರಂತರು ನಮ್ಮ ಕಾಲದ ಸಾಧಾರಣ ವ್ಯಕ್ತಿಗಳಲ್ಲ. ಇವರು ಅಲ್ಪ ಸಂಖ್ಯಾತರು. "ಅವರೇ ನಮ್ಮ ಪರಂಪರೆಯ ಅತ್ಯುತ್ತಮ ಮಾನವ ಬದುಕಿನ ಅನುಭವದಿಂದ ನಾವು ಪಡೆದುಕೊಳ್ಳಬಹುದಾದ ಲಾಭ ಇಂತಹ ಅಲ್ಪ ಸಂಖ್ಯಾತರಿಂದಲೇ ಸಾಧ್ಯ. ನಮ್ಮ ಪರಂಪರೆಯ ಅತ್ಯಂತ ಸೂಕ್ಷ್ಮವಾದ ಮತ್ತು ಹಳಸಬಹುದಾದ ಜೀವನಾಸಮರ್ಥವಾಗಿ ಅನುಭವವನ್ನು ಇವರು ಜೀವಂತವಾಗಿ ಉಳಿಸಬಲ್ಲರು. ಈ ರೀತಿ ಉಳಿಸುವಲ್ಲಿ ಭಾಷೆಯ ಬದಲಾಗುತ್ತಿರುವ ನುಡಿಗಟ್ಟು ಉಳಿಯುತ್ತದೆ. ಅದರ ಮೇಲೆ ನಮ್ಮ ಅತ್ಯುತ್ತಮವಾದ ಬದುಕು ಅವಲಂಬಿಸಿರುತ್ತದೆ. 'ಸಂಸ್ಕೃತಿ' ಎಂದರೆ ಇಂತಹ ಭಾಷೆಯನ್ನು ಬಳಸುವುದು ಎಂದು ನನ್ನ ಅರ್ಥ" ಎನ್ನುತ್ತಾನೆ ಈ ಶತಮಾನದ ಅತ್ಯಂತ ಮಹತ್ವದ ಮತ್ತು ಗೌರವಾನ್ವಿತ ವಿಮರ್ಶಕ ಎಫ್ ಆರ್ ಲೀವಿಸ್. ನಮ್ಮ ಮಕ್ಕಳ ಕ್ರಿಯಾಶೀಲತೆಯನ್ನು ಉಳಿಸಲು, ಬೆಳೆಸಲು, ಪ್ರೋತ್ಸಾಹಿಸಲು ಅಂಥ ಭಾಷೆಯನ್ನು ಅಂದರೆ ಈ ದೇಶದ ಪ್ರಾದೇಶಿಕ ಭಾಷೆಗಳನ್ನು ಬಳಸೋಣ.

ಕರ್ನಾಟಕದ ಆಧುನಿಕ ಕಲಾ ಚಳುವಳಿ

ಶಿವಾನಂದ ಹೆಚ್. ಬಂಟನೂರ

ಪ್ರಪಂಚದಲ್ಲಿ ಬಹು ಕಾಲದಿಂದಲೂ ಕಲೆ, ಧಾರ್ಮಿಕ ಮತ್ತು ರಾಜಕೀಯದ ಪರಿಮಿತ ಚೌಕಟ್ಟಿನಲ್ಲಿಯೇ ಬೆಳೆದು ಬಂದಿರುವುದನ್ನು ಕಾಣುತ್ತೇವೆ. ಪರಂಪರೆ ಮತ್ತು ಮೌಲ್ಯಗಳು ಹಾಗೂ ಅವುಗಳ ಉಳಿವು ಮತ್ತು ಮುಂದುವರಿಕೆಯ ವಾಹಕವಾಗಿ ಕಲೆ ತನ್ನ ಪಾತ್ರವನ್ನು ನಿರ್ವಹಿಸಿದಂತೆ ಕಂಡುಬರುತ್ತದೆ. ಕಾಲಘಟ್ಟದಲ್ಲಿ ಯುರೋಪಿನ ಪುನರುಜ್ಜೀವನದಂತಹ ಕೆಲವು ಸುವರ್ಣ ಯುಗಗಳನ್ನು ಕಾಣುತ್ತೇವೆ. ಆದಾಗ್ಯೂ ಕಲೆ ಎಷ್ಟೇ ಎತ್ತರಕ್ಕೇರಿ, ರಮ್ಯತೆ ಮತ್ತು ವೈಭವೀಕರಣಗೊಂಡರೂ, ತನ್ನ ಪಾರಂಪರಿಕ ಶಿಸ್ತುಬದ್ಧತೆಯನ್ನು ಉಲ್ಲಂಘಿಸಿದ ಸಂದರ್ಭಗಳಿಲ್ಲ. ಆದರೆ ಅದು ತನ್ನ ಸಾಂಪ್ರದಾಯಿಕ ಪರಂಪರೆ ಮತ್ತು ಮೌಲ್ಯಗಳನ್ನು ಧಿಕ್ಕರಿಸಿ, ಒಂದು ರೀತಿಯ ಲ್ಲಿ ಮುರಿದು ಕಟ್ಟುವ ತೀವ್ರ ಸ್ವರೂಪದ ತಿರುವನ್ನು ಕಂಡುಕೊಂಡದ್ದು ಮಾತ್ರ ಹತ್ತೊಂಬತ್ತನೆಯ ಶತಮಾನದಲ್ಲೇ. ಕಾಲಕ್ರಮದಲ್ಲಿ ಧಾರ್ಮಿಕ, ರಾಜಕೀಯ ಕಟ್ಟಳೆಗಳು ಸಡಿಲವಾಗಿ, ವೈಚಾರಿಕತೆ ಪ್ರಬಲವಾಯಿತು. ಪುರಾಣ ಕಥೆಗಳು, ರಾಜ-ರಾಣಿಯರ ವಿಲಾಸಗಳು, ಚಾರಿತ್ರಿಕ ಘಟನೆಗಳು ಕಲಾಕೃತಿಗೆ ವಸ್ತುಗಳಾಗುವ ಬಗ್ಗೆ ಜನರಲ್ಲಿ ಉದಾಸೀನತೆ ಮೂಡಿತು. ಬದಲಾಗಿ ನಿತ್ಯ ಜೀವನದ ವಸ್ತು ವಿಷಯಗಳೇ ಜನತೆಗೆ ಮೆಚ್ಚುಗೆಯಾಗತೊಡಗಿದವು. ಇಲ್ಲಿ ಎರಡು ತೆರನಾದ ಹೊಸ ದೃಷ್ಟಿಗಳನ್ನು ಕಾಣುತ್ತೇವೆ. ಶಿಲ್ಪಕ್ಕೊ-ಚಿತ್ರಕ್ಕೊ ಒಂದು ಅದ್ಭುತ ಇಲ್ಲವೆ ಉದಾತ್ತ ವಸ್ತುವಿರಬೇಕು, ಅದರ ಶೈಲಿಯೂ ಕೂಡ ಅದ್ಭುತವಾಗಿರಬೇಕು-ಎಂಬುದು ಒಂದು ದೃಷ್ಟಿ: ಇನ್ನೊಂದು ಅದಕ್ಕೆ ವಿರುದ್ಧವಾದ ದೃಷ್ಟಿಕೋನ.

ಹತ್ತೊಂಭತ್ತನೇ ಶತಮಾನದ ಉತ್ತರಾರ್ಧದಲ್ಲಿ ತನ್ನ ಪೂರ್ವದ ಪಾರಂಪರಿಕ ಕಲೆಯ ಎಲ್ಲ ತತ್ವ ಮತ್ತು ಸಿದ್ಧಾಂತಗಳನ್ನು ಸಂಪೂರ್ಣವಾಗಿ ತಲೆಕೆಳಗಾಗಿ ಮಾಡುವಂತಹ ಹೊಸ ದೃಷ್ಟಿಗಳು ಕಾಣಿಸಿಕೊಂಡವು. ಇದಕ್ಕೆ ಕಾರಣವೇನೆಂದರೆ, ಹದಿನೇಳು ಮತ್ತು ಹದಿನೆಂಟನೇ ಶತಮಾನಗಳಲ್ಲಿ ಯುರೋಪ್‌ನ ದೇಶಗಳಲ್ಲಿ ಉಂಟಾದ ವೈಜ್ಞಾನಿಕ

ಬೆಳವಣಿಗೆ ಮತ್ತು ಕೈಗಾರಿಕಾ ಕ್ರಾಂತಿ. ಇವುಗಳ ಪರಿಣಾಮವಾಗಿ ಜನಜೀವನದ ವಿವಿಧ ರಂಗಗಳಲ್ಲಿ ತೀವ್ರತರಹದ ಬದಲಾವಣೆಗಳು ಉಂಟಾದವು ಇದಕ್ಕೆ ದೃಶ್ಯ ಮೂಲದ (Visual Arts) ಚಿತ್ರ-ಶಿಲ್ಪಕಲೆಗಳೂ ಹೊರತಾಗಲಿಲ್ಲ. ಕ್ಷಣಮಾತ್ರದಲ್ಲೇ ದೃಶ್ಯವೊಂದನ್ನು ಸೆರೆಹಿಡಿಯಬಲ್ಲ, ಕ್ಯಾಮರಾದಂತಹ ಯಂತ್ರದ ಆವಿಷ್ಕಾರವೂ ಕಲಾವಿದರ ಉಪಜೀವನದ ಮೇಲೆ ದೊಡ್ಡ ಪೆಟ್ಟನ್ನೇ ಕೊಟ್ಟಿತು. ಈ ಮತ್ತು ಇನ್ನಿತರ ಕಾರಣಗಳಿಂದಾಗಿ ಕಲಾವಿದರಲ್ಲಿ ಹೊಸ ಆಲೋಚನೆ, ಚಿಂತನೆ, ಪ್ರಯೋಗಗಳು ಹೋರಾಟದ ಸ್ವರೂಪದಲ್ಲಿ ಕಾಣಿಸಿಕೊಂಡವು. ಅದರ ಫಲವಾಗಿ ಯುರೋಪಿನ ರಾಷ್ಟ್ರಗಳಲ್ಲಿ ಹೊಸದೊಂದು ಬಗೆಯ ಕಲೆ 'ಮಬ್ಬು ಕವಿದ ಬಾನಿನಲ್ಲಿ ಬೆಳಕಿನ ಕಿರಣದಂತೆ' ಕಂಡುಬಂದಿತು. ನಿಂತು ಜಡವಾಗಿರುವಂತೆ ಕಂಡುಬಂದ ಪಾರಂಪರಿಕ ಕಲೆಯಿಂದ ಕಲೆಯಿಂದ ವಿಮುಖವಾಗಿ ಈ ಹೊಸ ಬಗೆಯ ಕಲೆ ಪ್ರವಹಿಸ ತೊಡಗಿತು. ಮತ್ತು ಕಲಾವಿದರ ಬದುಕಿಗೂ ಒಂದು ಹೊಸ ದಾರಿ ತೆರೆದಂತಾಯಿತು. ಇದರ ಫಲವಾಗಿ ಮುಂದೆ ಇಂಪ್ರೆಷಿಯಾನಿಸಂ, ಎಕ್ಸ್‌ಪ್ರೆಷಿಯಾನಿಸಂ, ಫಾವಿಸಂ, ಕ್ಯೂಬಿಸಂ, ಸರ್ರಿಯಾಲಿಸಂ, ದಾದಾಯಿಸಂ, ಅಬ್‌ಸ್ಟ್ರಾಕ್ಟಿವಿಸಂ ಮುಂತಾದ ನವ್ಯ ಕಲಾ ಶೈಲಿಗಳು, ಒಂದರ ಮೇಲೊಂದರಂತೆ ತೆರೆತೆರೆಯಾಗಿ ಹುಟ್ಟಿಕೊಂಡವು. ಯುರೋಪ್‌ನಲ್ಲಿ ಹುಟ್ಟಿಕೊಂಡ ಈ ಕಲಾ ಚಳುವಳಿ; ಯುರೋಪ್‌ನ ರಾಷ್ಟ್ರಗಳಲ್ಲಷ್ಟೇ ನಿಲ್ಲದೆ ಜಗತ್ತಿನ ಇತರ ದೇಶಗಳೆಡೆಗೂ ನುಗ್ಗಿತು. ಹೊಸತತ್ವ-ಸಿದ್ಧಾಂತಗಳಿಂದೊಡಗೂಡಿದ ಅನೇಕ ಶೈಲಿ, ಪಂಥಗಳು ಒಟ್ಟಾಗಿ ಪ್ರವಾಹದೋಪಾದಿಯಲ್ಲಿ ಹರಿದು, ಪ್ರಪಂಚದ ವಿವಿಧ ದೇಶಗಳನ್ನು ಅಪ್ಪಳಿಸಿತು. ಸಹಜವಾಗಿಯೇ ಭಾರತವೂ ಈ ಪ್ರವಾಹದ ತೆಕ್ಕೆಗೆ ಸಿಲುಕಿದುದರಲ್ಲಿ ಆಶ್ಚರ್ಯವಿಲ್ಲ.

ಪಾಶ್ಚಾತ್ಯರ ಈ ಹೊಸ ಕಲೆ ಭಾರತಕ್ಕೆ ಹದಿನೆಂಟು-ಹತ್ತೊಂಭತ್ತನೇ ಶತಮಾನದಲ್ಲೇ ಪ್ರವೇಶ ಮಾಡಿತು. ಆದರೆ ಅದು ಬಹುದಿನಗಳ ಕಾಲ ಸಮಾಜದ ಮೇಲು ವರ್ಗಕ್ಕೇ ಸೀಮಿತವಾಗಿ ಉಳಿದಿದ್ದರಿಂದ ದೇಶೀಯ ಪಾರಂಪರಿಕ ಕಲೆಗೆ ಅಂತಹ ದಕ್ಕೆಯೇನೂ ಒದಗಲಿಲ್ಲ. ಕಾಲಾನಂತರದಲ್ಲಿ ಪಾಶ್ಚಾತ್ಯರ ಕಲೆ ದೇಶೀ ಕಲಾವಿದರಲ್ಲಿ ಒಂದು ಹೊಸಬಗೆಯ ಅನುಭವವನ್ನುಂಟುಮಾಡಿತು. ಇದರಿಂದಾಗಿ ಮುಂದೆ ವಿದೇಶೀಯರ ಕಲೆ ಮತ್ತು ಕಲಾವಿದರ ಪ್ರಭಾವಕ್ಕೆ ಸ್ವದೇಶೀ ಕಲಾವಿದರೂ ಒಳಗಾದರು. ಈ ಮಧ್ಯೆ ಬ್ರಿಟೀಷರ ಆಳ್ವಿಕೆಯಲ್ಲೇ ಇದ್ದ ಭಾರತದಲ್ಲಿ ಅವರು ಆರಂಭಿಸಿದ ಕಲಾಶಾಲೆಗಳು ಪಾಶ್ಚಾತ್ಯ ಶೈಲಿಯ ಕಲೆಯನ್ನೇ ಕಲಿಸಲಾರಂಭಿಸಿದವು. ಇದರಿಂದಾಗಿ ಸ್ಥಳೀಯ ಕಲೆ ತನ್ನ ಮಹತ್ವ ಕಳೆದುಕೊಳ್ಳತೊಡಗಿತು. ಇದೇ ಸಂದರ್ಭದಲ್ಲಿ, ದೇಶದಲ್ಲಿ ರಾಷ್ಟ್ರೀಯ ಭಾವನೆ ಬಲಗೊಳ್ಳತೊಡಗಿತ್ತು, ಕಲಾ ಕ್ಷೇತ್ರಕ್ಕೂ ಅದರ ಬಿಸಿ ತಾಗಿತು. ಇದರ ಪರಿಣಾಮವಾಗಿ ಅನೇಕ ವೈರುದ್ಯಗಳೂ ಹುಟ್ಟಿಕೊಂಡವು.

ಒಂದೆಡೆ ಪಾಶ್ಚಾತ್ಯ ಕಲೆ, ಸಿದ್ಧಾಂತಗಳು, ಅವುಗಳ ಗುಣಾತ್ಮಕ ಅಂಶಗಳ ಪ್ರಚಾರ; ಮತ್ತೊಂದೆಡೆ ದೇಶೀ ಕಲೆಯ ಪುನರುಜ್ಜೀವನ ಕಾರ್ಯ ಆರಂಭವಾದವು. 'ಅತೀ ಪುರಾತನ, ಪರಂಪರಾನುಗತ ಎಂದೆಲ್ಲಾ ಕರೆಯಲ್ಪಡುವ ನಮ್ಮ ದೇಶೀ ಕಲೆಯ ಮೇಲೆ ಮತ್ತೊಂದು ಕಲಾ ಪ್ರಕಾರದ ಪ್ರಭಾವವೆಂದರೇನು ? ಅದು ಸ್ವದೇಶೀ ಕಲೆ, ಸಂಸ್ಕೃತಿಗಳ ನಾಶವೆಂದೇ ಅರ್ಥ' ಎಂದು ಭಾರತದ ಪಾರಂಪರಿಕ ಕಲಾ ಲೋಕ ಗೊಂದಲಕ್ಕೊಳಗಾಗುವಂತಾಯಿತು. ದೇಶೀ ಕಲೆಯನ್ನು ಎತ್ತಿ ಹಿಡಿಯಲು ಬಂಗಾಳೀ ಸಂಪ್ರದಾಯದಂತಹ ಗುಂಪುಗಳು ಹುಟ್ಟಿಕೊಂಡವು ಆದರೆ, ಪಾಶ್ಚಾತ್ಯ ಕಲೆಯ ಪ್ರವಾಹದ ಮುಂದೆ ಅವು ಪ್ರವಾಹಿಸದೇ ನಿಂತ ನೀರಾದವು.

ಮುಂದೆ ಸ್ವಾತಂತ್ರ್ಯ ನಂತರದಲ್ಲಿ ಭಾರತದ ಹಲವು ಕಲಾವಿದರು, ವಿದೇಶಗಳಿಗೆ ಹೋಗಿ ಅಲ್ಲಿನ ಆಧುನಿಕ ಕಲಾವಿದರು, ಹಾಗೂ ಅವರ ಸಾಧನೆಗಳನ್ನು ಅಧ್ಯಯನ ಮಾಡಿಬಂದರು. ಹೀಗೆ ಪಾಶ್ಚಾತ್ಯ ಕಲೆ, ಸಂಸ್ಕೃತಿಯ ಪ್ರಭಾವ, ಅನುಕರಣೆ ವಿರೋಧ, ಸ್ವದೇಶೀ ಚಳುವಳಿ ಇವೆಲ್ಲ ಗೊಂದಲಗಳ ಮಧ್ಯೆಯೂ, ಗಾಂಧೀಜಿ ಹೇಳಿದಂತೆ "ನಾವು ಮತ್ತು ನಮ್ಮ ಸಂಸ್ಕೃತಿ ಬೆಳೆಯ ಬೇಕಾದರೆ, ನಮ್ಮ ಕಿಟಕಿಗಳ ನ್ನೆಲ್ಲಾ ತೆರೆದಿಡಬೇಕು. ನಾವು ಜೀವಿಸುವ ಕೊಠಡಿಗೆ ಎಲ್ಲಾ ದಿಕ್ಕುಗಳಿಂದ ಗಾಳಿ ಬರುವಂತಿರಬೇಕು. ಆದರೆ ಅದರಿಂದ ನಾವೇ ಹಾರಿ ಹೋಗದಂತೆ ಮಾತ್ರ ಕಾಪಾ ಡಿಕೊಳ್ಳಬೇಕು"೧ ಎಂಬ ಮಾತನ್ನು ನಮ್ಮ ಕಲಾವಿದರು ಅನುಸರಿಸಿದಂತೆ ಕಂಡು ಬರುತ್ತದೆ.

ಈ ದೃಷ್ಟಿಯಿಂದ ಆಲೋಚಿಸಿದಾಗ ಸ್ವಾತಂತ್ರ್ಯೋತ್ತರದ ಕಾಲ, ಭಾರತೀಯ ಕಲಾ ಕ್ಷೇತ್ರದಲ್ಲಿ ಒಂದು ಮಹತ್ವದ ಘಟ್ಟವಾಗುತ್ತದೆ. ರಾಜಕೀಯವಾಗಿ ದೊರೆತ ಸ್ವಾತಂತ್ರ್ಯ, ಸಾಮಾಜಿಕ ಬದುಕಿಗೂ ವಿಸ್ತರಿಸಿದ ಕಾರಣ ಸ್ವತಂತ್ರವಾಗಿ ಆಲೋಚಿ ಸಲು, ಬದುಕಿಗೆ ಹತ್ತಿರವಾಗಲು, ಗತಕಾಲದ ಬಗ್ಗೆ ಚಿಂತಿಸಲು, ಶಂಕಿಸಲು. ಹೊಸ ಹೊಸ ಪ್ರಯೋಗಗಳನ್ನು ನಡೆಸಲು, ಅನುಭವಗಳನ್ನು, ಸಂವೇದನೆಗಳನ್ನು ಮುಕ್ತ ವಾಗಿ ವ್ಯಕ್ತಪಡಿಸಲು ಕಾಲವಿದರಿಗೆ ಸಾಧ್ಯವಾಯಿತು.

"ಕರ್ನಾಟಕದಲ್ಲಿ ಏಕೀಕರಣದ ನಂತರ ಭಾಷೆ, ಸಂಸ್ಕೃತಿ ಅವುಗಳ ಹಿನ್ನೆಲೆ ಪ್ರತಿಷ್ಠೆ ಮುಂತಾದ ವಿಷಯಗಳ ಬಗೆಗೆ ಇದ್ದ ಸಂಘರ್ಷಗಳು ತಿಳಿಗೊಂಡು, ಸಾಮರಸ್ಯ ಭಾವನೆ ಮೂಡುವಂತಾಯಿತು. ಕ್ರಮೇಣ ಕಲಾವಿದರು ತಾವು ಬೆಳೆದು ಬಂದ ಹಿನ್ನೆಲೆ ಪಡೆದ ಸಂಸ್ಕಾರ, ಪ್ರಾದೇಶಿಕ ಭಿನ್ನತೆ ಮತ್ತು ವೈಶಿಷ್ಟ್ಯವನ್ನು ಉಳಿಸಿ

---

೧. ಪ್ರ. ಸಂ. ಪಿ. ಆರ್. ತಿಪ್ಪೇಸ್ವಾಮಿ: 'ಚಿತ್ರಕಲಾ ಪ್ರಪಂಚ':ಪು:೬೩೫

ಕೊಂಡು, ಬದಲಾದ ಹೊಸಬದುಕಿನ, ಹೊಸ ಕಾಲದ ಅನುಭವಗಳಿಗೆ ಸ್ಪಂದಿಸುತ್ತ ಸಾಂಘಿಕವಾಗಿ ಮತ್ತು ಸೃಜನಾತ್ಮಕವಾಗಿ ಬೆಳೆಯುವ ಪ್ರಯತ್ನ ಮಾಡಿದರು.

ಪಶ್ಚಿಮದಿಂದ ಬಂದ ಕಲೆಯ ನಾನಾ ಪ್ರಯೋಗಗಳು, ಸಿದ್ಧಾಂತಗಳ ಪ್ರಭಾವಕ್ಕೆ ನಮ್ಮ ಕಲಾವಿದರು ಒಳಗಾದರೂ ಕೂಡ, ಅವುಗಳಿಗೆ ಸಂಪೂರ್ಣವಾಗಿ ಶರಣಾಗತರಾಗಲಿಲ್ಲ ಅಥವಾ ಕುರುಡರಾಗಿ ಅನುಕರಿಸಲಿಲ್ಲ ಎಂಬುದು ಸಂತಸದ ಸಂಗತಿ. ಬದಲಾಗಿ ಅಲ್ಲಿ ನಡೆದ ಕಲಾಚಳುವಳಿ, ಅವರ ಚಿಂತನೆ. ಪ್ರಯೋಗಗಳನ್ನು ಅಧ್ಯಯನ ಮಾಡಿದರು, ಆಯಾ ಸಿದ್ಧಾಂತಗಳನ್ನು ಜೀರ್ಣಿಸಿಕೊಂಡರು. ವಿವಿಧ ಮಾಧ್ಯಮ ಮತ್ತು ಸಾಧ್ಯತೆಗಳನ್ನು ಕರಗತ ಮಾಡಿಕೊಂಡರು. ಸ್ವತಃ ಪ್ರಯೋಗಗಳನ್ನು ನಡೆಸಿದರು ಕಲೆಯಲ್ಲಿ ಹೊಸತನ ಸೃಷ್ಟಿಸಿದರು. ಹಾಗಿದ್ದೂ ಯಾವುದೇ ಒಂದು ನಿರ್ದಿಷ್ಟ ಶೈಲಿ ಅಥವಾ ಪಂಥಕ್ಕೆ ಅಂಟಿಸಿಕೊಳ್ಳಲಿಲ್ಲ. ಮೇಲುನೋಟಕ್ಕೆ ತಂತ್ರ ನಿರ್ವಹಣೆಯಲ್ಲಿ ನಮ್ಮವರ ಕೃತಿಗಳು ಅಂತರಾಷ್ಟ್ರೀಯ ಶೈಲಿಯೊಂದನ್ನು ಅನುಸರಿಸಿದಂತೆ ಕಂಡುಬಂದರೂ ಸೂಕ್ಷ್ಮವಾಗಿ ಪರಿಶೀಲಿಸಿದರೆ ಅನೇಕ ಕಲಾವಿದರ ಕೃತಿಗಳಲ್ಲಿ ಮಣ್ಣಿನ ವಾಸನೆಯೇ ತುಂಬಿರುವುದು ಅನುಭವಕ್ಕೆ ಬರದೇ ಇರಲಾರದು.

ಅರವತ್ತರ ದಶಕದಲ್ಲಿ ಕಲಾವಿದರ ಗುಂಪು ಚಳುವಳಿಯೊಂದು ಆರಂಭವಾಯಿತು. 'ನಾವು ನಾಲ್ವರು ಹೆಸರಿನ ಈ ಕಲಾ ತಂಡ ಮೊದಲ ಬಾರಿಗೆ ಬೆಂಗಳೂರು ನಗರದಲ್ಲಿ ನಾಲ್ಕು ಪ್ರಯೋಗಾತ್ಮಕ ಕಲಾಪ್ರದರ್ಶನಗಳನ್ನು ನಡೆಸಿತು.[೨] ಸಾಮಾಜಿಕವಾಗಿ ಕಲಾ ಜಾಗೃತಿ ಮೂಡಿಸುವಲ್ಲಿ ಇದೇ ಮೊದಲ ಪ್ರಯತ್ನ ಆಯಿತು. ಇದು ಸಾಮಾಜಿಕ ಕಳಕಳಿಯುಳ್ಳವರ ಮೇಲೆ ಕಲಾಸಕ್ತ ಯುವ ಪೀಳಿಗೆಯ ಮೇಲೆ ಪರಿಣಾಮ ಉಂಟುಮಾಡಿತು. ಈ ಪ್ರಯತ್ನಕ್ಕೆ ಪತ್ರಿಕಾ ಮಾಧ್ಯಮಗಳೂ ನೆರವಾಗಿ ಆಂದೋಲನವನ್ನು ಯಶಸ್ವಿಯಾಗಿ ಜನತೆಗೆ ಮುಟ್ಟಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದವು. ಅನಂತರ ಗುಲಬರ್ಗಾದ ಚತುರ್ಥ ಕಲಾವಿದರ ಗುಂಪು ಅನೇಕ ಪ್ರಯೋಗ, ಮತ್ತು ಪ್ರದರ್ಶನಗಳನ್ನು ಮಾಡಿತು. ಮೈಸೂರು ಆರ್ಟ್ ಕೌನ್ಸಿಲ್, ಸೌತ್ ಕೆನರಾ ಆರ್ಟ್ ಕೌನ್ಸಿಲ್, ಸಂಯೋಜಿತ ಬೆಂಗಳೂರು, ಡೈಕೊ ದಾವಣಗೆರೆ, ಕರ್ನಾಟಕ ಪೇಂಟರ್ಸ್, ರಿದಂ ಕಲಾವಿದರ ಕೂಟ ಮಂಗಳೂರು ರೇನ್ ಬೊ ಆರ್ಟ್ ಕೌನ್ಸಿಲ್ ಧಾರವಾಡ ಮುಂತಾದ ತಂಡಗಳು ಪ್ರಗತಿಶೀಲವಾದ ಪ್ರಯೋಗಗಳನ್ನು ನಡೆಸಿ ಹೆಚ್ಚಿನ ಅರಿವಿಗೆ, ಜಾಗೃತಿಗೆ ಕಾರಣರಾದರು. ಇದರ ಪರಿಣಾಮವಾಗಿ ಅಲ್ಲಲ್ಲಿ ಹೊಸ ಕಲಾ ಸಂಘಗಳು ಹುಟ್ಟಿ ಕಾರ್ಯಪ್ರವೃತ್ತವಾದವು. ತರುಣ ಕಲಾವಿದರು ಕಲಾಶಿಕ್ಷಣದ ಬಗೆಗೂ ಆಸಕ್ತರಾದರು. ಧಾರವಾಡ, ಗದಗ, ಗುಲಬರ್ಗಾ,

೨. ಪ್ರ. ಸಂ. ಪಿ. ಆರ್. ತಿಪ್ಪೆಸ್ವಾಮಿ: ಚಿತ್ರಕಲಾ ಪ್ರಪಂಚ:ಪು:೬೪೪

ಬೆಂಗಳೂರು, ದಾವಣಗೆರೆ ಮತ್ತು ಮೈಸೂರಿನ ಕಲಾ ಶಾಲೆಗಳು, ಉತ್ತಮ ಕಲಾ ಶಿಕ್ಷಣವನ್ನು ನೀಡುವಲ್ಲಿ ಶ್ಲಾಘನೀಯ ಪಾತ್ರವಹಿಸಿ ಈ ಪರಂಪರೆಯನ್ನು ಮುಂದುವರೆಸಿಕೊಂಡು ಬಂದವು ಈ ಶಾಲೆಗಳಿಂದ ಕಲಾ ಶಿಕ್ಷಣ ಪಡೆದು ಹೊರಬಂದ ಕಲಾವಿದರು, ಸಣ್ಣದೊಡ್ಡ ಕಲಾತಂಡಗಳನ್ನು ಮಾಡಿಕೊಂಡು, ಕಲಾಶಿಬಿರಗಳನ್ನು ಹಮ್ಮಿಕೊಂಡು ಅನೇಕ ರೀತಿಯ ಚಟುವಟಿಕೆಗಳನ್ನು ಮಾಡುತ್ತ ಬಂದರು. ಇದರೊಟ್ಟಿಗೆ ಕಲಾ ಮೇಳ, ಕಲಾಯಾತ್ರೆ, ಕಲಾ ಮಹೋತ್ಸವಗಳನ್ನು ನಡೆಸಿ ಹಿರಿಕಿರಿಯ ಕಲಾವಿದರ ಹಾಗೂ ಜನಸಾಮಾನ್ಯರ ಹೃದಯ ಬೆಸೆಯುವಂತೆ ಮಾಡಿದ್ದಲ್ಲದೇ ಜನತೆಯಲ್ಲಿ ಮೆಚ್ಚುವ-ಕೊಳ್ಳುವ ಅಭಿರುಚಿ ಮೂಡುವಂತೆ ಮಾಡಿದರು.

ಇದೇ ವೇಳೆಗೆ ರಾಜ್ಯ ಲಲಿತಕಲಾ ಅಕಾಡೆಮಿಯ ಪ್ರಾಂತೀಯ ದೃಷ್ಟಿಯಿಂದ ರಾಷ್ಟ್ರಮಟ್ಟದ ಕಡೆಗೆ ಕಲಾ ದೃಷ್ಟಿಯನ್ನು ಬದಲಾಯಿಸಿಕೊಂಡಿತು ಇದರಿಂದಾಗಿ ತರುಣ ಕಲಾವಿದರು ರಾಷ್ಟ್ರೀಯ ಮಟ್ಟದಲ್ಲಿ ಚಿಂತನೆ ನಡೆಸಿ ಅನೇಕ ರಾಷ್ಟ್ರೀಯ ಬಹುಮಾನ ಪಡೆದದ್ದು ಹಾಗೂ ರಾಷ್ಟ್ರಮಟ್ಟದ ಸದಸ್ಯತ್ವ ಅಲ್ಲದೆ ಅಂತರ್ ರಾಷ್ಟ್ರೀಯ ಮಟ್ಟದ ಖ್ಯಾತಿ ಗಳಿಸುವಂತಾಯಿತು. ಮುಂದಿನ ದಿನಗಳಲ್ಲಿ ಅಕಾಡೆಮಿಯು ಪ್ರಕಾಶನ ಕಾರ್ಯವನ್ನು ಕೈಗೊಂಡು ಕನ್ನಡ ಕಲಾವಿದರ ಮತ್ತು ಅವರ ಕಲೆಯ ಪರಿಚಯವನ್ನು ಮಾಡಿಕೊಡುವ ನಿಟ್ಟಿನಲ್ಲಿ ಮುಂದುವರೆಯಿತು.

ಅದುವರೆಗೂ ಕೇವಲ ಸಾಹಿತ್ಯಕ ವಿಷಯಗಳಿಗೇ ಗಮನ ಕೊಡುತ್ತಿದ್ದ ಪತ್ರಿಕಾ ಮಾಧ್ಯಮಗಳು, ಸ್ವಾತಂತ್ರ್ಯೋತ್ತರ ಕಾಲದಲ್ಲಿ ಕ್ರಮೇಣ ದೃಶ್ಯ ಮಾಧ್ಯಮಕ್ಕೂ ಪ್ರಾಧಾನ್ಯತೆ ಕೊಟ್ಟವು. ಕಲೆ ಮತ್ತು ಕಲಾವಿದರ ಪರಿಚಯಾತ್ಮಕ ಲೇಖನ-ವಿಮರ್ಶೆಗಳನ್ನು ಪ್ರಕಟಿಸಿ ಸಹಕರಿಸುತ್ತ ಬಂದವು ಕಳೆದ ನಾಲ್ಕೈದು ದಶಕಗಳಿಂದ ಕರ್ನಾಟಕದ ಆಧುನಿಕ ಕಲಾ ಪರಂಪರೆ ಸಮೃದ್ಧವಾಗಿ ಬೆಳೆಯುತ್ತ ಅನೇಕ ಅಡೆತಡೆಗಳಲ್ಲಿಯೂ ಪರಿಣಾಮಕಾರಿಯಾಗಿ ರೂಪುಗೊಂಡಿದೆ. ಕಲೆಯ ಸರ್ವಾಂಗೀಣ ವಿಕಾಸವು. ಕಲಾ ಸಂಸ್ಥೆಗಳು, ಕಲಾವಿದರು, ಕಲಾವಿದರ ಗುಂಪು, ಕಲಾಶಾಲೆಗಳು, ಪತ್ರಿಕೆಗಳ ಸಹಕಾರ. ಕಲಾಪ್ರಕಟಣೆಗಳು, ಅಕಾಡೆಮಿ, ಮುಂತಾದವುಗಳ ಮೂಲಕ ಗಮನಾರ್ಹವಾದ ರೀತಿಯಲ್ಲಿ ನಡೆಯುತ್ತ ಬಂದಿದೆ ಇವುಗಳೊಂದಿಗೆ ಕರ್ನಾಟಕದಲ್ಲಿ ಕೆಲವು ಸಂಸ್ಥೆಗಳು ಸ್ವತಂತ್ರವಾಗಿ ಕಲಾವಿದರಿಗೆ ಪ್ರದರ್ಶನಗಳನ್ನು ಮಾಡಲು, ಅವಕಾಶ ಮಾಡಿಕೊಟ್ಟಿವೆ. ಅಂತಹವುಗಳಲ್ಲಿ ಕರ್ನಾಟಕ ಸರಕಾರದ ವೆಂಕಟಪ್ಪ ಆರ್ಟ್‌ಗ್ಯಾಲರಿ ಪ್ರಮುಖವಾಗಿದೆ. ಅಲ್ಲದೆ, ವಾಣಿಜ್ಯ ದೃಷ್ಟಿಯಿಂದಲೂ ಅನೇಕ ಖಾಸಗೀ ಕಲಾ ಗ್ಯಾಲರಿಗಳು ಹುಟ್ಟಿಕೊಂಡಿವೆ. ಅವುಗಳು ಒಂದಲ್ಲಾ ಒಂದು ರೀತಿಯಲ್ಲಿ ಕಲೆ ಮತ್ತು ಕಲಾವಿದರ ಬೆಳವಣಿಗೆಗೆ ಸಹಕಾರಿಯಾಗಿವೆ.

ಇಷ್ಟು ಸುದೀರ್ಘ ಪರಂಪರೆಯನ್ನು ಹೊಂದಿದ ಕರ್ನಾಟಕದ 'ನವ್ಯಕಲೆ' ಕುರಿತು ಬಹುಶಃ ಇದುವರೆಗೆ ಯಾರೂ ವ್ಯವಸ್ಥಿತವಾಗಿ ಅಧ್ಯಯನ ಮಾಡಿದಂತಿಲ್ಲ. ಅಲ್ಲಲ್ಲಿ ಕೆಲವು ಅನುಭವಿ ಕಲಾವಿದರು, ಕಲಾ ಸಾಹಿತಿಗಳು ಒಂದೆರಡು ಸಣ್ಣಪುಟ್ಟ ಬಿಡಿ ಲೇಖನಗಳನ್ನು ಪ್ರಕಟಿಸಿದ್ದಾರೆ. ಅವನ್ನು ಹೊರತುಪಡಿಸಿದರೆ ಸಮಗ್ರವಾದ ಅಧ್ಯಯನ ಈ ಕ್ಷೇತ್ರದಲ್ಲಿ ನಡೆದಿಲ್ಲ. ಈ ದಿಸೆಯಲ್ಲಿ ಅಧ್ಯಯನ ನಡೆಯಬೇಕಾದುದು ಇಂದಿನ ಕಲಾಧ್ಯಯನದ ಅವಶ್ಯಕತೆಗಳಲ್ಲಿ ಒಂದಾಗಿದೆ.

ಗ್ರಂಥಋಣ

೧. ಪ್ರ.ಸಂ., ಪಿ.ಆರ್. ತಿಪ್ಪೇಸ್ವಾಮಿ: ಚಿತ್ರಕಲಾ ಪ್ರಪಂಚ, ಪ್ರ:ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೩.

೨. ಸಂ.ಎಂ ಎಚ್. ಕೃಷ್ಣಯ್ಯ: ಕಲೆ ಮತ್ತು ರಸಾಸ್ವಾದನೆ, ಪ್ರ:ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೨.

ರಾಜು ಈ ಬೆಳಕೂಡ

ಮೂರು ಹನಿಗಳು

೧

ಸಹನೆಯ ದಡವಪ್ಪಳಿದಿತ್ತು,
ಸಾಗರ ಅಲ್ಲೂ ಅಪ್ಪಳಿಸಿತು
ಈಗ ನೋಡು ಕಣ್ಣಿಂದೀಚೆಗೂ ನೀರು!

೨

ಎಲ್ಲದರಲ್ಲೂ ಒಳ್ಳೆಯತನವನ್ನೇ ಕಾಣುವವ
ನಿನ್ನಿಂದ ನೋವುಂಡೂ
ಅದ ನಿನ್ನ ಅಸಹಾಯಕತೆ ಎಂದುಕೊಂಡ.

೩

ನಕ್ಕುಬಿಡು ನೀನೂ ನನ್ನ ದುರದೃಷ್ಟಕ್ಕೆ;
ಕಡಿಮೆ ಬಿದ್ದಿತು ಹಿಡಿ ಮಣ್ಣು ನನ್ನ ಗೋರಿಗೆ.

ಇಂಗ್ಲಿಷ್ ವಿರುದ್ಧ ದೇಶಿ

ಒಂದು ಭಾಷೆ ಇನ್ನೊಂದು ಭಾಷೆಯೊಡನೆ ಉಳಿವಿಗಾಗಿ ಅಥವಾ ಬೆಳವಣಿಗೆಗಾಗಿ ಹೋರಾಡುವುದೆಂದರೆ ಪ್ರಾತಿನಿಧಿಕವಾಗಿ ಅದು ಎರಡು ಸಂಸ್ಕೃತಿಗಳ ನಡುವಣ ಹೋರಾಟವೂ ಆಗಿರುತ್ತದೆ. ದೇಶಿ ವರ್ಣದಲ್ಲಿರುವ ಅದರಲ್ಲೂ ದ್ರಾವಿಡ ಸಂಸ್ಕೃತಿಯನ್ನು ಬಿಂಬಿಸುವ ಕನ್ನಡ, ತಮಿಳು, ತೆಲುಗು, ಮಲೆಯಾಳ ಈ ಭಾಷೆಗಳು ಮತ್ತು ಕನ್ನಡವೊಳಗಿರುವ ತುಳು, ಕೊಡವ ಮುಂತಾದ ಲಿಪಿರಹಿತ ಉಪ ಭಾಷೆಗಳು ಮತ್ತು ಕೊಂಕಣಿ ಭಾಷೆಯೂ ಇಂದು ಇಂಗ್ಲಿಷ್‌ನ ಬಲವಾದ ಹೊಡೆತಕ್ಕೆ ತುತ್ತಾಗಿವೆ. ಇವು ತಮ್ಮತಮ್ಮೊಳಗೇ ಸ್ಪರ್ಧೆಯನ್ನು ಆರೋಪಿಸುತ್ತ ಇರುವುದರಿಂದ ಮತ್ತು ಇಂದು ಹಿಂದಿ ಭಾಷೆಯು ರಾಷ್ಟ್ರಭಾಷೆಯ ನೆಪದಲ್ಲಿ ನಮ್ಮ ಭಾಷೆಗಳನ್ನು ನುಂಗಿ ಹಾಕುತ್ತಿದೆಯೆಂಬ ಭ್ರಮೆಯನ್ನು ಸ್ವಯಂಪ್ರೇರಿತವಾಗಿ ಅನುಭವಿಸುತ್ತಿರುವುದರಿಂದ ಇಂಗ್ಲಿಷ್ ಅನಾಯಾಸವಾಗಿ ಬೆಳೆಯುತ್ತಿದೆ.

ಯಾವುದೇ ಭಾಷೆ ತನ್ನ ಶಕ್ತಿಗನುಸಾರವಾಗಿ ಬೆಳೆಯಲಾರದೆಂಬುದನ್ನು ಇಲ್ಲಿ ನೆನಪಿಟ್ಟುಕೊಳ್ಳಬೇಕು. ಹಾಗಿದ್ದಿದ್ದರೆ ಪರಂಪರೆಯ ಬೇರುವಿನಲ್ಲಿ ಶಕ್ತವಾಗಿ ಬದುಕಿದ್ದ ಸಂಸ್ಕೃತ ತಮ್ಮ ಜನಜೀವನವನ್ನು ವ್ಯಾಪಿಸಬೇಕಾಗಿತ್ತು. ಸಂಸ್ಕೃತವನ್ನು ಮೊದಲ ಭಾಷೆಯನ್ನಾಗಿ ಆಯ್ಕೆ ಮಾಡುವ ಸ್ವಾತಂತ್ರ್ಯವಿದ್ದಾಗಲೂ (ಬಹುಪಾಲು ವಿದ್ಯಾರ್ಥಿಗಳು ಹೆಚ್ಚು ಅಂಕಗಳನ್ನು ಗಳಿಸಲು ಸಂಸ್ಕೃತ ಅನುಕೂಲವೆಂದು ತಿಳಿದಾಗಲೂ) ಒಮ್ಮೆ ಪರೀಕ್ಷೆ ಮುಗಿಯಿತೆಂದರೆ ಸಂಸ್ಕೃತದ ಗೋಜಿಗೆ ಹೋದ ವಿದ್ಯಾರ್ಥಿಗಳ ಸಂಖ್ಯೆ ಬಹು ವಿರಳ. ಸಂಸ್ಕೃತವನ್ನು ಕನ್ನಡದಲ್ಲಿ ಬರೆದು ಪಾಸಾಗುವವರಿಗೆ ನಂತರ ಅದರ ಅಗತ್ಯವೇ ಬೀಳುವುದಿಲ್ಲ.

ಸಂಸ್ಕೃತ ತನ್ನೆಲ್ಲ ಸಾಹಿತ್ಯ ಸಮೃದ್ಧಿಗಳ ಹೊರತಾಗಿಯೂ ಜನನಾಡಿಯನ್ನು ಮಿಡಿಯಲು ವಿಫಲವಾದದ್ದಕ್ಕೆ ಸಮರ್ಪಕವಾದ ಕಾರಣಗಳಿವೆ. ಅದು ವರ್ಣಾಶ್ರಮ ಧರ್ಮದಲ್ಲಿ ಉಚ್ಚವರ್ಣದವರ ಭಾಷೆಯಾಗಿತ್ತೆಂದು ಹೇಳುತ್ತಾರೆ. ಸಂಸ್ಕೃತ ಎಂದೂ ಜನಸಾಮಾನ್ಯರು ಮಾತನಾಡುವ, ಹೋಗಲಿ ಸಂಪರ್ಕ ಮಾಧ್ಯಮವಾದ ಭಾಷೆಯೂ ಆಗಿರಲಿಲ್ಲವೆಂಬುದಂತೂ ಖಚಿತ. ಸಂಸ್ಕೃತದ ರಚನೆ, ಪ್ರಯೋಗ, ಉಪಯೋಗಗಳಾಗಲೀ, ಅದು ಮಾತಿಗೆ ಯಾವತ್ತೂ ವರ್ಗಾವಣೆಯಾಗಲಿಲ್ಲ. ಸಾಂಸ್ಕೃತಿಕವಾಗಿಯೇ ಅದು ಸಮಾಜದ ಉಚ್ಚವರ್ಣವನ್ನು ಪ್ರತಿನಿಧಿಸಿತ್ತು. ಮೇಲ್ವರ್ಣಕ್ಕೆ ಸಂಸ್ಕೃತವನ್ನು ಕೆಳವರ್ಣಕ್ಕೆ ಪ್ರಾಕೃತ ಮತ್ತಿತರ ಆಡುಭಾಷೆ ನಾಡುಭಾಷೆಗಳನ್ನು ನೀಡಿದ ಸಮಾಜ ತನ್ನೊಳಗೆ ಎರಡು ಪರಸ್ಪರ ವಿರುದ್ಧವಾಗಿ ಮುಖಮಾಡಿದ ಸಮುದಾಯ

ಗಳನ್ನು ಸೃಷ್ಟಿಸಿತ್ತು. ಇದು ಎಷ್ಟಿತ್ತೆಂದರೆ, (ಮತ್ತು ಇನ್ನೂ ಪಳೆಯುಳಿಕೆಗಳಂತೆ ಉಳಿದಿದ್ದರೆ) ಸಂಸ್ಕೃತದ ಜೊತೆಗೇ ಕಚ್ಚೆ-ಪಂಚೆ-ಜುಬ್ಬ-ಶಾಲು ಮತ್ತು ಮುಖದಲ್ಲಿ ವಿಧವಿಧದ ಮುದ್ರೆಗಳನ್ನು ಅದು ಸಂಕೇತಮಾತ್ರವಾಗಿ ನೀಡಿದ್ದನ್ನು ನಾವು ನೋಡಬಹುದು. ವರ್ಣಾಶ್ರಮದ ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರ ಈ ನಾಲ್ಕು ಗುಂಪುಗಳಲ್ಲಿ ಮೊದಲ ಮತ್ತು ಕೊನೆಯ ವರ್ಣ ಮೇಲು-ಕೀಳು ಎಂಬ ಛಾಪನ್ನು ಹೊತ್ತಿದ್ದರೆ, ಕ್ಷತ್ರಿಯ ವರ್ಗ ಅಧಿಕಾರದ ಬಲದಿಂದಲೂ ವೈಶ್ಯರು ಧನದ ಬಲದಿಂದಲೂ ಬ್ರಾಹ್ಮಣರೊಂದಿಗೆ ಸಂವಹನವನ್ನು ಸಾಧ್ಯಗೊಳಿಸಿಕೊಂಡವರು. ರಾಜಕಾರಣದ ಸ್ಥಾನಮಾನದ ಲಕ್ಷಣಗಳಾಗಿ ಅರಸರು ಸಂಸ್ಕೃತದ ವಿದ್ವಾಂಸರನ್ನು ಆದರಿಸಿ ಅವರಿಂದ ಸಂಸ್ಕೃತದ ಕಗ್ಗಂಟುಗಳನ್ನು ಒಡೆಸಿ ಸಂತೋಷಪಡುತ್ತಿದ್ದ ಉದಾಹರಣೆಗಳು ಬೇಕಷ್ಟಿವೆ. ಅನಿವಾರ್ಯವಾಗಿ ಆಡಳಿತದ ಹೊಣೆ ಹೊತ್ತವರು ಸಂಸ್ಕೃತದ ಪ್ರತಿನಿಧಿಗಳಾಗಿ ಕಾರುಭಾರು ಮಾಡಿದರು. ರಾಜಪುರೋಹಿತರು, ರಾಜಜ್ಯೋತಿಷ್ಯರು, ರಾಜವೈದ್ಯರು-ಇವರೆಲ್ಲರಲ್ಲೂ ಬಲವಾದ ಸಂಸ್ಕೃತದ ಪೆಟ್ಟಿಗೆಗಳಿದ್ದುವು. ಆಡಳಿತದ ಅನುಕೂಲಕ್ಕಾಗಿ ರಾಜರು ಈ ಪೆಟ್ಟಿಗೆಗಳನ್ನು ಅಪರೂಪದ ವಸ್ತುಗಳಾಗಿ ಅಲಂಕರಿಸಿ ಕಾದರು. ಇದು ಸಹಜವಾಗಿಯೇ ಸಂಸ್ಕೃತಪ್ರಿಯರಿಗೆ ಅನುಕೂಲವಾಗಿತ್ತು. ಇನ್ನು ವೈಶ್ಯ ಅಥವಾ ವ್ಯಾಪಾರೀ ಸಮುದಾಯವೂ ಸಂಸ್ಕೃತವನ್ನು ಪ್ರೋತ್ಸಾಹಿಸುವ, ಪೋಷಿಸುವ ವೇಷ ತೊಟ್ಟು ಈ ಸಂಸ್ಕೃತ ಪರಂಪರೆಯೊಳಗೇ ಉಳಿದುಕೊಂಡಿತು. ಹೀಗೆ ಬ್ರಾಹ್ಮಣ- ಕ್ಷತ್ರಿಯ-ವೈಶ್ಯ ಈ ಮೂರು ವರ್ಣಗಳು ಶೂದ್ರರ ದೃಷ್ಟಿಯಲ್ಲಿ ಮೇಲ್ವರ್ಗಗಳಾಗಿ ಉಳಿದವೆಂಬುದನ್ನು ಇತಿಹಾಸ ಹೇಳುತ್ತದೆ. ಶೂದ್ರರು ಎಲ್ಲ ಸೌಲಭ್ಯಗಳಿಂದ-ಶಿಕ್ಷಣವೂ ಸೇರಿದಂತೆ ಸಂಸ್ಕೃತದಲ್ಲೇ (ಏಕೆಂದರೆ ಶಿಕ್ಷಣವೂ ಸಂಸ್ಕೃತದಲ್ಲೇ ಇತ್ತಲ್ಲ!)- ವಂಚಿತರಾದರು; ಸಮಾಜದ ಕೆಳವರ್ಗವೆನಿಸಿಕೊಂಡರು.

ದೇವಸ್ಥಾನ-ರಾಜಸ್ಥಾನ ಮತ್ತು ಗುರುಕುಲಗಳಲ್ಲಿ ಮಾತ್ರ ಸಂಸ್ಕೃತ ಅಭಿವಂದಿತವಾಗಿತ್ತು. ಉಳಿದವರು ಕೇಳಿದರೂ ಅರ್ಥವಾಗದೇ ಬೆರಗಾಗಬೇಕಾದ ಪರಿಸ್ಥಿತಿ ಅಂದಿನ ಪುರೋಹಿತಶಾಹಿ ಸಮಾಜದಲ್ಲಿತ್ತು. ಸಂಸ್ಕೃತದ ಉಪಯೋಗ ಎಂಥ ಅಸಂಗತಗಳನ್ನು ಸೃಷ್ಟಿಸಿತ್ತೆಂದು ಹೇಳುವುದಕ್ಕೆ ತೆನಾಲಿ ರಾಮಕೃಷ್ಣನ 'ತಿಲಕಾಷ್ಟ ಮಹಿಷ ಬಂಧನ' ಪ್ರಸಂಗವೇ ಸಾಕು. (ದೂರದೇಶದ ವಿದ್ವಾಂಸನೊಬ್ಬ ವಿಜಯನಗರದ ಪ್ರಕಾಂಡ ಪಂಡಿತರನ್ನೆಲ್ಲ ಸೋಲಿಸಿದಾಗ ತೆನ್ನಾಲಿರಾಮಕೃಷ್ಣನು ಎಮ್ಮೆ ಕಟ್ಟುವ ಹುರಿಹಗ್ಗದ ಗಂಟನ್ನು ಕಟ್ಟಿತಂದು ಅದು 'ತಿಲಕಾಷ್ಟಮಹಿಷ ಬಂಧನ' ವೆಂಬ ಉದ್ಗ್ರಂಥವೆಂದು ಹೇಳಿದನೆಂದೂ, ಅಂತಹ ಗ್ರಂಥದ ಹೆಸರೇ ಕೇಳದಿದ್ದ ಆ ವಿದ್ವಾಂಸ ಸೋಲೊಪ್ಪಿಕೊಂಡು ಓಡಿಹೋದನೆಂದೂ ಕಥೆಯಿದೆ. ಬಹುಶಃ ಆ ಕಾಲದ ಜನಪರರು ಯಾರೋ ಈ ಪ್ರಸಂಗವನ್ನು ಸೃಷ್ಟಿಸಿರಲಿಕ್ಕೂ ಸಾಕು. ಆದರೆ ಈ

ಪ್ರಸಂಗವ ಸಂಕೇತಾರ್ಥ ಶಕ್ತವಾಗಿದೆ.) ವರ್ತಮಾನದಲ್ಲೂ ಇಂತಹ ಹಾಸ್ಯಗಳಿವೆ: ಸಂಸ್ಕೃತ ಮೇಷ್ಟ್ರು ಮಗ ತನ್ನ ಸಹಪಾಠಿಯನ್ನು 'ಗಾರ್ದಭ' ಎಂದು ಬೈದಾಗ ಅದು ಅರ್ಥವಾಗದೆ ಅವನು ನಕ್ಕು ಸುಮ್ಮನಾದ. ಮನೆಗೆ ಹೋಗಿ ಅರ್ಥ ಹುಡುಕಿ ಗೊತ್ತಾಗಿ ಮರುದಿನ ಶಾಲೆಗೆ ಬಂದು ಈ ನಮ್ಮ ಪಂಡಿತ ಪುತ್ರನಿಗೆ ಎರಡೇಟು ಕೊಟ್ಟ ಇತ್ಯಾದಿ.

ಸಂಸ್ಕೃತವ ಉದ್ಧಾರ-ಜೀರ್ಣೋದ್ಧಾರ ಮುಂತಾದವುಗಳನ್ನು ಮಾತನಾಡುವವರು ಒಂದಂಶವನ್ನು ಮರೆಯುತ್ತಾರೆ. ನಮ್ಮ so called ಸಂಸ್ಕೃತ ಪೋಷಕರಿಗೆ ತಾವು ಉದ್ಧರಿಸಲಿರುವ ಭಾಷೆ ಎಂದೋ ಸತ್ತುಹೋಗಿದ್ದು ಅದೀಗ ಜೀವಪಡೆಯುವ ಸ್ಥಿತಿಯಲ್ಲಿಲ್ಲ ಎಂಬುದರ ಅರಿವೇ ಇಲ್ಲ. ಸಂಸ್ಕೃತ ಪ್ರತಿನಿಧಿಸಿದ್ದ ಶಿಷ್ಟ ಸಂಸ್ಕೃತಿಯೇ ಅದಕ್ಕೆ ಮುಳುವಾಯಿತು, ಎಂಬುದನ್ನು ಸಂಸ್ಕೃತ ಅತ್ಯಂತ ಉಚ್ಛ್ರಾಯ ಸ್ಥಿತಿಯಲ್ಲಿತ್ತೆನ್ನಲಾದ ಕಾಲದ ಸಾಮಾಜಿಕ ಸ್ಥಿತಿಗತಿಗಳ ಅಧ್ಯಯನವು ತೋರಿಸಿ ಕೊಡುತ್ತದೆ. 'ಕಾಲಾಯ ತಸ್ಮೈ ನಮಃ' ಎಂಬಂತೆ ಕಾಲು ಮೇಲೆ ಕಾಲು ಹಾಕಿ ಕುಳಿತಿದ್ದಾನೆ. ಎಂದು ನಾಟಕವೊಂದರ ಸಂಸ್ಕೃತಾಭಿಮಾನೀ ಪಾತ್ರ ಹೇಳುವುದನ್ನು ನೋಡಿದರೆ ನಾಟಕಕಾರರಲ್ಲೂ ಸಂಸ್ಕೃತದ ಕುರಿತು ಎಂತಹ ಪರಿಕಲ್ಪನೆಯಿತ್ತೆಂದು ಅರ್ಥವಾದೀತು. ಭೂಗತವಾದ ಸಂಸ್ಕೃತವನ್ನು ಮೇಲೆತ್ತುವ ಯತ್ನವೇ ಅರ್ಥಶೂನ್ಯ.

ಒಂದು ಸತ್ಯದ ಅರಿವಾದೀತು. ಯಾವುದೇ ಭಾಷೆ ಉಳಿಯಬೇಕಾದರೆ, ಬೆಳೆಯಬೇಕಾದರೆ ಅದು ನಾಡ ನುಡಿಯಾಗಬೇಕು, ಜನಪರ ಭಾಷೆಯಾಗಬೇಕು, ಅದನ್ನು ನಾನು-ನೀವು ನಿತ್ಯದಲ್ಲಿ ಮತ್ತು ಕೋಪ ಬಂದಾಗ, ದುಃಖಿಸುವಾಗ, ನಮ್ಮ ಭಾವನೆಗಳಿಗೆ ಅರ್ಥಕೊಡಬೇಕಾದ ಎಲ್ಲ ಸಂದರ್ಭಗಳಲ್ಲಿ, ಆಡುವ ಭಾಷೆಯಾಗಬೇಕು. ಇಷ್ಟೇ ಸಾಕಾಗುವುದಿಲ್ಲ; ಅದು ನಮ್ಮ ಜನಜೀವನದ ಭಾಗವಾಗಬೇಕು. ಒಂದೇ ಮಾತಿನಲ್ಲಿ ಹೇಳುವುದಾದರೆ ಅದು ನಮ್ಮ ಸಂಸ್ಕೃತಿಯ ಅಂಗವಾಗಬೇಕು. ಯಾರೋ ಒತ್ತಾಯದಿಂದಲೋ ಬೆದರಿಕೆಯಿಂದಲೋ ಹೊರಿಸಿದ್ದಾಗ ಬಾರದು. ಸಮಾಜದ ನೂರು ಬೇರುಗಳಲ್ಲಿಳಿದು ಭದ್ರವಾಗಿರಬೇಕು.

ಭಾಷೆಗೆ ಲಿಪಿಯೇ ಬೇಕಾಗಿಲ್ಲವೆಂಬುದನ್ನು ನಮ್ಮ ಜನಪದ ಸಾಹಿತ್ಯ ಸಾಬೀತು ಮಾಡಿದೆ. ಮೌಖಿಕವಾಗಿ ಒಂದು ಭಾಷೆ, ಆ ಭಾಷೆಯೊಳಗಣ ಸಾಹಿತ್ಯ ಸಾವಿರಾರು ವರುಷಗಳಿಂದ ಹರಿದು ಬಂದಿವೆ. ನಮ್ಮ ಉಪಭಾಷೆಗಳೆಂದುಕೊಳ್ಳುವ ತುಳು, ಕೊಡವ, ಕೊಂಕಣಿ ಭಾಷೆಗಳಿಗೆ ಲಿಪಿಯೇ ಇಲ್ಲ. ಲಿಪಿಯಿದ್ದ ಸಂಸ್ಕೃತ ಅಪರಿಚಿತವಾದಷ್ಟು ಈ ಭಾಷೆಗಳು ಆಗಿಲ್ಲ. (ಈ ಉಪಭಾಷೆಗಳು ಮಹತ್ವಾಕಾಂಕ್ಷಿಗಳೂ ಆಗಿರಲಿಲ್ಲವೆಂಬ ಅಂಶ ಬೇರೆ). ಸಂಸ್ಕೃತವು ಪ್ರಭುತ್ವವನ್ನು ಸ್ಥಾಪಿಸುವ ಹುನ್ನಾರ

ವನ್ನು ಗ್ರೀಸು ತನ್ನ ಅಸ್ತಿತ್ವವನ್ನೇ ಕಳೆದುಕೊಂಡದ್ದನ್ನು ಯೋಚಿಸಿದರೆ ಲಿಪಿ ಭಾಷೆಗೆ ಲಿಖಿತ ಪರಂಪರೆಯನ್ನು ಹಾಕುವುದರೊಂದಿಗೆ ಅದನ್ನು ಹೆಚ್ಚು ಶಿಷ್ಟವಾಗಿಸಿ ಜನಸಾಮಾನ್ಯರಿಂದ ದೂರವಿರುವುದೇನೋ ಎಂಬುದನ್ನು ವಿವೇಚಿಸಬೇಕು.

ಇಂಗ್ಲಿಷ್‌ನ ಕುರಿತು ಹೇಳಬೇಕಾಗಿರುವುದಕ್ಕೆ ಈ ಪೀಠಿಕೆ ಅವಶ್ಯಕವಾಗಿದೆಯೆಂದು ನಾನು ನಂಬುತ್ತೇನೆ. ಒಂದು ಭಾಷೆಯ ಶ್ರೇಷ್ಠತೆಯನ್ನು ಅದರ ಸಾಹಿತ್ಯ ಮೂಲದಿಂದ ಅಳೆಯುವುದರ ಬದಲು ಅದು ಸಮಾಜದ ಮೇಲೆ ಮಾಡಬಲ್ಲ ಇತ್ಯಾತ್ಮಕ ನೇತ್ಯಾತ್ಮಕ ಪ್ರಭಾವಗಳಿಂದ ಅಳೆಯುವುದು ಒಳ್ಳೆಯದು. ಯಾವುದು ಹಾನಿಕಾರಕವೋ ಅದು ಎಷ್ಟೇ ಅಮೂಲ್ಯವಾಗಿರಲಿ ಉಳಿಯಬಾರದು. ಉಳಿಯಬೇಕು—ಆದರ ಸಾಂದರ್ಭಿಕ ಅಗತ್ಯಗಳಿಗಾಗಿ ಮಾತ್ರ. ಕೇವಲ ನಾಲ್ಕು ಶತಮಾನಗಳಿಗೂ ಕಡಿಮೆ ಅವಧಿ ಈ ದೇಶದಲ್ಲಿ ಜೀವಿಸಿರುವ ಇಂಗ್ಲಿಷ್‌ನ ಬಗ್ಗೆ ನಾವು ಎಂದಿಗಿಂತ ಹೆಚ್ಚು ಯೋಚಿಸಬೇಕಾದ್ದು ನಮ್ಮ ಆರೋಗ್ಯದ ದೃಷ್ಟಿಯಿಂದಲೇ ಉಚಿತವಾಗಿದೆ. ಗೊತ್ತಿದ್ದೋ ಗೊತ್ತಿಲ್ಲದೆಯೋ ಬ್ರಿಟಿಷರು ಸಂಸ್ಕೃತ ನಡೆದು ಬಂದ ಹಾದಿಯನ್ನು ಬಿಟ್ಟರು. ಬದಲಾಗಿ ಈ ದೇಶದ ಸಮಾಜದ ಕಟ್ಟು-ನಿಟ್ಟ ಹೊಂದಾಣಿಕೆಗಳನ್ನು ಗಮನಿಸಿ ಎಲ್ಲರೊಳಗೊಂದಾಗುವ ಭಾಷೆಯಾಗಿ ಮತ್ತು ಭಾಷೆಯ ಮೂಲಕವೇ ಸಾಮಾಜಿಕ ಸ್ಥಾನಮಾನದ ಏಣಿಯಾಗಿ ಬಳಸಿಕೊಳ್ಳುವ ಅನುಕೂಲವನ್ನು ಅವರು ನಮ್ಮ ಮುಂದೆ ಇಂಗ್ಲಿಷ್‌ನ ಮುಖಾಂತರ ಇಟ್ಟರು. ಸಂಸ್ಕೃತದ ಹಾಗೆ ಇಂಗ್ಲಿಷನ್ನು ಕಲಿಯುವುದಕ್ಕೆ ವರ್ಣ-ವರ್ಗಗಳು ಅಡ್ಡಿ ಬರುವಂತಿರಲಿಲ್ಲ. ಒಮ್ಮೆ ಇಂಗ್ಲಿಷ್ ಕಲಿತನೆಂದರೆ ಜಾತಿಮತಗಳ ಗಡಿಮೀರಿ ಅವನನ್ನು ಸಮಾಜ ಸ್ವೀಕರಿಸುವ ಸ್ಥಿತಿಯಲ್ಲಿತ್ತು. ಸಂಸ್ಕೃತದ ಹಾಗೆಯೇ ಇಂಗ್ಲಿಷ್‌ಗೂ ಅದರದ್ದೇ ಆದ ಸಾಂಸ್ಕೃತಿಕ ಹಿನ್ನೆಲೆ, ವೇಷಭೂಷಣ, ನಡೆ ಇವೆಲ್ಲವೂ ಇದ್ದವು. ಇವೆ. ಆಳುವ ಮಂದಿಯ ಜೊತೆಗೆ ಗುಲಾಮರಿಗೆ ಸಂಪರ್ಕ ಭಾಷೆಯೆಂದರೆ ಇಂಗ್ಲಿಷ್ ಮಾತ್ರ. (ನಮ್ಮ ಸಿನಿಮಾ-ನಾಟಕಗಳಲ್ಲಿ ಬ್ರಿಟಿಷರು ತಪ್ಪುತಪ್ಪಾಗಿ ಮತ್ತು ಹಾಸ್ಯಾಸ್ಪದವಾಗಿ ಕನ್ನಡ ಮಾತನಾಡುವುದು ಅವಾಸ್ತವ. ಅವರು ಕನ್ನಡ ಮಾತನಾಡಿದರೆ, ಅಥವಾ ಇತರ ದೇಶಿ ಭಾಷೆಗಳನ್ನಾಡಿದರೆ, ನಾವೇಕೆ ಬಟ್ಲರ್ ಇಂಗ್ಲಿಷ್ ಆರಂಭಿಸಬೇಕಿತ್ತು. ಬ್ರಿಟಿಷರು ಕಚ್ಚೆ-ಪಂಚೆಯಂತಹ ಪಂಡಿತ ಮಾನ್ಯ ಧಿರುಸನ್ನಾಗಲೀ, ದೇಶಿ ವೇಷ ಭೂಷಣವನ್ನಾಗಲೀ ಮಾಡಿದ್ದಿಲ್ಲ. ನಮ್ಮವರೇ ಚಿತ್ರವಿಚಿತ್ರವಾಗಿ ಕೋಟು-ಬೂಟು-ಹ್ಯಾಟು ಈ ಸಂಪ್ರದಾಯವನ್ನು ಎರವಲು ಪಡೆದರು. ನಿಜಕ್ಕೂ ಲೇವಡಿಯ ಅಂಶವೆಂದರೆ ಕಚ್ಚೆ ಪಂಚೆಯುಟ್ಟು ಕೋಟು-ಟೈ ಧರಿಸಿ ತಲೆಗೆ ಪೇಟಾ ಧರಿಸಿದ ಕಂದು ಸಾಹೇಬರ ಸಂಸ್ಕೃತಿ. ಇವರೆಲ್ಲ ಬಿಳಿನಾಯಿಯಾಗಲೆತ್ನಿಸಿದ ಕರಿನಾಯಿಯ ವಂಶಜರು.)

ಬ್ರಿಟಿಷರು ಒಂದಂಶವನ್ನು ಮರೆಯಲಿಲ್ಲವೆಂಬುದನ್ನು ನಾವು ಗಮನಿಸಬೇಕು. ಎದುರಾಳಿಗೆ ಸಣ್ಣ ಶಸ್ತ್ರವನ್ನು ನೀಡಿ ತಾವು ದೊಡ್ಡ ಶಸ್ತ್ರವನ್ನು ಹಿಡಿಯುವುದು ಬ್ರಿಟಿಷ್

ಪರಂಪರೆ. ಅವರು ಆಡಳಿತದ ಪ್ರಾಥಮಿಕ ಹಂತವನ್ನು ದೇಶಿ ಭಾಷೆಗಳಲ್ಲೇ ನಡೆಸಿದರು. ಈ ನಿಟ್ಟಿನಲ್ಲಿ ಅವರ ತಂತ್ರವನ್ನು ಮೆಚ್ಚಿಕೊಳ್ಳಬೇಕು(!) ಕೆಳಹಂತದ ಆಡಳಿತದ ಹೊಣೆಯನ್ನು ಅವರು ದೇಶೀಯರಿಗೇ ವಹಿಸಿದರು. ಪರಿಣಾಮವಾಗಿ ನಮ್ಮ ಬುದ್ಧಿವಂತ ಜನ ಈ ಸ್ಥಾನಗಳನ್ನು ನಿಷ್ಠೆಯಿಂದ ಮತ್ತು ಜವಾಬ್ದಾರಿಯುತವಾಗಿ ನಿರ್ವಹಿಸಿದ್ದು ಮಾತ್ರವಲ್ಲ; ಬಡ ಮತ್ತು ಅನಕ್ಷರಸ್ಥ ಜನತೆಗೂ ಆಳುವವರಿಗೂ ನಡುವಣ ಕೊಂಡಿಯಾಗಿಯೂ ಉಳಿದರು. ಒಂದು ಸಂಕೋಲೆಯ ಶಕ್ತಿಯಿರುವುದೇ ಈ ಕೊಂಡಿಗಳಲ್ಲಿ. ಈ ಕೆಳಹಂತದ ಅಧಿಕಾರಿಗಳಿದ್ದ ಸ್ಥಾನಮಾನವನ್ನು ನೋಡಿದ ಯಾರಿಗಾದರೂ ಬ್ರಿಟಿಷರ ಮತ್ತು ಅವರ ಭಾಷೆ-ಸಂಸ್ಕೃತಿಯ ಮೇಲೆ ಒಲವು ಮೂಡದಿರಲಾರದು.

ಈ ಒಲವಿಗೂ ಪರ್ಯಾಯವಾಗಿ ಇನ್ನೂ ಒಂದು ಕಾರಣವಿತ್ತು. ಕೆಳಹಂತದ ಅಧಿಕಾರಿಗಳು ಮೇಲಾಧಿಕಾರಿಗಳೆದುರು ಎಷ್ಟು ನಿಷ್ಠರೂ ಜೋಳವಾಳಿಗೆಯವರೂ ಆಗಿದ್ದರೋ, ತಮ್ಮ ಕೈಕೆಳಗಿನ ಸಾಮಾನ್ಯ ಜನರೆದುರು ದರ್ಪಿಗಳೂ ಶೋಷಕರೂ ಆಗಿದ್ದರು. ಇಂಗ್ಲಿಷ್‌ನ ಎಲ್ಲ ಸಮಷ್ಟಿ ಸಂಸ್ಕೃತಿಯ ಸಂಪರ್ಕ ಅವರಿಗೆ ಹೆಚ್ಚು ಧೈರ್ಯವನ್ನು ಒದಗಿಸುತ್ತಿತ್ತು. ಈ ಹಿನ್ನೆಲೆಯೊಳಗೆ ಶೋಷಿತ ವರ್ಗಕ್ಕೆ ಇವರನ್ನು ಎದುರಿಸುವುದು ಕಷ್ಟಕರವಾಗಿತ್ತು. ಸುಲಭದ ಹಾದಿಯೆಂದರೆ ಇಂಗ್ಲಿಷನ್ನು ಅಭ್ಯಸಿಸಿ ಇವರಿಗಿಂತ ಮೇಲಿನ ಮೆಟ್ಟಿಲುಗಳಲ್ಲಿ ತಮ್ಮನ್ನು ಪ್ರತಿಷ್ಠಾಪಿಸಿಕೊಳ್ಳುವುದು. ವಿಲಾಯಿತಿಯ ಓದು ಒಂದು ಫ್ಯಾಷನ್ನಾಗಿ ಬಂದದ್ದೇ ಹೀಗೆ.

ಗಾಂಧಿಯಂಥವರೂ ಇಂಗ್ಲಿಷಿಗೇ ಮಾರು ಹೋಗಿ ಅದರ ಎಲ್ಲ ಲಾಭವನ್ನು ಪಡೆದಾದ ಮೇಲೆ ಅದರ ಇನ್ನೊಂದು ಮುಖವನ್ನು ಕಂಡಾಗಲೇ ಜ್ಞಾನೋದಯವಾದಂತೆ ದೇಶಪ್ರೇಮಿಗಳಾದರು; ಮೊದಲಲ್ಲ. ಸಂಸ್ಕೃತದ ಅಧಿಪತ್ಯದಿಂದ ಹೊರಬಂದ ದೇಶಿ ಭಾಷೆಗಳು ಸಂಸ್ಕೃತದ ಅನೇಕ ಪದಗಳನ್ನೊಳಗೊಂಡಿವೆಯಾದರೂ ಅವೆಲ್ಲವನ್ನು ತಮ್ಮದಾಗಿಸಿಕೊಂಡಿವೆ. ಅವು ಸಂಸ್ಕೃತ ಮೂಲದ ಪದಗಳೆಂದು ನಮಗನ್ನಿಸುವುದೇ ಇಲ್ಲ. ಆದರೆ ಮೂರೂವರೆ ಶತಮಾನಗಳ ಇಂಗ್ಲಿಷ್‌ನ ಸಂಪರ್ಕ ಸಾವಿರಾರು ವರುಷಗಳ ಸಂಸ್ಕೃತದ ಪ್ರಭುತ್ವವನ್ನು ಮೀರಿಸುವಷ್ಟು ನಮ್ಮ ಜನಜೀವನವನ್ನು ಕಲುಷಿತಗೊಳಿಸಿದೆ. ೧೯೪೭ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದಾಗ ಬ್ರಿಟಿಷರೇ ಈ ದೇಶದ ಸಂಸ್ಕೃತಿಯನ್ನು ನಿರೂಪಿಸಿದರೇನೋ ಎಂಬಷ್ಟು ನಾವು ಬದಲಾಗಿದ್ದೆವು. ರಾಜಕೀಯ ಸ್ವಾತಂತ್ರವನ್ನಷ್ಟೇ ಪಡೆದವು ಎಂದು ಹೇಳದೆ ಗತ್ಯಂತರವಿಲ್ಲ. ಎಲ್ಲವನ್ನು ಇಂಗ್ಲಿಷ್ ಮುಖವಾಗಿ ನಾವು ಕಾಣಲೇಬೇಕಾದ ಅನಿವಾರ್ಯತೆಯನ್ನು ನಾವು ಹುಟ್ಟು ಹಾಕಿದ್ದೆವು. ಬ್ರಿಟಿಷರಿಂದ ನಾವು ಯಾವ್ಯಾವ ವಿಚಾರಗಳಲ್ಲಿ ಮುಕ್ತಿ ಪಡೆಯಬೇಕಾಗಿದ್ದಿತೋ ಅವನ್ನು ಕೊನೆಗೂ ಪಡೆಯಲೇ ಇಲ್ಲ. ಇಂಗ್ಲಿಷ್ ಭಾಷೆ

ಯೊಂದಿಗೇ ಅವರ ಸೂಟು ಬೂಟಿನ ವೇಷಭೂಷಣ, ನಡವಳಿಕೆ ಇವನ್ನು ಅನುಕರಿಸಿದೆವು. ಇಲ್ಲಿಗೇ ನಿಲ್ಲಲಿಲ್ಲ ಅವರು ಮೆಚ್ಚಿದ್ದನ್ನು ನಾವು ಮೆಚ್ಚಿದೆವು. ಅವರ ಪದ್ಧತಿಗಳನ್ನು ಕೊನೆಗೆ ಸಾಹಿತ್ಯದಲ್ಲಿಯೂ ಹಿಂಬಾಲಿಸಿದೆವು ನವೋದಯ -ನವ್ಯದ ಮುಖ್ಯ ಸಾಹಿತ್ಯಗಳನ್ನು ಗಮನಿಸಿದರೆ ಇದು ಅರ್ಥವಾದೀತು. ಸಂಸ್ಕೃತದ ಕಾವ್ಯ ಮೀಮಾಂಸೆಯನ್ನು ಕೈಬಿಟ್ಟೆವು, ಸರಿ; ಬದಲಿಗೇ ಇಂಗ್ಲಿಷಿನ ಆ ಮೂಲಕ ಪಾಶ್ಚಾತ್ಯ ಕಾವ್ಯ ಮೀಮಾಂಸೆಯನ್ನು ತಬ್ಬಿಕೊಂಡೆವು. ದೇಶಿ ಕಾವ್ಯ ಮೀಮಾಂಸೆ ಬೇಕೆಂದು ನಮಗನ್ನಿಸಲೇ ಇಲ್ಲ. ಇಂಗ್ಲಿಷರು ಬಿಟ್ಟು ಹೋದದ್ದನ್ನೆಲ್ಲ ಬಾಚಿಕೊಂಡೆವು. ಅಲ್ಲಿನ ಹವಾಗುಣಕ್ಕೆ ಅಲ್ಲಿನ ಯಾವುದೋ ಕಾಲದ ಪದ್ಧತಿಯ ಪಳಯುಕೆಯಾದ ಧಿರುಸನ್ನು ನಾವು ಇಲ್ಲಿ ಎಂತಹ ಸೆಖೆಯಲ್ಲೂ ಧರಿಸುವುದನ್ನು ಕಂಡರೇ ಈ ಪ್ರಭಾವ ಗೊತ್ತಾಗುತ್ತದೆ. ನಮ್ಮ ನ್ಯಾಯಾಂಗದಲ್ಲಿ ನ್ಯಾಧೀಶರೂ ವಕೀಲರೂ ಕಪ್ಪು ಕೋಟು ಹಾಕುವುದಕ್ಕೆ ನಮ್ಮದೇ ಆದ ಯಾವ ವೈಜ್ಞಾನಿಕ ಕಾರಣಗಳಾಗಲೀ ಸಮರ್ಥನೆಯಾಗಲೀ ಇಲ್ಲ. ಅವರು ಕಪ್ಪುಕೋಟು ಹಾಕಿದರು; ನಾವೂ ಹಾಕುತ್ತೇವೆ, ಅಷ್ಟೇ. (ರಶ್ಯಾದಲ್ಲಿ ಮಳೆ ಬಂದರೆ ನಮ್ಮ ಕಮ್ಯುನಿಸ್ಟರು ಇಲ್ಲಿ ಕೊಡೆ ಬಿಡಿಸುತ್ತಾರೆಂದು ಟೀಕೆ ಮಾಡುವವರು ಮೊದಲು ಈ ಅಂಶಗಳನ್ನು ನೆನಪಿಡಬೇಕು.) ನಮ್ಮ ರಸ್ತೆಗಳಿಗೆ ಕ್ಲಬ್ಬುಗಳಿಗೆ ವಿಹಾರ ಕೇಂದ್ರಗಳಿಗೆ ಇಂದಿಗೂ ಬ್ರಿಟಿಷ್ ಪರಂಪರೆಯ ಹೆಸರುಗಳೇ ಉಳಿದಿವೆ. ಬ್ರಿಟಿಷರು ಬಂದರೆ ಹಳೆಯ ಗುಲಾಮಗಿರಿಯ ನೆಪದಲ್ಲೇ ಇನ್ನೂ ಡೊಗ್ಗು ಸಲಾಮು ಹೊಡೆಯುವ ಜೀತದಾಳುಗಳು ಇಂದಿಗೂ ಸೂಟು ಬೂಟಿನಲ್ಲಿ ಇಂಗ್ಲಿಷ್ ಮಾತನಾಡುತ್ತ ಪ್ರತ್ಯಕ್ಷರಾಗುತ್ತಾರೆ. ಸಾಹಿತ್ಯಿಕ ಮೌಲ್ಯಗಳಿಗಿಂತ ಸಾಹಿತ್ಯೇತರ ಮೌಲ್ಯಗಳೇ ಪ್ರಧಾನವಾಗಿ ನಮ್ಮ ವಿಮರ್ಶೆ ಕಣ್ಣು ಇಂಗ್ಲಿಷ್ ಮತ್ತಿತರ ಯುರೋಪಿಯನ್ ಕೃತಿಗಳ ಕುರಿತು ತೆರೆದುಕೊಳ್ಳುವುದನ್ನು ಗಮನಿಸಿ. ವಸಾಹತುಶಾಹಿ ಪ್ರತೀಕವಾದ ಎಲ್ಲವನ್ನೂ ವೈಭವೀಕರಿಸುವುದೇ ನಮ್ಮ ಸಂಸ್ಕೃತಿಯಾಯಿತೆನ್ನಬಹುದು. ಇಂಗ್ಲಿಷ್ ಕಲಿತ ಎಲ್ಲರೂ (ಬರಿಯ ಮೇಲ್ಜಾತಿಯ ಭಾರತೀಯರಿಗೆ ಈ ಅಪವಾದವನ್ನು ಹೊರಿಸುವುದನ್ನು ನಾವು ಆಕ್ಷೇಪಿಸುತ್ತೇನೆ) ಇಂಗ್ಲಿಷ್ ಸಂಸ್ಕೃತಿಯನ್ನು ಭಾರತೀಯರಿಗೆ ಉಣಬಡಿಸಿದರು. ನಮ್ಮ ರಾಷ್ಟ್ರೀಯ ಆಟಗಳಿಗಿಂತ ಹೆಚ್ಚಾಗಿ ಕ್ರಿಕೆಟು ನಮ್ಮನ್ನಾಕರ್ಷಿಸಿದೆ. ಕ್ರಿಕೆಟು ಹೇಳಿ ಕೇಳಿ ಬ್ರಿಟಿಷ್ ಅಧಿಪತ್ಯವಿದ್ದ ರಾಷ್ಟ್ರಗಳಲ್ಲಿ ಮಾತ್ರ ಪ್ರಚಲಿತವಿರುವ ಕ್ರಿಡೆ. ಅಮೇರಿಕಾ, ಕೆನಡಾ, ಜಪಾನ್, ಚೀನಾಗಳಲ್ಲಿ ಕ್ರಿಕೆಟು ಒಂದು ಕ್ರೀಡೆಯೇ ಅಲ್ಲ, ನನ್ನ ಮಿತ್ರರೊಬ್ಬರು ಇತ್ತೀಚೆಗೆ ಫ್ರಾನ್ಸಿಗೆ ಹೋಗಿದ್ದರು. ಅಲ್ಲಿ ಫ್ರೆಂಚನೊಬ್ಬ 'ಅವರನ್ನು ನೀವು ಅದು ಹೇಗಪ್ಪಾ ಇಡೀ ದಿನ ಕೂತು ಕ್ರಿಕೆಟು ನೋಡುತ್ತೀರಿ?' ಕೇಳಿದರಂತೆ. ಅದಕ್ಕೇ ನನ್ನ ಮಿತ್ರ ಉತ್ತರಿಸುವ ಮೊದಲೇ ಆ ವ್ಯಕ್ತಿ 'ಕ್ರಿಕೇಟು ಸಮಯ ಹಾಳು ಮಾಡುತ್ತದೆಯೆನ್ನುವುದಕ್ಕಿಂತಲೂ ಅದು ವಸಾಹತುಶಾಹಿಯನ್ನು ಪ್ರತಿನಿಧಿಸುತ್ತದೆ

ಎನ್ನುವುದೇ ಭಾರತವನ್ನು ಚಿಂತೆಗೀಡುಮಾಡಬೇಕಾಗಿತ್ತು. ಆದರೆ ದುರದೃಷ್ಟಕ್ಕೆ ನಿಮಗೆ ಇದೆಲ್ಲ ತಲೆಗೆ ಹೋಗುವುದೇ ಇಲ್ಲ!' ಎಂದನಂತೆ. ಆ ವ್ಯಕ್ತಿ ಸತ್ಯ ಹೇಳಿದ್ದ. ಪರಿಣಾಮವಾಗಿ ನಾವಿಂದು ಸ್ವಾತಂತ್ರ್ಯ ಸಿಕ್ಕ ಐದು ದಶಕಗಳ ನಂತರ ಶಲ್ಲಣದ ಸ್ಥಿತಿಯಲ್ಲಿದ್ದೇವೆ. ಭಾಷಾವಾರು ಪ್ರಾಂತ್ಯಗಳ ರಚನೆಯಾಗಿ ನಾಲ್ಕು ದಶಕಗಳು ಕಳೆದಿವೆ. ಮಾತೃಭಾಷೆಗೆ ಅಗ್ರಸ್ಥಾನ ನೀಡುವ ರಾಜ್ಯಗಳ ಆಶಯಗಳಿಗೆ ಸಂವಿಧಾನಾತ್ಮಕ ರಕ್ಷಣೆಯಿದೆ. ಕರ್ನಾಟಕದಲ್ಲಿ ಕನ್ನಡ ಹೇಗೋ ಹಾಗೆಯೇ ಎಲ್ಲಾ ರಾಜ್ಯಗಳಲ್ಲೂ ಆಯಾಯ ಭಾಷೆಗಳ ಬೆಳವಣಿಗೆಗೆ ಬೇಕಾದ ಅಕಾಡೆಮಿಗಳು, ಪರಿಷತ್ತುಗಳಿವೆ. ಹಾಗೇ ನೋಡಿದರೆ ಉಪಭಾಷೆಗಳ ಸ್ಥಿತಿ ಪರವಾಗಿಲ್ಲವೆನಿಸುವಂತಿದೆ. ಏಕೆಂದರೆ ಅದಕ್ಕೆ ಮೊದಲು ಯಾವುದೇ ಶಾಸನ ಬದ್ಧ ಹಕ್ಕು-ಸ್ವಾತಂತ್ರ್ಯ ಇರಲಿಲ್ಲ. ಈಗ ಅವುಗಳ ಐಡೆಂಟಿಟಿಯನ್ನು ಸ್ಥಾಪಿಸಿಕೊಳ್ಳಲು ಅವಕಾಶಗಳು ಹೆಚ್ಚಿವೆ. ಕರ್ನಾಟಕದ ಸ್ಥಿತಿಗತಿಗಳನ್ನೇ ಗಮನಿಸೋಣ. ಕನ್ನಡ ಮಾಧ್ಯಮ ಶಾಲೆಗಳಿಗೆ ವಿದ್ಯಾರ್ಥಿಗಳ ಸಂಖ್ಯೆ ಕ್ಷೀಣಿಸಿದೆ. ಅನೇಕ ಶಾಲೆಗಳು ವಿದ್ಯಾರ್ಥಿಗಳ ಅಭಾವದಿಂದ ಮುಚ್ಚಿವೆ. ಇದು ರಾಜ್ಯದ ಜನಸಂಖ್ಯೆ ಕಡಿಮೆಯಾಗಿದೆಯೆಂದು ಅರ್ಥವಲ್ಲ. ಭಾರತದ ಎಲ್ಲ ಭೂಭಾಗಗಳಂತೆ ಇಲ್ಲೂ ಜನಸಂಖ್ಯಾ ಆಸ್ಫೋಟ ನಡೆದಿದೆ. ವಸ್ತುಸ್ಥಿತಿಯೆಂದರೆ ಕನ್ನಡ ಮಾಧ್ಯಮಕ್ಕಿಲ್ಲದ ಮಕ್ಕಳು ಇಂಗ್ಲಿಷ್ ಮಾಧ್ಯಮ ಶಾಲೆಗಳಿವೆ. ಅಲ್ಲಿ ಕಲಿತ ಕಲಿಯುವ ಮಕ್ಕಳು ಇಂಗ್ಲಿಷ್ ಹಾಡುಗಳನ್ನು ಗುಣುಗುಣಿಸುತ್ತಿವೆ; ಶಾಲೆಯಲ್ಲಿ, ಬೀದಿಯಲ್ಲಿ, ಮನೆಯಲ್ಲಿ, ಇಂಗ್ಲಿಷ್ ಮಾತನಾಡುತ್ತವೆ. ಇಂಗ್ಲಿಷ್ ತಿಳಿಯದ ತಂದೆ-ತಾಯಿಗಳಿಗೂ ಬಟ್ಲರ್ ಇಂಗ್ಲಿಷಾದರೂ ಅಭ್ಯಾಸವಾಗುವಂತಹ ವಾತಾವರಣವನ್ನು ನಿರ್ಮಿಸುತ್ತವೆ.

ಪ್ರಸಾರ ಮಾಧ್ಯಮಗಳಲ್ಲೂ ಇಂಗ್ಲಿಷ್ ಆಟಗಳಾದ ಕ್ರಿಕೆಟು ಟೆನ್ನಿಸ್‌ಗಳಲ್ಲದೆ ಅವುಗಳ ಜೊತೆಗೆ ಆ ಪರಿಸರಕ್ಕೆ ಪ್ರತ್ಯೇಕವಾಗಿ ಗುರುತಿಸಲ್ಪಟ್ಟಿರುವ ನಡವಳಿಕೆಗಳೂ ಪ್ರಚಾರವಾಗುತ್ತಿವೆ. ಬಹುರಾಷ್ಟ್ರೀಯ ಸಂಸ್ಥೆಗಳು ನಮ್ಮ ಮೇಲೆ ಮಾಡಿರುವ ದಾಳಿಯ ಕುರಿತು ವಿವರಗಳೇ ಬೇಕಿಲ್ಲದಷ್ಟು ಮಾಹಿತಿಗಳಿವೆ. ವಿದೇಶಿ ಟಿವಿ ಚಾನಲ್‌ಗಳಂತೂ ಪಾಶ್ಚಿಮಾತ್ಯ ಜಗತ್ತನ್ನು ಪೂರ್ಣವಾಗಿ ಅನಾವರಣಗೊಳಿಸಿ ಪ್ರದರ್ಶಿಸುತ್ತವೆ. ಸ್ಟಾರ್ ಟಿವಿಯಂತಹ ವಿದೇಶಿ ಸಂಸ್ಥೆ ನಮ್ಮನ್ನು ಲೇವಡಿ ಮಾಡುವಂತೆ 'ದೇಶಿ ಚಾನಲ್ ದೇಶಿ ಮನೋರಂಜನೆ' ಎಂಬ ಶೀರ್ಷಿಕೆಯೊಂದಿಗೆ ಅಗ್ಗದ ಪಾಶ್ಚಾತ್ಯ ಅನುಕರಣೆಯನ್ನು ನೀಡುತ್ತಿದೆ.

ಇವನ್ನು ವಿದೇಶಿ ಎಂದು ದೂಷಿಸಬಹುದು. ಆದರೆ ನಮ್ಮಲ್ಲೇ ಇರುವ ಇಂಗ್ಲಿಷ್ ಪತ್ರಿಕೆಗಳು, ನಿಯತಕಾಲಿಕೆಗಳು ಇಂಗ್ಲಿಷ್ ಸಂಸ್ಕೃತಿಯ ಗಬ್ಬನ್ನು ಹಬ್ಬುತ್ತಿವೆ. ಇಂಗ್ಲಿಷ್ ಪತ್ರಿಕೆಗಳಲ್ಲಿ ಮತ್ತು ಇಲ್ಲಿಂದ ಪ್ರಭಾವಿತಗೊಂಡ ಎಲ್ಲ ಮಾಧ್ಯಮ

ಗಳಲ್ಲಿ ಇಂಗ್ಲಿಷ್ ಕೃತಿಗಳ ಇಂಗ್ಲಿಷ್ ಅನುಭವಗಳ ಹೊಗಳಿಕೆ ವಿಮರ್ಶೆಯಲ್ಲಿ ಹೆಸರಿನಲ್ಲಿ ನಡೆಯುತ್ತಿವೆ. ಕನ್ನಡದ ಕಾರಂತರಿಗೆ ಅನಂತಮೂರ್ತಿಗೆ ಲಂಕೇಶಗಿಲ್ಲದ ಪ್ರಚಾರ ಅರುಂಧತಿರಾಯ್‌ಗೆ ಕನ್ನಡದಲ್ಲಿ ಲಭಿಸುತ್ತದೆ. ಕನ್ನಡದ ಯಾವುದೇ ಕೃತಿಯಾಗಲೀ ಭಾರತದ ಯಾವುದೇ ಭಾಷೆಗೆ ಅನುವಾದಗೊಳ್ಳುವುದಕ್ಕಿಂತ ಹೆಚ್ಚು ಹುಮ್ಮಸ್ಸಿನಲ್ಲಿ (ಹೆಚ್ಚಾಗಿ ಆಯಾಯ ಲೇಖಕರಿಂದಲೇ) ಇಂಗ್ಲಿಷ್‌ಗೆ ಅನುವಾದಗೊಳ್ಳುತ್ತವೆ ಏಕೆಂದರೆ ಇಂಗ್ಲಿಷ್ ಸಂಸ್ಕೃತಿಯ ಗೌರವಕ್ಕೆ ಆ ಮೂಲಕ ಹೆಚ್ಚು ಹಣದ ಹೊಳೆ ಹರಿಯುವ ಪ್ರಶಸ್ತಿಗಳಿಗೆ ಪಾತ್ರರಾಗಬಹುದಲ್ಲ! ಎಂದರೆ ಈ ಆಕರ್ಷಣೆಗೆ ಆರ್ಥಿಕವಾಗಿ ಕಾರಣಗಳಿವೆ ಎಂದಾಯಿತು. ಆರ್ಥಿಕವಾದ ಪ್ರಭಾವಗಳಿಗೆ, ಲಾಭಕ್ಕೆ ಆಕರ್ಷಣೆಗೆ ನಮ್ಮ ದೇಶವಂತಹ ಬಡರಾಷ್ಟ್ರ ಮತ್ತು ಅಲ್ಲಿನ ಆತ್ಮಸ್ಥೈರ್ಯ ಕುಂದಿದಂತಿರುವ ಪ್ರಜೆಗಳು ಬಲಿಯಾಗುವುದರಲ್ಲಿ ಆಶ್ಚರ್ಯವಿಲ್ಲ. ಆದರೆ ಗಮನಿಸಬೇಕಾದ್ದೆಂದರೆ ಇಂಗ್ಲಿಷ್ ವಿದ್ಯುತ್ ಹರಿದಂತಿರುವ ದೇಶಿಯರು ವರ್ತಿಸುತ್ತಿರುವ ರೀತಿ.

ನಮ್ಮ ಬಹುಪಾಲು ಮೇಲ್ವರ್ಗದ ಕಾರ್ಯಕ್ರಮಗಳಲ್ಲಿ ಇಂಗ್ಲಿಷ್ ಭಾಷೆಯ ಸಂಸ್ಕೃತಿಯ ಪ್ರಭಾವ ದಟ್ಟವಾಗಿದೆ. ಇದಕ್ಕೆ ಕಾರಣವೂ ಇಲ್ಲದಿಲ್ಲ. ಇಂಗ್ಲಿಷ್ ಭಾಷೆಯನ್ನಾಡುವುದು ಸುಶಿಕ್ಷಿತ ಸಮಾಜದ ಆಧುನಿಕತೆಯ ಲಕ್ಷಣವೆನಿಸಿದೆ. ಅಭಿಮಾನದಿಂದ ಕನ್ನಡ ಮಾತನಾಡುವವನನ್ನು ಕೀಳಾಗಿ ಕಾಣುವ ಪರಿಪಾಠ ನಮ್ಮ ಮೇಲ್ವರ್ಗದ ವಿದ್ಯಾವಂತರಲ್ಲಿದೆ ಕನ್ನಡ ಮಾತನಾಡುವುದೆಂದರೆ ಇಂಗ್ಲಿಷ್ ಭಾಷೆ ತಿಳಿಯದೇ ಇರುವುದು ಎಂಬ ಅಭಿಪ್ರಾಯ ಬಂದಿದೆ. ಮನೆ ಮಾತು ಇಂಗ್ಲಿಷ್ ಅಲ್ಲದ ನಮ್ಮ ಜನ ಬೇಕೆಂದೇ ನೆಂಟರಿಷ್ಟರಲ್ಲಿ ಮಕ್ಕಳಲ್ಲಿ ಇಂಗ್ಲಿಷ್ ಮಾತನಾಡುವ ಮೂಲಕ ತಾವೆಲ್ಲ ಆಧುನಿಕರು ಎಂದು ಸೋಗು ಹಾಕುತ್ತಾರೆ. ಇನ್ನು ತಮಾಷೆಯೆಂದರೆ ಕನ್ನಡವನ್ನೇ ಪರಸ್ಪರ ಮಾತನಾಡುವವರು ಯಥೇಚ್ಛವಾಗಿ ಮಧ್ಯೆ ಮಧ್ಯೆ ಇಂಗ್ಲಿಷನ್ನು ಬಳಸುವುದು. 'ವೆಲ್,' 'ಐ ಮೀನ್' ಇವೆಲ್ಲ ಪಂಚತಾರಾ ಸಂಸ್ಕೃತಿಯೆಂದೆನಿಸಿದೆ ಬ್ರಿಟಿಷರ ಕಾಲಕ್ಕಿಂತಲೂ ಹೆಚ್ಚಾಗಿ ಈಗ ಇಂಗ್ಲಿಷ್ ಆಕ್ರಮಿಸಿ ಆವರಿಸಿ ನಮ್ಮ ದೇಶಿ ಭಾಷೆಗಳನ್ನು ಉಸಿರುಗಟ್ಟಿಸುತ್ತಿದೆ.

ಇಂಗ್ಲಿಷನ್ನು ಎಷ್ಟು ಬಳಸಬೇಕು ? ಒಂದು ಭಾಷೆಯ ಬಗ್ಗೆ ಅನಗತ್ಯ ದ್ವೇಷ ಸಲ್ಲದು. ಆದರೆ ಇಂಗ್ಲಿಷ್ ಮಾಧ್ಯಮ ಮಾತ್ರವಾಗುಳಿದಿಲ್ಲ; ಒಂದು ಸಂಸ್ಕೃತಿಯ ಕೊನೆಯೆನಿಸಿದೆ. (ಗುರಿ ಎಂಬರ್ಥದಲ್ಲಿ 'ಕೊನೆ'ಯನ್ನು ಬಳಸಿದ್ದೇನೆ.) ಬೇಸರದ ಅಂಶವೆಂದರೆ, ನಾವು ನಮ್ಮ ಸೋದರ ಭಾಷೆಗಳನ್ನು ಇಂಗ್ಲಿಷಿನ ಮುಖಾಂತರವೇ ನೋಡುತ್ತಿರುವುದು ಪರಸ್ಪರ ಅರ್ಥಮಾಡಿಕೊಳ್ಳುವುದಕ್ಕೆ ಅನಿವಾರ್ಯವೆಂದು ಇಂಗ್ಲಿಷನ್ನು ಬಳಸೋಣ. ಆದರೆ ಇಂಗ್ಲಿಷ್‌ನ ಮುಖಾಂತರ ಸಾರ್ವಭೌಮತ್ವ

ವನ್ನು ಪ್ರವರ್ಶಿಸಬಹುದೆಂದು ಯಾರಾದರೂ ತಿಳಿದರೆ ಅದು ಸಾಂಸ್ಕೃತಿಕ ಅಕ್ರಮಣವೆನಿಸುತ್ತದೆ. ಈ ತಂತ್ರದ ವಿರುದ್ಧ ದೇಶಿ ಭಾಷೆಗಳು ಪ್ರತಿಭಟಿಸಬೇಕು. ಇಂಗ್ಲಿಷನ್ನು ನಾವು ಉಪಯೋಗಿಸಿದಾಗ ಅದನ್ನು ನಾವು ನುಂಗಿದ್ದೇವೆ ಮತ್ತು ಜೀರ್ಣಿಸಿದ್ದೇವೆ ಎಂದರ್ಥ ಬರಬೇಕು. ಆದರೆ ನಮ್ಮ ನಡವಳಿಕೆಗಳನ್ನು ಗಮನಿಸಿದರೆ ನಾವೇ ಇಂಗ್ಲಿಷಿನ ಗುಲಾಮರಾಗಿ ನಮ್ಮ ಮಾತೃಭಾಷೆಯನ್ನು ನಿರ್ಲಕ್ಷಿಸುತ್ತಿದ್ದೇವೆ ಅನ್ನಿಸುತ್ತದೆ. ನಾವು ನಮ್ಮ ದೇಶಿ ಸೋದರ ಭಾಷೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ ವಿಫಲರಾಗಿದ್ದೇವೆ ಎಂಬುದು ಭಾಷಾವಾರು ವಿಭಜನೆಯ ಸೋಲು ಮಾತ್ರವಲ್ಲ, ದೇಶದ 'ಭಿನ್ನತೆಯಲ್ಲಿ ಏಕತೆ'ಯ ಅರ್ಥಹೀನತೆ ಮಾತ್ರವಲ್ಲ, ನಮ್ಮ ಸಾಂಸ್ಕೃತಿಕ ದುರಂತ ಕೂಡಾ ಆಗಿದೆ. ಪ್ರತಿ ಸಂಸ್ಕೃತಿಯನ್ನು ನಿರ್ವಿಸುವವರು ಕೂಡಾ ಶಿಷ್ಟವನ್ನು ವಿರೋಧಿಸುವ ಅವಸರದಲ್ಲಿ ಇಂಗ್ಲಿಷ್‌ನ ಪ್ರಭಾವವನ್ನು ಅಲಕ್ಷಿಸಿದ್ದಾರೆ. ಸಾಮಾನ್ಯ ವೈರಿ (Common enemy) ಯಾದ ಇಂಗ್ಲಿಷನ್ನು ಒಟ್ಟಾಗಿ ವಿರೋಧಿಸುವುದನ್ನು ನಾವು ಮರೆತರೆ ನಾವು ಒಬ್ಬೊಬ್ಬರಾಗಿ ಇಂಗ್ಲಿಷಿಗೆ ಬಲಿಯಾಗುತ್ತೇವೆ.

ರಾಜಕೀಯ ಸ್ವಾತಂತ್ರ್ಯ ಪಡೆದ ಅನೇಕ ರಾಷ್ಟ್ರಗಳು ಮತ್ತೆ ಬ್ರಿಟಿಷ್ ವಸಾಹತುಗಳಾಗಿ ಯಾತನಾಮಯ ಬದುಕನ್ನು ಪಡೆದಿವೆ. ಆ ಭವಿಷ್ಯದ ಕಡೆಗೆ ನಮ್ಮ ನಂತರದ ತಲೆಮಾರು ನಡೆಯದಂತೆ ನೋಡಬೇಕಾದ ಹೊಣೆ ನಮಗಿದೆ. ಇದಕ್ಕೆ ಬೇಕಾದಂತಹ ಸಾರ್ವತ್ರಿಕ ಯೋಜನೆ ರೂಪುಗೊಳ್ಳಬೇಕು. ಶಾಸನದಿಂದಾಗಲೀ ಪ್ರಾಧಿಕಾರಗಳಿಂದಾಗಲೀ ಮಾತ್ರ ಇದು ಸಾಧ್ಯವಿಲ್ಲವೆಂಬುದನ್ನು ಈಗಾಗಲೇ ನಾವು ಕಂಡಿದ್ದೇವೆ. ಶಿಷ್ಟ–ಪರಿಶಿಷ್ಟವನ್ನು ಸ್ವಲ್ಪಕಾಲ ಮುಚ್ಚಿಟ್ಟು ದೇಶಿ-ಪರದೇಶಿ ಸಂಸ್ಕೃತಿಗಳ ಮುಖಾಮುಖಿಯನ್ನು ನಾವು ನಡೆಸುವುದು ಒಂದು ಸ್ವಾಗತಾರ್ಹಪ್ರಯತ್ನವಾದೀತು. ಕೊನೇಪಕ್ಷ ಒಂದು ಪ್ರಯೋಗವಂತೂ ಆದೀತು.

●

ಕೃಪೆ : ಜನವಾಹಿನಿ. ಮಂಗಳೂರು

ಗಂಗಾರಾಂ ಚಂಡಾಳ

ಮುಡಿಪು

೧

ಅಧೋಯುಗದ ನೇಗಿಲನೊಗಹೊತ್ತ ಬಲರಾಮ
ಆಧುನಿಕ ಯುಗದ ಮೀಸಲಾತಿ ಭಾರ ಹೊರಲಾರ
ಯಾರೊ ಅಪಹರಿಸಿದರು ನಿರ್ದೇಶನವಿತ್ತು
ಪ್ರಾಣವ ಬೆಂಕಿಯಲಿ ಹಾಕಿ ಮಂತ್ರಿ
ಸಿ ನೀರ. ಓಂಕಾರ ತೆಗೆದು ತಾಮ್ರ ಪಾತ್ರೆ
ಯ ಸದ್ದಿನಂತೆ ನಿರಂತರ ನಡೆದಿದೆ. ನೀರ
ಮೇಲಿನ ಗುಳ್ಳೆ ಕೇರಿ ಒಪ್ಪದು ಬೀದಿ ಬಿಡದು
ಕುದುರೆ ಏರಿ ಬರುವ ವರವ
ಶುಭಕೋರುವ ಕೆಂಪು ಬಟ್ಟೆ
ಹೊಲೆ ಮಾದಿಗರ ಮೈ ಮೇಲಿರುವ ಚೇಳು
ಎಂದಾದರೂ ಕಡಿಯುವುದೆಂಬ ಗುಮಾನಿ
ತಮ್ಮ ಹೆಣ್ಣು ಮಕ್ಕಳ ಕದಿಯುವರೆಂಬ
ಕಾಡುಮೇಡುಗಳಲ್ಲಿ ಒಂಬತ್ತು ತಿಂಗಳು
ಸವೆಸಿದ್ದ ಚಾಂಡಾಲರು ಮತ್ತೆ ಹುಟ್ಟಿನ ಗುಣ
ತೋರಿಸುವರೆಂಬ ಪಾರಂಪರಿಕ ಭಯ.

೨

ಸರಕಾರಿ ದೇವರ ಕೆಲಸಕ್ಕೆ
ಮುಡಿಪು ಕೊಟ್ಟು ವರದಿಂದ ಬಂದವ
ಆನೆಗಾತ್ರದ ಬಿಳಿ ಅಂಬಾಸಿಡರ
ಹೊತ್ತೊಗುವುದು ಬಾಣ ಸವಾರ
ಬಲರಾಮನೆಂಬ ಕೆಪ್ಪನ
ಯಂತ್ರ ಓದಿದವ ಮಂತ್ರ ಅರಿತವ
ಶೈಕ್ಷಣಿಕ ಕ್ಷಣಿಕ ಬಲರಮನಿಗೆ.
ಗುಬಾಬಿ ನಗರದಲ್ಲಿ ಮುಳ್ಳಾಗಿ ಕಾಡಿದವ
ಅಂಬೇಡ್ಕರ್ ಯಾವ ಜಾತಿಗೆ ಸೇರಿದವ
ಬಹಿರಂಗದಲಿ ಬಡಬಡಿಸಿದ
ಅಂತರಂಗದಲಿ ಬಾಗಿಬಿಟ್ಟ
ಅಂಬೇಡ್ಕರ್ ನೀಡಿದ ಮುಡಿಪಿಗೆ ಕರ ತೋರಿದವ

೩

ಇಲಿ ಹಿಡಿಯಲು ಬಾವಿ ತೋಡಿ
ಬಿತ್ತಿ ಬೆಳೆದದ್ದು ಕಾಂಗ್ರೆಸ್ ಹುಲ್ಲು
ವಿಶ್ವಬ್ಯಾಂಕ್ ಕನ್ಯೆಯ ಮುದ್ದಿಸಿ ಬಸಿರು
ಗರ್ಭ ತೆಗೆದ ವಿಶ್ವೇಶ್ವರಯ್ಯನ ಹೆಸರಲಿ
ಪಳೆಯಂತ್ರಗಳಿಗೆ ಬಣ್ಣ ಬಳಿಸಿ ನೈವೇದ್ಯತಿಂದವ
ದೇವರ ಪ್ರಸಾದ ಮಂತ್ರಿಗಳಿಗೆ
ಭರವಸೆ ತೀರ್ಥ ಉಪನ್ಯಾಸಕರಿಗೆ
ಸರಕಾರ ವರಕೊಟ್ಟರು ಬಲರಾಮು (ಪೂಜಾರಿ)ಗೆ
ಕರುಣೆ ಇಲ್ಲ
ಹುಲ್ಲು ತಿನ್ನಿಸಿ ದೇಹ ಕರಗಿಸಿ
ಹಗಲು ಕಂಡ ಹುಲಿ ಬಾಯಿಗೆ ರಾತ್ರಿ ತಳ್ಳುವವ.

೪

ಹೆಗ್ಗಣ ಬಿಲ ಕೊರೆಯುವುದ ಬಿಡದು
ಹುಟ್ಟು ಗುಣ ಸುಟ್ಟರೂ ಬಿಡದು
ಮುಂಬಡ್ತಿಗೆ ಮೂವತ್ತು ಸಾವಿರ ಗುಲಾಬಿ
ಹೂವಿದ್ದವ ದೊಡ್ಡಪ್ಪ ಬಲರಾಮನತ್ತಿರ
ಪರಭಾರೆ ಅಧಿಕಾರ ನೀಡಿ ಬಸವಿ ಮಾಡುವವ
ಶವದ ಕೈಯಲ್ಲಿ ಇಡುವವರು ಕೆಟ್ಟವನೆಂಬ ಪತ್ರ
ಹೊದಿಸಿ ಹರಸಿನ ಬಣ್ಣದ, ಬಟ್ಟೆ ಹೊಲಿದು
ಬಲರಾಮನ ಗೋರಿ ಮೇಲೆ ಅಂಬೇಡ್ಕರ್ ದಳ ಇಲ್ಲ
ಇವೆ, ಯಂತ್ರಗಳ ಬಣ್ಣ ಬಣ್ಣದ ಪಳೆಯುಳಿಕೆಗಳು.

ಸಚ್ಚಿದಾನಂದನ್

ಐದು ಕವನಗಳು

೧. ಭೇಟಿ

ನನ್ನ ದೇವರನ್ನು ಕಾಣುವುದಕ್ಕಾಗಿ
ಒಂದು ದುಂಬಿಯ ಝೇಂಕಾರವನ್ನು ಹತ್ತಿ
ನಾನು ನಾದದ ಹಾದಿಯಲ್ಲಿ ಹೋದೆ,
ಹೂಂಕರಿಸುವ ಕಪ್ಪು ಹುಲಿಯೊಂದು ನನ್ನ ಜೊತೆ ಬಂತು.
ಆ ದಾರಿ ನನ್ನನ್ನು ಒಂದು ರಣ ಕಳದ
ಮರಣಕ್ಕೆ ಕರೆದೊಯ್ಯಿತು.

ನನ್ನ ದೇವರನ್ನು ಕಾಣುವುದಕ್ಕಾಗಿ
ಒಂದು ಒಣಗಿದ ಎಲೆಯ ನರವನ್ನು ಹತ್ತಿ
ನಾನು ಮೌನದ ಹಾದಿಯಲ್ಲಿ ಹೋದೆ
ಮೂಕ ಒಂಟೆಯೊಂದು ನನ್ನ ಜೊತೆ ಬಂತು
ಆ ದಾರಿ ನನ್ನನ್ನು ಒಂದು ಮರುಭೂಮಿಯಲ್ಲಿ
ಮರಣಕ್ಕೆ ಕರೆದೊಯ್ಯಿತು

ನನ್ನ ದೇವರನ್ನು ಕಾಣುವುದಕ್ಕಾಗಿ
ಒಂದು ರೇಶ್ಮೆ ಹುಳುವಿನ ರೋಮವನ್ನು ಹತ್ತಿ
ನ ನು ಶಾಶ್ವತತ್ವದ ಹಾದಿಯಲ್ಲಿ ಹೋದೆ
ಒಂದು ರಕ್ಷಣಾ ಸೇನೆ ಪೂರ್ತ ನನ್ನ ಜೊತೆ ಬಂತು
ಆ ದಾರಿ ನನ್ನನ್ನು ಬೆಟ್ಟದ ಮಂಜಿನಲ್ಲಿ
ಮರಣಕ್ಕೆ ಕರೆದೊಯ್ಯಿತು.

ನನ್ನ ದೇವರನ್ನು ಕಾಣುವುದಕ್ಕಾಗಿ
ಒಂದು ಹುಚ್ಚು ಬಿರುಗಾಳಿಯ ಬೆನ್ನು ಹತ್ತಿ
ನಾನು ಪರಿವರ್ತನೆಯ ಹಾದಿಯಲ್ಲಿ ಹೋದೆ.
ಜನರು ಹೆದರಿ ದಾರಿ ಬಿಟ್ಟರು ನನಗೆ
ಆ ದಾರಿ ನನ್ನನ್ನು ಕ್ರೂರ ವನದಲ್ಲಿ
ಮರಣಕ್ಕೆ ಕರೆದೊಯ್ಯಿತು.
ನನ್ನ ದೇವರನ್ನು ಕಾಣುವುದಕ್ಕಾಗಿ
ಒಂದು ಬಾಳೆ ಮೀನಿನ ರೆಕ್ಕೆ ಹಿಡಿದು ಜೋತಾಡುತ್ತಾ

ನಾನು ನಡು ಕಡಲಿಗೆ ಹೋದೆ.
ಒಂದು ತಿಮಿಂಗಿಲ ನಮ್ಮನ್ನು ಒಟ್ಟಿಗೆ ನುಂಗಿ
ಪಾತಾಳಕ್ಕೆ ಕರೆದೊಯ್ಯಿತು
ಅಲ್ಲಿ ಏಳು ಪುರೋಹಿತರು
ಕತ್ತಿಯೊಂದಿಗೆ ಕಾವಲು ಕಾಯುತ್ತಿದ್ದ
ಕಬ್ಬಿಣ ಸರಳುಗಳ ಹಿಂದಿನ ಕಾರಿರುಳಿನಲ್ಲಿ
ನಾನು ದೇವರ ಆರ್ತನಾದವನ್ನು ಕೇಳಿದೆ
ನಾನು ದೇವರ ಸೆರೆ ಬಿಡಿಸಿದೆ.
ಅಂದಿನಿಂದ ನಾನು ನರಕದಲ್ಲಿದ್ದೇನೆ
ಇಲ್ಲಿಗೆ ನನ್ನನ್ನು ಕಳಿಸಿದ್ದು
ದೇವರೋ, ಪುರೋಹಿತರೋ ಎಂಬುದ ಅರಿಯಲಾರದೆ.

೨. ಹೊಸ ಕಾಲ

ಕಡಲ ನಡುವೆ ನಾನು ಏಕಾಂಗಿಯಾಗಿದ್ದಾಗ
ಪ್ರಾಚೀನ ಕಾಲದ ಹಾಗೆ
ಒಂದು ದೊಡ್ಡ ಮೀನಿನ ರೂಪದಲ್ಲಿ ನನ್ನ ಮುಂದೆ
ದರ್ಶನ ನೀಡಲು ದೇವರ ಬೇಡಿದೆ.
ದೇವರು ಬಿರುಗಾಳಿಯಾಗಿ ಬಂದು
ನನ್ನ ಚಿಕ್ಕ ದೋಣಿಯನ್ನು ಮುಳುಗಿಸಿದ.
ಹಸಿವಿನಿಂದ ನಾನು ಸಾಯುತ್ತಿರುವಾಗ
ಪ್ರಾಚೀನ ಕಾಲದ ಹಾಗೆ
ಒಂದು ಹಿಡಿ ಅನ್ನವಾಗಿ ನನ್ನ ಮುಂದೆ
ದರ್ಶನ ನೀಡಲು ದೇವರ ಬೇಡಿದೆ
ದೇವರು ಬೊಗಳುವ ನಾಯಾಗಿ ಬಂದು
ನನ್ನ ಉಡುಪನ್ನು ಕಿತ್ತುಕೊಂಡು ಹೋದ.
ಧನುರ್ಮಾಸದಿಬ್ಬನಿಯಲ್ಲಿ ನಾನು ಕೋಡಿ ನಡುಗುತ್ತಿರುವಾಗ
ಪ್ರಾಚೀನ ಕಾಲದ ಹಾಗೆ
ಒಂದು ಮೇಲು ಚಾವಣಿಯಾಗಿ ನನ್ನ ಮುಂದೆ
ದರ್ಶನ ನೀಡಲು ದೇವರ ಬೇಡಿದೆ
ದೇವರು ಗುಡುಗು ಮಿಂಚಾಗಿ ಬಂದು
ನಾನು ಮಲಗುವ ಜೋಪಡಿಯ ಸುಟ್ಟುಹಾಕಿತು.

ದೇವರು ಪ್ರಾಚೀನ ಕಾಲದ ಹಾಗೆ
ಬಡವನಿಗೆ ಕರಗಿ ನ್ಯಾಯವಾಗಿ ಅವತರಿಸಲಿಲ್ಲ!
ನಗ್ನನಾದವನಿಗೆ ಮಗ್ಗದಲ್ಲಿ ನೂಲಾಗಿ ಅವತರಿಸಲಿಲ್ಲ!
ಮೂಕನಿಗೆ ಅವರು ಮಾತಾಗಲಿಲ್ಲ
ಗಾಯಗೊಂಡವನಿಗೆ ಮದ್ದಾಗಿಯೂ
ನಿದ್ದೆ ಬಾರದವನಿಗೆ ಕನಸಾಗಿಯೂ ಬರಲಿಲ್ಲ
ಪದದಲ್ಲಿ ಅರ್ಥವಾಗಿ ಪರಿಣಮಿಸಲಿಲ್ಲ
ಪದ್ಯದಲ್ಲಿ ಬೆಳಕಾಗಿ ಉದಿಸಲಿಲ್ಲ
ಹೀಗೇನೆ ನಾನು ಸೈತಾನನಾದ
ನಿಮ್ಮನ್ನು ರಕ್ಷಿಸಲು.

ಏಕೆಂದರೆ,
ಕಾಲ ಪ್ರಾಚೀನ ಕಾಲವಲ್ಲ.

೩. ಬೆಕ್ಕು

ಬೆಕ್ಕು
ನಾಲ್ಕು ಕಾಲುಗಳಲ್ಲಿ ಕುಣಿಯುತ್ತಿದೆ.
ಮೊದಲನೆಯ ಕಾಲಿಂದ
ಭೂಮಿಯ ಅಟ್ಟಗಳಲ್ಲಿರುವ
ಕಪ್ಪು ಇಲಿಗಳನ್ನು ಹಿಡಿಯುತ್ತಿದೆ.

ಎರಡನೆಯ ಕಾಲಿಂದ
ನರಕದ ಒಲೆಗಳಲ್ಲಿ
ಬಿಸಿ ಬೂದಿಯನ್ನು ಕೆದರುತ್ತಿದೆ.

ಮೂರನೆಯ ಕಾಲಿಂದ
ಸ್ವರ್ಗದ ಉರಿಗಳಲ್ಲಿ
ಮೋಕ್ಷದ ಹಾಲು ಕೊಡವನ್ನೊಡೆಯುತ್ತಿದೆ.

ನಾಲ್ಕನೆಯ ಕಾಲಿಂದ
ಆಧ್ಯಾತ್ಮ ನಖಗಳನ್ನು ಉದ್ದಕ್ಕೆ ಬೆಳೆಸುತ್ತಿದೆ
ಮತ್ತೊಂದು ಅವಕಾಶಕ್ಕಾಗಿ-
ಮತ್ತೊಂದು ಅವಕಾಶಕ್ಕಾಗಿ.
ಬೆಕ್ಕಿನ ಮೀಸೆಯಲ್ಲಿ
ಪುರಾಣಗಳನ್ನು ತೂಕ ಮಾಡಲಾಗುತ್ತಿದೆ

ಬೆಕ್ಕಿನ ಬಾಲ
ಪಾಪ ಪುಣ್ಯಗಳ ಅಳೆಯುತ್ತಿದೆ.

ಬೆಕ್ಕು ಬರೀ ದ್ವಿಜನಲ್ಲ
ಅದಕ್ಕೆ ಒಂಬತ್ತು ಜನ್ಮಗಳು
ಮೊದಲ ಜನ್ಮದಲ್ಲಿ ಅದು
ಅಕಳಂಕ ಮನಸ್ಸಿಂದ
ಮೇರುವಿನ ಗುಹೆಯಲ್ಲಿ ತಪಸ್ಸು ಮಾಡುತ್ತದೆ.

ಎರಡನೆಯ ಜನ್ಮದಲ್ಲಿ
ಸರಸ್ವತೀ ನದಿ ದಂಡೆಯಲ್ಲಿದ್ದು
ವೇದಗಳ ರಚಿಸುತ್ತದೆ.

ಮೂರನೆಯ ಜನ್ಮದಲ್ಲಿ
ಮಗಧದಿಂದ
ನಾಲ್ಕು ತಂತ್ರಗಳನ್ನು ರೂಪಿಸುತ್ತದೆ.

ನಾಲ್ಕನೆಯ ಜನ್ಮದಲ್ಲಿ
ಕೊಡಲಿಯನ್ನು ಬೀಸಿ
ಕೇರಳವನ್ನೇ ತನದಾಗಿಸಿಕೊಳ್ಳುತ್ತದೆ.

ಐದನೆಯ ಜನ್ಮದಲ್ಲಿ
ಜನಿವಾರದುಗ್ರಾಣದ
ಕೀಲಿಕೈಯೊಂದಿಗೆ
ಕನ್ನೋಜಿನಲ್ಲಿ ಹೆಜ್ಜೆ ಹಾಕುತ್ತದೆ.

ಆರನೆಯ ಜನ್ಮದಲ್ಲಿ
ಅವಂತಿಯಲ್ಲಿ ಒಂದು ಹಳ್ಳಿಗಾಡಿನಲ್ಲಿ
ದಲಿತರನ್ನು ಹಿಡಿದು ತಿನ್ನುತ್ತದೆ.

ಏಳನೆಯ ಜನ್ಮದಲ್ಲಿ
ಅದ್ವೈತ ಯುದ್ಧ ಗೆದ್ದು
ಬುದ್ಧನನ್ನು ಬೆಟ್ಟದ ತಪ್ಪಲುಗಳಿಗೆ
ಗಡೀ ಪಾರು ಮಾಡುತ್ತದೆ.

ಎಂಟನೆಯ ಜನ್ಮದಲ್ಲಿ
ರಾಜಕಾರಣಾಶ್ರಮ ಹೊಕ್ಕು

ಬೀದಿಗಳಲ್ಲಿ ಸೋದರರ ನೆತ್ತರನ್ನು
ನೆಕ್ಕಿ ಕುಡಿಯುತ್ತದೆ

ಒಂಬತ್ತನೇ ಜನ್ಮದಲ್ಲಿ
ಸಿಂಹಾಸನವೇರಿ
ಜನರನ್ನು ನಖಗಳಲ್ಲಿ
ಪೋಣಿಸಿಕೊಳ್ಳಲು
ಈಗಲೇ ಕನಸು ಕಾಣುತ್ತದೆ.

ಅದಕ್ಕೋಸ್ಕರ ಅದು
ಮಿಂಚುವುದೆಲ್ಲವನ್ನೂ
ಹೊನ್ನಾಗಿ ಪರಿವರ್ತಿಸುತ್ತಿದೆ
ಹೊನ್ನು ಕರಗಿಸುವ ಜಾಗವನ್ನೆಲ್ಲಾ
ಹೋಗಿ ತಲುಪುತ್ತಿದೆ.

ಅದರ ಕುತ್ತಿಗೆಯಲ್ಲಿ
ನಾವು ಕಟ್ಟಿದ ಗಂಟೆಗೆ
ನಾಲಗೆ ಇಲ್ಲ,

ಬೆಕ್ಕು ನಾಲ್ಕು ಕಾಲುಗಳಲ್ಲಿ
ಕುಣಿಯುತ್ತಿದೆ
ನಾಲ್ಕೂ ಕಾಲುಗಳೂ ತುಳಿಯುತ್ತಿವೆ
ನಮ್ಮ ಎದೆಯ ಮೇಲೆ.

ಮೂಲ : ಮಲಯಾಳಂದಿಂದ
ಕನ್ನಡಕ್ಕೆ : ಚಿ. ರಾಮಸ್ವಾಮಿ ಆದಿವಾಳ

ಕಾರ್ನಾಡರೂ ಕನ್ನಡವೂ

ಚಂಪಾ

[ಗಿರೀಶ ಕಾರ್ನಾಡರಿಗೆ ಸಂವ ರಾಷ್ಟ್ರಮಟ್ಟದ ಮನ್ನಣೆಯಿಂದಾಗಿ ಅವರು ಕನ್ನಡದ ಏಳನೆಯ ಜ್ಞಾನಪೀಠ ಪ್ರಶಸ್ತಿ ವಿಜೇತರಾಗಿದ್ದಾರೆ. ಇದು ಅಭಿನಂದನೀಯ. ಆದರೆ ಈ ಪ್ರಶಸ್ತಿಗೆ ಇರಬಹುದಾದ ಮಾನದಂಡಗಳ ಬಗ್ಗೆ ನಮ್ಮ ಸಾಹಿತ್ಯ ವಲಯದಲ್ಲಿ ಸಾಕಷ್ಟು ಪುಕಾರು ಎದ್ದಿದೆ. ಮೊದಲ ಐವರು ಹಿರಿಯರ ಬಗ್ಗೆ ಈ ಗೊಂದಲವಿಲ್ಲ. ಆದರೆ ಅನಂತಮೂರ್ತಿಗೆ ಜ್ಞಾನಪೀಠ ಬಂದಾಗಿನಿಂದ ವಾದ-ವಿವಾದ ಸುರುವಾಯಿತು. ನಾನೇ ಬರೆದಿದ್ದೆ ಚಂಪಾಕಾಲಂನಲ್ಲಿ: 'ಇನ್ನು ಮೇಲೆ ಈ ಪ್ರಶಸ್ತಿ ಯಾರಿಗಾದರೂ ಬರಬಹುದು.'

ಮೊದಲ ಬಾಂಬು ಹಾಕಿದ 'ವಾರಪತ್ರಿಕೆ'ಯ ವೈಕುಂಠರಾಜು, "ಅನಂತಮೂರ್ತಿ ಮತ್ತು ಕಾರ್ನಾಡರು ಒಳ್ಳೆಯ ಪಿ.ಆರ್.ಓ. ಗಳು. ಇವರು ಸ್ವಂತಕ್ಕೆ ಪ್ರಚಾರ ಗಿಟ್ಟಿಸಿಕೊಳ್ಳುತ್ತಾರೆ" ಅಂತ ಬರೆದರು. ಹಂಪನಾ ಅಂತೂ, "ಕನ್ನಡ ಸಾಹಿತ್ಯವನ್ನು ಮಾಫಿಯಾ ಗ್ಯಾಂಗ್‌ಗಳು ಆಳುತ್ತಿವೆ." ಅಂತ ಸಾರಿದರು. ಎನ್. ಎಸ್. ಲಕ್ಷ್ಮೀ ನಾರಾಯಣ ಭಟ್ಟರು "ಕನ್ನಡ ತಿಳಿದರೆ ಸಾಕೆ

ಇಂಗ್ಲಿಷ್ ಬೇಕು
ಪರಾಕು ಕೂಗುವ ಗೆಳೆಯರು ಬಳಿಯಲ್ಲಿರಬೇಕು"

-ಎಂದು ಕಾವ್ಯಾತ್ಮಕವಾಗಿಯೇ ಈ 'ಲೋಕಬಲ್ಲ ಜಾಣ'ರನ್ನು ತಿವಿದರು. ... ಇದಲ್ಲದೆ ಅಲ್ಲಲ್ಲಿ ಗುಸುಗುಸು ಮಾತಾಡುವವರು ನೂರಾರುಮಂದಿ.

ಒಬ್ಬ 'ಕನ್ನಡಿಗ'ನಾಗಿ ನನಗೆ ಕಾರ್ನಾಡರನ್ನು 'ಕನ್ನಡ' ನಾಟಕಕಾರರನ್ನಾಗಿ ಗ್ರಹಿಸುವುದೇ ತೊಂದರೆ. ಸುಗಮ ಸಂಗೀತ ಕಾರ್ಯಕ್ರಮದಲ್ಲಿ ಹಾಡುಗಾರನ 'ದನಿ' ಹೇಗೇ ಇದ್ದರೂ ಅವನ ಆರ್ಕೆಸ್ಟ್ರಾ (ವಾದ್ಯಮೇಳ)ದ 'ಸಪ್ಪಳ' ಅದನ್ನು ಮುಚ್ಚಿಹಾಕುವಂತೆ, ಗಿರೀಶರ 'ಭಾಷೆ'ಯನ್ನು ಅವರು ಕಟ್ಟಿಕೊಂಡ ವಿಮರ್ಶಕರ ಗ್ಯಾಂಗು

ಮೆಚ್ಚಿ ಹಾಕುತ್ತೇವೆ. ೧೯೭೨ರಷ್ಟು ಹಿಂದೆಯೇ ‘ಸಂಕ್ರಮಣ’ದಲ್ಲಿ ನಾನೊಂದು ಕಿರುನಾಟಕ ಬರೆದಿದ್ದೆ. (ಈ ಪೀಳಿಗೆಯ ವಾಚಕರ ಮನರಂಜನೆಗೆಂದು ಆ ನಾಟಕವನ್ನು ಇಲ್ಲಿ ಪ್ರಕಟಿಸಲಾಗಿದೆ.) ಸ್ವಂತ ‘ಭಾಷೆ’ಗಿಂತ ಹೆಚ್ಚಾಗಿ ‘ಭಾಷಾಂತರ’ದಲ್ಲಿಯೇ ಮೆರೆಯುತ್ತಿರುವ ಏಕೈಕ ‘ಕನ್ನಡ’ ನಾಟಕಕಾರ ಕಾರ್ನಾಡ ಅವರು. .... ‘ಕಂಠವೊಂದನ್ನು ಬಿಟ್ಟರೆ ಅವಳು ಸಾಕ್ಷಾತ್ ಕೋಗಿಲೆ’ ಎನ್ನುವಂತೆ, ‘ಭಾಷೆಯೊಂದನ್ನು ಬಿಟ್ಟರೆ ಕಾರ್ನಾಡ ಸಾಕ್ಷಾತ್ ಕಾಳಿದಾಸ’ ಎಂದೇ ಹೇಳಬೇಕು.]

(ನಾಟಕ ಪ್ರಾರಂಭ)

“ಆಕಾಶವಾಣಿ ಚರ್ಚೆಯ ಹೊತ್ತಿಗೆ ಪಾಟೀಲರನ್ನು **ಸಂತೈಸುವಾಗ** ನಾನು ಉಲ್ಲೇಖಿಸಿದ ಸಿಜ್‌ನನ್ನೂ ಇಲ್ಲಿ ನೆನಿಸಿಕೊಳ್ಳಬಹುದು,”

—ನಮ್ಮ ಹಿರಿಯ ನಾಟಕಕಾರ ಗಿರೀಶ ಕಾರ್ನಾಡರ ಈ ಉವಾಚದಿಂದ ಸ್ಫೂರ್ತಿಗೊಂಡು ಈ ಕಿರಿಯನಿಗೂ ಒಂದು ನಾಟಕ ಬರೆಯಬೇಕೆನಿಸಿತು.

ಇದೋ ನಾಟಕ:

[ಸ್ಥಳ: ಆಕಾಶವಾಣಿ ಸ್ಟುಡಿಯೋ ಕಾಲ: ಕಲಿಕಾಲ. ಪಾತ್ರಧಾರಿಗಳು: ಶಾಂತಿನಾಥ ದೇಸಾಯಿ, ಗಿರೀಶ ಕಾರ್ನಾಡ, ಚಂದ್ರಶೇಖರ ಪಾಟೀಲ, ಟೇಬಲ್ ಮೇಲೆ ಮೈಕ್, ಕೆಂಪು ಲೈಟು ಉರಿಯುತ್ತಿದೆ.]

ಕಾರ್ನಾಡ : ....ಇದ್ದರಿಂದ ನಾವು ಭಾರತೀಯ ರಂಗಭೂಮಿಯ ಜೀರ್ಣೋದ್ಧಾರಕ್ಕಾಗಿ ಟೊಂಕ ಕಟ್ಟಬೇಕು.

ಪಾಟೀಲ : ಯಾರದು ?

ಕಾರ್ನಾಡ : (ತಿರಸ್ಕಾರರಂಜಿತ ಗಾಂಭೀರ್ಯದಿಂದ) ನೀವು ಹತ್ತೀಮತ್ತೂರ-ಡೊಂಬರಮತ್ತೂರ-ಹಾವೇರಿಯ ನಾಟಕಕಾರರು ಮಾತ್ರ. ಭಾರತೀಯ ರಂಗಭೂಮಿ ಅಂದರೆ ನಿಮಗೆ greek. ಬರಿ innuendoes ಅಷ್ಟೇ ಗೊತ್ತು ನಿಮಗೆ. ... ಅಂದಹಾಗೆ innuendoes ಗೆ ಕನ್ನಡದಲ್ಲಿ ಏನು ಅನ್ನುತ್ತಾರ್ರೀ ದೇಸಾಯರೇ ?

ದೇಸಾಯಿ : ಯಾವ ಕನ್ನಡದಲ್ಲಿ ? ಧಾರವಾಡದ್ದೋ, ಮೈಸೂರಿನದೋ, ಹಳ್ಳಿಯಾಳದ್ದೋ...

ಕಾರ್ನಾಡ : ಅಂತರಾಷ್ಟ್ರೀಯ ಭಾಷೆಯ ಪ್ರಾಧ್ಯಾಪಕರಾದ ನಿಮಗೂ ಇಂಥ ಸಂಕುಚಿತ ಪ್ರಾದೇಶಿಕ ಮನೋಭಾವವೇ ?

ದೇಸಾಯಿ : ನನಗೆ ಗೊತ್ತಿದ್ದ ಕನ್ನಡದಲ್ಲಿ innuendoes ಅಂದರೆ ಆಡಮಾತು, ಕೊಕ್ಕಮಾತು etc.

ಕಾರ್ನಾಡ : ಹ್ಞಾ. (ಪಾಟೀಲರಿಗೆ) ಈ etc ಅಷ್ಟೇ ನಿಮ್ಮ ಕಣಬರಹ.

ಪಾಟೀಲ : ಹಂಗಾರ ಗುರೂ, ನಾ ಏನು ಸಣ್ಣದಕಲ್ಲು ಉದ್ಯಾಗ ಕಟಿಗೊಂಡು ಬಾವೀ ಹಾರಬೇಕೇನು ?

ದೇಸಾಯಿ : ಕನ್ನಡ ನಾಟಕಕ್ಕೆ ಭವಿಷ್ಯವೇ ಇಲ್ಲ ಅನ್ನುತ್ತೀರಾ ಕಾರ್ನಾಡರೇ ?

ಕಾರ್ನಾಡ : ಹಾಗೇನೂ ಇಲ್ಲ. ಒಬ್ಬನು ಒಬ್ಬನ ಹೃದಯ ಕಳೆದುಕೊಳ್ಳುವ ಅಗತ್ಯವಿಲ್ಲ.

ದೇಸಾಯಿ : ಒಬ್ಬನು ಒಬ್ಬನ...ಅಂದರೇನ್ರಿ ?

ಕಾರ್ನಾಡ : One need not lose one's heart.

ದೇಸಾಯಿ : ಓಹೋ!

ಕಾರ್ನಾಡ : ಒಂದು ಹೊರಗೆ ಹೋಗುವ ದಾರಿ ಇದೆ. (ದೇಸಾಯರು ಹೊರಗೆ ನೋಡುವರು.) ಅಂದರೆ there's a way out.

[ಇಷ್ಟರಲ್ಲಿ ಪಾಟೀಲರು ಬಿಕ್ಕಿ ಬಿಕ್ಕಿ ಅಳತೊಡಗುತ್ತಾರೆ. ದೇಸಾಯರು ಚಾಳೀಸು ಬದಲು ಮಾಡಿ ಕರಚೀಫು ಹೊರತೆಗೆಯುತ್ತಾರೆ.]

ಕಾರ್ನಾಡ : ಪಾಟೀಲರೆ ಏನು ಇದು ? ನೀವು ಕಣ್ಣೀರಿನೊಳಗೆ ಇದ್ದೀರಲ್ಲ ? Yon're in tears.

ದೇಸಾಯಿ : ಛೆ ಛೆ ಪಾಟೀಲರs...ಇದು ರೇಡಿಯೋ ಸ್ಟುಡಿಯೋರಿ, ಟೆಲಿವಿಜನ್ನಿದಲ್ಲ. ಭಾರತೀಯ ರಂಗಭೂಮಿ ನಾಟಕ ಸುರೂ ಮಾಡಿದ್ರಲ್ಲ.

[ಪಾಟೀಲರು ಲಯಬದ್ಧವಾಗಿ ಕುಯ್‌ಗುಡುತ್ತಾರೆ]

ಕಾರ್ನಾಡ : ಇಲ್ಲಿ ನೋಡ್ರಿ. Look here. ಒಬ್ಬ ನಾಟಕಕಾರ ಇದ್ದ-ಸಿಂಗ್ ಅಂತ.

ದೇಸಾಯಿ : ಪಂಜಾಬದೊಳಗೇನು ?

ಕಾರ್ನಾಡ : ಅಲ್ಲ. ಐರಲಂಡದೊಳಗ.

ದೇಸಾಯಿ : ಓಹ್, ಸಿಜ್.

ಕಾರ್ನಾಡ : ಅವನೂ ಇವರ ಹಾಗೇನೆ ಮೂಲತಃ ಕವಿ ಇದ್ದ. ನಾಟಕ ಬರೆದ. ನಾಟಕದ ತುಂಬ ಕವಿತಾ ಬರೆದ. ಜಾನಪದ ಭಾಷೆ ಬರೆದ. ಆದರೂ translation ದೊಳಗ ಮೂಲದ ಇದು ಇದು ಏನದ...

ದೇಸಾಯಿ : ಹ್ಞಾ ಇದು.

ಕಾರ್ನಾಡ : ಆ ಇದು ಹೋಗಲಿಲ್ಲ ನೋಡ್ರಿ. (ಪಾಟೀಲರಿಗೆ) ನೀವ್ಯಾಕೆ ಹೆದರುತ್ತೀರಿ ? ನಿಮ್ಮ ನಾಟಕ ಬೇಕಾದರೆ ನಾನು ಭಾಷಾಂತರ ಮಾಡುತ್ತೇನೆ.

ಪಾಟೀಲ : (ಅಳು ನಿಲ್ಲಿಸಿ, ಆಸೆಗಣ್ಣಿಂದ) ಯಾ ಭಾಷಾಕ್ರಿ ?

ಕಾರ್ನಾಡ : Of course, ಇಂಗ್ಲೀಷಿಗೆ.

ಪಾಟೀಲ : ಹೌದ! ಭಯಂಕರ ಉಪಕಾರ ಆತ್ರೆಪಾ.

(ಟೇಬಲ್ ಮೇಲೆ ಸಾಗರಬಿದ್ದು ಕಾರ್ನಾಡರ ಕಾಲು ಹಿಡಿಯಬೇಕೆಂದಾಗ ಕೈಸಿಗುವವು ಕಾರ್ನಾಡರು ಪ್ರೀತಿಯಿಂದ ಅಪ್ಪಿಕೊಂಡು **ಸಂತೈಸುವವರು**)

ಹಂಗಾರ ನಾನೂ ನಿಮ್ಮ ನಾಟಕಾ ಭಾಷಾಂತರ ಮಾಡತೇನಿ.

ಕಾರ್ನಾಡ : (ಒಮ್ಮೆಲೇ ದಿಗ್ಭ್ರಾಂತರಾಗಿ) ಯಾವ ಭಾಷೆಗೆ ?

ಪಾಟೀಲ : ಕನ್ನಡಕ್ಕೆ.

[ದೇಸಾಯರು ಹಪ್ಪಹ್ಹಾ ಎಂದು ನಕ್ಕ ಜೋರಿಗೆ ಅವರ ಚಾಳೀಸು ಬೀಳುವದು. ಮೈಕು ಉರುಳುವದು. ಕೆಂಪು ಲೈಟು ಆರುವದು. ... ಕೂಡಲೇ ಆಕಾಶವಾಣಿಯ ಅಧಿಕಾರಿಗಳು ಒಳಗೆ ಧಾವಿಸಿ ಬಂದು, ಮೂವರಿಗೂ ಒಂದೊಂದು ಕಪ್ಪು ಚಾ ಕುಡಿಸಿ, ಅಮಲೇರಿಸಿ, ಹೊರಗೆ ದಬ್ಬುವರು.]

ರಚನೆ : ೭ ಜನವರಿ ೧೯೭೨

ಒಂದು ಅಪೂರ್ಣ ಗಜಲ್

ಒಂದೊಂದೆ ಮೆಟ್ಟಿಲನು ಏರುತ್ತ ಬಂದೆ
ಒಂದೊಂದೆ ಕಟ್ಟಳೆಯು ಕಳಚುತ್ತ ಬಂದೆ

ಮಣ್ಣ ಮರೆಯಲಿ ನೋವನುಂಡು ಮೌನದಲಿ
ಬಸಿರಾಗಿ ಹಸಿರಾಗಿ ಅರಳುತ್ತ ಬಂದೆ

ಮನದಲ್ಲಿ ಮೈಮುರಿವ ಕನಸುಗಳಿಗೆಲ್ಲ
ರೆಕ್ಕ ಪುಕ್ಕಗಳಿತ್ತು ನೆಗೆಸುತ್ತ ಬಂದೆ

ಯಾರ್ಯಾರೊ ಎದೆಗಳಲಿ ಸಮೆಯನ್ನು ಹಚ್ಚಿ
ಪತಂಗವಾಗಿ ಸುಟ್ಟುಕೊಳ್ಳುತ್ತ ಬಂದೆ

ಗಳಪುತ್ತಗಳಪುತ್ತ ಸೆರೆಯಾದ ಗಿಳಿಯು
ಪಂಜರದ ಬಾಗಿಲನು ತೆರೆಯುತ್ತ ಬಂದೆ

ಸ್ನೇಹದಲಿ ಪ್ರೇಮದಲಿ ಒಮ್ಮೊಮ್ಮೆ ಅರಿತ
ವಿಶ್ವಾಸದ್ರೋಹವನು ಗೈಯುತ್ತ ಬಂದೆ

ಮೋಹ ವ್ಯಾಮೋಹಗಳ ಪ್ರಾಬಲ್ಯವಿರ್ದಲುಂ
ಸ್ವಾರ್ಥ ಹಾಲಾಹಲವ ಕುಡಿಯುತ್ತ ಬಂದೆ

ಕಣ್ಣು ಹೀರಿದ ಚೆಲುವ ಕರ್ಣಮೀಂಟಿದ ಸವಿಯು
ಜಾರುತಿಹ ಕ್ಷಣಗಳಂ ಬರೆಯುತ್ತ ಬಂದೆ

ಹುಟ್ಟಿನಲಿ ಜಂಗಮನು ಬಾಳಿನಲಿ ಅಲ್ಲ
ನನ್ನ ಸೋಗಿಗೆ ನಾನೆ ಮೆಚ್ಚುತ್ತ ಬಂದೆ

ಅಪಮಾನ ದೌರ್ಜನ್ಯ ಕಾರ್ಯದಲಿ ಸತ್ತು
ಫೀನಿಕ್ಸ ಪಕ್ಷಿತೆರ ಹುಟ್ಟುತ್ತ ಬಂದೆ

ಏಸೊ ಮನಗಳ ದಾಳಿ ಈ ಮನದ ಮೇಲೆ
ನನ್ನತನದಿಂದಿರಿದು ಗೆಲ್ಲುತ್ತ ಬಂದೆ

ನೋವುಗಳು ನೋವುಗಳು ನೋವುಗಳು ಸುತ್ತ
ತಣ್ಣನೆದೆ ಬೆಂಕಿಯಲಿ ದಹಿಸುತ್ತ ಬಂದೆ

ಮಾತಿನಲಿ ಕೃತ್ರಿಯಲ್ಲಿ ಹೊಲಸಂಗೈದಂಗೆ
ಒಲುಮೆ ಶ್ರೀಗಂಧವನು ಸವರುತ್ತ ಬಂದೆ

ಕಣ್ಣಲ್ಲಿ ಕೆನ್ನೆಯಲಿ ಚಿತ್ರಗಳ ಬಿಡಿಸಿ
ಉರದ ವೀಣೆಯನೊತ್ತಿ ನಡಿಸುತ್ತ ಬಂದೆ

ತಂಬೆಲರು ತೀಡುತಿರೆ ಬಯಲ ವೈಸವರಿ
ಅವಳ ಸ್ಪರ್ಶದ ಸುಖವ ಸವಿಯುತ್ತ ಬಂದೆ

ಹಾದಿಯಲಿ ಬೀದಿಯಲಿ ಹೆಜ್ಜೆಗಳ ಕಂಡು
ಅವಳ ಮನೆಯಂಗಳಕೆ ಹಿಗ್ಗುತ್ತ ಬಂದೆ

ಮಣ್ಣಿಗೂ ತನಿಗಂಪು ಚೈತ್ರದಲಿ ಆಹ
ಅವಳ ದೇಹದ ಕಂಪು ಮೂಸುತ್ತ ಬಂದೆ

ಗ್ರೀಷ್ಮದಲಿ ಬಾನಿಗೂ ಕಡುದಾಹ ಅಯ್ಯೊ
ಅವಳಧರ ಮಧು ಕುಡಿದು ತೊನೆಯುತ್ತ ಬಂದೆ

ಕರಿಮೋಡ ಜಡಿಮಳೆಯ ಶ್ರಾವಣದ ಲಾಸ್ಯ
ಕೇಶದುಯ್ಯಾಲೆಯಲಿ ಜೀಕುತ್ತ ಬಂದೆ

ಬಗೆಬಗೆಯ ನೂರಾರು ಕವಲುದಾರಿಗಳು
ಪ್ರೀತಿದಾರಿಯ ಹುಡುಕಿ ಹಿಡಿಯುತ್ತ ಬಂದೆ

ಕೆ.ನ. ಶಿವತೀರ್ಥನ್ ಅವರ 'ಗೆಂಡಗಯ್ಯ'

ಇತಿಹಾಸ ಮತ್ತು ಐತಿಹ್ಯಗಳ ನಡುವೆ

ಕೆ. ವಿ. ತಿರುಮಲೇಶ್

೧

ಈಚೆಗೆ ಕನ್ನಡದಲ್ಲಿ ವ್ಯಕ್ತಿಕೇಂದ್ರಿತವಾದ ವಿಮರ್ಶಾ ಪದ್ಧತಿಯೊಂದು ಅದು ಹೊರಟು ಹೋಯಿತು ಎಂಬ ಹೊತ್ತಿಗೆ ಮತ್ತೆ ತಲೆಯೆತ್ತಿಕೊಂಡಿರುವುದು ಕಾಣಿಸುತ್ತದೆ: ಇದು, ಆಧುನಿಕ ಕನ್ನಡ ಸಾಹಿತ್ಯದಲ್ಲಿ ನಾಲ್ಕೇ ಮಂದಿ ಲೇಖಕರು, ಕಾವ್ಯದಲ್ಲಿ ಮೂರೇ ಮಂದಿ ಕವಿಗಳು, ವಿಮರ್ಶೆಯಲ್ಲಿ ಇಬ್ಬರು ಎಂಬಿತ್ಯಾದಿಯಾಗಿ ಗಣ್ಯರನ್ನು ಹೆಕ್ಕಿ ತೆಗೆದು ಅವರಿಗೆ ಮಣೆ ಹಾಕುವ ಯಜಮಾನ ಸಂಸ್ಕೃತಿಯ ಅವಶೇಷವೆನ್ನುವುದರಲ್ಲಿ ಸಂದೇಹವಿಲ್ಲ. ಇವರಿಂದ ಈ 'ಗಣ್ಯರ' ಸಾಲಿಗೆ ಸೇರಿಸಲ್ಪಡದವರು ಬರೆದ ಹಲವು ಒಳ್ಳೆ ಕೃತಿಗಳನ್ನು ಜನ ಗಮನಿಸದಿರುವ ಸಾಧ್ಯತೆಯಿದೆಯೆನ್ನುವುದು ಆತಂಕದ ವಿಷಯವಾಗುತ್ತದೆ. ಇಂಥ ಯಜಮಾನ ಸಂಸ್ಕೃತಿಯ ರಾಜಪುರೋಹಿತರು ಅರ್ಥಾತ್ ಕಿಂಗ್‌ಮೇಕರ್ಸ್ ತಯಾರಿಸಿದ ಪಟ್ಟಿಯಲ್ಲಿ ಸೇರದಿದ್ದರೂ ಕನ್ನಡಕ್ಕೆ ಹಲವು ಉತ್ತಮ ಕವಿತೆಗಳನ್ನು ನೀಡಿದ ಕೆ, ನ. ಶಿವತೀರ್ಥನ್‌ರವರ "ಗೆಂಡಗಯ್ಯ" ಓದುತ್ತಿದ್ದಂತೆ ಈ ಮೇಲಿನ ಸಮಸ್ಯೆಗಳು ನನ್ನನ್ನು ಕಾಡಲು ಸುರುವಾಗಿದ್ದರಿಂದ ಲೇಖನದ ಆರಂಭದಲ್ಲೇ ಇವನ್ನು ಪ್ರಸ್ತಾಪಿಸುವುದು ಅಗತ್ಯವಾಯಿತು. ಯಾಕೆಂದರೆ, ಕನ್ನಡ ವಿಮರ್ಶೆಯ ಸದ್ಯದ ಪರಿಸ್ಥಿತಿಯಲ್ಲಿ ಶಿವತೀರ್ಥನ್‌ರಂಥವರು ವಿಮರ್ಶಕ ಪುರೋಹಿತರ ಗಣ್ಯರ ಪಟ್ಟಿಯೊಳಗೆ ಯಾವತ್ತೂ ಬರಲಾರರು ಅನಿಸುತ್ತದೆ; ಆದರೆ ಈ ಕಾರಣಕ್ಕೆ "ಗೆಂಡಗಯ್ಯ"ನನ್ನು ಜನ ಓದದೆ ಹೋದರೆ ಅದೊಂದು ನಷ್ಟವೇ ಸರಿ. ಒಂದು ಜನಾಂಗದ ಚಾರಿತ್ರಿಕ ನೋವನ್ನು ಅದರದೇ ಆದ ನುಡಿಗಟ್ಟಿನಲ್ಲಿ ಆಧುನಿಕ ಕಾವ್ಯಕ್ಕೆ ಒಳಪಡಿಸಿದ ವಿನೂತನ ಪ್ರಯೋಗ ಇದು. ಇಂಥ ನೋವನ್ನು ಹಾಡಾಗಿ, ಕ್ರೋಧವಾಗಿ ಪ್ರಕಟಪಡಿಸಿದ ಕವಿತೆಗಳಿಗೆ ಬರವಿಲ್ಲ; ಆದರೆ "ಗೆಂಡಗಯ್ಯ"ನ ರೀತಿಯೇ ಬೇರೆ, ಅದು ಕವಿತೆಯಾಗಿ ಮೊದಲು ನಮ್ಮನ್ನು ಗೆಲ್ಲುತ್ತದೆ, ಒಳಗೊ

ಳ್ಳುತ್ತದೆ; ಆಪೇಲೆ ನಾವದರ ಆಕರ್ಷಣೆಯಲ್ಲಿರುತ್ತೇವೆ. ಇಲ್ಲಿ ಆಗಾಗ ಪಲ್ಲವಿಯಂತೆ ಬರುವ 'ಕುತಂವ್ನೆ ಸಂತ' ಎಂಬ ಸಾಲಿನ ಪ್ರತಿಮೆ, ಧ್ವನಿ, ನಾದ, ವಿಷಾದ ಓದುಗರನ್ನು ಒಂದು ಅನನ್ಯ ಅನುಭವದ ಕಡೆ ಕೊಂಡೊಯ್ಯುತ್ತದೆ ಎನ್ನುವುದು ಕೇವಲ ನನ್ನೊಬ್ಬನ ಅಭಿಪ್ರಾಯವೇ ಆಗಿರಲಾರದು. "ಗೆಂಡಗಯ್ಯ" ನಮ್ಮಿಂದ ಯಾವ ತರದ ಓದನ್ನು ಅಪೇಕ್ಷಿಸುತ್ತದೆ ಎಂದು ಅನ್ವೇಷಿಸುವುದು ನನ್ನೀ ಲೇಖನದ ಉದ್ದೇಶ..

ಶಿವತೀರ್ಥನ್‌ನವರ ಮೊದಲನೆ ಕವನ ಸಂಕಲನ "ಬೆಸ್ತ" ಪ್ರಕಟವಾದದ್ದು ೧೯೭೯ರಲ್ಲಿ-ಮಂಡ್ಯದ ಸುಹಾಸ ಪ್ರಕಾಶನದಿಂದ. ನಂತರದ ಕವನ ಸಂಕಲನ 'ಗೆರೆಗಳು" ೧೯೮೮ರಲ್ಲಿ ಕವಿಯದೇ ಆದ ನೈರುತ್ಯ ಪ್ರಕಾಶನದ ಮೂಲಕ ಪ್ರಕಟವಾಯಿತು. ಕಾವ್ಯದ 'ಖಯಾಲಿ' ಹಚ್ಚಿಕೊಂಡಿದ್ದರೂ ಶಿವತೀರ್ಥನ್ ಬರೆದ ಕವಿತೆಗಳು ಕಡಿಮೆ. ಈ ಎರಡನೆ ಸಂಕಲನ ಅಚ್ಚಿನ ಮನೆಯಲ್ಲಿರುವ ಹೊತ್ತಿಗೆ ಪುಸ್ತಕದ ಗಾತ್ರ ಕಿರಿದಾಗುತ್ತದೆ ಎಂಬ ಬೋಧೆಯುಂಟಾಗಿ, ಪುಟಗಳನ್ನು ತುಂಬುವದಕ್ಕೋಸ್ಕರ ಒಂದು ನೀಳ್ಗವಿತೆ ಕೂಡಲೆ ತಯಾರಾಗಬೇಕಿತ್ತು. ಅವಕ್ಕಂದೆ ಬರೆದ ಕವಿತೆ "ಗೆಂಡಗಯ್ಯ." ಈ ಒಟ್ಟಾರೆ ಸಂಕಲನದ ಕವಿತೆಗಳು ಪುಟಗಳಲ್ಲಿ ವಿರಳವಾಗಿ ಅಚ್ಚಾಗಿವೆ. ಇಲ್ಲಿ ಕಪ್ಪು ಅಕ್ಷರಗಳಿಗಿಂತ ಬಿಳಿ ಜಾಗವೇ ಜಾಸ್ತಿ. ಅಂಥದರಲ್ಲಿ ಕೊನೆಗೆ ಬಂದ ಗೆಂಡಗಯ್ಯ" ಎಂಟು (ವಿರಳವಾದ) ಪುಟಗಳನ್ನು ಉಪಯೋಗಿಸಿಕೊಂಡಿದೆ ಎನ್ನುವುದನ್ನು ಗಮನಿಸಬಹುದು. ಈ ವಿವರಗಳು ಯಾಕೆ ಮುಖ್ಯವಾಗುತ್ತವೆ ಎಂದರೆ, ಇಂಥ ಸಂದರ್ಭದಲ್ಲಿ ಒಂದೋ ಏನಾದರೂ ಸಲ್ಲುತ್ತದೆ ಎಂಬಂಥ ರಚನೆಗಳು, ಇಲ್ಲವೇ ಅತ್ಯಪೂರ್ವವಾದ ಕೃತಿಗಳು ಬರುವ ಸಾಧ್ಯತೆಗಳಿವೆ. "ಗೆಂಡಗಯ್ಯ" ಈ ಎರಡನೆ ಸಾಲಿಗೆ ಸೇರಿದ ಕೃತಿ. ಇಲ್ಲಿ ಕವಿ ತಾನು ಇದು ತನಕ ಬಚ್ಚಿಟ್ಟುಕೊಂಡಂಥ ಸಾಧ್ಯತೆಯೊಂದನ್ನು ಸೃಜನಶೀಲ ಒತ್ತಡದಲ್ಲಿ ಬಿಡುಗಡೆಗೊಳಿಸಿದ ಹಾಗೆ ಕಾಣುತ್ತದೆ. ಇದು ಕವಿಗೆ ಆತ್ಮೀಯವಾದ ವಸ್ತು; ಆತನ ಇಡಿಯ ಜನಾಂಗದ ನೋವು ಅಡಗಿರುವ ತಾಣ; ಮುಟ್ಟಿದರೆ ಬಾಡುವ ಮುಜುಗರದ ನರಮಂಡಲ. ಒಂದರ್ಥದಲ್ಲಿ ಕವಿ ಇದುವರೆಗೆ ಬರೆಯದೆಲ್ಲ ಈ ಒಂದು ಕವಿತೆಯನ್ನು ಮುಂದಕ್ಕೆ ಹಾಕಲು, ಅದರ ಪಕ್ವತೆಗೆ ಕಾಯಲು, ಹಾಗೂ ಅದನ್ನು ಬರೆಯದೆ ಇರಲು ಮಾಡಿದ ಉಪಾಯವೆಂದು ನಮಗೆ ತೋರಿದರೆ ಅದರಲ್ಲಿ ಆಶ್ಚರ್ಯವಿಲ್ಲ. ಹಾಗಿದ್ದರೂ, ಶಿವತೀರ್ಥನ್ ತನ್ನ ಮೂಲವಾದ ಬೆಸ್ತ ಜನಾಂಗದ ಬಗ್ಗೆ ಕವಿತೆ ಬರೆದುದು ಇದೇ ಮೊದಲ ಸಲವೇನೂ ಅಲ್ಲ. ಅವರ ಮೊದಲ ಕವನ ಸಂಕಲನದ ಹೆಸರೇ "ಬೆಸ್ತ" ಎನ್ನುವುದು ಇನ್ನೊಮ್ಮೆ ಇಲ್ಲಿ ಜ್ಞಾಪಿಸಿಕೊಳ್ಳಬಹುದು. ಇದರಲ್ಲಿ "ತುಡಿವ ಜೀವಗಳು," "ಬೆಸ್ತರ ಕಾಣ್ಕೆ," ಮತ್ತು ಕವನ ಸಂಕಲನದ ಶೀರ್ಷಿಕೆಯ ಕವಿತೆ "ಬೆಸ್ತ" ಇಂಥ ರಚನೆಗಳು ಕವಿಯ ಜನಾಂಗದ ಕುರಿತಾಗಿಯೇ ಇರುವಂಥವು ಆದರೂ ಈ ಯಾವ ಕವಿತೆಗೂ

"ಗೆಂಡಗಯ್ಯ"ನ ಮಟ್ಟ ತಲುಪಲಿಲ್ಲವಷ್ಟೇ ಅಲ್ಲ, ಅದರ ಹತ್ತಿರ ಕೂಡ ಬರುವಂಥ ವಲ್ಲ. ಯಾಕೆಂದರೆ, ಈ ಎಲ್ಲ ಕವಿತೆಗಳೂ 'ಕಾವ್ಯಮಾದರಿಯ'ಯ ಕವಿತೆಗಳು. "ಗೆಂಡಗಯ್ಯ" ಮಾತ್ರವೇ ಕವಿ ಯಾವಕ್ಕೂ ಬಚ್ಚಿಟ್ಟುಕೊಂಡಿದ್ದ 'ಸ್ವಂತ'ದ ಕವಿತೆ. ಒಂದು ಮಹಾಕಾವ್ಯದ ಆಳ ವಿಸ್ತಾರಗಳನ್ನು ಸೂಚಿಸುವ ಈ ಕವಿತೆಯನ್ನು ಕವಿ ಪುಸ್ತಕದ ಪುಟಗಳನ್ನು ತುಂಬುವ ಕಾರಣದಿಂದ ಬರೆಯದು ಎನ್ನುವುದು ಸೃಜನಶೀಲ ತೆಯ ಯಾರೂ ಕಾಣದ ನೆಲೆಗಳ ಕಡೆಗೆ ನಮ್ಮನ್ನು ನಿರ್ದೇಶಿಸುವ ಹಾಗಿದೆ.

ಹಾಗೆಯೇ ಶಿವತೀರ್ಥನ್ ಕವಿತೆಯ ರಚನೆಯಲ್ಲಿ ತೊಡಗಿದ ಸಂದರ್ಭ ಕೂಡ ಉಲ್ಲೇಖನೀಯ. ನನಗೆ ಗೊತ್ತಾದಂತೆ, ಕವಿ ಸುದೀರ್ಘವಾದೊಂದು ಕವಿತೆ ಬರೆಯ ಬೇಕೆಂದುಕೊಂಡು ಒಂದು ರಾತ್ರಿಯೆಲ್ಲ ಎಚ್ಚತ್ತು ಕೂತರೂ ಕವಿತೆ 'ಬರಲು' ನಿರಾಕ ರಿಸುತ್ತದೆ! ಮಧ್ಯರಾತ್ರಿಯ ಸಮಯ ಬ್ರಹ್ಮಕಮಲವೆಂಬ ಕ್ಯಾಕ್ಟಸ್ ಜಾತಿಯ ಒಂದು ಗಿಡ ಹೂಬಿಟ್ಟಿದೆ ಎಂದು ಹೆಂಡತಿ ಹೇಳಿದಾಗ ಕವಿ ಎದ್ದು ಹೋಗಿ ನೋಡು ತ್ತಾರೆ. ಬ್ರಹ್ಮಕಮಲ ವರ್ಷಕ್ಕೆ ಒಂದು ಸಲ ಮಧ್ಯರಾತ್ರಿಗೆ ಹೂಬಿಡುವ ಸಸ್ಯ. ಇದನ್ನು ನೋಡಬೇಕಾದರೆ ರಾತ್ರಿ ಕಾಯ್ದಿರಬೇಕು. ಯಾಕೆಂದರೆ ಬೆಳಗಾಗುತ್ತಲೆ ಹೂ ಬಾಡಿ ತೊನೆದಿರುತ್ತದೆ. ಈ ಹೂವನ್ನು ನೋಡಿ ಮತ್ತೆ ಕೂತಲ್ಲಿಗೇ ಮರಳಿ ಶಿವತೀರ್ಥನ್ "ಗೆಂಡಗಯ್ಯ" ಕವಿತೆಯ ಮೊದಲ ಕರಡನ್ನು ಸಿದ್ಧಪಡಿಸುತ್ತಾರೆ. "ಗೆರೆಗಳು" ಸಂಕಲನದಲ್ಲಿ ನಾವು ಕಾಣುವ ಪಾಠ ಇದರ ಆಮೂಲಾಗ್ರ ಪರಿಷ್ಕೃತ ರೂಪ. ಮೊದಲ ಕರಡನ್ನು ಕವಿ ಮರುದಿನವೇ ಪೋಲಂಕಿ ರಾಮಮೂರ್ತಿಗೆ ತೋರಿಸಿ ಅವರ ಅಭಿಪ್ರಾಯ ತೆಗೆದುಕೊಳ್ಳುತ್ತಾರೆ. ಪೋಲಂಕಿ ಈ ಕರಡಿನಲ್ಲಿ ಕವಿತೆಯ ಸಾಧ್ಯತೆಗಳನ್ನು ಗುರುತಿಸಿದರೂ ಅದಿನ್ನೂ 'ಕವಿತೆಯಾಗಬೇಕಾಗಿದೆ' ಎಂದು ಹೇಳು ತ್ತಾರೆ. ನಂತರ ಶಿವತೀರ್ಥನ್ ಪುನಾರಚಿಸಿದ "ಗೆಂಡಗಯ್ಯ"ನೇ ನಮಗೆ ಸಂಕಲ ನದ ಕೊನೆಯಲ್ಲಿ ಸಿಗುವ ಕವಿತೆ, ಆರಂಭದ ಕರಡಿನಲ್ಲಿ ಕವಿತೆಗೆ ಭಾಗಗಳಿರಲಿಲ್ಲ; ಪುನಾರಚಿಸಿದ ಕವಿತೆಯಲ್ಲಿ ಎರಡು ಭಾಗಗಳಿವೆ. ಒಟ್ಟು ೧೧೨ ಸಾಲುಗಳ ಈ ಕವಿತೆಯನ್ನು ಬಿಟ್ಟರೆ ದೀರ್ಘ ಕವಿತೆಯಾಗಿ ಸಂಕಲನದ ಆರಂಭದಲ್ಲೇ ಕಾಣಿಸಿಕೊಳ್ಳು ವುದು ಶೀರ್ಷಿಕೆಯ ಕವಿತೆ "ಗೆರೆಗಳು." (ಒಟ್ಟು ೧೩೫ ಸಣ್ಣ ಸಣ್ಣ ಸಾಲುಗಳನ್ನು ಒಳಗೊಂಡಿರುವ "ಗೆರೆಗಳು" ಕವಿತೆ ವಿರಳವಾಗಿ ಮುದ್ರಿಸಲ್ಪಟ್ಟಿದ್ದು ೧೩ ಪುಟ ಗಳನ್ನು ಉಪಯೋಗಿಸಿಕೊಂಡಿದೆ.) ಸಂಕಲನಕ್ಕೆ ಈ ಆರಂಭದ ಕವಿತೆಯ ಹೆಸ ರಿಟ್ಟು ಅಚ್ಚಿಗೆ ಹೋದ ಮೇಲೆ ಪೋಲಂಕಿಯವರು ಇದಕ್ಕೆ ಮುನ್ನುಡಿ ಬರೆಯುತ್ತಿರ ಬೇಕಾದರೆ ಬ್ರಹ್ಮಕಮಲ ಅರಳಿದ ರಾತ್ರಿ ಕವಿಯ ಲೇಖನಿಯಿಂದ ಹುಟ್ಟಿಕೊಂಡ ಕವಿತೆಯೇ ಈ "ಗೆಂಡಗಯ್ಯ". ಒಂದು ವೇಳೆ ಇದೇ ಕವಿತೆ ಅಚ್ಚಿಗೆ ಮೊದಲು ಹುಟ್ಟಿ ಕೊಂಡಿದ್ದರೆ ಶಿವತೀರ್ಥನ್ ಸಂಕಲನಕ್ಕೆ ಈ ಹೆಸರನ್ನೇ ಇಡುತ್ತಿದ್ದರೋ ಏನೋ. ಅಂತೂ ಪೋಲಂಕಿಯವರು ಮುನ್ನುಡಿಯ ಕೊನೆಯಲ್ಲಿ "ಈ ಎರಡು ಮಾತು ಬರೆದ

ಮೇಲೆ 'ಗೆರೆಗಳು' ಅಚ್ಚಾಗುತ್ತಿರುವಂತೆ 'ಗೆಂಡಗಯ್ಯ' ಇದ್ದಕ್ಕಿದ್ದಂತೆ ವೈತಾಳಿ ಬಿಟ್ಟ. 'ಗೆಂಡಗಯ್ಯ' ಎಲ್ಲಾ ಗೆರೆಗಳಿಗಿಂತಲೂ ಗುರುತರವಾದ ಗಟ್ಟಿ ಗೆರೆ-ಎಲ್ಲಕ್ಕಿಂತಲೂ ಹಿರಿಯದಾದ, ಬಾಸಾಗೆರೆ" ಎಂದು ತಮ್ಮ ಆಯ್ಕೆಯನ್ನು ಸ್ಪಷ್ಟಪಡಿಸಿದ್ದಾರೆ. ಕವಿತೆ ಹುಟ್ಟಿಬಂದ ಈ ಸಂದರ್ಭವನ್ನು ನಿಗೂಢಗೊಳಿಸುವ ಅಗತ್ಯವಿಲ್ಲ. ಮುಖ್ಯವಾದ ಮಾತೆಂದರೆ, ಹೇಗೆ ಪ್ರತಿ ಕವಿಯೊಳಗೂ ಒಂದು ಬಚ್ಚಿಟ್ಟ ಕವಿತೆಯಿರುತ್ತವೆ, ಅದು ಹೇಗೆ ಯಾವುದೋ ಒತ್ತಡದಲ್ಲಿ ಹೊರಬರುತ್ತದೆ ಎನ್ನುವುದು. ಈ ಮಾತನ್ನೂ ಓದುಗರು ಅಕ್ಷರಶಃ ತೆಗೆದುಕೊಳ್ಳದೆ, ಅವರ ತಾತ್ಪರ್ಯದಲ್ಲಿ ತೆಗೆದುಕೊಳ್ಳುತ್ತಾರೆ ಅಂದುಕೊಳ್ಳುತ್ತೇನೆ.

ಇನ್ನು ಕವಿತೆಯ ಸಾಂಗಿಕ ಸಂದರ್ಭಕ್ಕೆ ಬಂದರೆ, ಮೊದಲಿಗೇ ನಾವು ಎದುರಿಸಬೇಕಾಗುವುದು ಈ ಗೆಂಡಗಯ್ಯ ಎಂಬ ಪಾತ್ರವನ್ನು. ಇದು ಕವಿತಗೆ ಹೆಸರು ಕೊಟ್ಟ ಪಾತ್ರ. ಯಾರು ಈ ಗೆಂಡಗಯ್ಯ ? ಮುನ್ನುಡಿಯಲ್ಲಿ ಪ್ರೋಲಂಕಿಯವರು ಹೇಳಿದ ಈ ಮಾತುಗಳು ಇಲ್ಲಿ ಸಹಾಯಕವಾಗುತ್ತವೆ: "ಬೆಸ್ತರ ಮೂಲಪುರುಷನಾದ ಗೆಂಡಗಯ್ಯ, ಅಸ್ಪೃಶ್ಯರ ಮೂಲಪುರುಷನಾದ ಬಕಾಲನಂತೆ ಸೃಷ್ಟಿಯ ಕರ್ತನಾಗಿ, ಅವನಷ್ಟೇ ಆ ಸೃಷ್ಟಿಯ ಬಗ್ಗೆ ನಿಸ್ಸಹಾಯಕನಾಗಿ ವಿಷಾದದಲ್ಲಿ ಕಾಯುತ್ತ 'ಕುಂತ ಸಂತ.' ಪದ್ಯದುದ್ದಕ್ಕೂ ಪಲ್ಲವಿಯಾಗಿ ಬರುವ 'ಕುಂತ ಸಂತ'ನೆನ್ನುವ ಮಾತು ಈ ಮೂಲಪುರುಷನ ಕಾಯುವ ಕಾಯಕವನ್ನ-'ಕಾಯು' ಎನ್ನುವ ಪದದ ಎರಡರ್ಥದಲ್ಲೂ ಸಾಕ್ಷಿಯಾಗಿ ನಿಲ್ಲಿಸುತ್ತದೆ. ಅವನನ್ನೇ ಕೆ.ಬಿ. ಸಿದ್ದಯ್ಯನವರ 'ಅಕಾಲ ಬಕಾಲ'ನಂತ ಸಾಕ್ಷಿ ಪುರುಷನನ್ನಾಗಿ ನಿಲ್ಲಿಸುತ್ತದೆ." ಒಂದು ಬುಡಕಟ್ಟಿಗೆ ಸೇರಿದ ಪ್ರತಿ ಲೇಖಕನಿಗೂ ತನ್ನ 'ಮೂಲಪುರುಷ'ನ ಜತೆ ಒಂದು ವಿಚಿತ್ರವಾದ ಅವಿನಾ ಸಂಭಂಧವಿರುತ್ತದೆ: ಈ ಮೂಲಪುರುಷನ ಕಥೆಯ ನಾಯಕನಾಗಿರುವಂತೆ ಲೇಖಕನ ಆತ್ಮಕಥೆಯ ನಾಯಕನೂ ಆಗಿರುತ್ತಾನೆ. ಹೀಗೆ ಕಥಾನಕವು ಆತ್ಮಕತೆಯಾಗುವುದನ್ನೂ ಆತ್ಮಕತೆಯು ಕಥಾನಕವಾಗುವುದನ್ನೂ ನಾವು ನೋಡುತ್ತೇವೆ. ಕವಿತೆಯಲ್ಲಿ ಬರುವ ಗೆಂಡಗಯ್ಯ ಇಂಥ ಅರೆಪೌರಾಣಿಕ, ಅರೆವಾಸ್ತವಿಕ ವ್ಯಕ್ತಿ. ಬೆಸ್ತರ ಮೂಲಪುರುಷನಾಗಿ ಈತ ಪೌರಾಣಿಕ ವ್ಯಕ್ತಿ; ಕವಿಯ ಮೂಲಪುರುಷನಾಗಿ ಇವನೇ ವಾಸ್ತವ ವ್ಯಕ್ತಿ ಕೂಡ. ಕೆಂಪೀರಯ್ಯನ ಮಗ ನಂಜುಂಡಯ್ಯ, ನಂಜುಂಡಯ್ಯನ ಮಗ ಶಿವತೀರ್ಥನ್. ಕವಿತೆಯ ಸಂದರ್ಭದಲ್ಲಿ ಕೆಂಪೀರಯ್ಯನೇ ಗೆಂಡಗಯ್ಯ; ಗೆಂಡಗಯ್ಯನೇ ಕೆಂಪೀರಯ್ಯ. ಗೆಂಡಗಯ್ಯ ಬೆಸ್ತರಿಗೆಲ್ಲ ಮೂಲಪುರುಷನಾಗಿದ್ದರೆ, ಕೆಂಪೀರಯ್ಯ ಕೂಡ ಮುಂಳವಳ್ಳಿ ಕಡೆಯ ಬೆಸ್ತರ ಒಂದು ಪಂಗಡಕ್ಕೆ ಹಿರಿಯನಾಗಿದ್ದವನು. ಕತೆ ಒಂದು ರೀತಿಯಲ್ಲಿ 'ಅಕಾಲ' ವನ್ನೂ ಇನ್ನೊಂದು ರೀತಿಯಲ್ಲಿ ಕವಿಯ ಕಾಲವನ್ನೂ ಒಟ್ಟಿಗೇ ಒಳಗೊಳ್ಳುತ್ತದೆ. ಹಾಗೂ ಕವಿಯ ಕಾಲ ಮೂರು ತಲೆಮಾರುಗಳ ಹಿಂದಿನಿಂದ ಸುರುವಾಗುತ್ತದೆ.

ಕೆಂಪೀರಯ್ಯ 'ಬುಂಡೆ' ಬೆಸ್ತರು ಎನ್ನುವ ಒಂದು ಅಲೆಮಾರಿ ವರ್ಗಕ್ಕೆ ಸೇರಿದವನು. ನೇರವಾಗಿ ಶಿವನ ಆರಾಧನೆ ಮಾಡುವ ನಂಜುಂಡನ ಒಕ್ಕಲಿನವರಾದ ಈ ವರ್ಗದ ಬೆಸ್ತರು ಹಳ್ಳಕೊಳ್ಳಗಳಲ್ಲಿ ಮೀನು ಹಿಡಿದು ಅದನ್ನು ಮಾರಿ ಹೊಟ್ಟೆ ಹೊರೆಯು ವವರು ಜತೆ ಜತೆಗೆ ಎಲೆತೋಟ, ಸುಣ್ಣ ಸುಡುವುದು, ಕಾಯಿ ಪಲ್ಲೆ ವ್ಯಾಪಾರ ಇವನ್ನೂ ಮಾಡುವವರು. ಈ ಜನ ಅಲೆಮಾರಿಗಳಾಗಿದ್ದರಿಂದ ಊರ ಹೊರಗೇ ಇವರ ವಾಸ್ತವ್ಯ. ಹಿಡಿದ ಮೀನುಗಳನ್ನು ಬುರುಡೆಗಳಲ್ಲಿ ತುಂಬುತ್ತಿದ್ದರಿಂದ 'ಬುಂಡೆ' ಬೆಸ್ತರು ಎನ್ನುವ ಹೆಸರು.

ಮೂರು ತಲೆಮಾರುಗಳ ಹಿಂದಣ ಇಂಥ ಒಂದು ಸಂದರ್ಭ. ಮಳೆಯಾಗದೆ ಹಳ್ಳ ಕೊಳ್ಳಗಳು ಬತ್ತಿ ಹೋದ ಕಾಲ. ಹಿಡಿಯಲು ಮೀನುಗಳಿಲ್ಲ; ಅಸರು ಹೋಗಲು ತರಕಾರಿಯಿಲ್ಲ. ಕ್ಷಾಮದ ಪರಿಸ್ಥಿತಿ. ಇಂಥ ಹೊತ್ತು ಗೆಂಡಗಯ್ಯ, ಅರ್ಥಾತ್ ಕೆಂಪೀರಯ್ಯ ತನ್ನ ಪಂಗಡವನ್ನು ಊರೊಳಕ್ಕೆ ಕರೆದೊಯ್ಯಲು ಶ್ರಮಿಸುತ್ತಾನೆ. ಊರೊಳಗಿದ್ದು ಏನಾದರೂ ಹೊಲಗಿಲ ಮಾಡಿಕೊಂಡಿರಬಹುದು ಎನ್ನುವ ಆಸೆ ಆತನಿಗೆ. ಅಲೆಮಾರಿ ಜನಾಂಗವೊಂದನ್ನು ಸ್ಥಿರವಾಸ್ತವ್ಯಕ್ಕೆ ನಡೆಸುವ ಈ ಶತಮಾನದ ಆರಂಭದ ಕಾಲದ ಮೊದಲ ಪ್ರಯತ್ನ ಇದು. ಆದರೆ ಊರಲ್ಲಿ ಈಗಾಗಲೆ ಸ್ಥಿರ ವಾಸ್ತವ ನಡೆಸುತ್ತ ಬಂದಿರುವ ಸ್ಥಾಪಿತ ವರ್ಗ ಊರ ಹೊರಗಿನ ಈ ಅಲೆಮಾರಿಗಳನ್ನು ಸಂದೇಹದಿಂದಲೇ ನೋಡಿಕೊಂಡಿದ್ದವರು. ಅವರು ಕೆಂಪೀರಯ್ಯನ ಪ್ರಯತ್ನಕ್ಕೆ ತಡೆಯೊಡ್ಡುತ್ತಾರೆ. ಅವನ ಪಂಗಡವನ್ನು ಊರೊಳಗೆ ನೆಲಸಲು ಬಿಡುವುದಿಲ್ಲ. ಕೆಂಪೀರಯ್ಯ ತನ್ನ ಜನರನ್ನು ಮತ್ತೆ ಗುಡ್ಡಗಾಡಿನತ್ತ ಕರೆದೊಯ್ಯುತ್ತಾನೆ. ರಾಮಮೂರ್ತಿಯವರು ಹೇಳುವಂತೆ ಎರಡೂ ಅರ್ಥಗಳಲ್ಲಿ 'ಕಾಯುತ್ತ' ಕೂತಿರುತ್ತಾನೆ–ಕಾಯುವುದೇ ಕಾಯಕ ಎಂಬ ಹಾಗೆ.

ಗೆಂಡಗಯ್ಯ ಒಂದು ಅರ್ಥಪೂರ್ಣ ಪದ. ಗೆಂಡ, ಗೆಂಡೆ, ಗಂಡ, ಗಂಡು, ಗೆಡ್ಡೆ ಎಲ್ಲವೂ ಒಂದೇ ಅರ್ಥವಲಯಕ್ಕೆ ಸೇರಿದ ಪದಗಳು. ಗೆಂಡ ಅಥವಾ ಗೆಂಡೆ ಎಂದರೆ ಮೂಲ, ಬೀಜ. ತಳ ಎಂಬಿತ್ಯಾದಿ ಅರ್ಥಗಳಿವೆ. ಗೆಂಡೆಮೀನು ಎಂಬ ಒಂದು ಜಾತಿಯ ಮೀನು ಕೂಡ ಇದೆ. ಬಿತ್ತನೆಗೆ, ಫಲಕ್ಕೆ, ಸಂತತಿಯ ಉತ್ಪಾದನೆಗೆ ಸಂಬಂಧಿಸಿದ ಸೂಚನೆಯನ್ನು ಗೆಂಡಗಯ್ಯ ಎಂಬ ಪದ ನೀಡುತ್ತದೆ. "ಅಯ್ಯ" ಎನ್ನುವುದು ಬಹುಮಾನ ಸೂಚಕವೆಂದು ಬೇರೆ ಹೇಳಬೇಕಾಗಿಲ್ಲ. ಶಿವತೀರ್ಥನ್ ಕವಿತೆಯನ್ನು "ಈಡುಗಾಯಿ ಒಂದು," "ಈಡುಗಾಯಿ ಮತ್ತೊಂದು" ಎಂಬುದಾಗಿ ಎರಡು ಭಾಗಗಳಾಗಿ ಮಾಡಿದ್ದಾರೆ. ಮೊದಲ ಭಾಗದಲ್ಲಿ ಗೆಂಡಗಯ್ಯನ ಹೆಸರೇ ಬರುವುದಿಲ್ಲ; ಆದರೆ "ಕುಂತವ್ನೆ ಸಂತ" ಎಂಬ ವಿವರಣೆಯಿಂದ ಆತನ ಇರವು ಪ್ರಕಟವಾಗುತ್ತದೆ. ಎರಡನೆಯ ಭಾಗದಲ್ಲಿ ಮಾತ್ರ ಗೆಂಡಗಯ್ಯನನ್ನು ನೇರವಾಗಿ ಈ

ಹೆಸರಿನಿಂದ ಕವಿ ಸಂಬೋಧಿಸುವುದನ್ನು ಕಾಣುತ್ತೇವೆ. ಈಡುಗಾಯಿ ಎಂದರೆ, ದೇವರ ಗುಡಿಯಲ್ಲಿ ದೇವರ ಉತ್ಸವಮೂರ್ತಿಗೆ ಇಳಿತೆಗೆದು ನೆಲಕ್ಕೆ ಅಪ್ಪಳಿಸಿ ಒಡೆಯುವ ತೆಂಗಿನಕಾಯಿ. ಹೀಗೆ ಒಡೆದು ನಾಲ್ಕೂ ದಿಕ್ಕಿಗೆ ಬಿದ್ದ ಕಾಯಿಯ ಚೂರುಗಳನ್ನು ಆರಿಸುವ ಹುಡುಗರ ಪೈಪೋಟಿ ಇಂಥ ಸಂದರ್ಭಗಳಲ್ಲಿ ಒಂದು ಆಕರ್ಷಣೆಯ ವಿಷಯ. "ಈಡುಗಾಯಿ ಒಂದು, "ಈಡುಗಾಯಿ ಮತ್ತೊಂದು" ಎನ್ನುವ ಪದ ಪ್ರಯೋಗ ಒಂದು ದೇವತಾರಾಧನೆಯ ವಾತಾವರಣವನ್ನು ಕಲ್ಪಿಸುವುದರ ಜೊತೆಗೇ ಕೀಟಲೆಗೆ ಕಲ್ಲೆಸೆಯುವಂಥ ("ಈಡುಗಾಯಿ ಮತ್ತೊಂದು") ಒಂದು ಅನಿರ್ಬಂಧ ರೀತಿಯನ್ನೂ ಕವಿತೆಗೆ ತಂದುಕೊಡುತ್ತದೆ.

ಆರಾಧನೆ ಮತ್ತು ಅನಿರ್ಬಂಧತೆ ವಾಸ್ತವದಲ್ಲಿ ಪರಸ್ಪರ ವಿರುದ್ಧವಾದ ಸಂಗತಿಗಳು. ಯಾಕೆಂದರೆ ಎಲ್ಲಾ ಆರಾಧನೆಗಳೂ ಒಂದು ಸಾಂಪ್ರದಾಯಿಕ ಚೌಕಟ್ಟಿನೊಳಗೆಯೆ ನಡೆಯುವಂಥವು ಹಾಗೂ ಅನಿರ್ಬಂಧತೆ ಯಾವ ಚೌಕಟ್ಟನ್ನೂ ಒಪ್ಪುವಂಥವಲ್ಲ. ಈ ವೈರುಧ್ಯವನ್ನು ಸಮಜಾಯಿಸಿಕೊಂಡೇ ಶಿವತೀರ್ಥನ್‌ರ ಕವಿತೆ ಅಸ್ತಿತ್ವಕ್ಕೆ ಬಂದಿರುವುದು. ಸೃಷ್ಟಿಕ್ರಿಯೆಯು ಅಂತರಂಗ ಬಹಿರಂಗ ಕೂಡ ಸಮಜಾಯಿಸಿಕೆಯೇ ಎಂದು ತಿಳಿದುಕೊಂಡರೆ ಸೃಷ್ಟಿಯ ಕುರಿತಾಗಿಯೆ ಇರುವ "ಗೆಂಡಗಯ್ಯ" ಕೃತಿಗೆ ಇದು ಎಷ್ಟು ಮಹತ್ವದ್ದಾಗಿರುತ್ತದೆ ಎಂದು ಗೊತ್ತಾಗುತ್ತದೆ. ಹಲವು ವಿಧಗಳಲ್ಲಿ ಕವಿತೆ ಸಿದ್ಧ ರೀತಿಗಳನ್ನು ಲಂಘಿಸುವುದನ್ನು ಕಾಣಬಹುದು. ಶಿವತೀರ್ಥನ್ ನವ್ಯ ಸಾಹಿತ್ಯ ಸಂದರ್ಭದಲ್ಲಿ ಬರೆಯಲು ಸುರುಮಾಡಿದವರು. ಅವರ ಮೊದಲ ಸಂಕಲನ "ಬೆಸ್ತ"ದ ತುಂಬ ನವ್ಯಶೈಲಿಯ ರಚನೆಗಳೇ ಇವೆ. ಅದೇ ಐದು ಮಾತ್ರೆಯ ಗಣ; ಅದೇ ಆಡು ಮಾತಿನ ಲಯ; ಹಾಗೂ ಸಾಕಷ್ಟು ತಟಸ್ಥವೆನಿಸುವ ಭಾಷೆ ನಂತರ ಬರೆದ ಕವಿತೆಗಳಲ್ಲೂ ಹಲವು (ಅವನ್ನು "ಗೆರೆಗಳು" ಸಂಕಲನದಲ್ಲಿ ಕಾಣಬಹುದು) ಇದೇ ರೀತಿಯನ್ನು ಮುಂದುವರಿಸಿಕೊಂಡು ಹೋಗಿವೆ. "ಬೆಸ್ತ" ಸಂಕಲನಕ್ಕೆ ಮುನ್ನುಡಿ ಬರೆಯುತ್ತ ಲಂಕೇಶ್ ಕವಿಗೆ ಈ ಕುರಿತು ಮುನ್ನೆಚ್ಚರಿಕೆ ಕೊಡುವ ಹಾಗೆ ಕಾಣುತ್ತದೆ. "ಕವಿ ಹುಡುಕಬೇಕಾದ್ದು ತನ್ನಲ್ಲಿ ತನ್ನ ಹತ್ತಿರದ ಪರಿಸರದಲ್ಲಿ-ಅತ ಸುಂದರ ಜಗತ್ತಿಗಾಗಿ ಪರದಾಡಕೂಡದು. ಭಾಷೆ ಕೂಡ ಅಷ್ಟೆ. ತನ್ನ ನಾಲಿಗೆಗೆ ಹತ್ತಿರವಾದ ಮಾತು ಮತ್ತು ಪಡಿತವನ್ನು ಅವನು ನಂಬಬೇಕು. ಮಿಕ್ಕಿದ್ದನ್ನು ಅನುಮಾನದಿಂದ ಬರಮಾಡಿಕೊಳ್ಳಬೇಕು" ಎನ್ನುತ್ತಾರೆ ಲಂಕೇಶ್. ಮುಂದುವರಿಯುತ್ತ, "ಬ್ರಾಹ್ಮಣರ ನುಡಿಕಟ್ಟು ಸಾಮಾನ್ಯವಾಗಿ ಒಂದೇ ತರಹವಾದರೆ ಶೂದ್ರರದು ನೂರಾರು; ಅವರ ತುಡಿತಗಳು ಕೂಡ. 'ಅತ್ತಲಿಂದ ಅವನೂ ಇತ್ತಲಿಂದ ಇವನೂ ಮತ್ತೆಲ್ಲಿಂದಲೊ ಉವನೂ ಎರಗಿ ಸುತ್ತೇನು ಕಾಣದೆ ಕಣ್ಣು ಕತ್ತಲೆ ಕಟ್ಟಿ'ದೆಯೆಂದು ಒಂದು ಪದ್ಯದಲ್ಲಿ ಈತ ಬರೆಯುತ್ತಾನೆ. ಶೂದ್ರರೆಲ್ಲರ

ಸಮಸ್ಯೆ ಇದು. ಅವರು ತಮ್ಮ ಧ್ವನಿಗಳನ್ನು ಹುಡುಕಬೇಕು. ಬೇಗ ಮೋಸ ಮಾಡುವ ಮಾತಿನ ತೆರೆಗಳನ್ನು ಕತ್ತರಿಸಿ ಹಾಕಬೇಕು" ಎಂದೂ ಹೇಳುತ್ತಾರೆ. (ಲಂಕೇಶ್ ಇಲ್ಲಿ ಎತ್ತಿಕೊಂಡಿರುವ ಸಾಲುಗಳು "ಅತ್ಯಾಚಾರ" ಎಂಬ ಕವಿತೆಯಿಂದ.) ಲಂಕೇಶ್ ಈ ಸಾಧ್ಯತೆಗಳನ್ನು ಶಿವತೀರ್ಥನ್‌ರ ಮೊದಲ ಸಂಕಲನದ ಕವಿತೆಗಳಲ್ಲಿ ಗುರುತಿಸಿದರೂ ಅವೆಲ್ಲ ಒಂದು ಮೂರ್ತರೂಪಕ್ಕೆ ಬರುವುದು ಹತ್ತು ವರ್ಷಗಳ ನಂತರ "ಗೆಂಡಗಯ್ಯ"ದಲ್ಲಿ.

ಈ ಕವಿತೆಯು ರಚನೆಯಾಗುವ ಹೊತ್ತಿಗೆ, ಎಂದರೆ ಎಪ್ಪತ್ತರ ದಶಕದ ಕೊನೆಯ ಸುಮಾರಿಗೆ, ದಲಿತ ಬಂಡಾಯ ರೀತಿಗಳ ಪ್ರಾದುರ್ಭಾವದ ಕಾಲವೆನ್ನುವುದಂ ಗಮನಿಸಿದರೆ "ಗೆಂಡಗಯ್ಯ"ನ ವಿಶಿಷ್ಟತೆ ಗೊತ್ತಾಗುತ್ತದೆ. ದಲಿತ ಬಂಡಾಯ ಚಳುವಳಿಗಳು ಬಳಕೆಗೆ ತಂದ 'ಶೂದ್ರ' ಭಾಷೆಯನ್ನು ಶಿವತೀರ್ಥನ್ "ಗೆಂಡಗಯ್ಯ"ದಲ್ಲಿ ಉಪಯೋಗಿಸುತ್ತಾರಾದರೂ ಈ ಚಳುವಳಿಗಳಿಗೆ ಸಾಮಾನ್ಯವಾದ ಹಾಡು ಅಥವಾ ಘೋಷಣೆಯ ರೀತಿ ಕವಿತೆಯಲ್ಲಿ ಕಾಣಿಸುವುದಿಲ್ಲ. ಕವಿತೆಯ ಲಯಂ ದಲಿತ ಬಂಡಾಯ ಕಾವ್ಯ ಉಪಯೋಗಿಸಿಕೊಳ್ಳದ ನಾಲ್ಕು ಮಾತ್ರೆಯ ಗಣವನ್ನು ಅಳವಡಿಸಿಕೊಂಡಿರುವುದು ಕಂಡುಬರುತ್ತದೆ. ಬೇಂದ್ರೆ "ಪಾತರಗಿತ್ತಿ"ಯಲ್ಲಿ ಬಳಸಿದ ಲಯಂ ಇದು. ಶಿವತೀರ್ಥನ್ ಕವಿತೆಯಲ್ಲಿ ಬೇಂದ್ರೆ ಕಾವ್ಯದ ಪ್ರಭಾವ ಸಾಕಷ್ಟು ಕಾಣಿಸುವುದಾದರೂ (ಉದಾ: "ನಾ ತಡೀಲಾರೆ ನಾ ಕುಣೀತೀನಿ ನಾ ತಡೀತೀನಿ" ಅಥವಾ "ಗೆಂಡಗಯ್ಯ ಗೆಂಡಗಯ್ಯ ನಾ ಪಾತ್ರಿ / ರಾತೋ ರಾತ್ರಿ ಜಾತ್ರಿ") "ಗೆಂಡಗಯ್ಯ" ಬೇಂದ್ರೆ ಕವಿತೆಗಳಷ್ಟು ಲಯಂಬದ್ಧತೆಗೆ ಮರುಳಾಗದೆ ಈ ಮೂಲ ಲಯುವನ್ನು ತನಗೆ ಬೇಕಾದ ಹಾಗೆ ಅತಿಕ್ರಮಿಸುತ್ತ-ಅತಿಕ್ರಮಣದ ಖುಶಿಯಲ್ಲಿ ಹೊಸ ಸಾಧ್ಯತೆಗಳನ್ನು ಹುಡುಕುತ್ತ-ಹೋಗುತ್ತದೆ. ಎಂದರೆ ಶಿವತೀರ್ಥನ್ ಕವಿತೆಯಲ್ಲಿ ಬೇಂದ್ರೆಯವರ ಸೌಂದರ್ಯೋಪಾಸನೆಗಿಂತ ತನ್ನ ಕಥಾನಕದ ಲಯುವೇ ಮುಖ್ಯವಾಗಿದೆ. ಈ ಕಥಾನಕಕ್ಕೆ ಬೇಕಿದ್ದ ಹಾಗೆ ಕವಿತೆಯ ಕೈಕಾಲುಗಳನ್ನು ಕುಣಿಸುವುದಕ್ಕೆ, ಮಣಿಸುವುದಕ್ಕೆ ಕವಿ ಹಿಂಜರಿಯುವುದಿಲ್ಲ. ಕವಿತೆಯ ಎರಡನೆ ಭಾಗದ ಲಯ ಸೂಚಿಸುವುದು ಇಂಥದೊಂದು ಮುಕ್ತ ಉನ್ಮಾದ ಸ್ಥಿತಿಯನ್ನು. ಆದ್ದರಿಂದಲೆ ಇಲ್ಲಿನ ತಾಳ ಲಯಂಗಳು ಪೂರ್ವಭಾವಿಯಾಗಿ ನಿರ್ಧಾರಿತವಾಗುವುದಿಲ್ಲ. ಕವಿತೆಯ 'ಗತಿ' ಅದು ಸೂಚಿಸುವ ಜೀವನಕ್ರಿಯೆಯ ಗತಿಗೆ ಸಂವಾದಿಯಾಗಿ ಬಂದಿದೆ. ಆದ್ದರಿಂದಲೆ ಇದು ಬೇಂದ್ರೆ ಕವಿತೆಯಂತೆ ಒಂದು 'ಹೇಳಿಮಾಡಿಸಿದ' ಕವಿತೆಯಾಗುವುದಿಲ್ಲ. ಇಲ್ಲಿ ಕವಿತೆ ಎರಡು ಭಾಗಗಳನ್ನು ಹೊಂದಿಕೊಂಡಿದೆ ಎನ್ನುವುದನ್ನು ಬಿಟ್ಟರೆ ಇನ್ನುಳಿದ ಸಂಗತಿಗಳೆಲ್ಲ ಕಾವ್ಯದ ಅನುರೂಪ ಸಾಮರಸ್ಯಕ್ಕೆ ವಿರುದ್ಧವಾದುವು ಎನ್ನುವುದು ಗಮನಾರ್ಹ. ಮೊದಲ ಭಾಗದಲ್ಲಿ ೪೫ ಸಾಲುಗಳಿದ್ದರೆ ಎರಡನೆ ಭಾಗದಲ್ಲಿ ೬೭ ಸಾಲುಗಳಿವೆ. ಈ ಸಾಲುಗಳನ್ನು ಪ್ಯಾರಾ (ವೃತ್ತ)ಗಳಾಗಿ ವಿಭಜಿಸಿದ ರೀತಿಯಲ್ಲಿ ಕೂಡ ಯಾವುದೇ ಅನು

ರೂಪ ಸಾಮರಸ್ಯವಿಲ್ಲ. ಒಂದು ಸಾಲಿನಿಂದ ಮೊದಲಾಗಿ ಏಳು ಸಾಲಿನ ಪ್ಯಾರಾಗಳನ್ನು ಇಲ್ಲಿ ಕಾಣಬಹುದು. ಇವನ್ನು ಜೋಡಿಸುವ ಕ್ರಮದಲ್ಲೂ ಯಾವುದೇ ವಾಸ್ತುರೂಪದ ತರ್ಕ ಕೆಲಸ ಮಾಡಿಲ್ಲ. ಒಂದೊಂದು ಭಾಗದಲ್ಲೂ 'ಕುಂತವ್ನೆ ಸಂತ' ಎಂಬ ವಾಕ್ಯ ಐದು ಸಲ ಬಂದಿರುವುದು ಕೇವಲ ಕಾಕತಾಳೀಯವಾಗಿರಬಹುದು. ಹೀಗೆ ಇವು ಬಂದಾಗಲೂ ಪೂರ್ವನಿಯೋಜಿತವಾಗಿ ಬಂದಿರುವ ಹಾಗೆ ತೋರದ ಕಾರಣ ಕವಿತೆಗೆ ಇವರಿಂದ ಅನುರೂಪ ಸಾಮರಸ್ಯವೇನೂ ದೊರಕಿದಂತೆ ಆಗುವುದಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಕವಿತೆಯ ಎರಡನೆ ಭಾಗದಲ್ಲಿ ತಟ್ಟನೆ ಉಂಟಾಗುವ ದೃಷ್ಟಿ ಪಲ್ಲಟ. ಮೊದಲ ಭಾಗದಲ್ಲಿ ಗೆಂಡಗಯ್ಯನ ಹೆಸರೇ ಬರುವುದಿಲ್ಲ; ಆದರೂ ಈತನ ಚಿತ್ರಣ ಬರುತ್ತದೆ. ಎರಡನೇ ಭಾಗದಲ್ಲಿ ಕವಿ ನೇರವಾಗಿ ಗೆಂಡಗಯ್ಯನನ್ನು ಹೆಸರೆತ್ತಿ ಕರೆದು 'ನಾ ನಿನ್ನ ಪಿರ್ಕ' ಎಂದು ಕವಿತೆಯಲ್ಲಿ ತನ್ನನ್ನು ದಾಖಲಿಸಿಕೊಳ್ಳುವುದನ್ನು ಕಾಣುತ್ತೇವೆ. ಹೀಗೆ ಸಾಲುಗಳು ಏರುಪೇರಾಗಿ, ಪ್ಯಾರಾಗಳು ಉದ್ದ ಚಿಕ್ಕವಾಗಿ, ಅಲ್ಲಲ್ಲಿ ತಡವರಿಸಿಕೊಂಡು, ತುಂಡು ತುಂಡಾಗಿ. ಅಂತರಗಳೇ ಜಾಸ್ತಿಯಾಗಿ, ತನ್ನ ಬಿರುಕುಗಳನ್ನು ತಾನೆ ಜಗಿದುಕೊಳ್ಳುತ್ತ ಮುಂದೆ ಹೋಗುವ, ಮುಂದೆ ಹೋದಂತೆ ಹಿಂದೆಯೂ ಬಂದಹಾಗನಿಸುವ, ತೋರುವ ಯಾವ ಕಾರಣವೂ ಇಲ್ಲದೆ ದೃಷ್ಟಿಪಲ್ಲಟಗೊಳಿಸುವ "ಗೆಂಡಗಯ್ಯ" ಯಾವುದೇ ವಿಧದಿಂದಲೂ ಕಾವ್ಯಶಿಲ್ಪದ ಎಲ್ಲ ಆಯಾಮಗಳನ್ನೂ ಉಲ್ಲಂಘಿಸದ ಹಾಗೆ ತೋರುತ್ತದೆ. ಕಾವ್ಯಮಾದರಿಗಳ ಸೀಮೋಲ್ಲಂಘನದಲ್ಲೇ ಅದೊಂದು ವಿಶಿಷ್ಟ ಕವಿತೆಯಾಗುವುದು ಕೂಡ. ಕವಿತೆಯ ಕೆಲವು ಸ್ಟ್ಯಾಂಜಾಗಳನ್ನು ನೋಡಿ:

ಗೆಂಡಗಯ್ಯ ಗೆಂಡಗಯ್ಯ ಬಿತ್ನೆ ಬೀಜ
ಗೆಂಡಗಯ್ಯ ಗೆಂಡಗಯ್ಯ ರತ್ನ ಸಾಜ

ಗಿಡ ಮರ ಚಿಗುರಿ
ಅಕ್ಕಿ ದನಿ ಚದುರಿ
ಚಿಗರೆ ಮರಿ ಎಗುರಿ

ಆ ಎಸಳಿನ ಮಾವು
ಆ ಅಣ್ಣು ಕಾಯಿ
ಮಾಗಿ ಕುಂತವ್ನೆ ಸಂತ

ಎಲೆ ಬಾಳೆ ಮಾವು ಹೊಂಬಾಳೆ
ಎಳನೀರು ತಳಿಗೆ ತಂಬಿಟ್ಟು
ತುಪ್ಪಾದ ಕಜ್ಜಾಯ ಕಪ್ಪೂರ ಜೋತಿ
ಎತ್ತಿ ಮಾಡ್ತೀವಿ ತಂಪು

ಕವಿತೆ ಹೇಗೆ ಚರಣದಿಂದ ಚರಣಕ್ಕೆ ತನ್ನದೇ ಲಯವನ್ನು ಶೋಧಿಸುತ್ತ, ಬೇರ್ಪಡುತ್ತ ಹೋಗುತ್ತದೆ ಎನ್ನುವುದಕ್ಕೆ ಇದೊಂದು ಯಃಕಶ್ಚಿತ್ ಉದಾಹರಣೆ ಮಾತ್ರ. ಸಿದ್ಧ ಕವಿತೆಗಳಲ್ಲಿ ಇಂಥ ಉದಾಹರಣೆಗಳು ಸಿಗಲಾರವು. "ಗೆಂಡಗಯ್ಯ" ಕವಿತೆ ಯನ್ನು ಬದಿಗೆ ತಳ್ಳಿ ಬಂದಂಥ ಕವಿತೆ.

ಜನಾಂಗವೊಂದರ ಸ್ಮೃತಿ ಯಾವ ವಿಧದಲ್ಲಿ ಹರಿದು ಬರುತ್ತದೆ ? ಅದರ ಇತಿಹಾಸ ದಲ್ಲಿ, ಐತಿಹ್ಯಗಳಲ್ಲಿ, ಆಚರಣೆಗಳಲ್ಲಿ, ಹಾಡುಗಳಲ್ಲಿ, ರೂಪಕಗಳಲ್ಲಿ, ನಂಬಿಕೆ-ಮೂಢ ನಂಬಿಕೆಗಳಲ್ಲಿ, ಒಟ್ಟಾರೆ ಸಂಜ್ಞಾ ಪ್ರವಾಹದಲ್ಲಿ. "ಗೆಂಡಗಯ್ಯ" ಕವಿತೆ ಪ್ರಾದೇಶಿಕ ಐತಿಹ್ಯದಿಂದ (ಎಂದರೆ, ಬೆಸ್ತರ ಮೂಲಪುರುಷನಾದ ಗೆಂಡಗಯ್ಯನಿಂದ ಆರಂಭ ವಾಗಿ ಆವನಲ್ಲೆ ಕೊನೆಯಾದರೂ, ಅದು ವ್ಯಾಸ, ಪರಾಶರ, ಸತ್ಯವತಿ, ಕರ್ಣ ಮುಂತಾದ ಪುರಾಣದ ಪಾತ್ರಗಳನ್ನೂ ಸ್ಥಳೀಯ ದೈವಗಳಾದ ಪಟ್ಟಲದಮ್ಮ ದುಂಡಿ ಮಾದವ್ವ ಹಾಗೂ ಮಲೆ ಮಾದಯ್ಯರನ್ನೂ ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತದೆ. ಅಲ್ಲದೆ, ಗೆಂಡಗಯ್ಯನಲ್ಲಿ ಕವಿತೆ ತನ್ನ ಸ್ವಂತ ಅಜ್ಜ ಕೆಂಪೀರಯ್ಯನನ್ನು ಕಾಣುತ್ತಾರೆ. ಹೀಗೆ ಕವಿತೆ ಪುರಾಣ, ಐತಿಹ್ಯ, ಪ್ರಾದೇಶಿಕತೆ, ಸ್ಥಳೀಯತೆ, ಕೌಟುಂಬಿಕತೆ ಎಲ್ಲವನ್ನೂ ಒಳಗೊಂಡಿದೆ, ಗೆಂಡಗಯ್ಯನ ದಿಙ್ಮೂಢತೆ, ಹತಾಶೆಗಳಿಂದ ಸುರುವಾಗುವ ನಿರೂ ಪಣೆ ಮಾದವ್ವ ಮತ್ತು ಮಲೆ ಮಾದಯ್ಯರ ಜಾತ್ರೆಯ ಉದ್ಘೋಷದಲ್ಲಿ ಕೊನೆಗೊ ಳ್ಳುತ್ತದೆ. ಎರಡನೆಯ ಭಾಗದಲ್ಲಿ ಗೆಂಡಗಯ್ಯನ ಮೊಮ್ಮಗ ಕವಿ-ನಿರೂಪಕ:

ಗೆಂಡಗಯ್ಯ ಗೆಂಡಗಯ್ಯ
ಬಾ ಬಾ ನಾ ಪಾತ್ರಿ

ನೀ ಯಾ ಲೋಕ ಕಂಡೆ
ನೀ ಯಾ ಪಾಕ ಉಂಡೆ

ನಾ ಆ ಲೋಕ ಕಾಣ್ತೇನಿ
ನಾ ಆ ಪಾಕ ಉಣ್ತೇನಿ

ಎಂದು ಎರಡೂ ಅರ್ಥಗಳಲ್ಲಿ 'ಪಾತ್ರಿ' (ಪಾತ್ರೆ ಹಾಗೂ ಪೂಜಾರಿ)ಯಾಗಿ ತನ್ನ ಜನಾಂಗದ ವಿಧಿಯನ್ನು ಕೊಳ್ಳಲು ಮುಂದೆ ಬರುತ್ತಾನೆ. ಆದರೂ ಈಗ ಈ ಕಾಲ ಬದಲಾಗಿದೆ; ಕವಿ-ನಿರೂಪಕನ ಸ್ಥಿತಿಯೂ ಗೆಂಡಗಯ್ಯನ ಹಾಗಿಲ್ಲ. ಕವಿತೆಯ ಮೊದ ಲಲ್ಲೆ ಬರುವ 'ಅಲಾರಂ ಕೋಳಿ' ಎಂಬ ರೂಪಕ ಆಧುನಿಕ ಪ್ರಜ್ಞೆಯದು. ಈ ಆಧುನಿಕ ಪ್ರಜ್ಞೆಯಿಂದಲೆ ಕವಿತೆಗೆ ಪ್ರವೇಶ ಎನ್ನುವುದನ್ನು ಗಮನಿಸಿದರೆ, ಇಡೀ ಕವಿತೆ ಒಂದು ನೋವಿನ ನೆಪವನ್ನು 'ಆಚರಣೆ'ಯಾಗಿ ಮಾರ್ಪಡಿಸುವ ವಿಧಾನವೆಂದು ತಿಳಿಯಬಹುದು. ಸವರ್ಣೀಯ ಜನರಿಂದ ಊರಿಗೆ ಪ್ರವೇಶ ನಿರಾಕರಿಸಲ್ಪಟ್ಟ

ಕುಟುಂಬವೊಂದರ ಸಂಕಟ ಮತ್ತು ಹೋರಾಟದ ಕತೆಯನ್ನು ಮತ್ತೆ ಮತ್ತೆ ನಿರೂಪಿಸುವುದೇ ಈ ಆಚರಣೆಯ ಕ್ರಮ.

ಅಮೇರಿಕನ್ ವಿಮರ್ಶಕ ಜೆಫ್ರಿ ಹಾರ್ಟ್‌ಮನ್ "The Weight of What Happened" ಎಂಬ ತಮ್ಮದೊಂದು ಲೇಖನದಲ್ಲಿ ಯೆಹೂದೀ ಜನರ ಸಾಮೂಹಿಕ ಹತ್ಯೆಯ ಹಿನ್ನೆಲೆಯಲ್ಲಿ ಚರಿತ್ರೆ ಹಾಗೂ (ವಿ)ಸ್ಮೃತಿಯ ಸಂಬಂಧದ ಬಗ್ಗೆ ಜಿಜ್ಞಾಸೆ ನಡೆಸಿದ್ದಾರೆ. ಚರಿತ್ರೀಕರಣ (historiography) ಹೇಗೆ ಸ್ಮೃತಿಯನ್ನು ನಾಶಗೊಳಿಸುತ್ತದೆ ಎನ್ನುವ ಕುರಿತು ಈಗಾಗಲೆ ನಡೆದಿರುವ ಚರ್ಚೆಯನ್ನು ಗಮನಕ್ಕೆ ತೆಗೆದುಕೊಳ್ಳುತ್ತ, ಒಂದು ಜನಾಂಗ ಯಾವ ರೀತಿಯಿಂದ ತನ್ನ ನೆನಪನ್ನು ಕಾಯ್ದುಕೊಳ್ಳುವುದು ಸಾಧ್ಯ ಎಂಬ ಪ್ರಶ್ನೆಯನ್ನು ಹಾರ್ಟ್‌ಮನ್ ಕೇಳುತ್ತಾರೆ. ಕೆಲವು ಚಿಂತಕರ ಪ್ರಕಾರ, ಹಬ್ಬ ಹರಿದಿನಗಳನ್ನು ಆಚರಿಸುವುದು ನೆನಪಿನ ಹೊರೆಯನ್ನು ಕಳಚಿಕೊಳ್ಳುವುದಕ್ಕೆ. ಆದರೆ ಆಯ್ಕೆಯಿರುವುದು ಇತಿಹಾಸ (history) ಮತ್ತು ಐತಿಹ್ಯಗಳ (myths) ನಡುವೆ ಮಾತ್ರವೇ ಎಂದಾದರೆ ಆಧುನಿಕ ಜನರು ಇತಿಹಾಸವನ್ನು ಉಳಿಸಿಕೊಂಡು ನೆನಪನ್ನು ಬಿಟ್ಟುಬಿಡಬೇಕೆ, ಅಥವಾ ಐತಿಹ್ಯಗಳನ್ನು ಉಳಿಸಿಕೊಂಡು ಭ್ರಮೆಗಳಿಗೆ ಬಲಿಯಾಗಬೇಕೆ? ಹಾರ್ಟ್‌ಮನ್ ಪ್ರಕಾರ, ಸದ್ಯ ಯೆಹೂದ್ಯರು ವೀಡಿಯೋಗಳು, ಸಾಕ್ಷಿಗಳು, ಸ್ಮೃತಿಪುಸ್ತಿಕೆಗಳೇ ಮುಂತಾದವುಗಳನ್ನು ಬಳಸಿಕೊಂಡು ತಯಾರಿಸುವ ಪತ್ರಾಗಾರಗಳು ನೆನಪಿನ ಬಿರುಕುಗಳನ್ನು ತುಂಬುವುದಕ್ಕೆ ಅವರು ನಡೆಸುವ ಮಾರನೆಯ ವಿಧಾನವಾಗಿದೆ. ಯೆಹೂದಿ ಬರಹಗಾರರು ತಮ್ಮ ಸಮೂಹ ಸ್ಮೃತಿಯನ್ನು ಕತೆ ಕಾದಂಬರಿಗಳಾಗಿಸುತ್ತಿರುವುದು ಕೂಡ ಈ ವಿಧಾನದ ಒಂದು ಮುಖ್ಯ ಅಂಗವೇ ಆಗಿದೆ. ಈ ದೃಷ್ಟಿಯಿಂದ ನೋಡಿದಾಗ, ಶಿವತೀರ್ಥನ್‌ರ ಕವಿತೆ ಬೇರೆ ಸ್ತರವಲ್ಲಿ ಇಂಥವೇ ಒಂದು ಸಮೂಹ ಸ್ಮೃತಿಯ ಆಚರಣೆಯಾಗಿ ತೋರುತ್ತದೆ. ಕತೆ, ಕಾದಂಬರಿ, ಕವಿತೆಗಳು ಈವತ್ತು ನಮ್ಮ ಸಂಸ್ಕೃತಿಯಲ್ಲಿ ಸದಾ ಚರಿತ್ರೀಕರಣ ಮರೆಯಿಸಬಹುದಾದ ನೆನಪುಗಳನ್ನು ಮತ್ತೆ ಮತ್ತೆ ಕಾಯ್ದುಕೊಳ್ಳುವ ಕೆಲಸವನ್ನು ಮಾಡುತ್ತಿವೆಯೆಂದು ಅನಿಸುತ್ತದೆ.

ಆದ್ದರಿಂದಲೇ ಈ ಕವಿತೆಯ ಎರಡನೆ ಭಾಗದಲ್ಲಿ ಬರುವ ಉತ್ಸವದ ಚಿತ್ರಣ ಎರಡು ನೆಲೆಯಲ್ಲಿ ಕೆಲಸ ಮಾಡುತ್ತದೆ: ಒಂದು, ಕವಿ-ನಿರೂಪಕನ ಜನಾಂಗದ ಸಾಂಸ್ಕೃತಿಕ ಆಚರಣೆಯಾಗಿ; ಇನ್ನೊಂದು, ಕವಿತೆಯ ಸದ್ಯದ ಹೊಣೆಗೆ ರೂಪಕವಾಗಿ. ಮೊದಲನೆಯ ನೆಲೆಯಿಂದ, ಕವಿತೆ ಒಂದು ಸ್ಮೃತಿಯನ್ನು ಚಿತ್ರಿಸುತ್ತದೆ: ಎರಡನೆಯ ನೆಲೆಯಿಂದ ಅದು ಆ ಸ್ಮೃತಿಯೇ ಆಗಿ ನಮ್ಮ ಮುಂದೆ ಬಂದು ನಿಲ್ಲುತ್ತದೆ. ಹೀಗೆ ಕವಿತೆ ತಾನು ಹುಟ್ಟಿಬಂದ ಸಂದರ್ಭವನ್ನು ಸೂಚಿಸುತ್ತಲೇ ತಾನೇ ಆ ಸಂದರ್ಭವೂ ಆಗುವ ಕಾರಣ ಅದಕ್ಕೆ ಆಳವೂ ವಿಸ್ತಾರವೂ ಒದಗಿ ಬರುತ್ತದೆ. ವಾಸ್ತವದಲ್ಲಿ

ನೆನಪಿನ ಬಿರುಕುಗಳನ್ನು ಮುಚ್ಚುವುದು ಯಾರಿಂದಲೂ ಸಾಧ್ಯವಿಲ್ಲ. ಕತೆ ಕವಿತೆಗಳು ಈ ಬಿರುಕುಗಳಲ್ಲಿ ಹುಟ್ಟಿಬರಬಹುದೇ ಹೊರತು ಅವನ್ನು ಮುಚ್ಚುವುದಿಲ್ಲ. ಆಧುನಿಕೋತ್ತರ ತಿಳಿವಿನ ಪ್ರಕಾರ, ಕ್ರೋಢೀಕರಣದ ಎಲ್ಲಾ ಪ್ರಯತ್ನಗಳೂ ಕೊನೆಗೆ ಸುಳ್ಳಾಗುತ್ತವೆ. ಆದ್ದರಿಂದಲೇ ಇತಿಹಾಸ ಕೂಡ ಒಂದು ಕಥಾನಕವಾಗಿ ಉಳಿಯುವುದು. ಈ ದೃಷ್ಟಿಯಿಂದಲೂ "ಗೆಂಡಗಯ್ಯ" ಒಂದು ವಿಶಿಷ್ಟವಾದ ಕವಿತೆ. ಯಾಕೆಂದರೆ, ಇದು ತನ್ನ ಸಣ್ಣ ಸಣ್ಣ ಅಸಮಾನ ಸಾಲುಗಳಲ್ಲಿ, ಚರಣಗಳಲ್ಲಿ, ಲಯೋಲ್ಲಂಘನದಲ್ಲಿ ನೆನಪಿನ ಬಿರುಕುಗಳನ್ನೇ ಕೊಂಡಾಡುವ ಹಾಗೆ ತೋರುತ್ತದೆ. ಒಂದು ಕಡೆಯಿಂದ ಇನ್ನೊಂದು ಕಡೆಗೆ ಕವಿತೆ ನೆಗೆಯುವ ವಿಚಿತ್ರವಾದ ಕ್ರಮದಲ್ಲಿ ಬೇರೆ ಯಾವ ತರ್ಕವೂ ಇದ್ದಂತೆ ಕಾಣಿಸುವುದಿಲ್ಲ.

ನೆನಪುಗಳ ಆಚರಣೆಯೊಂದ ಮಾತ್ರಕ್ಕೆ ಕವಿತೆಯ ವ್ಯಾಪ್ತಿ ಇಷ್ಟಕ್ಕೆ ಸೀಮಿತವಾಯಿತು ಎಂದರೆ ತಪ್ಪಾಗುತ್ತದೆ. 'ಮರುಕಳಿಕೆ'ಯ ಅರ್ಥ ಭೂತಕಾಲದ ಕಡೆ ಕೈತೋರಿಸುವಂತೆಯೇ ಭವಿಷ್ಯದ ಕಡೆಗೂ ಬೊಟ್ಟು ಮಾಡುತ್ತದೆ. ಹಾಗೂ ಅದು ಸದ್ಯದ ವರ್ತಮಾನದಲ್ಲಿ ನಿಂತುಕೊಂಡೇ ಈ ಕೆಲಸ ಮಾಡುವಂಥದು "ಗೆಂಡಗಯ್ಯ"ನ ಆಚರಣೆ ಸಹಾ ಈ ರೀತಿಯದು. ಉದಾಹರಣೆಗಾಗಿ, "ಕುಂತವ್ನೆ ಸಂತ" ಎಂಬ ವಿಶಿಷ್ಟ ಪದಪ್ರಯೋಗವನ್ನು ಗಮನಿಸಬೇಕು. ಇದರ ಕಾಲಸೂಚನೆಯೇನು ? ಸಂತ ಕೂತಿದ್ದಾನೆ, ಎಂದೇ ? ಅಥವಾ, ಯಾರು ಕೂತುಕೊಳ್ಳಬಲ್ಲನೋ ಆತನೇ ಸಂತ, ಎಂದೇ ? ಮೊದಲ ಅರ್ಥದಲ್ಲಿ ಅದು ಗತಿಸಿದ ಕಾಲಕ್ಕೆ ಸಂಬಂಧಿಸಿದ್ದು; ಎರಡನೆ ಅರ್ಥದಲ್ಲಿ ಸಾರ್ವಕಾಲಿಕವಾದ್ದು. ಉತ್ಸವಾಚರಣೆಯೆಂದರೆ ಇದೇ ! ಹಾಗೂ ಐತಿಹ್ಯ ಇತಿಹಾಸದ ಮೇಲೆ ಗೆಲುವು ಸಾಧಿಸುವುದು, ಕನಿಷ್ಠ ಅದಕ್ಕೆ ಪೂರಕವಾಗುವುದು ಹೀಗೆಯೇ.

ಶ್ರೀಧರ ಹೆಗ್ಗೋಡು

ನೆರಳುಗಳ ಸೆರೆಯಲ್ಲಿ

ದಿನದ ಧಾಳಿಗೆ ಸಿಕ್ಕ
ಸಂದ ವರ್ಷಗಳೆಷ್ಟೋ !

ಅಲೆ ಅಲೆಗಳಡಿ ಸಿಕ್ಕ
ತಳ ಸೇರಿದ ಮರಳ ಕಣ, ಬೆಳಕಿಗೆಲ್ಲೆಲ್ಲೂ
ಶುದ್ಧ ಬಂಗಾರ.

ಅಲ್ಲಲ್ಲಿ ಕಳೆ ಬೆಳೆದ
ಬೆಳದಿಂಗಳೇ ತೋಟ;
ಎಲ್ಲೆಲ್ಲೂ ನೆರಳುಗಳ
ಸರಳುಗಳ ಸೆರೆಯಲ್ಲಿ.

ಸ್ಪಷ್ಟತೆಯ ಮುಖದಲ್ಲಿ
ಕಣ್ಣೇ ಕಾಣುತ್ತಿಲ್ಲ.
ಸೆರೆಗಾಗಿ ಹಿಡಿದಿದ್ದ ಬಲೆತುಂಬಾ ತೂತೇತೂತು !

ಗಂಡ

ಗಂಗಾಧರ ಮೊದಲಿಯಾರ

ನನ್ನ ಹೆಂಡತಿಗೆ ಕನ್ನಡ ಎಂದರೆ ಪ್ರಾಣ. ದುರದೃಷ್ಟದ ವಿಷಯವೆಂದರೆ ಅವಳಿಗೆ ಕನ್ನಡವೇ ಸರಿಯಾಗಿ ಬಾರದು, ಆದರೆ ಕನ್ನಡವೆಂದರೆ ಕುಣಿದಾಡುವುದೆನ್ನದೆ ಎಂದು ಜಪಿಸುತ್ತ ಸದಾ ಕುಣಿದಾಡುತ್ತಿರುತ್ತಾಳೆ. ಕನ್ನಡ ಮಾತನಾಡುವುವೆಂದರೆ ಅವಳಿಗೆ ಯಾವುದೇ ಹಿಂಜರಿಕೆ ಇಲ್ಲ. ಮೈಸೂರಿನವಳಾದರೂ ಕಾನ್ವೆಂಟಿನಲ್ಲಿ ಓದಿದಾಕೆ. ಸಹವಾಸ ದೋಷದಿಂದ ಇಂಗ್ಲಿಷಿಗೆ ಶರಣಾದವಳು. ಮೈಸೂರಿನಲ್ಲಿ ಇದ್ದವಳು ಎನ್ನುತ್ತೀರಾ, ಕನ್ನಡ ಬರುವುದಿಲ್ಲ ಎಂದರೇನರ್ಥ ಎಂಬ ಪ್ರಶ್ನೆಯನ್ನು ಸಹಜವಾಗಿಯೇ ಎಲ್ಲರೂ ಕೇಳಬಹುದು. ಇದೆಂಥಾ ಪ್ರಶ್ನೆ ಸ್ವಾಮಿ ? ಬೆಂಗಳೂರಿಗೆ ಒಮ್ಮೆ ಬನ್ನಿ. ಕನ್ನಡದಲ್ಲಿ ಪ್ರಶ್ನೆ ಕೇಳಿ. ತಮಿಳಿನಲ್ಲಿ ಉತ್ತರ ಪಡೆಯಿರಿ. ದಂಡು ಪ್ರದೇಶಕ್ಕೆ ಒಮ್ಮೆ ಹೋಗಿ ಬನ್ನಿ. ಸೇಲ್ಸ್‌ಬಾಯ್ಸ್, ಗರ್ಲ್ಸ್‌ಗಳಿಂದ ಹಿಡಿದು ಪ್ರತಿಯೊಬ್ಬರೂ ತಮಿಳಿನಲ್ಲೇ ಮಾತನಾಡುತ್ತಾರೆ. ಕನ್ನಡ ಅಪ್ಪಿ ತಪ್ಪಿಯೂ ಬರುವುದಿಲ್ಲ. ಹೀಗಾಗಿ ನನ್ನವಳದು ಮನೆಯಲ್ಲಿ ತಮಿಳು ಮಾತು. ಶಾಲೆಗೆ ಹೋದರೆ ಇಂಗ್ಲಿಷ್ ಬಾತು. ಇನ್ನು ಕನ್ನಡಕ್ಕೆಲ್ಲಿದೆ ಛಾನ್ಸ್ ? ಹೀಗಾಗಿ ಅವಳ ಕನ್ನಡ ಅರೆ ಕೊರೆ. ತಮಿಳ್ಗನ್ನಡ ಶೈಲಿ. ನಾನೂ ಮೈಸೂರಿನವನೇ, ನನ್ನದು ಅಚ್ಚಗನ್ನಡ. ಅವಳಿಗೆ ಕನ್ನಡ ಹೇಗೋ ನನಗೆ ತಮಿಳು ಹಾಗೆ. ಅವಳದು ತಮಿಳ್ಗನ್ನಡ ನನ್ನದು ಕನ್ನಡ ತಮಿಳ್. ನಾನು ತಮಿಳು ಮಾತನಾಡಿದರೆ ಶೇಕಡ ೯೦ ರಷ್ಟು ಪದಗಳು ಕನ್ನಡದವಾಗಿರುತ್ತವೆ. ಇದರಿಂದಾಗಿ ನನ್ನವಳಿಗೆ ಕನ್ನಡ ಬೇಗ ಕಲಿಯಲು ಸುವರ್ಣಾವಕಾಶ. ಬಹಳಷ್ಟು ಪದಗಳನ್ನು ತಲೆತುಂಬ ತುಂಬಿಕೊಂಡಿದ್ದಾಳೆ. ಮಾರುಕಟ್ಟೆಯಲ್ಲಿ ಕಿವಿಗೆ ಬಿದ್ದ ನೂರಾರು ಪದಗಳನ್ನು ಗಬಕ್ಕನೆ ಹಿಡಿದು ತನ್ನ ಮೆಮರಿಗೆ ಸೇರಿಸಿಕೊಳ್ಳುತ್ತಾಳೆ. ಹೊಟೆಲ್‌ಗಳಲ್ಲಿ, ಸಿನಿಮಾ ಮಂದಿರಗಳಲ್ಲಿ, ಬಳೆ ಅಂಗಡಿಯಲ್ಲಿ ಎಲ್ಲೆಂದರಲ್ಲಿ ಸಿಕ್ಕ ಕನ್ನಡ ಪದಗಳನ್ನು ಯಥಾವತ್ತಾಗಿ ಸಂಗ್ರಹಿಸಿದ್ದಾಳೆ. ಸಮಯ ಬಂದಾಗ ತಕ್ಕೊ ಕನ್ನಡ ಪದಗಳ್ ಬಾಣ ಎಂದು ಯಾವ್ಯಾವ ಪದ

ಯಾವ್ಯಾವ ರೀತಿಯಲ್ಲಿರುತ್ತದೋ ಅದೇ ರೀತಿಯಲ್ಲಿ ಹೊರಹಾಕಿ, ಎದುರಾಳಿಗಳನ್ನು ವಿಸ್ಮಯಗೊಳಿಸಿರುವ ಪ್ರಸಂಗಗಳು ನೂರಾರು.

ಮೊದಲೇ ಹೇಳಿದಂತೆ ಅವಳು ಕಾನ್ವೆಂಟಿನಲ್ಲಿ ಓದಿದವಳಾದ್ದರಿಂದ ಎಲ್ಲ ಪದ ಪ್ರಯೋಗಗಳು ಕಾನ್ವೆಂಟ್ ಇಂಗ್ಲಿಷ್‌ನ 'ಬಾಯ್ ತಿರುಗುವಿಕೆ'ಗೆ ಒಳಪಟ್ಟು ಹೊಸ ಭಾಷೆಯನ್ನೇ ಕೇಳಿದಂತಾಗುತ್ತದೆ. ಮನೆಯಲ್ಲಿ ನೀವು ಕನ್ನಡದಲ್ಲೇ ಮಾತನಾಡ ಬೇಕು ಎಂದು ಕಟ್ಟಪ್ಪಣೆ ಬೇರೆ ಮಾಡಿದ್ದಾಳೆ, ಇದರಿಂದ ತನಗೆ ಕನ್ನಡ ಕಲಿಯಲು ಬೇಗನೆ ಅವಕಾಶ ಬಂದಂತಾಗುತ್ತದೆ ಎಂಬುದು ಅವಳ ವಾದ. ಹಾಲಿನವನು, ಪೇಪರಿನವನು, ತರಕಾರಿಯಮ್ಮ, ಕೆಲಸದವಳು ಇವರೆಲ್ಲರ ಜತೆ ನಿರರ್ಗಳ ಕನ್ನಡ ಉಪನ್ಯಾಸ ದಿನನಿತ್ಯ ನಡೆದೇ ಇದೆ. ಇವಳ ಕನ್ನಡ ಅಭ್ಯಾಸದ ಫಲವಾಗಿ ಅವರ ಕನ್ನಡ ಎಲ್ಲಿ ಕಲುಷಿತಗೊಂಡು ಕಲಗಚ್ಚಾಗಿ ಬಿಡುತ್ತದೋ ಎಂಬ ಆತಂಕ ನನ್ನದು.

ಮದುವೆಯಾದ ಹೊಸತರಲ್ಲೇ ಅವಳ ಕನ್ನಡ ಪರಿಚಯ ನನಗೆ ಆದದ್ದು. ಆಕೆಯ ಸ್ನೇಹಿತರಿಗೆ ನನ್ನನ್ನು ಪರಿಚಯಿಸುತ್ತಾ: 'ಇವರೇ ನನ್ನ ಗಂಡ' ಎಂದಳು. ನಾನು ಮೂರ್ಛೆ ಬೀಳುವುದೊಂದೇ ಬಾಕಿ. ಮದುವೆಗೆ ಮುಂಚೆ ಕೆಲ ಸ್ನೇಹಿತರು 'ಏನಪ್ಪಾ ಮದುವೆ ಗಂಡು' ಎಂದು ಛೇಡಿಸಿ ಮಾತನಾಡಿಸುವಾಗ ನನಗೇನೂ ಅನ್ನಿಸಿರಲಿಲ್ಲ. ನಾನೊಬ್ಬ ಗಂಡು ತಾನೇ. ಈಗ ಮದುವೆ ಸಮಯವಾದ್ದರಿಂದ ಅದನ್ನೂ ಜೊತೆಗೆ ಸೇರಿಸಿ ಮದುವೆಗಂಡು ಎಂದು ಕರೆಯುತ್ತಿದ್ದಾರೆ ಅಷ್ಟೇ ಎಂದು ಸಹಜವಾಗಿಯೇ ಅದನ್ನು ಪರಿಗಣಿಸಿದ್ದೆ. ಆದರೆ ನನ್ನ ಪತ್ನಿ ನನ್ನನ್ನು 'ಗಂಡ' ಎಂದು ಹೇಳಿದಾಗ ಏನೋ ಕಸಿವಿಸಿಯಾಯಿತು. ಇದುವರೆಗೆ 'ಗಂಡು' ಆಗಿದ್ದ ನಾನು ಇದ್ದಕ್ಕಿದ್ದಂತೆ 'ಡು'ನಲ್ಲಿನ ಕೊಂಬನ್ನು ಕಳೆದುಕೊಂಡು ಗಂಡನಾಗಿ ಬಿಟ್ಟೆನೇ ? ಎಂಬ ಆತಂಕ ಸುರುವಾಯಿತು. ಮದುವೆಯಾದ ದಿನವೇ ನಾನೇನೋ ಕಳಕೊಂಡೆ ಎಂಬುದು ನಿಧಾನವಾಗಿ ಅರಿವಾಗಲಾರಂಭಿಸಿತು. ಮುಂದೆ ಈ ಪರಿವರ್ತನೆ ಏನೇನಾಗಿ ರೂಪಾಂತರ ತಾಳುತ್ತದೋ ಎಂಬ ಗಾಬರಿಯೂ ಆವರಿಸಿತು. ಈಗಲೇ 'ಡು' ನಲ್ಲಿರುವ ಕೊಂಬು ಕಳಚಿಕೊಂಡಿದೆ. ಕೆಲದಿನಗಳ ನಂತರ ಆ ಕೊಂಬು 'ಗ'ಕ್ಕೆ ತಗುಲಿಕೊಳ್ಳುತ್ತದೆ, 'ಡ'ದಲ್ಲಿರುವ ತಲೆ ಎಗರಿ ಹೋದರೆ ಅದು 'ಡಿ' ಆಗುತ್ತದೆ. ಈ ರೂಪಾಂತರ ಕ್ರಿಯೆ ಕೊನೆಗೆ 'ಗುಂಡಿ'ಯನ್ನು ಸೃಷ್ಟಿಸುತ್ತದೆ. ಅಂದರೆ ತಾಳಿ ಕಟ್ಟಿದ ಕೂಡಲೇ ಗಂಡ ಗುಂಡಿಗೆ ಬಿದ್ದ ಎಂಬ ಅರ್ಥವನ್ನು ಈ ಪದ ಧ್ವನಿಸುತ್ತದೆ. ತಾಳಿ ಕಟ್ಟುವ ವೇಳೆಯಲ್ಲಿ ವಾಲಗದವರನ್ನು ಘಟ್ಟಿಮೇಳ...ಘಟ್ಟಿಮೇಳ.. ಎಂದು ಹುರಿದುಂಬಿಸುವುದು ಬಹುಶಃ ಗಂಡ ಗುಂಡಿಗೆ ಬೀಳುವುದು ಗೊತ್ತಾಗದಿರಲಿ ಎಂದೇ ಇರಬೇಕು. ಈ ಗಂಡಸರ ಜಾಯಮಾನ ನೋಡಿ ಹೇಗಿದೆ. ಮದುವೆಯಾಗುವವರೆಗೆ ಯುವಕನಾಗಿದ್ದವನು, ಮದುವೆಯಾದ ಕೂಡಲೇ ಬಾಲಕ, ಯುವಕ, ಕುಮಾರ,

ವಯಸ್ಕ ಎಂಬೆಲ್ಲಾ ಬಿರುದುಗಳನ್ನು ಕಳೆದುಕೊಂಡು ಹೆಂಡತಿಯೊಬ್ಬಳ ಗಂಡನಾಗಿ ಪರಿವರ್ತನೆಯಾಗಿ ಬಿಡುತ್ತಾನೆ. ಗಂಡ ಆದ ಎಂದ ಕೂಡಲೇ ಎಲ್ಲವನ್ನೂ ಕಳಕೊಂಡ ಎಂದೇ ಅರ್ಥ.

ನನ್ನ ಹೆಂಡತಿ ನನ್ನನ್ನು 'ಇವರು ನನ್ನ ಗಂಡ' ಎಂದು ಬೇರೆಯವರ ಬಳಿ ಹೆಮ್ಮೆಯಿಂದ ಪರಿಚಯಿಸುವಾಗ ನನಗೆ ಮೈ ಪರಚಿಕೊಳ್ಳುವಂತಾಗುತ್ತಿರುತ್ತದೆ. ಈಗಿನ ಕಾಲದಲ್ಲಿ ಎಲ್ಲರೂ ಗಂಡನನ್ನು ಹೆಸರು ಹೇಳಿಯೇ ಪರಿಚಯಿಸುತ್ತಾರೆ, ಅದೇ ಇಂದಿನ ಸ್ಟೈಲ್. ಇಲ್ಲದಿದ್ದರೆ ಇನ್ನೂ ಸ್ಟೈಲಾಗಿ: 'ಇವರು ನನ್ನ ಹಸ್ಬೆಂಡ್' ಎಂತಲೋ, 'ನಮ್ಮ ಯಜಮಾನ್ರು' ಎಂದೋ, 'ನಮ್ಮ ಮನೆಯವರು' ಎಂದೋ ಹೇಳುವ ರೂಢಿ ಮಾತನ್ನು ಕೇಳಿದ್ದೇನೆ. ಈ ರೀತಿಯ ವಿಶಿಷ್ಟ ಶೈಲಿಯನ್ನು ನಾನು ಕೇಳಿಯೂ ಇರಲಿಲ್ಲ. ಕೇಳಿ ತಿಳಿದುಕೊಂಡೂ ಇರಲಿಲ್ಲ. ಯಾವುದೇ ಭಾವನೆಗಳಿಲ್ಲದೆ, ನಾಚಿಕೆ, ಮುಜುಗರ ಏನೂ ಇಲ್ಲದೆ ಪ್ರೀತಿಯಿಂದಲೇ ಅವಳು ಗಂಡ ಎಂಬ ಪದ ಪ್ರಯೋಗ ಮಾಡುತ್ತಿದ್ದರೂ, ಆ ವಾಕ್ಯ ಪ್ರಯೋಗದಿಂದಾಗಿ ನಾನು ಯಾವುದೋ ಒಂದು ಸಾಕು ಪ್ರಾಣಿಯಾಗಿ ಪರಿವರ್ತನೆಗೊಂಡು, ತಲೆಯಲ್ಲಾಡಿಸುತ್ತ ಅವಳ ಹಿಂದೆ ನಿಂತಿದ್ದೇನೇನೋ ಎಂಬ ಭಾಸವಾಗುತ್ತದೆ: ಅವಳು ಗಂಡ ಎಂಬ ಪದಪ್ರಯೋಗ ಮಾಡಿದಾಗಲೆಲ್ಲ ಇವನೊಬ್ಬ ದಂಡಪಿಂಡ ಎಂದು ಹೇಳುತ್ತಿದ್ದಾಳೇನೋ ಎಂಬ ಅನುಮಾನವೂ ನನ್ನನ್ನು ಕಾಡಿದ್ದಿದೆ. ಏನಾದರೂ ಮಾಡಿ ಅವಳಿಗೆ ಹೇಳಯೋ ಬಿಡಬೇಕು. ಹಾಗೆಲ್ಲ ಗಂಡ, ಗಿಂಡ ಎನ್ನಬೇಡ ಅದು ಕರ್ಕಶವಾಗಿದೆ ಎಂದು ಎಷ್ಟೋ ಬಾರಿ ಹೇಳಲು ಮುಂದಾಗಿ, ನಾನೇ ತಡೆದುಕೊಂಡಿದ್ದೇನೆ. ನಾನು ಅವಳಿಗೆ ಈ ರೀತಿ ಹೇಳುವುದರಿಂದ ಅವಳ ಕನ್ನಡ ಕಲಿಕೆಗೆ ತೊಂದರೆಯಾಗಬಹುದು ಅವಳು ಮುಂದೆ ನಿರರ್ಗಳವಾಗಿ ಮಾತನಾಡಲು ಸಂಕೋಚ ಪಡಬಹುದು ಎಂಬೆಲ್ಲಾ ಸದುದ್ದೇಶಗಳು ನಾನು ಆ ರೀತಿ ಹೇಳುವುದಕ್ಕೆ ಅಡ್ಡಿ ಬಂದು ಸುಮ್ಮನಾಗಿದ್ದೇನೆ. ಹಾಗೆ ಹೇಳಿ 'ಬಲ್ಲದ ಗಂಡನಿಗೆ ಮೊಸರಿನೊಳಗೂ ಕಲ್ಲು ಸಿಕ್ಕಿತು' ಎಂದು ಮೂತಿ ತಿವಿಸಿಕೊಳ್ಳುವುದಕ್ಕಿಂತ ಸುಮ್ಮನಿರುವುದೇ ಮೇಲಲ್ಲವೇ ?

ಒಮ್ಮೊಮ್ಮೆ, 'ನಮ್ಮ ಯಜಮಾನ್ರು' ಎಂದು ಕರೆಯುವುದೇ ಸೂಕ್ತ ಎಂಬ ಅಭಿಪ್ರಾಯ ಬರುತ್ತದೆ. ಒಳ್ಳೆಯ ಆಲೋಚನೆ ಇದೇ ಸರಿ. ಅವಳಿಗೆ ಸೂಚನೆ ಕೊಟ್ಟು ಬಿಡೋಣ ಎಂದು ನಿರ್ಧರಿಸಿದೆ. ಯಜಮಾನ್ರು ಎಂಬುದು ಯಜಮಾನ ಸಂಸ್ಕೃತಿಯ ಕುರುಹಾಗಿ ಬಿಡುತ್ತದೇನೋ ಎಂಬ ಜಿಜ್ಞಾಸೆಯೇ ಹೆಚ್ಚಾಗಿ ನಿರ್ಧಾರ ಕೈ ಬಿಟ್ಟೆ. ಗಂಡನಿಂದಾಗಿ ಗಂಡಾಂತರದ ಪರಿಸ್ಥಿತಿಯೇ ಸನ್ನದ್ದಾಗಿದೆ.

ಇವಳು ಹೀಗೆ ಪದೇ ಪದೇ ನನ್ನನ್ನು ಗಂಡ, ಗಂಡ ಎಂದು ಕರೆಯುತ್ತಾ ಪ್ರಾಣ ಹಿಂಡುತ್ತಿದ್ದಾಳಲ್ಲಾ, ಆ ಶಬ್ದ ಸರಿಯಾದ ಬಳಕೆಯೇ ಅಲ್ಲ ಎಂದು ಅವಳಿಗೆ ಮನದ

ರಿಕೆ ಮಾಡಿಕೊಡುವ ಸಲುವಾಗಿ 'ಇಗೋ ಕನ್ನಡ'ಕ್ಕೆ ಪತ್ರ ಬರೆದದ್ದೂ ಆಯಿತು. ಅವರು: "ಗಂಡ' ಎಂಬುದು ಕನ್ನಡ ಶಬ್ದ. ಇದು ದ್ರಾವಿಡ ಭಾಷೆಗಳೆಲ್ಲೆಲ್ಲಾ ಪ್ರಚಾರದಲ್ಲಿವೆ ಇವಕ್ಕೆ ಮೊದಲು ಪರಾಕ್ರಮಿ, ಶೂರ, ವೀರ, ಗಂಡುತನ ಉಳ್ಳವನು ಎಂಬ ಅರ್ಥವಿತ್ತು. ಕ್ರಮೇಣ ಇದು ಪತಿ, ಯಜಮಾನ ಎಂಬ ಅರ್ಥಕ್ಕೆ ಮರಳಿತು" ಎಂದು ವಿವರಣೆ ನೀಡಿ ನನ್ನನ್ನು ಮತ್ತಷ್ಟು ಇಕ್ಕಟ್ಟಿಗೆ ಸಿಲುಕಿಸಿದರು. ಇದು ನನ್ನ ಹೆಂಡತಿಗೆ ಒಂದು ಪ್ರಮಾಣ ಪತ್ರ ದೊರೆತಷ್ಟೇ ಸಂತೋಷ ನೀಡಬಹುದು. 'ಗಂಡ' ಎಂಬುದು ಕನ್ನಡ ಶಬ್ದ' ಎಂದು ಅಧಿಕೃತ ವ್ಯಕ್ತಿಯೇ ಹೇಳಿದ ಮೇಲೆ, ಅದು ಸರಿಯಾದ ಪದವಲ್ಲ ಎಂದು ನಾನು ಅವಳಿಗೆ ಮನವರಿಕೆ ಮಾಡಿಕೊಡುವುದಾದರೂ ಹೇಗೆ ? ಹಿಂದೆ ರಾಜಮಹಾರಾಜರಿಗೆ 'ಗಂಡರಗಂಡ' ಎಂಬ ಬಿರುದನ್ನೇ ನೀಡುತ್ತಿದ್ದರಂತೆ. ನಾನು ಒಬ್ಬ ಗಂಡ ತಾನೇ ? ನನ್ನ ಸಂಗತಿ ಏನು ಮಹಾ ? ಸುಮ್ಮನಾಗೋಣ ಎಂದು ಎಷ್ಟೋ ಬಾರಿ ಆಲೋಚಿಸುತ್ತೇನೆ. ಸಾಧ್ಯವಾಗುತ್ತಿಲ್ಲ. ಹೋಗಲಿ ಬಿಡು, ಗಂಡ ಪದದ ಬದಲು 'ಕಣವಾ' ಎಂದು ಕರೆಯಲಾರಂಭಿಸಿದ್ದಿದ್ದರೆ ಗತಿ ಏನು ? ಇದು ಬೇಕು, ಅದು ಬೇಡ ಎಂಬ ಸ್ಥಿತಿ ಬರುತ್ತದೆ. ಇದು ಅದಕ್ಕಿಂತಲೂ ಘೋರ ಎಂದುಕೊಂಡು ನನ್ನನ್ನು ನಾನು ಸಮಾಧಾನ ಮಾಡಿಕೊಂಡರೂ ಯಮಗಂಡ ಕಾಲದ ಹಾಗೆ ಮತ್ತೆ ಮತ್ತೆ ಈ ವಿಷಯ ಮರುಕಳಿಸುತ್ತಿರುತ್ತವೆ ಅಕಸ್ಮಾತ್ ರಮಣಾ ಎಂದು ಕರೆಯಲಾರಂಭಿಸಿದ್ದರೆ ಏನು ಮಾಡುತ್ತಿದ್ದೆ ? ಕಾಂತಾ ಎಂದು ಕರೆದು ಪದ್ಯ ಪೌರಾಣಿಕ ನಾಟಕದ ದೃಶ್ಯಗಳನ್ನು ಸೃಷ್ಟಿಸಲಿಲ್ಲವಲ್ಲ ಎಂಬುದೇ ಸಮಾಧಾನದ ವಿಷಯ. ಕಿಟಲ್ ಅವರು 'ಗಣ್ಡ' ಎಂದು ಅದಕ್ಕೆ ಹೊಸ ದಿರಿಸು ತೊಡಿಸಿ, 'ಎ ಸ್ಟ್ರಾಂಗ್ ಮ್ಯಾನ್‌ಲಿ ಮೇಲ್ ಪರ್ಸನ್' ಎಂದು ಬರೆದು ನಾನು ಮರೆಯಲ್ಲಾದರೂ ಮೀಸೆ ತಿರುವುವಂತೆ ಮಾಡಿದ್ದಾರೆ.

ಆದರೂ ಈ ಗಂಡನ ಸಮಾಚಾರ ನಮ್ಮ ಕಚೇರಿಗೂ ಹಬ್ಬುವುದು ತಡವಾಗಲಿಲ್ಲ. ಸ್ನೇಹಿತರ ಗೇಲಿಗೆ ಇದು ಒಳ್ಳೆಯ ವಿಷಯವೆ. ಫೋನ್‌ನಲ್ಲಿ ನನ್ನನ್ನು ಕೇಳುತ್ತಾರೆ; 'ನನ್ನ ಗಂಡ ಮನೇಲಿಲ್ಲ' ಎಂದು ಇವಳು ವಿನಯವಾಗಿಯೇ ಹೇಳುತ್ತಾಳೆ. ಮತ್ತೊಬ್ಬರು ಮತ್ತೊಂದು ಸಲ ಫೋನ್ ಮಾಡಿ: "ಏನಮ್ಮಾ ಯಜಮಾನ್ರು ಇದಾರಾ ?" ಎಂದು ಕೇಳಿದರು. "ನನಗೆ ಗಂಡ ಇಲ್ಲ ಆಫೀಸಿಗೆ ಹೋಗ್ಬಿಟ್ರು" ಎಂಬ ಉತ್ತರ ಬಂತು. ಇಡೀ ದೇಶದ ಸಮಾಚಾರವನ್ನೆಲ್ಲಾ ಕಚೇರಿಯ ವೇಳೆಯಲ್ಲೇ ವಿಮರ್ಶೆಗೆ ಗುರಿಪಡಿಸಿ, ಚರ್ಚಿಸುವ ನೌಕರರಿಗೆ ಇದಕ್ಕಿಂತ ದೊಡ್ಡ ಸಮಾಚಾರ ಬೇಕೆ ? ಅದಕ್ಕೇ ನನ್ನನ್ನು ಎಲ್ಲರೂ 'ಬಾರಪ್ಪಾ ಗಂಡಾ ಬಾ' ಎಂದೇ ಕರೆದು ಖುಷಿ ತೆಗೆದುಕೊಳ್ಳುತ್ತಾರೆ. ಇಂದೇ ಹೋಗಿ ಅವಳಿಗೆ ಹೇಳಿಬಿಡಬೇಕು ಇನ್ನು ಮುಂದೆ ಆ ರೀತಿ ಒರಟಾಗಿ ಮಾತನಾಡಬೇಡ, ನಯವಾಗಿ, ಇಂಗ್ಲಿಷ್‌ನಲ್ಲೇ ಕೆಲವು ಪದ ಪ್ರಯೋಗ

ಮಾಡು ಪರವಾಗಿಲ್ಲ ಎಂದು ಹೇಳಲು ನಿರ್ಧರಿಸುತ್ತೇನೆ. ಮನೆಗೆ ಹೋಗಿ ಅವಳ ಮುಂದೆ ನಿಂತರೆ, ಗಂಡೆದೆ ಕರಗಿ ನಿರ್ಧಾರ ಬದಲಾಗಿ ಬಿಡುತ್ತದೆ ಭಾಷೆ ಕಲಿಯುವಾಗ ನಿರ್ಬಂಧ ಬೇಡ ಎಂಬ ಭಾವನೆ ದೃಢವಾಗುತ್ತದೆ. ಬೇಕು ಬೇಕೆಂದೇ ಮನೆಗೆ ಫೋನ್ ಮಾಡಿ, ನನ್ನವಳ ಕುಶಲ ಕನ್ನಡ ಸಂಭಾಷಣೆಯನ್ನು ಸವಿಯುವ ಕಿಡಿಗೇಡಿ ಸ್ನೇಹಿತರೂ ಇದ್ದಾರೆ.

ಈ ಸಮಸ್ಯೆಗೆ ಪರಿಹಾರ ಹೇಗೆ ? ನನಗಂತೂ ತಲೆ ಕೆಟ್ಟು ಹೋಗಿದೆ. ಗಂಡಂದಿರಿಗೆ ಇದೊಂದು ದೊಡ್ಡ ಸಮಸ್ಯೆಯೇ ಅಲ್ಲವೇ ? ಈ ರೀತಿಯ ಹೆಂಡತಿಯರ ಯಾವ ಮುಲಾಜೂ ಇಲ್ಲದ ಪದ ಪ್ರಯೋಗಗಳಿಂದ ಬೇಸತ್ತೇ ಗಂಡಂದಿರು ಗಡಂಗಿಗೆ ಹೋಗುವ ಅಭ್ಯಾಸ ಬೆಳೆಸಿಕೊಳ್ಳುತ್ತಾರೆಯೇ ? ಛೇ ಹಾಗಿರಲಾರದು. ಗಂಡಗಿಗೆ ಹೋಗಿ ಗುಂಡು ಹಾಕಿದರೆ ನಿಜವಾದ ಗಂಡಸ್ತನ ಬರುತ್ತದೆಯೇ ಇಲ್ಲದಿದ್ದರೆ ಜನ ಅವನನ್ನು ಹೆನ್‌ಪೆಕಡ್ ಗಂಡ ಎಂದು ಕರೆದು ಬಿಡುವ ಸಂಭವವಿದೆಯೇ ? ಒಟ್ಟಿನಲ್ಲಿ ಗಂಡ ಎಂಬ ಮಾತೇ ಗಂಡಾಂತರಕ್ಕೆ ಹಾದಿ ತೋರುವಂತೆ ಕಾಣುತ್ತಿದೆ.

ಒಂದು ದಿನ ಆಫೀಸಿನಲ್ಲಿ ನಾನು ಸ್ವಲ್ಪ ಅಸ್ವಸ್ಥನಾದೆ. ನಾನು ಬೆವರುತ್ತಿದ್ದುದನ್ನೂ, ತಡವರಿಸುತ್ತಿದ್ದುದನ್ನೂ, ಸಾಕ್ಷಾತ್ ಕಂಡ ಬಾಸ್, ರಜೆ ಹಾಕಿ ಮನೆಗೆ ಹೋಗಿ ರೆಸ್ಟ್ ತಗೊಳ್ಳಿ ಎಂದರು. ಒಳ್ಳೆಯ ಸಲಹೆ ಎಂದು ಅದನ್ನು ಪಾಲಿಸಿದೆ. ಬಹಳ ಸುಸ್ತಾಗಿರೋ ಹಾಗೆ ಕಾಣಿಸ್ತಾ ಇದೆ ಜತೆಗೆ ಯಾರನ್ನಾದರೂ ಕಳುಹಿಸಲಾ ಎಂದರು. ಬೇಡ ಎಂದು ಹೇಳಿ, ಮನೆಗೆ ಬಂದು ಸೇರಿದೆ. ಚೆನ್ನಾಗಿ ಮಲಗಿ ಎದ್ದ ನಂತರ ಮಾರುದಿನ ಉಲ್ಲಸಿತನಾದೆ, ಎಂದಿನಂತೆ ಹೆಂಡತಿಯಿಂದ ಬೀಳ್ಕೊಂಡು ಕಚೇರಿಗೆ ತೆರಳಿದೆ.

ನನ್ನ ಯೋಗ ಕ್ಷೇಮ ವಿಚಾರಿಸುವ ಸಲುವಾಗಿ ಬಾಸ್, ನನ್ನ ಮನೆಗೆ ಫೋನ್ ಮಾಡಿದ್ದಾರೆ. 'ನಿನ್ನೆಯೆಲ್ಲಾ ಬೆವರ್‍ತಿದ್ದ. ತಡವರಿಸ್ತಿದ್ದ, ಅವನ ಸ್ಥಿತಿ ನೋಡಿದ್ರೆ ಇನ್ನೊಂದ್ ವಾರ ಆಫೀಸಿಗೆ ಬರೋ ಲಕ್ಷಣ ಕಾಣ್ತಾ ಇಲ್ಲ" ಎಂದು ಎದುರಿಗೆ ಕುಳಿತಿದ್ದ ಸಿಬ್ಬಂದಿಗೆ ಹೇಳುತ್ತಾ ನನ್ನ ಮನೆಗೆ ಫೋನ್ ತಿರುಗಿಸಿದ್ದಾರೆ.

"ಹೇಗಿದ್ದಾರೆ ಯಜಮಾನ್ರು ?"

"ನನ್ನ ಗಂಡ ಹೋಗ್ಬಿಟ್ರು"

"ಹ್ಞಾಂ" ಎಂದು ಒಂದೇ ಸ್ವರ ಹೊರಡಿಸಿದ ಬಾಸ್, ಬಿಟ್ಟ ಬಾಯಿ ಬಿಟ್ಟಂಗೆ, ನೆಟ್ಟ ಕಣ್ಣು ನೆಟ್ಟಂಗೆ ಮಾಡಿ ರಿಸೀವನ್ನು ಕೈ ಬಿಟ್ಟರಂತೆ. ಕ್ಷಣಾರ್ಧದಲ್ಲಿ ಇಡೀ ಕಚೇರಿಗೆ ಶೋಕದ ವಾತಾವರಣ ತುಂಬಿಕೊಂಡಿತು. ನಾನು ಹತ್ತೇ ನಿಮಿಷ ತಡವಾಗಿ ಕಚೇರಿ ತಲುಪಿ, "ನನ್ನ ಗಂಡ ಆಫೀಸಿಗೆ ತೆರಳಿದರು" ಎಂಬುದನ್ನು ನನ್ನ ಪತ್ನಿ ಹೇಳಿದ

ವೈಖರಿ ಅನಂ ಎಂದು ಭಾಷಾಂತರಿಸಿದಾಗಲೇ ಪರಿಸ್ಥಿತಿ ತಿಳಿಯಾದದ್ದು. ಇಡೀ ದಿನ ಕಚೇರಿಯಲ್ಲಿ ಮಾತನಾಡಲು ಇದಕ್ಕಿಂತ ಬೇರೆ ವಿಷಯ ಯಾಕೆ ಬೇಕು ಹೇಳಿ ?

ಇನ್ನು ಮೇಲೆ ನನ್ನನ್ನು ಗಂಡ ಎನ್ನಬೇಡ, ಹಸ್ಬೆಂಡ್ ಎಂದೇ ಎಲ್ಲರಿಗೂ ಪರಿಚಯಿಸು, ನನ್ನ ಮಾನ ಉಳಿಸು ಎಂದು ಹೇಳೋಣ ಎಂದು ಅಂದುಕೊಳ್ಳುತ್ತೇನೆ. ಆದರೆ ಈ ಹಸ್ಬೆಂಡ್ ಎಂಬ ಪದ ಕೂಡಾ ಸ್ವಲ್ಪ ವಿವಾದಾಸ್ಪದವೇ ಅಲ್ಲವೇ. HUSH ಎಂದರೆ ನಿಘಂಟಿನಲ್ಲಿ ಸದ್ದಿಲ್ಲದಿರುವುದು, ನಿಶ್ಯಬ್ದ, ಮೌನ ಎಂಬೆಲ್ಲಾ ಅರ್ಥಗಳಿವೆ, ಬಾಂಡ್ (ಬ್ಯಾಂಡ್) ಎಂದರೆ ಪತಿ, ಗಂಡ ಎಂಬ ಅರ್ಥವಿದೆ. ಎರಡನ್ನೂ ಸೇರಿಸಿ ಯಾರಾದರೂ ಕುಹಕಿಗಳು 'ನಿಶ್ಯಬ್ಧ ಗಂಡ' ಎಂಬ ಪ್ರಯೋಗಿಸಿ, ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ಗಂಡ ನಿಶ್ಯಬ್ಧ ಎಂದು ಹಾಡಲೂ ಆರಂಭಿಸಬಹುದು. ಜಗತ್ತಿನಲ್ಲಿ ಕಾಣಬರುವ ಬಹಳಷ್ಟು ಅಮ್ಮಾವ್ರ ಗಂಡಂದಿರನ್ನು ಕಂಡೇ ಈ ಹಸ್ಬೆಂಡ್ ಎಂಬ ಪದ ಹುಟ್ಟಿರಬಹುದು. HUSH ಎಂದರೆ ಮೌನ ಎಂಬ ಅರ್ಥವೂ ಇರುವುದರಿಂದ ಗಂಡ ಮೌನವಾಗದಿದ್ದರೆ ಅವನನ್ನು ಬ್ಯಾಂಡ್ ಬಾರಿಸಿದಂತೆ ಬಾರಿಸುತ್ತೇನೆ ಎಂದು ಹೆಂಡತಿ ಗದರಿಸಬಹುದು. ಹೀಗಾಗಿಯೇ ಹಸ್ಬಂಡ್, ಹಸ್‌ಬ್ಯಾಂಡ್, ಹಸ್ಬೆಂಡ ಎಂಬ ಪದಗಳು ಉದ್ಭವಿಸಿರಬಹುದು. ಉತ್ತರ ಕರ್ನಾಟಕದ ಕಡೆ ವ್ಯಂಜನಗಳ ಬಳಕೆ ಇಲ್ಲವೇ ಇಲ್ಲ. ಹಸ್ಬೆಂಡ್ ಎಂದು ಹಳೆ ಮೈಸೂರಿನ ಕಡೆ ಬರೆದರೆ, ಧಾರವಾಡದ ಕಡೆ ಹಸ್ಬೆಂಡ ಎಂದೇ ಬರೆಯುತ್ತಾರೆ. ಇದನ್ನು ಬೇಕಾದರೆ 'ಹಸುವಿನಂತಹ ಗಂಡ' ಎಂಬ ಅರ್ಥದಲ್ಲೂ ತೆಗೆದುಕೊಳ್ಳಬಹುದು. ಇದೆಲ್ಲಾ ರಗಳೆ ನನ್ನ ತಲೆ ತಿನ್ನಲಾರಂಭಿಸಿದ ನಂತರ ನನ್ನನ್ನು ಗಂಡ ಎಂದು ಎಲ್ಲರಿಗೂ ಪರಿಚಯಿಸಬೇಡ, ಹಸ್ಬೆಂಡ್ ಎಂದೇ ಹೇಳು ಎಂದೆಲ್ಲಾ ಹೇಳಬೇಕೆಂದಿರುವುದನ್ನು ಸದ್ಯಕ್ಕೆ ತಡೆಹಿಡಿದಿದ್ದೇನೆ.

ಫಣಿರಾಜರ 'ಬ್ಯಾಡ್‌ಫೇತ್' ಬಗ್ಗೆ

ಆರ್ಕೆ, ಮಣಿಪಾಲ

'ಕನ್ನಡ ವಿಮರ್ಶೆ ಮತ್ತು ಡಿ ಆರ್.' ಎಂಬ ನನ್ನ ಲೇಖನಕ್ಕೆ ಪ್ರತಿಕ್ರಿಯಿಸಿದ ಫಣಿರಾಜ್, ಟಿಪ್ಪಣಿಯೊಂದಕ್ಕೆ ಅಗತ್ಯಕ್ಕಿಂತ ಹೆಚ್ಚಿನ ಮಹತ್ವ ಕಲ್ಪಿಸಿದಂತೆ ಕಾಣುತ್ತದೆ. ಡಿ. ಆರ್. ನ ಸಿದ್ಧಾಂತ ವಿಮುಖತೆಯನ್ನು ನಾನೇನೂ ಗೇಲಿಯ ವಿಷಯವನ್ನಾಗಿ ಮಾಡಿಲ್ಲ. ಇವರ ಬರಹಗಳ ಪೂರ್ವಾಪರ ವಿರೋಧಗಳ ಬಗ್ಗೆ ಗ್ರಂಥಸ್ಥ ಪುರಾವೆಗಳೊಂದಿಗೆ ಈಚಿನ ಏಳೆಂಟು ವರ್ಷಗಳಿಂದ ನನ್ನ ಹಲ ವಾರು ಬರೆಹಗಳಲ್ಲಿ ವಿಶ್ಲೇಷಣೆ ಮಾಡುತ್ತ ಬಂದಿದ್ದೇನೆ. ಅವ್ಯಾವುದಕ್ಕೂ ಫಣಿರಾಜ್ ಆಗಲಿ, ಇತರ ವಿಮರ್ಶಕರಾಗಲಿ ಪ್ರತಿಕ್ರಿಯಿಸಿಲ್ಲ. ಹಾಗೆಂದು ನನ್ನ ವಿಚಾರಗಳು ಅಂತಿಮವಾಗಿರಬೇಕಿಲ್ಲ, ಪ್ರಶ್ನಾತೀತವಾಗಬೇಕಿಲ್ಲ. ವಿಮರ್ಶಕರು ದಿವ್ಯನಿರ್ಲಕ್ಷ್ಯ ತೋರುವುದು ಈಚಿನ ದಿನಗಳ ರಾಜಕೀಯ ದಿವಾಳಿಯ ಸ್ವಭಾವವೆಂದು ನಾನು ಬರೆದುದಕ್ಕೆ ಫಣಿರಾಜರಾದರೂ-ಕನಿಷ್ಠ ಈ ಟಿಪ್ಪಣಿಯ ಮಟ್ಟಿಗಾದರೂ-ಪ್ರತಿಕ್ರಿಯಿಸಿದುದಕ್ಕೆ ನನಗೆ ಸಂತೋಷವಾಗಿದೆ.

ಫಣಿರಾಜ್ ನನ್ನ ಲೇಖನದ ಪೀಠಿಕೆಯ ಮಾತುಗಳಲ್ಲಿ 'ಜಾಣತನ'ವನ್ನು ಗುರುತಿಸಿದ್ದಾರೆ. ಆದರೆ ಅಲ್ಲಿ ಜಾಣತನವೇನೂ ಇರಲಿಲ್ಲ-ದ್ವಂದ್ವಾತ್ಮಕ ವಿಮರ್ಶೆಯಲ್ಲಿ ಡಿ. ಆರ್. ಸ್ಥಾನನಿರ್ದೇಶನ ಮಾಡುವ ಒಂದು ಪ್ರಯತ್ನ ಅಲ್ಲಿದೆ. ಉಳಿದ ವಿಮರ್ಶಾ ಪ್ರಸ್ಥಾನಗಳ ಕುರಿತು ಸಮಗ್ರ ವಿಶ್ಲೇಷಣೆ ಮಾಡುವುದು ಈ ಲೇಖನದಲ್ಲಿ ಸಾಧ್ಯವಿಲ್ಲ; ಸಾಧುವೂ ಅಲ್ಲ ಎಂಬುದು ಫಣಿರಾಜ್‌ಗೆ ತಿಳಿಯಲಿಲ್ಲವೇಕೋ !

ಸಯ್ಯದ್‌ನನ್ನು ಓದಿ, ಆತನ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ಫಣಿರಾಜ್, ನನ್ನ ಟಿಪ್ಪಣಿಯಲ್ಲಿನ ತೀರ್ಮಾನಗಳ ಸ್ವೀಕಾರಾರ್ಹತೆಯನ್ನು ಪ್ರಶ್ನಿಸಿದ್ದಾರೆ. ಸಯ್ಯದ್‌ನ ಓದಿನಿಂದ ಕನ್ನಡ ವಿಮರ್ಶೆಗೆ ಹೊಸ ಜೀವ, ಅರ್ಥವಂತಿಕೆ ಪ್ರಾಪ್ತವಾಗುವುದು ಖಂಡಿತವೆಂದು ನನಗೂ-ಆತನ ಬರೆಹಗಳನ್ನು ಓದಿದ ಮೇಲೆ ಅನಿಸಿದೆ. ಈ ಕೆಲಸ ಫಣಿ

ರಾಜರಿಂದ ಸಾಧ್ಯವಾಗಲಿ, ಮಾತ್ರವಲ್ಲ, ಅವರು ಇದುವರೆಗಿನ ಕನ್ನಡ ವಿಮರ್ಶೆಯಲ್ಲಿನ ಪ್ರಮಾದಗಳನ್ನು ಎತ್ತಿ ತೋರಿಸಿ. ಮರು ಮೌಲ್ಯೀಕರಣಕ್ಕೆ ಕೈಯಿಡಲಿ; ಮತ್ತು ಡಿ. ಆರ್. ಒಬ್ಬರೇ ಅಲ್ಲ, ಅವರಿಗಿಂತ ಹೆಚ್ಚಿನ ಸಾಧನೆ ಮಾಡಿದವರನ್ನೂ ಲಕ್ಷ್ಯದಲ್ಲಿರಿಸಿಕೊಂಡು ಮರು ವಿಮರ್ಶೆಯ ಕಾರ್ಯಕ್ಕೆ ತೊಡಗಬೇಕು. ಫಣಿರಾಜ್ ಇದನ್ನು ಖಂಡಿತ ಮಾಡುತ್ತಾರೆಂದು ಆಶಿಸುವೆ;

ಆದರೆ ಅವರಿಗೆ ಸಮ್ಯಗ್ದರ್ಶನ ಚಿಂತನೆಯ ಕುರಿತು ಪ್ರಸ್ತಾಪಿಸಲು ನನ್ನ ಟಿಪ್ಪಣಿ ಒಂದು ನೆವವಾಯಿತೇ ಎಂದು ಸಂದೇಹಿಸುವಂತಾಗಿದೆ. ಏಕೆಂದರೆ, ಅವರು ನನ್ನ ಹೇಳಿಕೆಗಳು ಮತ್ತು ಉಲ್ಲೇಖಗಳ ಭಾಗಗಳನ್ನು, ತುಣುಕುಗಳನ್ನು ತನ್ನ ತೀರ್ಮಾನಕ್ಕೆ ಅನುಕೂಲಿಸುವಂತೆ ಎತ್ತಿಕೊಂಡದ್ದು ಕಾಣಿಸುತ್ತವೆ. ನನ್ನ ಮಾತಿನ ಹಿಂದು ಮುಂದನ್ನು, ಮಾತಿನ ಸರಣಿಯನ್ನು (Sequence) ಮತ್ತು ಟಿಪ್ಪಣಿಯಲ್ಲಿ ನಮೂದಿಸಿದ ಇತರ ಬರೆಹಗಳನ್ನು ಅಭ್ಯಸಿಸುವ ಶ್ರಮ ತೆಗೆದುಕೊಂಡಂತಿಲ್ಲ. ಹಾಗಾಗಿ, ಡಿ. ಆರ್. ತೀರಿದ ವೇಳೆ ನಾನು ಬರೆದ ಟಿಪ್ಪಣಿ, ಅವರ ಪಾಲಿಗೆ 'ಬಹಳ ಚತುರ' 'ಘಾತುಕವಾದ ಬರಹ'ವಾಗುತ್ತದೆ. ನನ್ನ ಇದುವರೆಗಿನ ವಿಮರ್ಶಾ ಬರವಣಿಗೆಯುದ್ದಕ್ಕೂ ಡಿ. ಆರ್. ಬಗೆಯಷ್ಟೇ ಅಲ್ಲ. ಉಳಿದ ವಿಮರ್ಶಿತ ಕೃತಿಗಳ ಲೇಖಕರ ಬಗ್ಗೆಯೂ ಇದೇ ನಿಷ್ಠುರ ನಿಲುವಿರುವುದು ಫಣಿರಾಜರಿಗೆ ತಿಳಿಯದೇ ? ಅವುಗಳನ್ನೂ ಸಾರಾಸಗಟಾಗಿ 'ಬಹಳ ಚತುರ'ವೆಂದೋ 'ಘಾತುಕ'ವೆಂದೋ ಅವರು ಬಣ್ಣಿಸಲಿ. ಹಾಗೆ ಬಣ್ಣಿಸಲು ಬೇಕಿದ್ದರೆ ಅವರು ಇನ್ನೊಬ್ಬ ಸುಪ್ರಸಿದ್ಧ ಚಿಂತಕನ ಆಶ್ರಯ ಪಡೆಯಲಿ.

'ಶ್ರೇಷ್ಠತೆ'ಯ ಪ್ರಶ್ನೆಯ ಕುರಿತು ಬರೆಯುತ್ತಾ ಫಣಿರಾಜ್ ಲಂಕೇಶರ ನಿಲುವು ಸರಿಯೆಂದು ಬರೆದಿದ್ದಾರೆ. ಇರಬಹುದು. 'ಶ್ರೇಷ್ಠತೆ'ಯ ಕನಸು ಲೇಖಕನಿಗಿರಬೇಕೆಂಬುದು ನಿಜವಾದರೂ ಶ್ರೇಷ್ಠತೆಯನ್ನು ತೀರ್ಮಾನಿಸುವ ಮಾನದಂಡಗಳ ವಿಷಯದಲ್ಲಿ ಲಂಕೇಶರ ವೈಯಕ್ತಿಕ ನಿಲುವನ್ನು ಮಾನ್ಯ ಮಾಡುವಂತಿಲ್ಲ. ಏಕೆಂದರೆ, ಸೃಜನಶೀಲನಾಗಿ ಲಂಕೇಶ್ ಮಹತ್ವದ ಲೇಖಕರಾದರೂ, ಅವರ ವ್ಯಕ್ತಿವಾದಿ, ವಿಕ್ಷಿಪ್ತ ನಿಲುವು ಎಲ್ಲ ವೇಳೆ ಆರೋಗ್ಯಪೂರ್ಣವಾಗಿರುವುದಿಲ್ಲ. ತನ್ನದೇ ಹೆಸರು ಹೊತ್ತ ವಾರ ಪತ್ರಿಕೆಯಲ್ಲಿ ತನಗಿಷ್ಟವಾಗದ ಬರೆಹವೆಂದು 'ಪುಸ್ತಕ ವಿಮರ್ಶೆ' ಬರೆಯುತ್ತ, 'ನಾನು ಈ ಗ್ರಂಥವನ್ನು ಓದಿಲ್ಲ'ವೆಂದು ಒಪ್ಪಿಕೊಳ್ಳುತ್ತ ಕೈಗೆ ಬಂದ ಪುಟದ ನಾಲ್ಕಾರು ಸಾಲುಗಳನ್ನು ಎತ್ತಿಕೊಟ್ಟು ಲೇಖಕನನ್ನು ಮುಗಿಸಿಯೇ ಬಿಡುವ ತೀರ್ಮಾನಕ್ಕೆ ಬರುವ ಕ್ರಮ ಅವರದು. ತನ್ನ ಗುಂಪಿನವರ ಬರೆಹಗಳನ್ನೇ ಹೆಚ್ಚಾಗಿ ಪ್ರಕಟಿಸುವ, ಕೆಟ್ಟ ಬೈಗುಳ-ಗೇಲಿ-ದೂಷಣೆಯ ಭಾಷೆಯ, ವಿಧ್ಯಾತ್ಮಕವಾದ ಹೇಳಿಕೆ-ಉಪದೇಶಗಳನ್ನೇ ಪ್ರಕಟಿಸುವ ಲಂಕೇಶ್ ಪತ್ರಿಕಾ ಧರ್ಮವನ್ನು ಪಾಲಿಸುತ್ತಿದ್ದಾರೆಂದು

ಫಣಿರಾಜ್ ತಿಳಿದಿದ್ದಾರೆಯೇ ? ಲಂಕೇಶರ ಸ್ವಭಾವದಲ್ಲಿರುವ ಈ ರೊಚ್ಚು ಅವರನ್ನು ಒಳ್ಳೆಯ ವಿಮರ್ಶಕರನ್ನಾಗಿ ರೂಪಿಸದೆ ಹೋಯಿತು. ಲಂಕೇಶ್, ಶೂದ್ರ ಮತ್ತಿತರ ಡಿ. ಆರ್. ಬಳಗದ ಬಗ್ಗೆ ನಾನು ಬರೆಯುವಾಗ ಅವರ ಸಾಹಿತ್ಯದೊಂದಿಗೆ ಇತರ ಚಟುವಟಿಕೆಗಳನ್ನು ಗಮನಿಸಿ, ಪರಸ್ಪರ ಸಮನ್ವಯಿಸಿ ಬರೆದಿದ್ದೇನೆ. ಸಾಹಿತಿಯ ಸೃಜನಕ್ರಿಯೆ-ಬದುಕು, ಚಿಂತನೆ-ಮಾತು ಇವುಗಳನ್ನು ವಿಚ್ಛೇದಗೊಳಿಸಿ ಅಭಿಪ್ರಾಯ ನೀಡುವುದು ಈಚಿನ ದಿನಗಳಲ್ಲಿ-ಬಂಡಾಯದ ಸಂದರ್ಭದಲ್ಲೂ-ಸಿದ್ಧತತ್ತ್ವವಾಗುತ್ತಿರುವುದರಿಂದ ಫಣಿರಾಜರ ಮಾತುಗಳು ಕೆಲವರಿಗೆ ಸರಿಯೆನಿಸಬಹುದಾದರೂ, ಹೆಚ್ಚಿನವರು ಈ ನಿಲುವನ್ನು ಒಪ್ಪಲಾರರೆಂಬ ಧೈರ್ಯ ವಿಶ್ವಾಸಗಳು ನನ್ನಂಥವರನ್ನು ಇನ್ನೂ ಬರೆಯುವಂತೆ ಪ್ರೇರೆಪಿಸಿದೆ.

ಸ್ವಿಫ್ಟ್ ತನ್ನ ಪಠ್ಯದಲ್ಲಿ ಬದುಕನ್ನು ಮೀರುವ ಪ್ರಯತ್ನ ನಡೆಸಿರುವುದನ್ನು ಸಯ್ಯದ್ ಗುರುತಿಸುವಂತೆ, ವಿಮರ್ಶಕ ಉಳಿದ ಸಂದರ್ಭಗಳಲ್ಲೂ ಗುರುತಿಸುವಂತಾಗಬೇಕೆಂದು ಫಣಿರಾಜ್ ಅಪೇಕ್ಷಿಸುತ್ತಾರೆ. ಸರಿ. ಆದರೆ, ಕೆಲವು ಲೇಖಕರ ಪಠ್ಯವನ್ನು ಅವರ ಬದುಕೇ ಮೀರಿಬಿಡುತ್ತದೆ ಎನ್ನುತ್ತೇನೆ ನಾನು. ಅಂಥ ಸಂದರ್ಭದಲ್ಲಿ ಯಾವ 'ಡಯಲೆಕ್ಟಿಕ್ಸ್'ನ್ನು ಹಿಡಿಯಬೇಕೆಂದು ಫಣಿರಾಜ್ ಅಪ್ಪಣೆ ಕೊಡಿಸುತ್ತಾರೆ ? ಮತ್ತೆ ಅದಕ್ಕೆ ಯಾವ 'ಫೇತ್' ಎಂದು ಕರೆಯುತ್ತಾರೆ ?

ಡಿ. ಆರ್., ಸ್ವಿಫ್ಟ್ ತರದವರೆಂದು ನನಗನಿಸಲಿಲ್ಲ. ಕೆಲವು ಬರೆಹಗಳಲ್ಲಿ ಹಾಗನಿಸಬಹುದಾದರೂ ಅಖಂಡವಾಗಿ ಅಲ್ಲ. ಹಾಗಾಗಿ ಶಿವಪ್ರಕಾಶರಂಥ ಸಾಹಿತಿಯ ವಿಷಯದಲ್ಲಿ ಅವರು ನಡಕೊಂಡದ್ದು, 'ಶ್ರೇಷ್ಠತೆ'ಯ ವ್ಯಸನ ಹಿಡಿಸಿಕೊಂಡದ್ದು, ಕೊನೆಗೆ ಶ್ರೇಷ್ಠ ಸಾಹಿತ್ಯದ ಕಲ್ಪನೆಯೂ ಬೇರು ಪಡೆಯದಿದ್ದಾಗ 'ಸಾಂಸ್ಕೃತಿಕ ವಿಸ್ಮೃತಿ'ಯ ಪರವಾಗಿ ಮಾತಾಡುತ್ತಿದ್ದುದು, ವಿದೇಶೀ ಧನದ ಜಾಲದಲ್ಲಿದ್ದು ಉಳಿದವರನ್ನು ಬಲಿಪಶು ಮಾಡಿಸಿಕೊಳ್ಳಲೆತ್ನಿಸಿದುದು-ಇವೆಲ್ಲ ಒಂದಕ್ಕೊಂದು ಸಂಬಂಧವಿಲ್ಲದ ಘಟನೆಗಳೆಂದು ನಾನೇನೂ ತಿಳಿದಿಲ್ಲ. ಡಿ. ಆರ್, ನ ಈ ಸ್ವಭಾವಗಳಿಗೂ ಆತನ ಕೃತಿಗಳ ಧೋರಣೆಗಳಿಗೂ ಸಂಬಂಧವಿಲ್ಲ; ಈ ಸ್ವಭಾವಗಳನ್ನು ಮೀರಿ ಆತ ಕೃತಿಗಳಲ್ಲಿ ಸ್ವಿಫ್ಟ್‌ನಂತೆ ನಮಗೆ ಪ್ರಸ್ತುತವಾದುದನ್ನು ನೀಡಿದ್ದಾರೆ ಎಂದು ಫಣಿರಾಜ್ ತಿಳಿಯುವುದಾದರೆ ನನ್ನದೇನೂ ಅಭ್ಯಂತರವಿಲ್ಲ. ಆದರೆ, ಅವರು ತನ್ನ ತಿಳುವಳಿಕೆಯನ್ನು ಡಿ. ಆರ್. ನ ಗ್ರಂಥಸ್ಥ ಉಲ್ಲೇಖಗಳೊಂದಿಗೆ ಪುರಾವೆ ನೀಡಿ ವಿಶ್ಲೇಷಿಸಿದಲ್ಲಿ ಮಾತ್ರ ನಾನು ನನ್ನಂಥವರು ಒಪ್ಪಬಹುದು. ಇಲ್ಲದಿದ್ದರೆ ಅದೊಂದು 'ಅಂಧಶ್ರದ್ಧೆ'ಯೆಂದು, ಅಲ್ಲವಾದರೆ 'ಅಸಿಸಿಕೆ'ಯೆಂದು ತಿಳಿಯಬೇಕಾಗುತ್ತದೆ. ಅಲ್ಲವೆ ?

ಫಣಿರಾಜ್ ಹೇಳುವಂತೆ ನನಗೆ ಯಾವ 'ಫೇತ್' ಇಲ್ಲ. ನಾನು ಸೋವಿಯತ್ ಕಮ್ಯುನಿಸಂನ ವಿಚಾರಗಳಿಂದ-ಹೆಚ್ಚಿನ ಬಂಡಾಯ ಸಾಹಿತಿಗಳಂತೆ-ಪ್ರಭಾವಿತನಾಗಿರ

ಬಹುದು; ಆದರೆ, ಆ 'ಬ್ಯಾಡ್‌ಫೇತ್'ಗೆ ಯಾವೊತ್ತೂ ಮಾರಿಕೊಂಡವನಲ್ಲ ಎಂಬುದು ಫಣಿರಾಜರಿಗೇ ಗೊತ್ತಿರಬಹುದು. ಆ 'ಫೇತ್'ನ ಪಕ್ಷದಲ್ಲಿದ್ದಾಗ ಮೈಮೇಲೆ ಬಂದವರ ಆವೇಶದಿಂದ ಮಾತಾಡುವ ಭ್ರಮೆಯಾಗಲಿ, ಅದರಿಂದ ಹೊರಬಂದ (?) ಮೇಲೆ ಭ್ರಮನಿರಸನದಿಂದ ಆ 'ಫೇತ್'ನ್ನು ಅಷ್ಟೇ ಆವೇಶದಿಂದ ಖಂಡಿಸುವ ಅಗತ್ಯವಾಗಲಿ ನನಗೆ ಯಾವೊತ್ತೂ ಬಂದಿಲ್ಲ; ಬರುವುದಿಲ್ಲ. 'ಪಕ್ಷ'ವೇ ಇಲ್ಲದ ನನಗೆ 'ಪಕ್ಷಪಾತ'ದ ಖಾಯಿಲೆಯ ಭಯವಿಲ್ಲ. ಆ 'ಫೇತ್'ಗೆ ಸಂಬಂಧಿಸಿದವರು ನನ್ನಂಥವರನ್ನು ಬಳಸಿಕೊಂಡು ತಮ್ಮ ಕಾರ್ಯಕ್ರಮಗಳನ್ನು ರೂಪಿಸಿದ್ದಿರಬಹುದು; ರೂಪಿಸಿದ್ದಾರೆಂಬುದು ಫಣಿರಾಜರಿಗೇ ತಿಳಿಸಿವೆ. ಬಂಡಾಯ ಸಾಹಿತಿಗಳೆನಿಸಿಕೊಂಡವರು ಎಡಪಂಥೀಯರೆಂದ ಮೇಲೆ ಆ 'ಫೇತ್'ನೊಂದಿಗೆ ಸಮಾನ ಹಿತಾಸಕ್ತಿಗಳಿಗಾಗಿ ಗುರುತಿಸಿಕೊಳ್ಳಬೇಕಷ್ಟೆ ?

●

ಓ. ಎಲ್. ನಾಗಭೂಷಣ ಸ್ವಾಮಿ

ಕನ್ನಡಕ್ಕೆ ಬಂದ ಕವಿತೆ

೧. ಸಂತನ ಬದುಕಿನ ಒಂದು ದಿನ

ಬಹುಶಃ,

ಭಯ ಮೈ ಮುಟ್ಟಿತ್ತು,
ಮುದ್ದು ಮಗುವಿನಷ್ಟೆ ಜೋಪಾನವಾಗಿ
ಕಾಪಾಡಿಕೊಂಡಿದ್ದ ಹೃದಯ
ಮದ್ದಳೆಯ ತಾಳ ತಪ್ಪುತ್ತಿತ್ತು.
ಅಳೆವ ಘನ ಬಳಗ ಕಾಣೆ.

ಒಳಗೆ ಆಕಾಶ ಇಷ್ಟಿಷ್ಟೂ ಕಾಣದಂಥ
ಅಪರಿಮಿತ ಕತ್ತಲಲ್ಲಿ
ಕಿಚ್ಚಿಲ್ಲದ ಬೇಗೆಯಲ್ಲಿ
ನಿಶ್ಶಬ್ದವಾಗಿ ಸುಟ್ಟು ಸುಟ್ಟು ಹದವಾಗಿದ್ದರೂ
ಎಂದೋ ಒಮ್ಮೆ ಒಂದು ಕ್ಷಣ ಕೂತು ಕೋಗಿಲೆ
                    ಹಾರಿದ್ದ ನೆನಪಿನಲ್ಲಿ
ತೆಳ್ಳನೆ ಕೊಂಬೆಯೊಂದು ಈಗಲೂ ತೂಗುತ್ತಿದೆಯೋ ?

ಮತ್ತೊಂದು ಮರಕ್ಕೆ ಹಬ್ಬಿದ ಕಾಮಲತೆಯು
ಸುದ್ದಿ ಮುಳ್ಳಾಗಿ
ಕೊಟ್ಟಕುದುರೆಯು ಪಕ್ಕೆ ತಿವಿದು ಓಡಿಸಿ
ನಿಜದಾಚೆಯ ಸುಳ್ಳಿನಾಚೆಯ ಕಲ್ಪನೆಯಾಚೆಯ
                    ನಿಶ್ಶಬ್ದಕ್ಕೆ ತಲುಪಿಸಿತ್ತು.

ಕಾರುಣ್ಯ!
ತಾನೆ ತನ್ನ ಮಗುವಾಗಿ
ತನ್ನ ತಾನೆ ಎತ್ತಿ ಮುದ್ದಾಡಿದ ಮಾತು
ಸೂತಕ ಕಳೆದು ಬೆಳಗಿತು.

೨. ಸಂಗೀತ

ಸಂಗೀತ: ಪ್ರತಿಮೆಗಳ ಉಸಿರಾಟ.
ಚಿತ್ರಗಳ ನಿಶ್ಚಲತೆ.
ಎಲ್ಲ ಮಾತಿನ ಕೊನೆ.
ಕರಗುವ ಮನಸ್ಸಿನಲ್ಲಿ ಲಂಬವಾಗಿ ನಿಂತ
ಕಾಲಸ್ತಂಭ.
ಭಾವ ? ಕ್ಷಣ ಕ್ಷಣ ರೂಪಾಂತರದ ಶ್ರಾವಣದೇಶ.
ಸಂಗೀತ: ಅಪರಿಚಿತ.
ನಮ್ಮನ್ನೂ ಮೀರಿ ವಿಸ್ತಾರವಾಗುವ
ಎದೆ ಬಯಲು, ಒಳಗೆ ಒಳಗೆ ಒಳಗೆ
ನಮ್ಮೊಳಗೆ ಇರುವ ಶುದ್ಧ ನಾವು
ಪರಿಚಿತ ಸಮ್ಮಂದ ಬೇರೆಯಾಗಿ ಬಿಡುವ ಪವಿತ್ರ ವಿರಹ.
ಒಳಗಿದ್ದದ್ದೆಲ್ಲ ಹೊರಗೆ ಮಾಡಿ
ಪರಿಚಿತ ದಿಗಂತದಾಚೆ ಇರುವ
ಯಾರೂ ಉಸಿರಾಡದ ಗಾಳಿಯ ಲೋಕ.

೩. ಶಿಶು ಗೀತ

ಅಮ್ಮಾ, ನನ್ನ ಮಗುವನ್ನು ಕಂಡರೆ ನಿನಗೆ ಪ್ರೀತಿ ಇಲ್ಲವೇನಮ್ಮಾ ?
ತೊದಲು ಮಾತಿನ ಮಗು, ಪುಟ್ಟ ಹೆಜ್ಜೆ ಇಡುವ ಮಗು,
ಮುದ್ದು ಮಗು ?
ಇದೇ ಈಗ ಸ್ನಾನ ಮಾಡಿಸಿಕೊಂಡು ಥಳ ಥಳ ತೊಳಗುತ್ತಿರುವ
ಮಗುಗಳ ಮಾಣಿಕ್ಯನಂಥ ಕಿಲಕಿಲನೆ ನಗುವ ಮಗು ?
ಮಗಳೇ, ಮಗಳೇ, ನಿನ್ನ ಮಗುವನ್ನು ಮುದ್ದು ಮಾಡಲು
ನನಗೂ ಆಸೆ, ಮಗಳೇ.
ಅಜ್ಜಿಯ ಪ್ರೀತಿ ತೋರಿ, ಬೊಚ್ಚು ಬಾಯಲ್ಲಿ ಮುದ್ದಿಟ್ಟು
ನಗುವ ಆಸೆ, ಮಗಳೇ,
ಮಗುವಿನ ತಲೆಯ ಮೇಲೆರಡು ಪುಟ್ಟ ಕೋಡು
ಮೂಡುತಿವೆಯಲ್ಲ, ಯಾಕೋ ?
ಅಮೆರಿಕದ ಶೂ ತೊಟ್ಟು ನಮ್ಮ ಮನೆಯಂಗಳ ದಾಟಿ
ನ್ಯೂಯಾರ್ಕಿಗೆ ಹೆಜ್ಜೆ ಹಾಕುವಂತೆ ಕಾಣುವನಲ್ಲ ?

ಟಿವಿಯು ಹಾಡು ನೋಡುತ್ತಾ ಕಂಪ್ಯೂಟರಿನ ಆಟ ಆಡುತ್ತಾ
ಮೈ ಜ್ವರ ಬಂದಹಾಗೆ ಬಿಸಿಯಾಗಿ ಮುಟ್ಟಿದರೆ ಸುಡುವುದಿಲ್ಲ ?
ನಿನ್ನೆದೆಯ ಹಾಲಿನ ಪರಿಮಳದ ಬದಲು ಮಗುವಿನೆದೆಗೆ
ಪ್ಯಾರಿಸ್ಸಿನ ಸೆಂಟಿನ ವಾಸನೆ ಇಳಿದಿದೆಯಲ್ಲ ?
ಎಳೆ ಚಿಗುರ ಕೈ ಬೆರಳು ಚೆಕ್ಕು ಪುಸ್ತಕದ ಹಾಳೆಗೆ ಸೈನು
ಹಾಕುವ ಪೆನ್ನಿನಂತಿವೆಯಲ್ಲಾ ?

ಒಂದು ಕಣ್ಣಲ್ಲಿ ಗಾಳ, ಇನ್ನೊಂದರಲ್ಲಿ ಬಂದೂಕು ಕಾಣುತ್ತಿವೆಯಲ್ಲಾ ?
ಕಿವಿ ಮೊರದಗಲವಾಗಿ, ಚೂಪಾಗಿ, ಪಾದ ಹಿಂದು ಮುಂದಾಗಿವೆಯಲ್ಲಾ ?

ಅಮ್ಮಾ, ಅಮ್ಮಾ, ನನ್ನ ಮಗನ ಕಂಡರೆ ಪ್ರೀತಿಯಿಲ್ಲವೇನಮ್ಮಾ ?
ಹೇಳಮ್ಮಾ, ನಿನ್ನ ಮೊಮ್ಮಗನ ಕಂಡರೆ ಅಕ್ಕರೆ ಇಲ್ಲವೇನಮ್ಮಾ ?

ಮಣ್ಣಲ್ಲಿ ಆಡಿ, ಹಕ್ಕಿ ಗುಬ್ಬಿ ನೋಡಿ, ಕತೆ ಹೇಳಜ್ಜಿ ಅನ್ನುತ್ತಾ
ಪಕ್ಕದಲ್ಲಿ ಮಲಗುವ ಮೊಮ್ಮಗ
ಒಂದು ತುತ್ತು ಅನ್ನ ತಿನ್ನಲು ಮನೆಯೆಲ್ಲ ಆಡ್ದಾಡಿಸುವ ಮೊಮ್ಮಗ
ಆ ಆಟ, ಊ ಊಟ ಅನ್ನುತ್ತಾ ಇದು ನನ್ನ ಅಂಗಿ,
ನನ್ನ ಮನೆ, ನನ್ನ ತಟ್ಟೆ ಅಂತ ಜಗಳಾಡುವ
ಮುದ್ದು ಮೊಮ್ಮಗ ಬರುತ್ತಾನೆಂದುಕೊಂಡಿದ್ದೆನಲ್ಲೇ ತಾಯಿ !

೪. ಕವಿಯೆಂದರೆ

ಪದ್ಯಗಳನ್ನು ಬರೆಯುವವನು, ಪದ್ಯಗಳನ್ನು ಬರೆಯದವನು.
ಬಂಧನವನ್ನು ಮುರಿದವನು, ತನ್ನನ್ನೆ ಬಂಧಿಸಿಕೊಂಡವನು.
ನಂಬುವವನು, ನಂಬಲಾರದವನು,
ಸುಳ್ಳು ಹೇಳಿದವನು, ಸುಳ್ಳಿಗೆ ಗುರಿಯಾದವನು.
ಜಾರಬಲ್ಲವನು, ಮತ್ತೆ, ಮತ್ತೆ ಎದ್ದು ನಿಲ್ಲಬಲ್ಲವನು.
ಸಾಯಲು ಸಿದ್ಧನಾದವನು, ಸಾಯಲಾರದವನು.
ಕವಿಯೆಂದರೆ...

೫. ಹುಷಾರಿ

ನೀರು ಹರಿದು ಸವೆದ
ಉರುಟು ಕಲ್ಲುಗಳ ಕವಚ
ತೊಟ್ಟುಕೊಂಡೆ.
ಹಿಂದೆ ಯಾರಾದರೂ ಬಂದಾರೆಂದು,
ಬಂದರೆ ಕಾಣಲೆಂದು,

೨. ಸಂಗೀತೆ

ಸಂಗೀತ: ಪ್ರತಿಮೆಗಳ ಉಸಿರಾಟ.
ಚಿತ್ರಗಳ ನಿಶ್ಚಲತೆ.
ಎಲ್ಲ ಮಾತಿನ ಕೊನೆ.
ಕರಗುವ ಮನಸ್ಸಿನಲ್ಲಿ ಲಂಬವಾಗಿ ನಿಂತ
ಕಾಲಸ್ತಂಭ.
ಭಾವ ? ಕ್ಷಣ ಕ್ಷಣ ರೂಪಾಂತರದ ಶ್ರಾವಣದೇಶ.
ಸಂಗೀತ: ಅಪರಿಚಿತ.
ನಮ್ಮನ್ನೂ ಮೀರಿ ವಿಸ್ತಾರವಾಗುವ
ಎದೆ ಬಯಲು, ಒಳಗೆ ಒಳಗೆ ಒಳಗೆ
ನಮ್ಮೊಳಗೆ ಇರುವ ಶುದ್ಧ ಸಾವು
ಪರಿಚಿತ ನಮ್ಮಿಂದ ಬೇರೆಯಾಗಿ ಬಿಡುವ ಪವಿತ್ರ ವಿರಹ.
ಒಳಗಿದ್ದದ್ದೆಲ್ಲ ಹೊರಗೆ ಮಾಡಿ
ಪರಿಚಿತ ದಿಗಂತದಾಚೆ ಇರುವ
ಯಾರೂ ಉಸಿರಾಡದ ಗಾಳಿಯ ಲೋಕ.

೩. ಶಿಶು ಗೀತ

ಅಮ್ಮಾ, ನನ್ನ ಮಗುವನ್ನು ಕಂಡರೆ ನಿನಗೆ ಪ್ರೀತಿ ಇಲ್ಲವೇನಮ್ಮಾ ?
ತೊವಲು ಮಾತಿನ ಮಗು, ಪುಟ್ಟ ಹೆಜ್ಜೆ ಇಡುವ ಮಗು,
ಮುದ್ದು ಮಗು ?
ಇದೇ ಈಗ ಸ್ನಾನ ಮಾಡಿಸಿಕೊಂಡು ಥಳ ಥಳ ತೊಳಗುತ್ತಿರುವ
ಮಗುಗಳ ಮಾಣಿಕ್ಯದಂಥ ಕಿಲಕಿಲನೆ ನಗುವ ಮಗು ?
ಮಗಳೇ, ಮಗಳೇ, ನಿನ್ನ ಮಗುವನ್ನು ಮುದ್ದು ಮಾಡಲು
ನನಗೂ ಆಸೆ, ಮಗಳೇ.
ಅಜ್ಜಿಯ ಪ್ರೀತಿ ತೋರಿ, ಬೊಚ್ಚು ಬಾಯಲ್ಲಿ ಮುದ್ದಿಟ್ಟು
ನಗುವ ಆಸೆ, ಮಗಳೇ.
ಮಗುವಿನ ತಲೆಯ ಮೇಲೆರಡು ಪುಟ್ಟ ಕೋಡು
ಮೊಳತಿವೆಯಲ್ಲ, ಯಾಕೋ ?
ಅಮೆರಿಕದ ಶೂ ತೊಟ್ಟು ನಮ್ಮ ಮನೆಯಂಗಳ ದಾಟಿ
ನ್ಯೂಯಾರ್ಕಿಗೆ ಹೆಜ್ಜೆ ಹಾಕುವಂತೆ ಕಾಣುವನಲ್ಲ ?

ಟಿವಿಯ ಹಾಡು ನೋಡುತ್ತಾ ಕಂಪ್ಯೂಟರಿನ ಆಟ ಆಡುತ್ತಾ
ಮೈ ಜ್ವರ ಬಂದಹಾಗೆ ಬಿಸಿಯಾಗಿ ಮುಟ್ಟಿದರೆ ಸುಡುವುದಲ್ಲಾ ?
ನಿನ್ನೆದೆಯ ಹಾಲಿನ ಪರಿಮಳದ ಬದಲು ಮಗುವಿನೆದೆಗೆ
ಪ್ಯಾರಿಸ್ಸಿನ ಸೆಂಟಿನ ವಾಸನೆ ಇಳಿದಿದೆಯಲ್ಲ ?
ಎಳೆ ಚಿಗುರ ಕೈ ಬೆರಳು ಚೆಕ್ಕು ಪುಸ್ತಕದ ಹಾಳೆಗೆ ಸೈನು
ಹಾಕುವ ಪೆನ್ನಿನಂತಿವೆಯಲ್ಲಾ ?

ಒಂದು ಕಣ್ಣಲ್ಲಿ ಗಾಳ, ಇನ್ನೊಂದರಲ್ಲಿ ಬಂದೂಕು ಕಾಣುತ್ತವೆಯಲ್ಲಾ ?
ಕಿವಿ ಮೊರದಗಲವಾಗಿ, ಚೂಪಾಗಿ, ಪಾದ ಹಿಂದು ಮುಂದಾಗಿವೆಯಲ್ಲಾ ?

ಅಮ್ಮಾ, ಅಮ್ಮಾ, ನನ್ನ ಮಗನ ಕಂಡರೆ ಪ್ರೀತಿಯಿಲ್ಲವೇನಮ್ಮಾ ?
ಹೇಳಮ್ಮಾ, ನಿನ್ನ ಮೊಮ್ಮಗನ ಕಂಡರೆ ಅಕ್ಕರೆ ಇಲ್ಲವೇನಮ್ಮಾ ?

ಮಣ್ಣಲ್ಲಿ ಆಡಿ, ಹಕ್ಕಿ ಗುಬ್ಬಿ ನೋಡಿ, ಕತೆ ಹೇಳಜ್ಜಿ ಅನ್ನುತ್ತಾ
ಪಕ್ಕದಲ್ಲಿ ಮಲಗುವ ಮೊಮ್ಮಗ
ಒಂದು ತುತ್ತು ಅನ್ನ ತಿನ್ನಲು ಮನೆಯೆಲ್ಲ ಅಡ್ಡಾಡಿಸುವ ಮೊಮ್ಮಗ

ಆ ಆಟ, ಊ ಊಟ ಅನ್ನುತ್ತಾ ಇದು ನನ್ನ ಅಂಗಿ,
ನನ್ನ ಮನೆ, ನನ್ನ ತಟ್ಟೆ ಅಂತ ಜಗಳಾಡುವ
ಮುದ್ದು ಮೊಮ್ಮಗ ಬರುತ್ತಾನೆಂದುಕೊಂಡಿದ್ದೆನಲ್ಲೇ ತಾಯಿ !

೪. ಕವಿಯೆಂದರೆ

ಪದ್ಯಗಳನ್ನು ಬರೆಯುವವನು, ಪದ್ಯಗಳನ್ನು ಬರೆಯದವನು.
ಬಂಧನವನ್ನು ಮುರಿದವನು, ತನ್ನನ್ನೆ ಬಂಧಿಸಿಕೊಂಡವನು.
ನಂಬುವವನು, ನಂಬಲಾರದವನು,
ಸುಳ್ಳು ಹೇಳಿದವನು, ಸುಳ್ಳಿಗೆ ಗುರಿಯಾದವನು.
ಜಾರಬಲ್ಲವನು, ಮತ್ತೆ, ಮತ್ತೆ ಎದ್ದು ನಿಲ್ಲಬಲ್ಲವನು.
ಸಾಯಲು ಸಿದ್ಧನಾದವನು, ಸಾಯಲಾರದವನು.
ಕವಿಯೆಂದರೆ...

೫. ಹುಷಾರಿ

ನೀರು ಹರಿದು ಸವೆದ
ಉರುಟು ಕಲ್ಲುಗಳ ಕವಚ
ತೊಟ್ಟುಕೊಂಡೆ.
ಹಿಂದೆ ಯಾರಾದರೂ ಬಂದಾರೆಂದು,
ಬಂದರೆ ಕಾಣಲೆಂದು,

ನನ್ನ ಬೆನ್ನಿಗೆ ಕನ್ನಡಿ
ಹುಷಾರಾಗಿ ಕಟ್ಟಿಕೊಂಡೆ.

ಕೈಗೆ ಗೌಸು, ಕಾಲಿಗೆ ಬೂಟು,
ಆಲೋಚನೆಗಳಿಗೂ ಒಂದು ದಿರಿಸು—
ನನ್ನ ಮೈ ಮನಸ್ಸನ್ನು
ಅನ್ಯರು ಮುಟ್ಟದಿರಲೆಂದು,
ವಿಷ ಸ್ಪರ್ಶವಾಗದಿರಲೆಂದು.

ಎಂಟು ಶತಮಾನ ಬದುಕಿದ್ದ
ಆಮೆಯು ಚಿಪ್ಪು ತೆಗೆದು
ಎದೆಗೆ ಅಡ್ಡ ಹಿಡಿದು ಗುರಾಣಿ ಮಾಡಿಕೊಂಡೆ.

ಎಲ್ಲಾ ಹೀಗೆ ಹುಷಾರಾಗಿ ಸರಿಮಾಡಿಕೊಂಡು
ತುಂಬ ಮೃದುವಾಗಿ ಪಿಸುಗುಟ್ಟಿದೆ—
ಐ ಲವ್ ಯು.

ಟಿಪ್ಪಣಿ : ಈ ಕವಿತೆಗಳು ನನ್ನ ಮೂಲಕ ಹೀಗೆ ಕನ್ನಡಕ್ಕೆ ಬಂದಿವೆ. ಮೊದಲೆರಡು ಜರ್ಮನಿಯ ರಿಲ್ಕ್, ಆಮೇಲಿನವು ಕ್ರಮವಾಗಿ ಇಂಗ್ಲೆಂಡಿನ ಚಾರ್ಲ್ಸ್ ಕಾಸ್ಲೆ, ಪೋಲೆಂಡ್‌ನ ಟಾಡೆಯೂಸ್ ರೊಸೆವಿಕ್ಸ್ ಮತ್ತು ಮಾರಿಸ್ ಸೊರೆಸ್ಕ್ಯು ಅವರ ಕವಿತೆಗಳನ್ನು, ಅನುವಾದಗಳನ್ನು ಓದಿ ಬರೆದವು.

೬. ಮುತ್ತು ಚೆಲ್ಲಾಪಿಲ್ಲಿ

ಮುತ್ತು ಚೆಲ್ಲಾಪಿಲ್ಲಿ.
ಹಾರದ ದಾರ ಹರಿಯಿತೆ ?
ಮತ್ತೆ ಆಯ್ದು ಪೋಣಿಸಿದರೂ ಫಲವೇನು ?
ನೀನಿಲ್ಲ.
ಪೋಣಿಸಿದ ಮುತ್ತು ಹಾರವಾಗಲು ನಿನ್ನ ದೃಢವಾದ ಕೊರಳು ಬೇಕು.

ಸಮಯವಲ್ಲವೇ ಚಳಿ ದುಂಬಿಗಳಾವು, ಇರುಳೊಡನೆ ಕಾದಿ
ಬಳಲಿ ಬಿಳಿಚಿ, ಸೂರ್ಯ ಹುಟ್ಟಲೆಂದು ಕಾದಂತೆ
ಕಾದಿದ್ದೇನೆ;
ನಾಟಕದ ನಡುವೆ ನಿನ್ನ ಪ್ರವೇಶದ ಯಾವೊಂದು ಭಾವ ಭಂಗಿಯೂ
ಕಣ್ಣು ತಪ್ಪಬಾರದೆಂದು ಕಾತರದಿಂದ ಕಾದಿರುವ
ಪ್ರೇಕ್ಷಕ ಸಮೂಹ ನನ್ನ ಮುಖ.
ಲೈಟ್ ಹೌಸಿನ ಬೆಳಕಾಡುವ,

ವಿಶಾಲ ಸಾಗರದ ಬಯಲ ಬಯಸುವ,
ಒಳನಾಡ ಕೆರೆತೊರೆಯಂತೆ;
ಬೆಟ್ಟದ ಮೇಲೆ ಸುರಿದ ಬಿರುಮಳೆ
ತನ್ನತ್ತ ಹರಿದು ಜೀವ ಉಕ್ಕಿಸಲು ಕಾದ
ಮರುಭೂಮಿಯ ನದಿಯ ಪಾತ್ರದಂತೆ;
ಮುಂಗಡ್ಡ ಕಿಟಕಿಯಲ್ಲಿ ನಕ್ಷತ್ರವೊಂದು ಕಂಡು
ತನ್ನ ಪ್ರಶ್ನೆಗೆಲ್ಲಾ ಉತ್ತರ ಹೇಳೀತೆಂದು
ಹಂಬಲಿಸುವ ಸೆರೆಯಾಳಿನಂತೆ;
ಕಂಕುಳ ಕೆಳಗಿದ್ದ ಬೆಜ್ಜನೆ ಊರುಗೋಲು
ದೇವರ ಮುಂದೆಸೆದು, ಪವಾಡ ಸಂಭವಿಸದೆ,
ಬಿದ್ದಲ್ಲಿಂದ ಏಳಲಾರದ ಹೆಳವನಂತೆ;
ನೀನು ಬಾರದಿದ್ದರೆ ನಾನು ಹಾಗೇ ಬಿದ್ದು
ಕೊನೆಯ ಕಾಣುವವರೆಗೆ ತೆವಳಬೇಕು.

ನನಗೆ ನೀನಷ್ಟೇ ಬೇಕು, ಕಾಲು ಹಾದಿಯ ಕಲ್ಲು
ಬಿರುಕಲ್ಲಿ ಮೂಡಿದ ಹುಲ್ಲುಗರಿಯ ಸ್ಪರ್ಶ ಪಡೆದು
ಇಡೀ ವಸಂತ ಬೇಕೆಂದು ಮನಸು ಹಂಬಲಿಸದೇ ?
ಹಳ್ಳಿಯ ಕೆರೆಯಲ್ಲಿ ತನ್ನ ಬಿಂಬ ನೋಡಬಯಸುವ ಚಂದ್ರ
ಮೈದುಂಬಿ ಪೂರ್ಣನಾಗಬೇಡವೆ ?
ಭವಿಷ್ಯದ ಪೂರ್ಣತೆ ನಮ್ಮತ್ತ ನಾಲ್ಕು ಹೆಜ್ಜೆಯಾದರೂ ಇಡದಿದ್ದರೆ
ಏನಾದರೂ ಪೂರ್ತಿಯಾಗುವುದಾದರೂ ಹೇಗೆ ?

ಕೊನೆಗೂ ನೀನು ನಾಟಕದಲ್ಲಿಲ್ಲವೇ. ಹೆಸರು ಹೇಳಬಾರದವಳೇ ?
ಉಳಿದಿರುವ ಸಮಯ ಸ್ವಲ್ಪ. ನಿನಗೆ ತಕ್ಕವನಾಗಿ ಉಳಿಯೆ;
ವಯಸ್ಸಾಗಿ. ಮುದುಕನಾಗಿ. ಅಥವ ನನ್ನ ಮಕ್ಕಳ. ನನ್ನ
ಮರವೆಗೆ ದಬ್ಬಿ...

೭. ಬುದ್ಧ

ಕೇಳಿಸಿಕೊಳ್ಳುವವನಂತೆ ದೂರ ದೂರ ಬಹು ದೂರದ ಮೌನ...
ಉಸಿರು ಬಿಗಿ ಹಿಡಿದು ಕಿವಿಗೊಟ್ಟರೂ ನಮಗೆ ಕೇಳದ ನಿಶ್ಯಬ್ದ.
ಅವನೊಂದು ನಕ್ಷತ್ರ, ಅಸಂಖ್ಯ ಬೃಹತ್ ತಾರೆಗಳು,
ನಮ್ಮ ಕಣ್ಣಿಗೆ ಕಾಣದೆ, ಅವನ ಸುತ್ತುವರೆದಿದೆ.

ಅವನೇ ಎಲ್ಲಾ, ಇಲ್ಲೆ ಸುಳಿದಾಡುತ್ತ ಅವನು
ನಮ್ಮನ್ನು ನೋಡಲೆಂದು ಕಾಯೋಣವೇನು ?

ನಮ್ಮನ್ನು ನೋಡುವ ಆಗತ್ಯ ಅವನಿಗೇನಿದೆ ?
ಕಾಲಿಗೆ ಬಿದ್ದರೂ, ನಾವು ಬೇಡಿದರೂ
ಅವನು ನಿಶ್ಚಲ, ನಿಶ್ಶಬ್ದ, ಬೆಕ್ಕಿನಂತೆ.

ನಮ್ಮನ್ನು ಅವನತ್ತ ಸೆಳೆವ ಶಕ್ತಿ
ಲಕ್ಷವರ್ಷಗಳಿಂದ ಅವನೊಳಗೆ ಬೆಳೆದಿದೆ.
ನಾವಿನ್ನೂ ಅನುಭವಿಸಬೇಕಾದದ್ದನ್ನು ಅವನಾಗಲೇ ಮರೆತಿದ್ದಾನೆ.
ಅವನ ಅರಿವಿಗೆ ಬಂದದ್ದು ನಮ್ಮ ಅಳವಿನಾಚೆ ತುಂಬ ದೂರದಲ್ಲಿದೆ.

೮. ಬುದ್ಧ ವೈಭವ

ಎಲ್ಲ ಕೇಂದ್ರಗಳ ಕೇಂದ್ರ, ಎಲ್ಲ ಮೊಳಕೆಯ ಬೀಜ,
ತನ್ನೊಳಗೆ ತಾನೆ ಮಾಗಿ ಸಿಹಿಯಾದ ಹಣ್ಣು.
ಈ ನೆಲದಲ್ಲಿ ಬೇರು ಬಿಟ್ಟು ನಕ್ಷತ್ರದಾಚಿನವರೆಗೂ
ತುಂಬಿಕೊಂಡ ಸವಿ ತಿರುಳು. ನಿನಗಿದೋ ವಂದನೆ,

ನಿನ್ನ ಹೊಣೆ ಯಾರೂ ಹೊರದ,
ಯಾರ ಹೊಣೆ ನೀನೂ ಹೊರದ,
ಮುಕ್ತ–ಫಲದ ಸಿಪ್ಪೆಯೇ ಅನಂತತೆ.
ಅದರೊಳಗೆ ಕಾರುಣ್ಯದ ರಸ,
ಹಿತವಾಗಿ ಬೆಳಗುವ ಕರುಣೆಯ ಬೆಳಕು,

ಸುತ್ತುವ ಸಾವಿರ ಸೂರ್ಯರಿಗೆ ಇತ್ತು,
ಅವರೆಲ್ಲ ಬೆಳಬೆಳಗಿ ಸತ್ತರೂ
ಇನ್ನೂ ಉಳಿದಿರುವುದು
ಬೆಳಗುವುದು ನಿನ್ನ ಮೂಲ ಕೇಂದ್ರದಲ್ಲಿ.

೯. ಕುರುಡ

ಅಲ್ಲಿ, ಮುರುಕು ಗೋಡೆಯ ಪಕ್ಕದಲ್ಲಿ ನಿಂತ ಕುರುಡ,
ಹೆಸರಿಲ್ಲದ ಸಾಮ್ರಾಜ್ಯದ ಗಡಿಕಲ್ಲಿನಂಥ ಮುದುಕ,
ಗ್ರಹಗಳ ಗಡಿಯಾರದ ಮುಳ್ಳು ತೋರಿಸುವ ಗೊತ್ತಿಲ್ಲದ ಅಂಕಿ,
ಅವನ ಸುತ್ತ ಸುತ್ತಿ, ಬಳಸಿ, ಅಡ್ಡಹಾಯ್ದು ಹೋಗುವ
ನಕ್ಷತ್ರ ಪಥಗಳ ನಿಶ್ಶಬ್ದ ಕೇಂದ್ರ.
ಗೊಂದಲದ ಅಸಂಖ್ಯ ಬೀದಿಗಳು
ಬಂದು ಸೇರಿ ಬೇರೆಯಾಗುವ ಬಿಂದುವಿನಲ್ಲಿ ತಪ್ಪದೆ ನಿಶ್ಚಲ ನಿಂತವನು;
ಆಳವರಿಯದೆ ಬದುಕುವ ತಲೆಮಾರು
ಕತ್ತಲ ಲೋಕಮಾಳಕ್ಕಿಳಿಯಲು ಇರುವ ಮಹಾದ್ವಾರ.

೧೦. ಚಿಕ್ಕಂದಿನಲ್ಲಿ ಒಮ್ಮೆ

ಕೋಣೆಯಲ್ಲಿ ಸಮೃದ್ಧ ಕತ್ತಲೆ ನದಿಯಂತೆ ತುಂಬಿತ್ತು.
ಹುಡುಗ ತನ್ನೊಳಗೆ ತಾನು ಅಡಗಿದಂತೆ ಕುಳಿತಿದ್ದ.
ಅಮ್ಮ ಬಂದಳು, ಕನಸಿನೊಳಗೆ ಬಂದ ಇನ್ನೊಂದು ಕನಸಿನಂತೆ.
ನಿಶ್ಶಬ್ಧವಾಗಿದ್ದ ಕಪಾಟಿನಲ್ಲಿ ಗಾಜಿನ ಲೋಟ ಇಷ್ಟೆ ಕಂಪಿಸಿತು.
ಗುಟ್ಟು ಬಿಟ್ಟುಕೊಟ್ಟಿತು ಕೋಣೆ ಅನ್ನಿಸಿತು ಅವಳಿಗೆ.
ಮುತ್ತಿಟ್ಟು 'ನೀನೇನೋ ಪುಟ್ಟಾ' ಅಂದಳು ಮೆಲ್ಲಗೆ,
ಹುಡುಗ ನಾಚುತ್ತ, ಕಡೆಗಣ್ಣಲ್ಲಿ, ಕತ್ತಲಲ್ಲಿದ್ದ ಪಿಯಾನೋ ನೋಡಿದ.
ಸಂಜೆ ಹೊತ್ತು ನುಡಿಸುತ್ತಿದ್ದಳು, ರಾಗ ಬಲೆ ಬೀಸಿ
ಹುಡುಗನ ತಬ್ಬಿ ಆಳಕ್ಕೆಳೆಯುತ್ತಿತ್ತು.

ಇಬ್ಬರೂ ಸುಮ್ಮನೆ ಕೂತರು. ಹುಡುಗನ ನೋಟ ತಗ್ಗಿ
ಅವಳ ಬೆರಳ ಮೇಲೆ ನಿಂತಿತು. ಉಂಗುರಗಳ ಭಾರಕ್ಕೆ ಕುಗ್ಗಿದ ಬೆರಳು,
ಹಿಮ ಬಿದ್ದ ನೆಲದಲ್ಲಿ ಕಷ್ಟ ಪಡುವ ನೇಗಿಲಂತೆ
ಪಿಯಾನೋದ ಬಿಳಿಯ ಮನೆಗಳ ಮೇಲೆ ಭಾರವಾಗಿ ಅಡಿದವು,

೧೧. ನೆನಪು

ಕಾದಿದ್ದೀಯಾ ನೀನು ಯಾರಾದರೂ ಬಂದಾರೆಂದು,
ಕಲ್ಲೊಣಗಣ ಕಿಚ್ಚು ಉರಿಸುವವರು,
ಅಸಾಮಾನ್ಯರು, ಶಿಲೆಗೆ ಜೀವ ತರುವ ಅಪರೂಪದವರು,
ನಿನ್ನೊಳಗಿನ ಆಳ ಮುಳುಗಿ ತೋರುವವರು ಬಂದಾರೆಂದು.

ಸಂಜೆಯ ಇಳಿ ಬಿಸಿಲು ದಪ್ಪ ಹೊತ್ತಗೆಗಳ
ಚಿನ್ನದಕ್ಷರಗಳಿಗೆ ಹೊಳಪು ತಂದಿದೆ;
ನೀನಲೆದ ನಾಡುಗಳ ನೆನಪು ಬಂದಿದೆ,
ಎಂದೋ ಕಳೆದ ಹೆಣ್ಣುಗಳ ಚಿತ್ರ ಮನಸಲ್ಲಿ ಮೂಡಿದೆ.

ತಟ್ಟನೆ ಹೊಳೆಯುವುದು: ಇಲ್ಲೇ!
ಸಾವರಿಸಿಕೊಂಡು ನೋಡಿದರೆ ಕಾಣುವುದು
ತಳಮಳದ, ದರ್ಶನದ, ಪ್ರಾರ್ಥನೆಯ
ಮರಳದ ವರ್ಷಗಳೆಲ್ಲ ಬಂದು ನಿಂತಿರುವುದು.

ಟಿಪ್ಪಣಿ: ಈ ಕವಿತೆಗಳು ನನ್ನ ಮೂಲಕ ಕನ್ನಡಕ್ಕೆ ಹೀಗೆ ಬಂದಿವೆ. ಹೀಗೆ ಬರಲು ಪ್ರೇರಣೆ ಒದಗಿಸಿದ್ದು ರಿಲ್ಕ್ ಎಂಬ ಜರ್ಮನ್ ಕವಿಯ ಬರವಣಿಗೆಯ ಹಲವು ಇಂಗ್ಲಿಶ್ ಭಾಷಾಂತರಗಳು.

ಎರಡು ಬಂಗಾಲ ಕವಿತೆಗಳು

೧. ಮರಳಿ ಬಾ, ಸುರಂಜನಾ

ಅಲ್ಲಿ ಹೋಗದಿರು ಸುರಂಜನಾ
ದಯವಿಟ್ಟು ಮಾತಾಡದಿರು
ಆ ಯುವಕನಲ್ಲಿ.

ಆಕಾಶ ಪರ್ಯಂತ ಹರಡಿರುವ
ಬೆಳ್ಳಿ ಬೆಳಕಿಗೆ ಮರುಳಿ ಬಾ, ಸುರಂಜನಾ.
ಮರಳಿ ಈ ಬಯಲಿಗೆ, ತೆರೆಗಳಿಗೆ
ಬಾ ಮರಳಿ ನನ್ನ ಹೃದಯಕೆ
ಅವನ ಜೊತೆ ನಡೆದು ಹೋಗದಿರು
ದೂರ ದೂರ ಅನಂತಕೆ.

ಅವನಿಗೆ ನೀನು ಹೇಳುವುದೇನಿದೆ
ಅವನಿಗೆ ?
ಆಕಾಶದ ಹಿಂಬದಿಯಲ್ಲಿ ಮರೆಯಾಗಿ
ಆಕಾಶದಡಿಯಲ್ಲಿ
ನೀನೊಂದು ಭೂಮಿಯಂತೆ
ಅದರ ಮೇಲಿರುವ ಹುಲ್ಲಿನಂತೆ
ಅವನ ಪ್ರೀತಿ,
ಸುರಂಜನಾ
ನಿನ್ನ ಹೃದಯವು ಇಂದು
ಹುಲ್ಲಿನಂತೆಯೆ
ಗಾಳಿಯ ಹಗುರ ಚಲನಕೆ ?
ಅದುರುವುದು.
ಗಗನದಾಚೆಗೆ ಚಾಚಿರುವ ಇನ್ನೊಂದು
ಗಗನವಾಗಿರುವುದು.....
ಸುರಂಜನಾ ಬಾ ಹಿಂದಿರುಗಿ
ಮಾತಾಡದಿರು ಆ ಯುವಕನಲ್ಲಿ.

(ಮೂಲ; ಜೀವಾನಂದದಾಸ್)

೨. ನೂರು ವರ್ಷದ ನಂತರ

ಇಂದಿನಿಂದ ನೂರು ವರ್ಷಗಳ ನಂತರ
ನನ್ನ ಕವಿತೆಯನು ಓದುವಾತ
ನೀನು ಯಾರು
ಹೃದಯದ ಒಲವಿನ ಲತೆಯಲ್ಲಿ
ಚಿಗುರಿರುವ ವಸಂತದ ಬೆಳಗಿನ
ಸರಳವಾದ ಸುಖವನ್ನು
ನಿನಗೆ ಮುಟ್ಟಿಸಲು ಅನುವಾದದಲ್ಲಿ
ಹೂವಿನ ಗಂಧ
ಹಕ್ಕಿಯ ಹಾಡಿನ ಛಂದ
ಇಂದಿನ ಬಣ್ಣದ ಹೊಳಪು
ನೂರು ವರ್ಷದ ನಂತರ
ನಿನಗೆ ತಲುಪಬಹುದೆ ?

ಒಮ್ಮೆ ನಿನ್ನ ಬಾಲ್ಕನಿಯ
ದಕ್ಷಿಣ ಭಾಗದ ಕಿಟಿಕಿಯನು ತೆರೆದು
ಉದ್ದಕ್ಕೆ ಹರಡಿರುವ ಬಯಲನು ನಿರುಕಿಸು
ದೀರ್ಘ ಖಯಾಲಿನಲ್ಲಿ ಮುಳುಗಿ
ಜಗದ ಹೃದಯ ತಂತುವನು ಮೀಂಟಲು
ದೂರದ ಯಾವದೋ ಸಗ್ಗದಿಂದ
ತೇಲಿ ಬರುವ ಪರಮ ಸುಖದ
ಕುರಿತು ಯೋಚಿಸು
ನೂರು ವರ್ಷದ ನಂತರ
ತರುಣ ವಸಂತದ ದಿನದ
ಸ್ವಚ್ಛಂದ ಉತ್ಸಾಹ ಗಲಭೆ
ಮತ್ತು
ಅರಳಿದ ಹೂವಿನ ಮತ್ತ ಕಂಪನ್ನು
ರೆಕ್ಕೆಗಳಲ್ಲಿ ಹೊತ್ತು
ಭೂಮಿಯನ್ನು ಬಣ್ಣಗೊಳಿಸಲು
ಮುನ್ನುಗ್ಗುವ ಮಲಯಾನಿಲದ
ಸುಕುಮಾರ ಸ್ಪಂದನವನ್ನು

ನೂರು ವರ್ಷದ ಮೊದಲು
ಇಂದೆ, ಯೋಚಿಸು,
ಜ್ವಲಂತ ಹೃದಯದ ಹಾಡಿನಲ್ಲಿ
ತನ್ನನ್ನು ಸಂಪೂರ್ಣ ಹುದುಗಿಸಿ
ಹೂವು ಅರಳುವಂತೆ
ಕವಿ
ತನ್ನ ಮಧುರ ಪ್ರೇಮದ ಸ್ತೋತ್ರನ್ನು
ನೂರು ವರ್ಷದ ಮೊದಲ
ಒಂದು ಮುಂಜಾವಿನಲ್ಲಿ
ಹಾಡಿದಂತೆ ಭ್ರಮಿಸು.
ಅದನ್ನೆ ಮೂರು ವರ್ಷದ ನಂತರ
ಒಲವಿನಿಂದ ಹಾಡುವ
ಹೊಸ ಕವಿ ಯಾರು
ಅವನಿಗೆ ನವ ವಸಂತದ
ಶುಭದ ಸಂದೇಶವನ್ನು
ನನ್ನ ಪರವಾಗಿ ಮುಟ್ಟಿಸು
ಎಲೆ, ಕವಿಯೇ, ನನ್ನ ಹಾಡು
ನಿನ್ನ ಎದೆಯ ಬಡಿತದ ಜೊತೆಗೆ
ತುಂಬಿಯ ಗುಂಜನದಲ್ಲಿ
ಎಲೆಗಳ ಕಲರವದಲ್ಲಿ
ಅನುರಣಿಸಲಿ...
ನೂರು ವರ್ಷದ ನಂತರ.

ಮೂಲ : ರವೀಂದ್ರನಾಥ ಠಾಗೋರ
ನೂರು ವರ್ಷಗಳ ಹಿಂದೆ ಬರೆದ ಕವಿತೆ.

ಈ ಸಂಚಿಕೆಯ ಲೇಖಕರ ವಿಳಾಸಗಳು

ವಿ. ಚಂದ್ರಶೇಖರ ನಂಗಲಿ ೩೨೮ಳ, ಪಿ.ಸಿ. ಬಡಾಡಣೆ, ಕೋಲಾರ ೫೬೩ ೧೦೧

ಅಶೋಕ ಶೆಟ್ಟರ್ ಪ್ರಚಾಚಕರು, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ ಕರ್ನಾಟಕ ವಿ. ವಿ., ಧಾರವಾಡ ೫೮೦ ೦೦೩

ಡಾ. ಬಸವರಾಜ ಮಲಶೆಟ್ಟಿ ವಿಜಯನಗರ ಕಾಲೇಜು, ಹೊಸಪೇಟೆ (ಬಳ್ಳಾರಿ) ೫೮೩ ೨೦೧

ನಾರಾಯಣಮೂರ್ತಿ ಕೆ. ಕನ್ನಡ ವಿಭಾಗ, ಮುಂಬೈ ವಿ ವಿ., ವಿದ್ಯಾನಗರಿ, ಮುಂಬೈ ೪೦೦ ೦೯೮

ಜಯರಾಮ ಹೆಗಡೆ ಸಂ: ಜನಮಾಧ್ಯಮ, ವಿವೇಕಾನಂದ ನಗರ, ಸಿರಸಿ, (ಉ.ಕ)

ಎನ್. ಎಸ್. ರಘುನಾಥ ಇಂಗ್ಲಿಷ್ ವಿಭಾಗ, ಪ್ರಾದೇಶಿಕ ವಿದ್ಯಾಸಂಸ್ಥೆ, ಮೈಸೂರು ೫೭೦ ೦೦೬

ಶಿವಾನಂದ ಹೆಚ್. ಬಂಟನೂರ ಶಿಲ್ಪಕಲಾ ವಿಭಾಗ, ಕನ್ನಡ ವಿ. ವಿ., ಹಂಪಿ, ವಿದ್ಯಾರಣ್ಯ, ಕಮಲಾಪುರ (ಬಳ್ಳಾರಿ) ೫೮೩ ೨೨೧

ರಾಜು ಈ ಬೆಳಕೂಡ ಮೂಡಲಗಿ ೫೯೧ ೩೧೨ (ಬೆಳಗಾವಿ ಜಿಲ್ಲೆ)

ಗಂಗಾರಾಂ ಚಂಡಾಳ ಸರ್ಕಾರಿ ಪಾಲಿಟೆಕ್ನಿಕ್, ಚನ್ನಪಟ್ಟಣ ೫೭೧ ೫೦೧

ಸಚ್ಚಿದಾನಂದನ್ ಪ್ರಧಾನ ಕಾರ್ಯದರ್ಶಿ, ಕೇಂದ್ರಸಾಹಿತ್ಯ ಅಕಾಡೆಮಿ, ಹೊಸದಿಲ್ಲಿ

ಡಾ. ಜಿ. ರಾಮಸ್ವಾಮಿ ಆದಿವಾಲ ಪ್ರೊಫೆಸರ್ ಆಫ್ ಕನ್ನಡ, ಮದ್ರಾಸ್ ಯೂನಿವರ್ಸಿಟಿ, ಚೆನ್ನೈ ೬೦೦ ೦೦೫

ಶಾಂತರಸ c/o. ಮೋಹನಕೋಟಿ 'ಚೈತ್ರ' ಎಂ. ಐ. ಜಿ. II ೧೩೫-೧೩೬ ರ ನಡುವೆ, ಸಿದ್ಧಲಿಂಗನಗರ, ಗದಗ ೫೮೨ ೧೦೩

ಡಾ. ಕೆ. ವಿ. ತಿರುಮಲೇಶ ಪ್ರೊಫೆಸರ್ ಆಫ್ ಲಿಂಗ್ವಿಸ್ಟಿಕ್, ಸಿ. ಐ. ಇ. ಎಫ್. ಎಲ್., ಹೈದರಾಬಾದ್ ೫೦೦ ೦೦೭

ಶ್ರೀಧರ ಹೆಗ್ಗೋಡು ನೀನಾಸಂ ತಿರುಗಾಟ ೯೮, ಹೆಗ್ಗೋಡು (ಶಿವಮೊಗ್ಗೆ) ೫೭೭ ೪೧೭

ಗಂಗಾಧರ ಮೊದಲಿಯಾರ MF ೩/೨, 'ಸಿ' ನಂದಿನಿ ಬಡಾವಣೆ, ಬೆಂಗಳೂರು ೫೬೦ ೦೯೬

ಡಾ. ಆರ್ಕೆ, ಮಣಿಪಾಲ ೧೧೮, ಎಂ. ಐ. ಜಿ. ಹುಡ್ಕೊ, ಮಣಿಪಾಲ ೫೭೬ ೧೧೯

ಕಾವಿಕೊ (ಡಾ. ವಿಶ್ವನಾಥ ಕಾರ್ನಾಡ) ಎಂ. ಡಿ. ಕಾಲೇಜು, ಪರೇಲ, ಮುಂಬೈ ೪೦೦ ೦೧೨

SANKRAMANA POSTED ON 30, MARCH 1999 KRNG-97

FORM IV

(See Rule 8)

1.	Place of Publication	Bangalore
2.	Periodicity of its Publication	Monthly
3.	Printer's Name Whether citizen of India ? Address	Nesla patil Yes Sankaramana Prakashana 1894/1 31 st Cross 2nd Stage, Banashankari Bangalore-70
4.	Publisher's Name Whethers citizea of India ? Address	As in 3 above
5.	Editor's name Whether citizen of India Address	As in 3 above
6.	Names and address of individuals who own the news paper and partners or so are holders holding more than one percent of the total capital	As in 3 above

1, Neela Patil, hereby declare that the particulars given above are true the best of my knowledge and belief.

Sd/—
Neela Patil
(Signature of Publisher)

Date : 30-3-1999

ಸಂಕ್ರಮಣ ಪ್ರಕಾಶನ, ಬೆಂಗಳೂರು ೫೬೦೦೭೦